ನಿವೇಶನಗಳ ಅಭಿವೃದ್ಧಿ ಹಾಗೂ ಪ್ರಾಧಿಕಾರಕ್ಕೆ ವಹಿಸಿಕೊಡುವುದು ಮುಂತಾದ ಕ್ರಮಗಳನ್ನು ಪೂರೈಸಿದ ನಂತರ ಮತ್ತು ಹಣದ ಅಂತಿಮ ಲೆಕ್ಕಾಚಾರದ ನಂತರ ಉಳಿದ ಹಣವನ್ನು ಸಂಘಕ್ಕೆ ಹಿಂತಿರುಗಿಸಬಹುದು.

ವಿತ್ತೀಯ ಕಾರ್ಯಕಲಾಪಗಳು

1995-96ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ

+ ಶ್ರೀ ಶೈಲಪ್ಪ ಬಿದರೂರು (ರೋಣ) : ಅಧ್ಯಕ್ಷರೇ, ನಿನ್ನೆ ದಿವಸ ಕೃಷಿ ಮತ್ತು ತೋಟಗಾರಿಕೆ ಪಶುಸಂಗೋಪನೆ ಇಲಾಖೆಗಳ ಬೇಡಿಕೆಗಳ ಮೇಲಿನ ಚರ್ಚೆ ಅಪೂರ್ಣಗೊಂಡಿದ್ದನ್ನು. ಇವತ್ತು ನಾನು ಮುಂದುವರೆಸುತ್ತಿದ್ದೇನೆ. ತೋಟಗಾರಿಕೆ ಇಲಾಖೆ ಮೇಲಿನ post harvest system ಬಗ್ಗೆ ನಾನು ಮಾತಾನಾಡುತ್ತಿದ್ದೆ. ಅದರಲ್ಲಿ ಯಾವ ರೀತಿ ತೋಟಗಾರಿಕೆ ಬೆಳಿಗಳ ಉತ್ಪಾದನೆ ಎಷ್ಟು ಸಹನೆಯಿಂದ ರೈತ ಬೆಳೆಯುತ್ತಿದ್ದಾನೋ ಹಾಗೆ ಬೆಳೆದ ಮಾಲನ್ನು ಮಾರಾಟ ಮಾಡುವಲ್ಲಿನ ತೊಂದರೆ ಬಗ್ಗೆ ನಾನು ಸರ್ಕಾರದ ಗಮನಕ್ಕೆ ತರಬಯಸುತ್ತಿದ್ದೇನೆ. ತೋಟಗಾರಿಕೆ ಬೆಳೆಗಳು ಒಟ್ಟು 97.75 ಲಕ್ಷ ಮೆಟ್ರಿಕ್‌ಟನ್ ಉತ್ಪಾದನೆ ರಾಜ್ಯದಲ್ಲಿರುವುದಾಗಿ ತಿಳಿದುಬರುತ್ತದೆ, ಸುಮಾರು 5 ಸಾವಿರ ಕೋಟಿ ಉತ್ಪಾದನೆ ಪ್ರತಿವರ್ಷ ಬರುತ್ತಿದೆ. ಇದರಲ್ಲಿ ಸುಮಾರು ಶೇಕಡಾ 30ರಿಂದ 40ರಷ್ಟು it is estimated that due to improper post harvest management methods 30 to 40 per cent of the horticultural produce is going waste which is valued approximately at Rs. 2000 crores per annum. ಇದು ವಿಶೇಷವಾಗಿ ಅವುಗಳನ್ನು ಕೆಡದಂತೆ ಇರುವ ವ್ಯವಸ್ಥೆ ಇರದ ಕಾರಣಗಳಿಗಾಗಿ ಈ ಒಂದು ಸಮಸ್ಯೆ ಉದ್ಭವಿಸಿದೆ. ಕೇವಲ 2 ಲಕ್ಷ ಟನ್ ತೋಟಗಾರಿಕೆ ಉತ್ಪನ್ನ ಇರುವ ಹರ್‍ಯಾಣ ರಾಜ್ಯದಲ್ಲಿ 139 ಶೈತ್ಯಾಗಾರಗಳಿದ್ದರೆ, 97.75 ಮೆ.ಟ. ಉತ್ಪನ್ನವಿರುವ ನಮ್ಮ ರಾಜ್ಯದಲ್ಲಿ 14 ಶೈತ್ಯಾಗಾರಗಳಿರುವುದನ್ನು ನಾವು ಇವತ್ತು ಕಾಣುತ್ತಿದ್ದೇವೆ. ಪ್ರತಿ ಜಿಲ್ಲೆಯ ಉತ್ಪನ್ನವನ್ನು ಗಣನೆಗೆ ತೆಗೆದುಕೊಂಡು ಅಲ್ಲಿ pre-cooling units ಮತ್ತು ಶೈತ್ಯಾಗಾರಗಳ ಒಂದು ಗ್ರಿಡ್‌ಗಾಗಿ ವ್ಯಾಪಕವಾದ ಸರ್ವೆಯಾಗಬೇಕು. ಅಲ್ಲಿ ತೋಟಗಾರಿಕೆ ಉತ್ಪನ್ನಗಳನ್ನು ಕೆಡದಂತೆ ಇರಲಿಕ್ಕೆ ವ್ಯವಸ್ಥೆ ಕಲ್ಪಿಸಬೇಕಾಗಿದೆ. ಒಂದು ಉದಾಹರಣೆ ಈ ಸಂದರ್ಭದಲ್ಲಿ ಕೊಡಬಯಸುತ್ತೇನೆ. ಯಾವ್ಯಾವ ಹಣ್ಣಿನ ಬೆಳೆಗಳನ್ನು pre-cooling units and cold storages ಗಳಲ್ಲಿ ಇಟ್ಟಾಗ ಅವುಗಳ ಲೈಫ್ ಹೇಗೆ ಹೆಚ್ಚಾಗುತ್ತದೆ ಎಂದರೆ ಇವತ್ತು ಈರುಳ್ಳಿ ಬೆಲೆ ಪ್ರತಿ ಸಲ it is really a gambling growing onion ಎಂದು ನನ್ನ ಅನಿಸಿಕೆ. Cold storage and pre-cooling ವ್ಯವಸ್ಥೆ ನಿರ್ಮಾಣ ಮಾಡಿದರೆ 168 ದಿವಸಗಳವರೆಗೆ ಈರುಳ್ಳಿಯನ್ನು ಕೆಡದಂತೆ ಇಡಲು ಸಾಧ್ಯವಿದೆ. ಬಾಳೆಹಣ್ಣನ್ನು 28 ದಿವಸ ಕೆಡದಂತೆ ಇಡಬಹುದು ಹೀಗೆ ಹಲವಾರು ಹಣ್ಣುಗಳ ಲೈಫನ್ನು ಹೆಚ್ಚು ಮಾಡುವ ಬಗ್ಗೆ ಶೈತ್ಯಾಗಾರಗಳ ಗ್ರಿಡ್ ಮಾಡಲು ಸರ್ಕಾರ ಒಂದು ವಿಶೇಷವಾದ ಸರ್ವೆ ಮಾಡಿ, ರಾಜ್ಯದಲ್ಲಿ ತೋಟಗಾರಿಕೆ ಬೆಳೆ ಬೆಳೆಯುವ ಪ್ರದೇಶಗಳನ್ನು ಗುರ್ತಿಸಿ ಅಲ್ಲಿ ಶೈತ್ಯಾಗಾರಗಳನ್ನು ನಿರ್ಮಿಸುವ ಕೆಲಸಕ್ಕೆ ಮುಂದಾಗಬೇಕಾಗಿದೆ. ಇನ್ನು ತೋಟಗಾರಿಕೆಯಲ್ಲಿ ಹೊಸ ತಂತ್ರಜ್ಞಾನ ಅಳವಡಿಸಲು, ರೈತನ ಮನೆ ಬಾಗಿಲಿಗೇ ಮುಟ್ಟಿಸುವ ಹೊಸ ಪದ್ಧತಿ ಬಗ್ಗೆ ಹೆಚ್ಚು ಒತ್ತು ಕೊಡಬೇಕಾದ ಅವಶ್ಯಕತೆ ಇದೆ. ಉತ್ತರ ಕರ್ನಾಟಕದ ಬಿಜಾಪುರ, ಧಾರವಾಡ, ಬೆಳಗಾಂ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಹವಾಮಾನ ಆರ್ದ್ರತೆಯಿಂದ ಕೂಡಿದೆ. ಅಲ್ಲಿ ಹೆಚ್ಚು ತೋಟಗಾರಿಕೆ ಬೆಳೆಗೆ ಸೂಕ್ತ ಪ್ರದೇಶ ಇರುವುದರಿಂದ ಒಂದು ರಾಷ್ಟ್ರೀಯ ತೋಟಗಾರಿಕೆ ಸಂಶೋಧನಾ ಕೇಂದ್ರಕ್ಕೆ ಈ ಸರ್ಕಾರ ಕೇಂದ್ರಸರ್ಕಾರದ ಮೇಲೆ ಒತ್ತು ತರಬೇಕು. ಹೊಸ ತಂತ್ರಜ್ಞಾನವನ್ನು ರೈತನ ಮನೆಬಾಗಿಲಿಗೇ ಮುಟ್ಟಿಸಲು ಎಕ್ಸ್‌ಟೆನ್‌ಶನ್ ಪದ್ಧತಿ ಬಗ್ಗೆ

ಹೇಳಬೇಕಾದರೆ ಈ ಇಲಾಖೆಯಲ್ಲಿ ಉನ್ನತ ಹುದ್ದೆಗಳ ಅಧಿಕಾರಿಗಳು ಜಾಸ್ತಿ ಇದ್ದಾರೆ. ತಾಲ್ಲೂಕು ಮಟ್ಟದಲ್ಲಿ senior Asst. Director ಲೆವೆಲ್ ಅಧಿಕಾರಿ ಒಬ್ಬ, ಒಬ್ಬ Asst. Horticultural Officer ಕೆಲಸ ಮಾಡುತ್ತಿರುತ್ತಾರೆ. ಇವರಿಂದ ಪ್ರತಿ ಗ್ರಾಮಕ್ಕೆ ಹೋಲಕ್ಕೆ ಮುಟ್ಟಲಿಕ್ಕೆ ಸಾಧ್ಯವಿಲ್ಲ. ಒಬ್ಬ Horticulture Assistant ಇರುವುದು ಖೇದಕರ ಸಂಗತಿ. ದಯವಿಟ್ಟು ಎಕ್ಸ್‌ಟೆಶ್‌ಶನ್ ಸಿಬ್ಬಂದಿಯನ್ನು ಜಾಸ್ತಿ ಮಾಡಬೇಕು. ತೋಟಗಾರಿಕೆಯಲ್ಲಿ ಈಗ High-Top system ಇದೆ ಕೆಳಮಟ್ಟದಲ್ಲಿ ಎಕ್ಸ್‌ಟೆನ್‌ಶನ್ ಸಿಬ್ಬಂದಿ ಕೊರತೆ ಇರುವುದರಿಂದ ರೈತನ ತೋಟಗಳಿಗೆ ಹೊಸ ತಂತ್ರಜ್ಞಾನ ಮುಟ್ಟಿಸುವಲ್ಲಿ ಇಲಾಖೆ ವಿಫಲವಾಗಿದೆಯೆಂದು ಹೇಳಲು ಇಚ್ಛೆಯಾಗುತ್ತಿದೆ. ಇನ್ನು ನಮ್ಮ ತೋಟಗಾರಿಕೆ ಸಚಿವರು ಇಸ್ರೇಲ್ ದೇಶಕ್ಕೆ ಅಧ್ಯಯನಕ್ಕೆಂದು ಹೋಗಿದ್ದರು, ಅಲ್ಲಿ ಅವರು ನೋಡಿದ ಪದ್ಧತಿ ಬಗ್ಗೆ ಹೇಳುವುದು ಬಹಳ ಸೂಕ್ತ. ಅಲ್ಲಿನ ವಿಚಾರಗಳನ್ನು ಇಲ್ಲಿ ಅನುಷ್ಠಾನಗೊಳಿಸಲು ವಿಶೇಷ ಪ್ರಯತ್ನ ಮಾಡಿದರೆ ಒಳ್ಳೆಯದಾಗುತ್ತದೆ. ಅದೇ ರೀತಿ ಮಹಾರಾಷ್ಟ್ರದಲ್ಲಿ ಶೇಕಡಾ ನೂರರಷ್ಟು ಹನಿನೀರಾವರಿ ಪದ್ಧತಿ ಅಳವಡಿಸಿ ತೋಟಗಾರಿಕೆ ಬೆಳೆ ಅಭಿವೃದ್ಧಿಪಡಿಸಲು ನೂರರಷ್ಟು ರಿಯಾಯಿತಿಯಲ್ಲಿ ಹನಿನೀರಾವರಿ ಅಳವಡಿಸುವ ಸಿಸ್ಟಂ ಇದೆ. ನಮ್ಮ ರಾಜ್ಯದಲ್ಲಿ ಕೇವಲ 50 ಶೇಕಡಾ ಕೊಡುತ್ತಿರುವುದನ್ನು 100ಕ್ಕೆ ಏರಿಸಬೇಕೆಂದು ಸರ್ಕಾರವನ್ನು ಕೋರುತ್ತೇನೆ.

ಈ Drip system ನಿಂದ ತೋಟಗಾರಿಕೆ ಬೆಳೆಗಳಿಗೆ ನೀರು ಹರಿಸುವಲ್ಲಿ ವಿಶೇಷ ಪಾತ್ರ ಇದೆ, ಹಾಗೆಯೇ ಭೂಗುಣಮಟ್ಟ ಸುಧಾರಿಸುವಲ್ಲಿ drip irrigation ನಿಂದ ಅನುಕೂಲವಾಗುತ್ತದೆ, ಈ ಹನಿನೀರಾವರಿ ಅಳವಡಿಸುವ ಮುನ್ನ water holding capacity ಹೆಚ್ಚಾಗುತ್ತದೆ. ನಾನು ಏನು ಹೇಳಬಯುಸುತ್ತೇನೆಂದರೆ ದೊಡ್ಡ ತೋಟಗಾರಿಕೆ ಬೆಳೆಗಳಾದ ದ್ರಾಕ್ಷಿ ದಾಳಿಂಬೆಗಳಲ್ಲಿ Spraying lines ಮಾಡುತ್ತೇವೆ ಈಗ ಆರ್ಡಿನರಿ ಸ್ಪ್ರೆ ಪಂಪ್‌ನಿಂದ ಒಂದು ಎಕರೆಗೆ ಸ್ಪ್ರೆ ಮಾಡಲು ಈ pesticides, insecticides ಸುಮಾರು 4 ತಾಸು ಬೇಕಾಗುತ್ತದೆ. ಅದೇ spraying equipment ನಲ್ಲಿ ಒಂದು ತಾಸಿನಲ್ಲಿ 4 ಎಕರೆ ಪ್ರದೇಶಕ್ಕೆ ಸ್ಪ್ರೆ ಮಾಡಬಹುದು. ಇದು ಅತ್ಯಂತ ಪ್ರಮುಖ್ಯ ಕೆಲಸ, ಏಕೆಂದರೆ ಪ್ರತಿ ಸಾರಿ ಮಳೆಗಾಲದಲ್ಲಿ ಮೇಲೆ ಮೋಡ ಇರುತ್ತದೆ, ಮಳೆ ಬರುತ್ತಿರುತ್ತದೆ, ಯಾವುದೇ pesticide or insecticide ಬೆಳೆಗೆ ಚಿಮುಕಿಸಿದರೆ 3 ತಾಸದರೂ ಮಳೆ ಅದನ್ನು ಡಿಸ್ಟರ್ಬ್ ಮಾಡಬಾರದು, ಅದರಿಂದ pesticide or insecticide ನಗುಣಮಟ್ಟ ಕಡಿಮೆಯಾಗುತ್ತದೆ. ಅದಕ್ಕೆ ಮಳೆಗಾಲದ ದಿವಸಗಳಲ್ಲಿ ತ್ವರಿತವಾಗಿ ಸ್ಪ್ರೇ ಮಾಡಲಿಕ್ಕೆ ಬಹಳ ಅನುಕೂಲವಾಗುತ್ತದೆ. ಸರ್ಕಾರ ವಿಚಾರಮಾಡಿ ಈ ಸ್ಪ್ರೇ ಸಿಸ್ಟಂಗಳಿಗೆ ಸಬ್ಸಿಡಿ ಕೊಡುವ ಕೆಲಸ ಮಾಡಬೇಕು. ವಿಶೇಷವಾಗಿ, ಹಾಪ್‌ಕಾಮ್ಸ್ ಮಾದರಿ ಬೆಂಗಳೂರು ಸುತ್ತಮುತ್ತ ಏನು ಮಾರಾಟದ ವ್ಯವಸ್ಥೆ ಇದೆ ಅದರಿಂದ ಆ ಪ್ರದೇಶದ ಶೇಕಡಾ 30ರಷ್ಟು ಮೀಟ್ ಮಾಡಲಾಗಿದೆಯೋ ಅಥವಾ ಇಲ್ಲವೋ ಎಂಬ ಸಂದೇಹ ಇದೆ. ಹಾಪ್‌ಕಾಮ್ಸ್ ಮಾದರಿಯಲ್ಲಿ ಧಾರವಾಡ, ಹುಬ್ಬಳ್ಳಿ, ಬೆಳಗಾವಿ, ಗದಗ್‌ನಂತಹ ದೊಡ್ಡ ನಗರಗಳಲ್ಲಿ ರೈತನಿಂದ ನೇರವಾಗಿ ಪಡೆಯುವುದಕ್ಕೆ ಮತ್ತು ಮಾರಾಟ ಮಾಡಲು ರಿಟೇಲ್ ಸಹಕಾರ ಸಂಘಗಳನ್ನು ಮಾಡುವುದರಿಂದ ಮಧ್ಯವರ್ತಿಗಳನ್ನು ನೇರವಾಗಿ ನಿರ್ಮೂಲನ ಮಾಡುವ ಬಗ್ಗೆ ಸರ್ಕಾರ ಗಮನಹರಿಸಬೇಕು. ಕೃಷಿ ವಿಶ್ವವಿದ್ಯಾಲಯಗಳು ತೋಟಗಾರಿಕೆಗೆ ಹೆಚ್ಚು ಗಮನಕೊಡುತ್ತಿಲ್ಲ.

ಮಹಾರಾಷ್ಟ್ರದ ವಿಶ್ವವಿದ್ಯಾಲಯಗಳಿಗೆ ಹಲವಾರು ಸಲ ನಾನು ಭೇಟಿ ಕೊಟ್ಟಿದ್ದೇನೆ. ಒಂದು ಉದಾಹರಣೆ ಹೇಳುವುದಾದರೆ ರಾವ್ ಗುರಿ ಕೃಷಿ ವಿಶ್ವವಿದ್ಯಾಲಯಗಳಿಗೆ ತೋಟಗಾರಿಕೆ ಬೆಳೆಗಳ ಬಗ್ಗೆ ಯಾವರೀತಿ ಕೆಲಸ ನಡೆಯುತ್ತಿದೆಯೋ ಅದರ ಅರ್ಧಭಾಗದಷ್ಟು ಕೆಲಸ ಇಲ್ಲಿ ನಡೆಯುತ್ತಿಲ್ಲ ಎಂಬುದು ನೋವಿನ ಸಂಗತಿ. ಇನ್ನು

ಪಶುಸಂಗೋಪನೆ ಇಲಾಖೆ ಬಗ್ಗೆ ಗ್ರಾಮೀಣ ಪ್ರದೇಶದಲ್ಲಿ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳ ಅವಶ್ಯಕತೆ ಬಹಳ ಇದೆ. ಇವತ್ತು ಸರ್ಕಾರ ವಿಶೇಷ ವ್ಯವಸ್ಥೆಯನ್ನು ಆ ನಿಟ್ಟಿನಲ್ಲಿ ಕೆಲಸ ಮಾಡಬೇಕು, ಎಲ್ಲಾ ಕೇಂದ್ರಗಳಲ್ಲಿಯೂ Frozen semen Containers ಅಂದರೆ "ಘನೀಕೃತ ವೀರ್ಯಪಾತ್ರೆಗಳು" ಇರಬಹುದು. ಆದರೆ ಅವುಗಳನ್ನು ಇಡುವ ಪದ್ಧತಿ ಏನೆಂದರೆ, ಅಲ್ಲೇನು ಕೆಲಸ ನಡೆಯುತ್ತಿದೆ ಎಂಬ ಬಗ್ಗೆ ವಿಚಾರ ಮಾಡಬೇಕಾದ ಕಾಲ ನಿರ್ಮಾಣವಾಗಿದೆ. ತಾವು ಪೂರೈಸುವ Liquid Semen containers ಅದರಲ್ಲಿರುವ Liquid Nitrogen level ಬಹಳ ಕಡಿಮೆ ಇರುತ್ತದೆ, ಅಲ್ಲಿನ strawದ ವೈಯಬಿಲಿಟಿ ಬಹಳ ಹಾಳಾಗಿದೆ ಎಂದು ಹೇಳಬಯಸುತ್ತೇನೆ. ಒಂದು ಸಲ Liquid Nitrogen ಲೆವಲ್ ಕಡಿಮೆಯಾಯಿತೆಂದರೆ ಇರತಕ್ಕಂಥ ಎಲ್ಲ straw ಹಾಳಾಗುತ್ತದೆ ಮತ್ತೆ Liquid Nitrogen ಹಾಕಿದರೆ ಏನಿದೆ ಅದು ಉಪಯೋಗಕ್ಕೆ ಬರುವುದಿಲ್ಲ ಆದ್ದರಿಂದ Liquid semen Container Strawದ ವೈಯಬಿಲಿಟಿಯನ್ನು ಚೆಕ್‌ಅಪ್ ಮಾಡಬೇಕೆಂದು ಹೇಳಬಯಸುತ್ತೇನೆ. ಇಷ್ಟು ಹೇಳಿ ಕೃಷಿ ಮತ್ತು ತೋಟಗಾರಿಕೆ ಇಲಾಖೆ ಬಗ್ಗೆ ನಿನ್ನೆಯಿಂದ ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

1.10 ಪಿ.ಎಂ

+ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಅನೇಕ ಬೇಡಿಕೆಗಳ ಬಗ್ಗೆ ನಾವು ಇಂದು ಇಲ್ಲಿ ಚರ್ಚೆ ಮಾಡುತ್ತಿದ್ದೇವೆ. ಇದು ಅತ್ಯಂತ ಒಳ್ಳೆಯದೆಂದು ತಮಗೆ ನಾನು ಮೊದಲನೆಯದಾಗಿ ಅಭಿನಂದನೆ ಸಲ್ಲಿಸುತ್ತೇನೆ. ಇದುವರೆವಿಗೂ ವಿಷಯ ಸಮಿತಿಗಳು ಕೊಟ್ಟ ವರದಿಗಳ ಬಗ್ಗೆ ಚರ್ಚೆ ಇರಲಿಲ್ಲ, ಈಗ ಈ ವರ್ಷದಿಂದ ತಾವು ಚರ್ಚೆಗೆ ಅವಕಾಶ ಮಾಡಿಕೊಟ್ಟಿರತಕ್ಕಂಥಾದ್ದು ಅತ್ಯಂತ ಮೆಚ್ಚುವ ಸಂಗತಿ. ಹೆಚ್ಚೂ ಕಡಿಮೆ ಒಟ್ಟಾಗಿ 27 ಬೇಡಿಕೆಗಳನ್ನು ಇಂದು ಸದನದಲ್ಲಿ ಮಂಡಿಸಿದ್ದೀರಿ. ಈ ವಾರ್ತಾ ಇಲಾಖೆ ಬಗ್ಗೆ ಕೆಲವು ವಿಚಾರಗಳನ್ನು ತಮ್ಮ ಮುಂದೆ ತಿಳಿಸಬೇಕೆಂದು ನಾನು ಅತ್ಯಂತ ಉತ್ಸಾಹದಿಂದ ಇದ್ದೇನೆ. ವಾರ್ತಾ ಇಲಾಖೆ, ಕನ್ನಡ ಸಂಸ್ಕೃತಿ ಇಲಾಖೆ ಪ್ರವಾಸೋದ್ಯಮ ಇಲಾಖೆ ಪತ್ರಾಗಾರ ಇಲಾಖೆ ಪ್ರಾಚ್ಯವಸ್ತು ಇಲಾಖೆ ಮತ್ತು ಯುವ ಜನ ಸೇವಾ ಇಲಾಖೆ, ಇವುಗಳ ಬಗ್ಗೆ ಅನೇಕರು ಗಮನವನ್ನು ಕೊಡಲಿಲ್ಲ. ತಮ್ಮದೇ ಆದಂತಹ ರೀತಿಯಲ್ಲಿ ಆ ಇಲಾಖೆ ಬಗ್ಗೆ ಮಾತನಾಡಿದ್ದಾರೆ. ನನ್ನ ದೃಷ್ಟಿಯಲ್ಲಿ ಇಡೀ ಸರ್ಕಾರದ ಎಲ್ಲಾ ಇಲಾಖೆಗಳಿಗಿಂತ ಅತಿ ಮುಖ್ಯ ಮತ್ತು ಪ್ರಾಮುಖ್ಯವಾದ ಇಲಾಖೆ ಎಂದರೆ ಅದು ವಾರ್ತಾ ಇಲಾಖೆ ಎಂದು ನಾನು ಅಂದುಕೊಂಡಿದ್ದೇನೆ. ಮೊದಲಿನಿಂದಲೂ ವಾರ್ತಾ ಇಲಾಖೆ ಬಗ್ಗೆ ಒಂದು ರೀತಿಯಲ್ಲಿ ಇಲ್ಲಿ ಚರ್ಚೆಯಾಗುತ್ತಿರಲಿಲ್ಲ, ಮತ್ತು ಈ ಇಲಾಖೆಯನ್ನು ಕಡೆಗಣಿಸಿದ್ದರು. ನಾನು ಈ ವಿಷಯ ಸಮಿತಿಯ ಅಧ್ಯಕ್ಷನಾದ ಮೇಲೆ ಸರಕಾರಕ್ಕೆ ಸಮಗ್ರವಾಗಿ ಒಂದು ವರದಿ ಸಲ್ಲಿಸಿದ್ದೇನೆ. ಸರಕಾರ ಪರಿಣಾಮಕಾರಿಯಾಗಿ ಈ ವರದಿಯನ್ನು ಕಾರ್ಯಗತ ಮಾಡಬೇಕೆನ್ನುವುದು ನನ್ನ ಕಳಕಳಿಯ ಮನವಿ. ಹೋದ ಸಾರಿ ಸಹ ನಾನೇ ಈ ವಿಷಯ ಸಮಿತಿಯ ಅಧ್ಯಕ್ಷನಾಗಿ 61 ಶಿಫಾರಸ್ಸುಗಳನ್ನು ಮಾಡಿದ್ದೆ. ಆ 61ಶಿಫಾರಸ್ಸುಗಳು ಅತ್ಯಂತ ಅಮೂಲ್ಯ ಮತ್ತು ಪರಿಣಾಮಕಾರಿಯಾದಂತಹ ಶಿಫಾರಸ್ಸುಗಳು. ನಾನು ಸಮಗ್ರವಾಗಿ ಎಲ್ಲರ ಜೊತೆಯಲ್ಲಿ ಚಿಂತನೆ ನಡೆಸಿ ಈ ಶಿಫಾರಸ್ಸುಗಳನ್ನು ಮಾಡಿದ್ದೇನೆ. ಅದರಲ್ಲಿ ಒಂದು ಕಾಕತಾಳಿಯ ನ್ಯಾಯವೆಂದು ಎನ್ನಬಹುದು. ಈ ವಾರ್ತಾ ಮತ್ತು ಪ್ರಚಾರ ಇಲಾಖೆಗೆ ಒಬ್ಬರು ಸ್ವತಂತ್ರವಾದಂತಹ ಸಚಿವ ಸಂಪುಟದ ಸಚಿವರಾಗಬೇಕೆನ್ನುವುದು ನನ್ನ ಶಿಫಾರಸ್ಸಿನಲ್ಲಿ ಒಂದು. ಅದರ ಪ್ರಕಾರ ನಡೆಯಿತು. ಅದು ನನ್ನ ಶಿಫಾರಸ್ಸಿನಿಂದ ಆಯಿತೆಂದು ನಾನು ಬೆನ್ನು ತಟ್ಟಿಕೊಳ್ಳುವುದಕ್ಕೆ ಹೋಗುವುದಿಲ್ಲ, ಮಾನ್ಯ ನಾಣಯ್ಯನವರು ಸಚಿವ ಸಂಪುಟದ

ದರ್ಜೆ ಸಚಿವರಾಗಿ ಇದ್ದಾರೆ. ನನ್ನ ಶಿಫಾರಸ್ಸಿನಿಂದ ಆಯಿತೆಂದು ನಾನು ಸುಮ್ಮನೆ ಹೇಳಿಕೊಳ್ಳಬಹುದು. ನನ್ನ ಶಿಫಾರಸ್ಸಿನಿಂದ ಆಯಿತೆಂದು ಹೇಳುವುದಕ್ಕಿಂತ ಹೆಚ್ಚಾಗಿ ರಾಜಕೀಯ ದೃಷ್ಟಿಯಿಂದ ಅವರು ಬಹಳ ಹಿರಿಯರಿದ್ದಾರೆ ಎಂದು ಅವರಿಗೆ ಸಚಿವ ಸಂಪುಟ ದರ್ಜೆಯಲ್ಲಿ ವಾರ್ತಾ ಇಲಾಖೆಯನ್ನು ವಹಿಸಿಕೊಟ್ಟರು ಅದರಿಂದ ನನಗೆ ಸಂತೋಷವಾಯಿತು. ನನ್ನ ಶಿಫಾರಸ್ಸಿನ ಬಗ್ಗೆಯಾದರೂ ಅವರು ಒಪ್ಪಿಕೊಳ್ಳಬಹುದು ಅಥವಾ ಯಾವುದೇ ಕಾರಣದಿಂದಲಾದರೂ ಆ ಇಲಾಖೆಗೆ ಬಂದುದು ಆ ಇಲಾಖೆಗೆ ಒಂದು ಶಕ್ತಿ ಬಂತೆಂದು ನಾನು ಅಂದುಕೊಂಡಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈ ಸರ್ಕಾರದಲ್ಲಿ ನಿಮ್ಮ ಶಿಫಾರಸ್ಸುಗಳು ನಡೆಯುತ್ತವೆ ಅಂದ ಹಾಗಾಯಿತು.

ಅಧ್ಯಕ್ಷರು : ಎಲ್ಲಾ ಸರ್ಕಾರದಲ್ಲೂ ಅವರ ಶಿಫಾರಸ್ಸು ಇದ್ದೇ ಇದೆ.

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ಸರಕಾರದಲ್ಲಿ ನಡೆಯಲಿಲ್ಲ. ಈ ಸರ್ಕಾರದಲ್ಲಿ ಅದು ನಡೆಯಿತೆಂದು ನಾನು ಬೆನ್ನು ತಟ್ಟಿಕೊಳ್ಳಬಹುದು. ನನ್ನ ವರದಿಯ ಶಿಫಾರಸ್ಸಿನಿಂದ ಆಯಿತೆಂದು ನಾನು ಅಂದುಕೊಳ್ಳದಿದ್ದರೂ ಸಚಿವ ಸಂಪುಟ ದರ್ಜೆಯ ಸಚಿವರಾಗಬೇಕೆಂದು ಹೇಳಿ ಅವರೇ ಮಾಡಿದ್ದಾರೆ. ಒಂದಾದರೂ ಮಾಡಿದ್ದಾರೆಂದು ನಾನು ತಿಳಿಯಬಹುದು. ಮಾನ್ಯ ನಾಣಯ್ಯನವರನ್ನು ಅದಕ್ಕೆ ಸಚಿವರನ್ನಾಗಿ ಮಾಡಿದರು. ಮಾನ್ಯ ನಾಣಯ್ಯನವರ ಪರಿಸ್ಥಿತಿ ಅತ್ಯಂತ ಶೋಚನೀಯವಾಗಿದೆ. ವಾರ್ತಾ ಇಲಾಖೆಯ ಸಚಿವರಾಗಿದ್ದರೂ ಅಷ್ಟೊಂದು ಸ್ವಾತಂತ್ರ್ಯ ಇಲ್ಲ. ಸಂಪೂರ್ಣವಾದಂತಹ ಸ್ವಾತಂತ್ರ್ಯ ಬರಬೇಕಾದರೆ ಹಣಕಾಸಿನ ಸಚಿವರಾದ ಶ್ರೀಮಾನ್ ಸಿದ್ಧರಾಮಯ್ಯನವರ ಕೃಪೆ ಬೇಕು. ನಿಮ್ಮ ಕೃಪೆ ಇಲ್ಲದೆ ಅವರು ಏನೂ ಮಾಡುವುದಕ್ಕಾಗುವುದಿಲ್ಲ. ಇಡೀ ಇಲಾಖೆ ಬಗ್ಗೆ ಸಂಪೂರ್ಣವಾಗಿ ನೋಡಿದಾಗ ವಾರ್ತಾ ಇಲಾಖೆಯನ್ನು ಸಮಗ್ರವಾಗಿ ಬೆಳೆಸಬೇಕು ಆ ಇಲಾಖೆಯನ್ನು ಶಕ್ತಿಯುತವಾಗಿ ಮಾಡಬೇಕು ಅದರ ಕೆಲಸ ಕಾರ್ಯಗಳಿಂದ ಹೆಚ್ಚಿನ ರೀತಿ ಉಪಯೋಗ ಪಡೆಯಲಿಕ್ಕೆ ಅನುಕೂಲ ಕಲ್ಪಿಸಬೇಕೆಂದು ಮಾನ್ಯ ನಾಣಯ್ಯನವರು ಬಹಳ ಪ್ರಯತ್ನ ಪಟ್ಟಿದ್ದಾರೆ. ನಾನು ಅವರನ್ನು ಅದಕ್ಕಾಗಿ ಅಭಿನಂದಿಸುತ್ತೇನೆ. ಆ ಇಲಾಖೆಯ ಸಚಿವರಾದ ಅವರಿಗೆ ಪ್ರಾಮಾಣಿಕ ಚಿಂತನೆ ಇದೆ ಎಂದು ಅತ್ಯಂತ ಅಭಿಮಾನದಿಂದ ಹೇಳುತ್ತಿದ್ದೇನೆ. ನಮ್ಮ ವಾರ್ತಾ ಇಲಾಖೆಗೆ ಅತ್ಯಂತ ಹೆಚ್ಚಿನ ಕೆಲಸ ಇದೆ. ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳು ವಾರ್ತಾ ಮತ್ತು ಪ್ರಚಾರ ಸರ್ಕಾರದ ಚಿಂತನೆ ಸರ್ಕರದ ನೀತಿಯನ್ನು ಸಮಗ್ರವಾಗಿ ಪ್ರಚಾರ ಮಾಡತಕ್ಕಂತಹ ಪ್ರಚಾರ ಮತ್ತು ವಾರ್ತೆ ಎರಡಲ್ಲೂ ಅತಿ ಮುಖ್ಯವಾದಂತಹ ಇಲಾಖೆ. ಎಲ್ಲಾ ಇಲಾಖೆಗಳಿಗಿಂತ ಈ ಇಲಾಖೆಗೆ ಒದಗಿಸಿರತಕ್ಕಂತಹ ಹಣಕಾಸಿನ ಪರಿಸ್ಥಿತಿಯನ್ನು ನಾವು ಚಿಂತನೆ ಮಾಡಿದಾಗ ಇದನ್ನು ಕಟ್ಟ ಕಡೆಯ ಇಲಾಖೆ ಎಂದು ಮಾಡಿದ್ದಾರೆ.

ಆ ಇಲಾಖೆಯ ಮಂತ್ರಿಗಳಿಗೆ ಕೆಲಸ.... ಅಂದರೆ ಸಚಿವ ಸಂಪುಟದ ಸಭೆ ನಡೆಯುತ್ತದೆ ಸಂಪುಟ ಸಭೆಯಲ್ಲಿ ಏನು ಹೇಳುತ್ತಾರೆ ಅದನ್ನು ಹೊರಗಡೆ ಪತ್ರಕರ್ತರಿಗೆ ಹೇಳುವುದನ್ನು ಬಿಟ್ಟರೆ ಇಲ್ಲಿ ಬೇರೇನೂ ನನಗೆ ಕಾಣಲಿಲ್ಲ. ಈ ಇಲಾಖೆ ಎಷ್ಟು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದೆಯೋ ಅಷ್ಟು ಸರ್ಕಾರಕ್ಕೆ ಗೌರವ ಮತ್ತು ಹೆಸರು ಬರುತ್ತಿದೆ.

ಯಾವ್ಯಾವ ಕಾರ್ಯಕ್ರಮಗಳನ್ನು ಸರ್ಕಾರ ಹಾಕಿಕೊಂಡಿದೆ ಆ ಕಾರ್ಯಕ್ರಮಗಳನ್ನು ಪ್ರಚಾರ ಮಾಡಿ ಸಾಮಾನ್ಯ ಜನರಿಗೆ ಈ ಇಲಾಖೆ ಮುಟ್ಟಿಸುತ್ತದೆ. ನಾನಾ ರೂಪದಲ್ಲಿ ಹೆಚ್ಚಿನ ರೀತಿಯಲ್ಲಿ ಮಾಧ್ಯಮಗಳು ಮೂಲಕ ನಮ್ಮ ಪ್ರಚಾರವನ್ನು ತೆಗೆದುಕೊಳ್ಳಬೇಕಾಗಿದೆ. ಆ ದೃಷ್ಟಿಯಲ್ಲಿ ನೋಡಿದಾಗ ಇದರ ಕಡೆ ಹೆಚ್ಚು ಗಮನ

ಹರಿಸಬೇಕಾಗುತ್ತದೆ. ನಾನು ಒಂದು ಉದಾಹರಣೆ ಕೊಡುತ್ತೇನೆ. ಪ್ರಚಾರ ಯುಗದಲ್ಲಿ ಕೇವಲ ಒಂದು ಬೀಡಿ ಕಂಪನಿಯವರು ಅಥವಾ ಬ್ರೆಡ್, ನಶ್ಯ ತಯಾರು ಮಾಡತಕ್ಕಂತಹ ಕಂಪನಿಯವರು ಯಾವ್ಯಾವ ರೀತಿಯಲ್ಲಿ ಪ್ರಚಾರಕ್ಕೆಂದು ಖರ್ಚು ಮಾಡುತ್ತಾರೆ ಅವರು ಖರ್ಚು ಮಾಡತಕ್ಕಂಥಾದ್ದರಲ್ಲಿ ಕಾಲು ಭಾಗ ಹಣವನ್ನು ಈ ಇಲಾಖೆಗೆ ಒದಗಿಸಿಲ್ಲ, ಪ್ರಚಾರದಲ್ಲಿ ಅವರು ಬಹಳಮುಂದೆ ಹೋಗಿದ್ದಾರೆ. 11 ಸಾವಿರ ಕೋಟಿಗಿಂತ ಹೆಚ್ಚಿನ ಆಯವ್ಯಯ ನಮ್ಮ ಸರಕಾರದ್ದಾಗಿದೆ. ವಿವಿಧ ಇಲಾಖೆಗಳ ಬೆಳವಣಿಗೆ ವಿವಿಧ ಇಲಾಖೆಗಳು ಮಾಡತಕ್ಕಂತಹ ಕಾರ್ಯಗಳು ಏನು ಇವೆ ಅದನ್ನು ಇವರು ಪ್ರಚಾರ ಮಾಡಬೇಕಾಗಿದೆ. ಈ ವಾರ್ತಾ ಇಲಾಖೆ ಕೇವಲ ಯಾವುದೋ ಒಂದು ತನ್ನದೇ ಆದಂತಹ ಇಲಾಖೆಗೆ ಸೇರಿಲ್ಲ, ಎಲ್ಲ ಇಲಾಖೆಗೂ ಊರುಗೋಲು ಇದ್ದ ಹಾಗೆ ಮತ್ತು ಎಲ್ಲಾ ಇಲಾಖೆಗೂ ಶಕ್ತಿ ಕೊಡತಕ್ಕಂತಹ ಇಲಾಖೆ ಇದಾಗಿದೆ. ಎಲ್ಲಾ ಇಲಾಖೆಗಳೂ ತಮ್ಮ ಕಾರ್ಯಕ್ರಮಗಳ ಬಗ್ಗೆ ಪ್ರಚಾರ ಮಾಡಬೇಕಾದರೆ ವಾರ್ತಾ ಇಲಾಖೆಯ ಮೂಲಕವೇ ನಡೆಸಬೇಕು. ವಾರ್ತಾ ಇಲಾಖೆಯ ಸಹಕಾರ ಬೇಕು ವಾರ್ತಾ ಇಲಾಖೆಯ ಸಹಾಯ ಬೇಕು. ಪ್ರತಿ ಮಂತ್ರಿಗಳಿಗೂ ವಾರ್ತಾ ಇಲಾಖೆಯಿಂದ ಪ್ರಚಾರ ಬೇಕು. ಎಲ್ಲಕ್ಕೂ ವಾರ್ತಾ ಇಲಾಖೆ ಬೇಕು. ಆದರೆ ವಾರ್ತಾ ಇಲಾಖೆಗೆ ಹಣ ಮಾತ್ರ ಇಲ್ಲವೆಂದು ಹೇಳತಕ್ಕಂಥಾದ್ದು ಸರಿಯಾದಂತಹ ಸಮಂಜಸವಾದಂತಹ ವಾದ ಅಲ್ಲ, ವಾರ್ತಾ ಇಲಾಖೆಗೆ ಕೊಟ್ಟಿರತಕ್ಕಂತಹ ಹಣ ಏನು ಇದೆ ಅದು ಏನೇನೂ ಸಾಲದು. ಇಡೀ ಕರ್ನಾಟಕದ ಎಲ್ಲಾ ಇಲಾಖೆಗಳೇನು ಖರ್ಚು ಮಾಡುತ್ತವೆ ಅದರಲ್ಲಿ ಶೇಕಡಾ 1 ಭಾಗ ವಾರ್ತಾ ಇಲಾಖೆಗೆ ವಹಿಸಿ ಎಂದು ನನ್ನ ಕಳಕಳಿಯ ಮನವಿ. ಇವತ್ತು ನಾವು ವಾರ್ತಾ ಇಲಾಖೆಯನ್ನು ಸುಮ್ಮನೆ ದೂರಿದರೆ ಏನು ಪ್ರಯೋಜನ? ವಾರ್ತಾ ಇಲಾಖೆಗೆ ನೀವು ಕೊಡುವ ಎಲ್ಲಾ ಸವಲತ್ತುಗಳನ್ನು ಕೊಟ್ಟು ಆಮೇಲೆ ವಾರ್ತಾ ಇಲಾಖೆ ಕೆಲಸ ಮಾಡಲಿಲ್ಲ ಎಂದು ಹೇಳಿದರೆ ನಾನು ಒಪ್ಪುತ್ತೇನೆ. ಇವತ್ತು ಆ ಪರಿಸ್ಥಿತಿ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಇದು ಪ್ರಚಾರವಾಗಬೇಕಾದರೂ ಅದಕ್ಕೇನಾದರೂ ಬೇಕಲ್ಲ, ಯಾವುದಾದರೂ ಕೆಲಸ ಮಾಡಿದರೆ ಕಾರ್ಯ ಮಾಡಿದರೆ ಪ್ರಚಾರ ಮಾಡಬೇಕು. ಯಾವಾಗಲೂ ವಿಚಾರ ಇರಬೇಕು. ಆಚಾರ ಇರಬೇಕು. ಆಮೇಲೆ ಪ್ರಚಾರ. ವಿಚಾರವೂ ಇಲ್ಲ, ಆಚಾರವೂ ಇಲ್ಲ, ಪ್ರಚಾರ ಆಗಬೇಕು ಎಂದರೆ ಹೇಗೆ ಆಗುತ್ತದೆ? ಅದಕ್ಕಾಗಿ ಕೆಲಸವೂ ಇಲ್ಲ ಡೆವಲಪ್‌ಮೆಂಟೂ ಇಲ್ಲ ಅವರು ದಿನವೂ ಏನು ಪ್ರಚಾರ ಮಾಡಬೇಕು ಅದಕ್ಕಾಗಿ ಅದು ನಿಂತಿದೆ.

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) : ವಾಟಾಳ್ ನಾಗರಾಜ್‌ರವರು ಭಾಷಣ ಮಾಡುತ್ತಿದ್ದಾರೆ ಎಂದು ಅದಕ್ಕೋಸ್ಕರ ಸುಮ್ಮನೆ ಇದ್ದೆ. ವಿಚಾರ ಇಲ್ಲ ಆಚಾರ ಇಲ್ಲ ಆದ್ದರಿಂದ ಪ್ರಚಾರ ಇಲ್ಲ, ಈಗ ಬಹಳ ಪ್ರಚಾರ ಮಾಡಿಕೊಡದಂಥ ಇವರ ಸರ್ಕಾರದ ವಿಚಾರಗಳೇನು ಎಂದು ಎಲ್ಲಾ ಕೇಳಿ, ನೋಡಿ, ನಾವೂ ಅನುಭವಿಸಿ ಜನ ಪ್ರಚಾರ ಮಾಡದಿದ್ದರೂ ಅವರ ವಿಚಾರ ತಿರಸ್ಕರಿಸಿದರು.

ಶ್ರೀ ವಾಟಾಳ್ ನಾಗರಾಜ್ : ಇದು ಏನಾಗುತ್ತದೆ ಎಂದರೆ ಒಂದೊಂದು ಸಾರಿ ಒಬ್ಬೊಬ್ಬರು ಪ್ರಚಾರ ಮಾಡಿಕೊಂಡೇ ಅಧಿಕಾರಕ್ಕೆ ಬರುತ್ತಾರೆ. ಅದೂ ಒಂದು ವಿಧಾನ ಯಾವ ಯಾವ ರೀತಿ ಅಧಿಕಾರಕ್ಕೆ ಬರುತ್ತಾರೆ ಎಂದು ತಮಗೂ ಗೊತ್ತು. ರಾಜ್ಯದ ಜನತೆಗೂ ಗೊತ್ತು. ನನಗನಿಸುತ್ತದೆ, ಅವರು ದುಡ್ಡು ಬೇಡ ಎಂದು ಹೇಳಿದರೆ ನನ್ನದೇನೂ ಅಭ್ಯಂತರವಿಲ್ಲ, ಶ್ರೀಮಾನ್ ನಾಣಯ್ಯನವರು ತಲೆಯ ಮೇಲೆ ಕೈ ಹೊತ್ತುಕೊಂಡು ಕುಳಿತಿದ್ದಾರೆ. ನಮ್ಮ ಪರಿಸ್ಥಿತಿ ಹೀಗೆ ಎಂದು ಹೇಳಿ ಕುಳಿತಿದ್ದಾರೆ.

ಅಧ್ಯಕ್ಷರು : ಇಲ್ಲ, ಇಲ್ಲ, ಅವರು ಮೀಸೆ ಮೇಲೆ ಕೈ ಇಟ್ಟಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ತಲೆಯಿಂದ ಈಗ ಮೀಸೆ ಮೇಲೆ ಕೈ ಬಂತು. ನಾನು ನೋಡೇಬಿಡುತ್ತೇನೆ ಎಂದು. ಅಂದರೆ ಇದು ನಾಟಕೀಯವಾಗಿ ಹೋಯಿತು. ಮೊದಲು ಅವರ ಚಿಂತನೆ ತಲೆಮೇಲೆ ಕೈಹೊತ್ತು ಕುಳಿತಿದ್ದರು. ನಮ್ಮ ಪರಿಸ್ಥಿತಿ ಹೀಗೆ ಆಗಿದೆ, ನೀವು ಹೇಳುವುದು ಸತ್ಯ ಎಂದು. ಈಗ ಅವರಿಗೆ ಪ್ರಚೋದನೆಯಾದ ಮೇಲೆ ಮೀಸೆ ಮೇಲೆ ಕೈ ಬಂದಿದೆ. ಆ ಪ್ರಶ್ನೆ ಬೇರೆ.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ಸಚಿವರು) : ಮಾನ್ಯ ಅಧ್ಯಕ್ಷರೇ, ಕೆಲವು ಸಂದರ್ಭದಲ್ಲಿ ಗಂಭೀರವಾಗಿರುವ ಚಿಂತನೆಯನ್ನು ಮಾಡಬೇಕಾದರೆ ಮೀಸೆ ಮೇಲೆ ಕೈ ಬರಲೇಬೇಕಾಗುತ್ತದೆ. ಮೀಸೆ ಇದ್ದವರಿಗೆ ಮಾತ್ರ ಸಾಧ್ಯ. ಬಾಕಿಯವರಿಗೆ ಅದು ಆಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದು ಬಹಳ ಡೇಂಜರಸ್. ನಾವು ಮುಖ್ಯಮಂತ್ರಿಗಳಿಗೆ ಮತ್ತು ಉಪಮುಖ್ಯಮಂತ್ರಿಗಳಿಗೆ ಇದನ್ನು ಕೇಳಬೇಕಾಗುತ್ತದೆ. ಇಂಥವರನ್ನು ನೀವು ಇಟ್ಟುಕೊಂಡು ನಿಮ್ಮ ಪರಿಸ್ಥಿತಿ ಏನು ಎಂದು ನಾವು ಹೇಳಬೇಕಾಗುತ್ತದೆ.

ಅಧ್ಯಕ್ಷರು : ಅವರ ಮೀಸೆ ಸೈಜ್ ನೋಡಿ. ಮುಖ್ಯಮಂತ್ರಿಗಳಿಗೆ ಮತ್ತು ಉಪ ಮುಖ್ಯಮಂತ್ರಿಗಳಿಗೆ ಇಲ್ಲ ಎಂದು ಇಬ್ಬರ ಪರವಾಗಿ ಅವರೊಬ್ಬರೇ ಇಟ್ಟುಕೊಂಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಈಗ ಮುಖ್ಯಮಂತ್ರಿಗಳಿಗೂ, ಉಪ ಮುಖ್ಯಮಂತ್ರಿಗಳಿಗೂ ಆ ತರಹ ಮೀಸೆ ಹಚ್ಚಿಬಿಟ್ಟರೆ ಬೇರೆ ತರಹ ಕಾಣುತ್ತಾರೆ ಅವರು. ಅದು ಸರಿಯಲ್ಲ, ಅವರು ಯಾವ ರೀತಿ ಕಾಣಬಹುದು ಎಂದು ಚಿತ್ರ ಬರೆಸಬೇಕು ನಾವು. ಯಾವು ರೀತಿಯಾಗಿ ಕಾಣಬಹುದು. ಅವರ ನೋಟ ಹೇಗೆ ಕಾಣಬಹುದು ಎಂದು. ಅದಕ್ಕೋಸ್ಕರವೇ ಪಟೇಲರು ಮೀಸೆ ಬೇಡ ಎಂದು ಅವರು ಬಿಟ್ಟುಬಿಟ್ಟಿದ್ದಾರೆ.

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕಾ ಮಂತ್ರಿಗಳು) : ವಾಟಾಳ್ ನಾಗರಾಜ್‌ರವರಿಗೆ ಮೀಸೆ ಹಚ್ಚಿದರೆ ಯಾವ ರೀತಿ ಕಾಣುತ್ತಾರೆ. ಅದೂ ಸ್ವಲ್ಪ ದಪ್ಪಾಗಿ ಇರಬೇಕು.

ಶ್ರೀ ವಾಟಾಳ್ ನಾಗರಾಜ್ : ತೋಟಗಾರಿಕಾ ಇಲಾಖೆಯ ಮಂತ್ರಿಯವರಿಗೆ ಮೀಸೆ ಎಲ್ಲಿದೆ ಎಂತಲೇ ಗೊತ್ತಿಲ್ಲ ಬಿಡಿ.

ಶ್ರೀ ಡಿ.ಟಿ. ಜಯಕುಮಾರ್ : ದಪ್ಪಾಗಿ ಇರಬೇಕು ಎಂದು ಹೇಳಿದರಲ್ಲ, ಅದಕ್ಕೆ ಹೇಳಿದೆ.

ಅಧ್ಯಕ್ಷರು : ಅವರು ಆ ಇಲಾಖೆಯಲ್ಲಿದ್ದಾರೆ. ಹಣ್ಣುಹಂಪಲು ಬಿಟ್ಟು ಅವರಿಗೆ ಮೀಸೆ ಪಾಸೆ ಕಾಣುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಇಲ್ಲಾ ಕಾಣಲಿಲ್ಲ, ನೋಡಿ ಅವರು ಅಷ್ಟೊತ್ತಿನಿಂದ ನೋಡುತ್ತಿದ್ದಾರೆ. ನನ್ನ ಮೀಸೆ ಇರುವುದೇ ಅವರಿಗೆ ಗೊತ್ತಾಗಲಿಲ್ಲ. ಅದೊಂದು ಬಹಳ ಅಪರೂಪದ ಪ್ರಸಂಗ. ಇರಲಿ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ವಿಷಯಸಮಿತಿಗಳು ಒಂದು ವರದಿಯನ್ನು ಕೊಟ್ಟಾಗ ಅದನ್ನು ಸರ್ಕಾರ ಗಂಭೀರವಾಗಿ ಚಿಂತನೆ ಮಾಡಿ ಮತ್ತು ಹಣಕಾಸಿನ ಸಚಿವರು ಇದರ ಬಗ್ಗೆ ಗಂಭೀರವಾಗಿ ಚಿಂತನೆ ಮಾಡಿ ಕೊನೆಗೆ ನಾವು ಕೊಟ್ಟಿದ್ದನ್ನು ನೂರಕ್ಕೆ ನೂರು

ತಾವು ಅನುಷ್ಠಾನಕ್ಕೆ ತರದಿದ್ದರೂ ಯಾವುದು ಅಮೂಲ್ಯ, ಯಾವುದು ಮುಖ್ಯ ಅದನ್ನಾದರೂ ಅನುಷ್ಠಾನಕ್ಕೆ ತರುವುದಕ್ಕೆ ಸಚಿವರ ಜೊತೆಯಲ್ಲಿ ಮಾತನಾಡಿ ತರತಕ್ಕಂಥದ್ದು ಅತ್ಯಂತ ಪ್ರಾಮುಖ್ಯತೆ ಇರುವ ಮಾತು. ಈಗ ಉದಾಹರಣೆಗೆ ತಮಗೆ ಕೆಲವು ವಿಚಾರಗಳನ್ನು ಹೇಳುವುದಾದರೆ ಈಗ ಅಲ್ಲಿ ಖಾಲಿ ಇರುವ ಹುದ್ದೆಗಳನ್ನು ಇವತ್ತಿನವರೆಗೂ ತುಂಬುವುದಕ್ಕಾಗಿಲ್ಲ. ವಾರ್ತಾ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬುವುದಕ್ಕೆ ಇವರ ಕೈಯಲ್ಲಿ ಆಗಿಲ್ಲ. ಮತ್ತು ಏನು ಕೆಲಸ ನಡೆಯುತ್ತದೆ? ಕೆಲಸ ಸಾಧ್ಯವಿಲ್ಲ. ಜಿಲ್ಲಾ ವಾರ್ತಾಧಿಕಾರಿಗಳ ಬಗ್ಗೆ ಹೇಳುತ್ತೇನೆ, ಎಷ್ಟು ನಾಚಿಕೆಯಾಗುತ್ತದೆ ಎಂದು ತಮಗೆ ಹೇಳುತ್ತೇನೆ. ವಾರ್ತಾ ಮತ್ತು ಪ್ರಚಾರ, ಜಿಲ್ಲಾ ವಾರ್ತಾಧಿಕಾರಿಗಳ ಮನೆಗಳಿಗೆ ದೂರವಾಣಿ ಇಲ್ಲ. ಜಿಲ್ಲಾ ವಾರ್ತಾಧಿಕಾರಿಗಳು ಯಾರಿದ್ದಾರೆ, ಅವರು ಬಹಳ ಪ್ರಮುಖರು. ಆ ಜಿಲ್ಲೆಯ ಬೆಳವಣಿಗೆಯ ದೃಷ್ಟಿಯಿಂದ ಇದು ಅತ್ಯಂತ ಪ್ರಮುಖವಾದುದು. ನಾವು ಒಂದು ಉದಾಹರಣೆಗೆ ಹೇಳುವುದಾದರೆ ಹಾಸನಕ್ಕೆ ಬಂದು ರಾತ್ರಿ ಯಾವುದೋ ಒಂದು ವಿಚಾರದಲ್ಲಿ ವಾರ್ತಾಧಿಕಾರಿ ಎಲ್ಲಿದ್ದಾರೆ, ಅವರ ಮನೆಗೆ ದೂರವಾಣಿ ಇದೆಯೇ? ಎಂದು ಕೇಳಿದರೆ ಅವರಿಗೆ ದೂರವಾಣಿ ಮನೆಗೆ ಕೊಟ್ಟಿಲ್ಲ ಎಂದು ಹೇಳಿದರು.

ಇದಕ್ಕಿಂತ ಅತ್ಯಂತ ಶೋಚನೀಯವಾದ ಪರಿಸ್ಥಿತಿ ಬರಬಾರದು ಯಾರಿಗೂ ನನಗನಿಸುತ್ತದೆ. ಸರ್ಕಾರದ ಸಂಪೂರ್ಣ ಪ್ರಚಾರದ ಹೊಣೆಯನ್ನು ಹೊತ್ತಿರತಕ್ಕಂಥ ವಾರ್ತಾ ಇಲಾಖೆಗೆ ಪ್ರತಿ ಜಿಲ್ಲೆಯ ಯಾವ ಅಧಿಕಾರಿಗಳು ಇದ್ದಾರೆ, ಆ ಅಧಿಕಾರಿಗಳಿಗೆ ಎಲ್ಲಾ ರೀತಿಯ ಸವಲತ್ತನ್ನು ಕೊಡಬೇಕಾದುದು ಕರ್ತವ್ಯ. ಈ ವಿಚಾರದಲ್ಲಿ ನಾವು ತಕರಾರು ಮಾಡಿ ಇದರ ಬಗ್ಗೆ ಸರ್ಕಾರಕ್ಕೆ ಉಳಿತಾಯ ಇದೆ ಎಂದು ಹೇಳುವುದು ಸರಿಯಾದ ಪ್ರಸಂಗವಲ್ಲ. ನಿರ್ದೇಶಕರ ಬಗ್ಗೆ ನಾನು ನನ್ನ ವರದಿಯಲ್ಲಿ ಎರಡು ವರ್ಷದಿಂದ ಹೇಳುತ್ತಿದ್ದೇನೆ. ಆ ಇಲಾಖೆಗೇ ಸಂಬಂಧಪಟ್ಟವರನ್ನೇ ನಿರ್ದೇಶಕರನ್ನಾಗಿ ಮಾಡಬೇಕು ಎನ್ನತಕ್ಕಂಥದ್ದು. ಇದೇ ಇಲಾಖೆಯಲ್ಲಿ ಹಿಂದೆ ಆ ಇಲಾಖೆಯವರೇ ಕೆಲಸ ಮಾಡಿದಂಥ ಅನೇಕ ಜನ ಒಳ್ಳೆಯ ಹೆಸರನ್ನು ಪಡೆದಂಥವರು ಇದ್ದರು. ಮರಿಪುಟ್ಟಣ್ಣ ಎಂದು ತಮಗೆ ಗೊತ್ತಿರಬಹುದು. ಆ ಇಲಾಖೆಯಲ್ಲಿ ಬಹಳ ಚೆನ್ನಾಗಿ ಕೆಲಸ ಮಾಡಿದವರೂ ಇದ್ದಾರೆ. ಆ ಇಲಾಖೆಯನ್ನು ಬೆಳೆಸುವುದಕ್ಕೆ ಆ ಇಲಾಖೆಯಲ್ಲಿ ಕೆಲಸ ಮಾಡಿ ಅನುಭವ ಪಡೆದಂಥವರನ್ನು ನಿರ್ದೇಶಕರನ್ನು ಮಾಡಬೇಕು ಎಂದು ಇದೆ. ಈಗ ಸರ್ಕಾರ ಐಎಎಸ್ ಅಧಿಕಾರಿಗಳನ್ನು ನೇಮಕ ಮಾಡುತ್ತಾರೆ. ಎಷ್ಟು ದಿವಸ ಇರುತ್ತಾರೆ ಸ್ವಾಮಿ? ಒಂದು ಚಲನಚಿತ್ರ ಪ್ರಶಸ್ತಿಯನ್ನು ಕೊಡುವವರೆಗೂ ಇರುತ್ತಾರೆ. ಕೊಟ್ಟನಂತರ ಬದಲಾವಣೆಯಾಗುತ್ತಾರೆ. ತಿರುಗಿ ಮತ್ತೆ ಬರುತ್ತಾರೆ. ತಿರುಗಿ ಬದಲಾವಣೆಯಾಗುತ್ತದೆ. ಈಗಾಗಲೇ ಒಂದು ವರ್ಷದಲ್ಲಿ ಸ್ವಲ್ಪ ಹೆಚ್ಚುಕಡಿಮೆ ಇಬ್ಬರು ಮೂವರು ಜನ ವಾರ್ತಾಧಿಕಾರಿಗಳು ಬದಲಾವಣೆಯಾದರು. ಮೂರು ಜನ ವಾರ್ತಾಧಿಕಾರಿಗಳು. ಇವತ್ತಿಗೂ ಸಹಾ ತಾವು ಒಬ್ಬರನ್ನು ತಾತ್ಕಾಲಿಕವಾಗಿ ಇಟ್ಟಿದ್ದೀರಿ. ಅದು ಸರಿಯಲ್ಲ. ಆ ನಿರ್ಧಾರ ಸರಿಯಲ್ಲ ಎಂದು ನನ್ನ ಕಳಕಳಿಯ ಮನವಿ. ತಮ್ಮ ಮೂಲಕ ನಾನು ಮಾನ್ಯ ಸಚಿವರಿಗೆ ಹೇಳುತ್ತೇನೆ. ಇದನ್ನು ತಾವು ಗಮನದಲ್ಲಿಡಿ. ಇಲಾಖೆಯಲ್ಲಿ ಇರತಕ್ಕಂಥವರನ್ನೇ ನಿರ್ದೇಶಕರನ್ನಾಗಿ ಮಾಡತಕ್ಕಂಥ ವ್ಯವಸ್ಥೆ ತಮ್ಮದಾಗಬೇಕು. ಆಗ ಆ ಇಲಾಖೆಗೆ ಶಕ್ತಿ ಬರುತ್ತವೆ. ನೀವು ಯಾವುದೇ ರಾಜಕೀಯಕ್ಕೋಸ್ಕರ ನಿರ್ದೇಶಕರನ್ನಾಗಿ ಯಾರನ್ನು ಬೇಕಾದರೂ ಮಾಡಿ. ಇಲಾಖೆಯಲ್ಲಿ ಯಾರು ಪರಿಣಿತಿ ಹೊಂದಿದ್ದಾರೆ, ಯಾರು ಅದಕ್ಕೆ ಅರ್ಹತೆ ಪಡೆದಿದ್ದಾರೆ ಅಂಥವರನ್ನು ಮಾಡಿ. ಆದರೆ ಇಲಾಖೆಯವರನ್ನು ಬಿಟ್ಟು ಐಎಎಸ್ ಅಧಿಕಾರಿಗಳನ್ನು ನೀವು ಅಲ್ಲಿ ಹಾಕುವುದು ಸರಿಯಲ್ಲ. ನಾನೇನು ಐಎಎಸ್ ಅಧಿಕಾರಿಗಳನ್ನು ಅಲ್ಲಿಗೆ ಹಾಕಬಾರದು ಎಂದು ಹೇಳುವುದಿಲ್ಲ. ಐಎಎಸ್ ಅಧಿಕಾರಿಗಳೇ ಎಲ್ಲಾ ಪರಮಪವಿತ್ರ ಎನ್ನುವ ಪ್ರಶ್ನೆಯೂ ಅಲ್ಲ. ಪ್ರಾಮಾಣಿಕವಾಗಿ ಮಾತನಾಡೋಣ ನಾವು. ಚಿಂತನೆ ಮಾಡೋಣ.

ಆದ್ದರಿಂದ ವಾರ್ತಾ ಮತ್ತು ಪ್ರಚಾರ ಇಲಾಖೆಗೆ ನೇರವಾಗಿ ಅದೇ ಇಲಾಖೆಯವರನ್ನೇ ತಾವು ನಿರ್ದೇಶಕರನ್ನಾಗಿ ಮಾಡಬೇಕು ಎಂದು ನನ್ನ ಕಳಕಳಿಯ ಮನವಿ. ಕನ್ನಡ ಚಲನಚಿತ್ರಗಳ ಬಗ್ಗೆ ಸರ್ಕಾರದಲ್ಲಿ ಒಂದು ನೀತಿ ಸರ್ಕಾರದ್ದು ಕರ್ನಾಟಕದಲ್ಲಿ ತಯಾರಾದಂಥ ಚಿತ್ರಗಳಿಗೆ ಸಹಾಯಧನವನ್ನು ಕೊಡುವ ನೀತಿ ಸರ್ಕಾರದ ಸ್ಪಷ್ಟ ನೀತಿ. ಇದಕ್ಕಾಗಿ ತಾವು ತೆರಿಗೆಯನ್ನು ವಸೂಲು ಮಾಡುತ್ತೀರಿ. ಈ ಹೆಸರಿನಲ್ಲಿ ತೆರಿಗೆಯನ್ನೂ ವಸೂಲು ಮಾಡುತ್ತೀರಿ. ಇದುವರೆವಿಗೂ ತಾವು ಕನಿಷ್ಟ 240 ಕನ್ನಡ ಚಿತ್ರಗಳಿಗೆ ಸಹಾಯಧನವನ್ನು ಬಿಡುಗಡೆ ಮಾಡಿಲ್ಲ.

ಅಧ್ಯಕ್ಷರು : ಈಗ ನಾವು ಊಟ ಮಾಡಿಕೊಂಡು ಬಂದು ಸಹಾಯಧನದ ಬಗ್ಗೆ ಪ್ರಸ್ತಾಪ ಮಾಡಿದರೆ ಅವರಿಗೂ ಸ್ವಲ್ಪ ಶಕ್ತಿ ಸರಿಯಾಗಿ ಒಂದು ಆಲೋಚನೆ ಮಾಡಬಹುದು. ಅಲ್ಲವೇ? ನಿಮಗೆ ಒಪ್ಪಿಗೆ ಇದೆಯೇ?

ಶ್ರೀ ವಾಟಾಳ್ ನಾಗರಾಜ್ : ಆಗಬಹುದು ಸ್ವಾಮಿ.

ಅಧ್ಯಕ್ಷರು : ಈಗ ಸದನವನ್ನು ಅರ್ಧ ಗಂಟೆ ಕಾಲ ಮುಂದೂಡಲಾಗಿದೆ.

(ಸಭೆಯು 1-29ಕ್ಕೆ ಮುಕ್ತಾಯಗೊಂಡಿತು)

(ಸದನವು ಪುನಃ 2.20ಕ್ಕೆ ಸಮಾವೇಶಗೊಂಡಿತು)

(ಸನ್ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದ್ದರು)

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಉಪಾಧ್ಯಕ್ಷರೇ, ವಾರ್ತಾ ಇಲಾಖೆಗೆ ಸಮಗ್ರವಾಗಿ ಚೇತನವನ್ನು ನೀಡಿ, ಹೊಸ ಶಕ್ತಿಯನ್ನು ಕೊಡುವುದರಿಂದ ಸರ್ಕಾರದ ಆಡಳಿತ ವ್ಯವಸ್ಥೆಗೆ ಒಂದು ಚೇತನ ಬರುತ್ತದೆ ಎಂದು ನಾನಾದರೂ ಅಂದುಕೊಂಡಿತ್ತೇನೆ. ಆ ದೃಷ್ಟಿಯಿಂದ ಕಡೆಗಾಣಿಸಿರುವ ವಾರ್ತಾ ಇಲಾಖೆಯನ್ನು ಸಮಗ್ರವಾಗಿ ಬದಲಾವಣೆ ಮಾಡಿ ಹೊಸ ದಿಕ್ಕಿಗೆ ತೆಗೆದುಕೊಂಡು ಹೋಗತಕ್ಕ ಪರಿಣಾಮಕಾರಿಯಾದಂತಹ ಶಕ್ತಿಯನ್ನು ಇಲಾಖೆಗೆ ಕೊಡಬೇಕು ಎನ್ನತಕ್ಕದ್ದು ನನ್ನ ಅತ್ಯಂತ ಪ್ರಾಮಾಣಿಕ ಚಿಂತನೆ. ಅಲ್ಲಿಗೆ ಹೊಸದಾಗಿ ಪರಿಶೋಧನೆ ಮತ್ತು ಸಂಶೋಧನೆಗಾಗಿ ಒಂದು ವಿಶೇಷವಾದಂತಹ ವಿಭಾಗವನ್ನು ತೆರೆಯಬೇಕು. ಆ ವಿಭಾಗದಿಂದ ಪತ್ರಿಕಾಕರ್ತರಿಗೂ, ಬರಹಗಾರರಿಗೂ ಮತ್ತು ಬೇರೆ ಈ ರಾಜ್ಯದ ವಿವಿಧ ಕ್ಷೇತ್ರದ ಅಭಿವೃದ್ಧಿ ಬಗ್ಗೆ ಚಿಂತನೆ ನಡೆಸುವುದಕ್ಕೆ ಒಂದು ವಿಶೇಷವಾದಂತಹ ಸಂಶೋಧನೆ ಮತ್ತು ಪರಿಶೋಧನೆಯೆಂಬ ಒಂದು ವಿಭಾಗವನ್ನು ತೆರೆಯಬೇಕು ಎನ್ನತಕ್ಕದ್ದು ನನ್ನ ಕಳಕಳಿಯ ಮನವಿ. ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರಸಭೆಗೆ ಎದುರಿಗೆ 'ಬಾದಾಮಿ ಕಟ್ಟಡ' ಎಂಬ ಕಟ್ಟಡ ಇದೆ. ಬಾದಾಮಿ ಕಟ್ಟಡ ಬಹಳ ಇತಿಹಾಸ ಪ್ರಸಿದ್ಧವಾದಂತಹ ಕಟ್ಟಡ. ಈ ಕಟ್ಟಡದಲ್ಲಿ ವಾರ್ತಾ ಇಲಾಖೆ ಇದೆ, ಪ್ರವಾಸೋದ್ಯಮ ಇಲಾಖೆಯೂ ಇದೆ. ಈ ಇಲಾಖೆಗಳು ಕಟ್ಟಡದ ಬಹು ಭಾಗದಲ್ಲಿ ಕೆಲಸವನ್ನು ಮಾಡುತ್ತಿವೆ. ಇಂತಹ ಒಂದು ಐತಿಹಾಸಿಕವಾದಂತಹ ಕಟ್ಟಡ ಸರ್ಕಾರಕ್ಕೆ ಸಿಗುವುದು ಕಷ್ಟ. ಆ ದೃಷ್ಟಿಯಿಂದ ನಾನು ನೇರವಾಗಿ ಏನು ಹೇಳುತ್ತಿದ್ದೇನೆ ಎಂದರೆ, ಬಾದಾಮಿ ಕಟ್ಟಡವನ್ನು ಈಗಾಗಲೇ ಸರ್ಕಾರದವರು ಬೇರೆಯವರಿಗೆ ಪರಭಾರೆ ಮಾಡಿ ಮಾರಬೇಕು ಎನ್ನತಕ್ಕಂತಹ ಚಿಂತನೆ ಇದೆ. ನನ್ನ ದೃಷ್ಟಿಯಲ್ಲಿ ವಾರ್ತಾ ಇಲಾಖೆಯವರು, ಪ್ರವಾಸೋದ್ಯಮ ಇಲಾಖೆಯವರು ಒಟ್ಟಾರೆ ಸೇರಿ, ಆ ಒಂದು ಬಾದಾಮಿ ಕಟ್ಟಡವನ್ನು ಸರ್ಕಾರ ಅಧೀನದಲ್ಲೇ ಉಳಿಸಿಕೊಳ್ಳತಕ್ಕದ್ದು ಬಹಳ ಒಳ್ಳೆಯದು. ಆ ಕಟ್ಟಡ ಇತಿಹಾಸ ಪ್ರಸಿದ್ಧವಾದುದು ಮತ್ತು ಒಂದು ಸ್ಮಾರಕವಾದ ಕಟ್ಟಡವಾಗಿ ನಮಗೆ ಕಾಣುತ್ತಿದೆ. ಅದನ್ನು ಖಾಸಗಿಯವರು ತೆಗೆದುಕೊಂಡು ಅಲ್ಲಿ ಹೋಟೆಲ್ ಮಾಡಬಹುದು, ಅಥವಾ ಇನ್ನೊಂದು ಮಾಡಬಹುದು. ಆದರೆ ಸರ್ಕಾರದ ಒಡೆತನಕ್ಕೆ

ಬರತಕ್ಕ ವ್ಯವಸ್ಥೆಯಾದರೆ ಒಳ್ಳೆಯದು ಎನ್ನತಕ್ಕ ಮಾತನ್ನು ನಾನು ತಮ್ಮ ಮೂಲಕ ಸರ್ಕಾರದ ಗಮನ ಸೆಳೆಯ ಬಯಸುತ್ತೇನೆ.

ಯಾವುದೇ ಕಾರಣದಿಂದಾಗಲೀ, ಎಷ್ಟೇ ಹಣ ಖರ್ಚಾಗಲೀ ಸರ್ಕಾರವೇ ಬಾದಾಮಿ ಕಟ್ಟಡವನ್ನು ಖರೀದಿ ಮಾಡಬೇಕು ಎನ್ನತಕ್ಕದ್ದು ನನ್ನ ಕಳಕಳಿಯ ಮನವಿ. ಮಾನ್ಯ ನಾಣಯ್ಯನವರೇ, ಬಾದಾಮಿ ಕಟ್ಟಡ ಬೆಂಗಳೂರು ನಗರಸಭೆಯ ಮುಂದಿರತಕ್ಕದ್ದು. ಅಲ್ಲಿ ತಮ್ಮ ಇಲಾಖೆ ಇದೆ ಮತ್ತು ಮಾನ್ಯ ಉಪಮುಖ್ಯಮಂತ್ರಿಗಳು ಹೊಂದಿರತಕ್ಕ ಪ್ರವಾಸೋದ್ಯಮ ಇಲಾಖೆ ಇದೆ. ಅದು ಬಹಳ ಪ್ರಸಿದ್ಧವಾದ ಸ್ಥಳ. ಯಾವ ಕಾರಣಕ್ಕೂ ಅದನ್ನು ನೀವು ಬಿಡಬೇಡಿ. ಆ ಕಟ್ಟಡವನ್ನು ನಮ್ಮ ವಾರ್ತಾ ಇಲಾಖೆ ಉಳಿಸಿಕೊಳ್ಳುವುದರಿಂದ ಅದೊಂದು ಸ್ಮಾರಕವಾಗಿ ಉಳಿಯುತ್ತದೆ ಎನ್ನತಕ್ಕದ್ದು ನನ್ನ ಅತ್ಯಂತ ಪ್ರಾಮಾಣಿಕವಾದ ಚಿಂತನೆ. ಈಗ ವಾರ್ತಾ ಇಲಾಖೆ ಕಟ್ಟಡ ಏನಿದೆ, ಅದನ್ನು ಮಾನ್ಯ ಅಧ್ಯಕ್ಷರು ನೋಡಬೇಕು. ಮಾನ್ಯ ಅಧ್ಯಕ್ಷರೇ, ಆ ಕಟ್ಟಡವನ್ನು ತಾವಾಗಲೀ ಅಥವಾ ಸಂಬಂಧಪಟ್ಟ ಸಚಿವರಾಗಲಿ ನೋಡಬೇಕು. ಆ ಸ್ಥಳ ಬಹಳ ಚೆನ್ನಾಗಿದೆ. ಆದರೆ ಕಟ್ಟಡದ ಒಳಗಡೆ ನಾನು ಮತ್ತು ನಮ್ಮ ವಿಷಯ ಸಮಿತಿಯು ಅಲ್ಲಿಗೆ ಹೋಗಿ, ಅಲ್ಲಿರುವ ಪ್ರತಿಯೊಂದು ವಿಭಾಗಕ್ಕೂ ಭೇಟಿ ಕೊಟ್ಟು ಬಂದಿದ್ದೇವೆ. ಅದು ಎಷ್ಟು ಹೀನಾಯವಾಗಿದೆ ಎಂದರೆ, ನಾನು ಇಲಾಖೆಯನ್ನು ಬಯ್ಯುತ್ತಿಲ್ಲ, ಆ ವ್ಯವಸ್ಥೆ ಅಷ್ಟು ಹೀನಾಯವಾಗಿದೆ. ಅಲ್ಲಿ ಸರಿಯಾಗಿ ಕುಳಿತುಕೊಳ್ಳತಕ್ಕ ಸ್ಥಳ ಇಲ್ಲ. ಆ ವಾರ್ತಾ ಇಲಾಖಾ ಕಟ್ಟಡಕ್ಕೆ 'ಕರ್ನಾಟಕ ವಾರ್ತಾ ಭವನ' ಎಂದು ಹೆಸರಿಡಬೇಕು. ಆ ಜಾಗ ಏನಿದೆ, ಅಲ್ಲಿ ಈಗಿರತಕ್ಕ ಹಳೆಯ ಕಟ್ಟಡವನ್ನೆಲ್ಲಾ ಒಡೆದು ಹಾಕಿ, ಸುಂದರವಾದಂತಹ ರಮ್ಯತೆಯನ್ನು ತೋರಿಸತಕ್ಕ ಭವ್ಯ ಕಟ್ಟಡವನ್ನು ನಿರ್ಮಾಣ ಮಾಡಬೇಕು. ಆ ಕಟ್ಟಡ ಆಧುನೀಕರಣವಾದಂತಹ ವ್ಯವಸ್ಥೆಯಿಂದ ಕೂಡಿರಬೇಕು. ಆ ಕಟ್ಟಡದೊಳಗೆ ನಾವು ಭೇಟಿ ಕೊಟ್ಟ ತಕ್ಷಣ, ಇಡೀ ಕರ್ನಾಟಕ ರಾಜ್ಯದ ಸಮಗ್ರ ಚಿತ್ರಣವೇ ನಮ್ಮ ಕಣ್ಣ ಮುಂದೆ ಬರಬೇಕು. ಆ ರೀತಿಯಾಗಿ ಕಟ್ಟಡವನ್ನು ನಿರ್ಮಾಣ ಮಾಡಬೇಕು. ಆ ಕಟ್ಟಡದಲ್ಲಿ ಮಾನ್ಯ ಮುಖ್ಯಮಂತ್ರಿಗಳ, ಮಂತ್ರಿಗಳ ಯಾವುದೇ ಪತ್ರಿಕಾ ಸಂದರ್ಶನಗಳಾಗಲೀ, ಪತ್ರಿಕಾಗೋಷ್ಠಿಗಳಾಗಲೀ ಆ ಕಟ್ಟಡದಲ್ಲೇ ನಡೆಯಬೇಕು. ಇದರಿಂದಾಗಿ ಆ ಕಟ್ಟಡಕ್ಕೆ ಒಂದು ಹೆಚ್ಚಿನ ಮಹತ್ವ ಬರುತ್ತದೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಒಂದು ಕಡೆ ಪತ್ರಿಕಾಗೋಷ್ಠಿ ನಡೆಸುತ್ತಾರೆ, ಮಂತ್ರಿಗಳು ಒಂದು ಕಡೆ ಪತ್ರಿಕಾಗೋಷ್ಠಿ ಕರೆಯುತ್ತಾರೆ. ಈ ಒಂದು ವ್ಯವಸ್ಥೆಗಿಂತ, ವಾರ್ತಾ ಇಲಾಖೆಯವರು ಹಳೆಯದನ್ನೆಲ್ಲಾ ಕೆಡವಿ ಹೊಸ ಸುಂದರವಾದ ನವ್ಯತೆಯ ಭವನವನ್ನು ಕಟ್ಟಿದರೆ ಒಂದು ಉತ್ತಮವಾದಂತಹ ಕಾರ್ಯವಾಗುತ್ತದೆ ಎಂದು ನನಗನಿಸುತ್ತದೆ. ಇದಕ್ಕಾಗಿ ನೀವು ಹಣಕಾಸಿನ ಚಿಂತನೆ ಮಾಡಕೂಡದು.

ನಮಗೆ ಹಣಕಾಸು ಇಲ್ಲ, ಮುಂತಾಗಿ ನೋಡಬಾರದು. ಇವು ನಮ್ಮ ಆಸ್ತಿ ಆಗತಕ್ಕವು. ನಿಮ್ಮ ಸರ್ಕಾರವನ್ನು ಶೋಭಾಯಮಾನವಾಗಿ, ಸರ್ಕಾರದ ಒಂದು ಚಿಂತನೆಯನ್ನು ಹೊಸ ದಿಕ್ಕಿಗೆ ತೆಗೆದುಕೊಂಡು ಹೋಗತಕ್ಕ ವ್ಯವಸ್ಥೆಯಾಗುತ್ತವೆ. ಆ ದೃಷ್ಟಿಯಿಂದ ಈ ಕಟ್ಟಡವನ್ನು ರಮ್ಯತೆಯಿಂದ ನಾಜೂಕಾಗಿ ಕಟ್ಟಬೇಕು ಎಂಬ ಮಾತನ್ನು ತಮಗೆ ನಾನು ಹೇಳುತ್ತೇನೆ. ಕಟ್ಟಡವನ್ನು ಕೆಡವತಕ್ಕ ಕೆಲಸ ನನ್ನದಲ್ಲ, ಸಲಹೆ ಕೊಡತಕ್ಕದ್ದು ಮಾತ್ರ ನನ್ನ ಕೆಲಸ. ಅದನ್ನು ನೀವಾದರೂ ಕೆಡುವಬಹುದು, ಮಾನ್ಯ ಬಂಗಾರಪ್ಪನವರಾದರೂ ಕೆಡುವಬಹುದು. ಅದನ್ನು ಯಾವಾಗ ಕೆಡುವಬೇಕು ಎನ್ನತಕ್ಕದ್ದನ್ನು ಮಾನ್ಯ ನಾಣಯ್ಯನವರು ನಿರ್ಧಾರ ಮಾಡಿಕೊಳ್ಳಲಿ. ನನ್ನದೇನೂ ಅಭ್ಯಂತರವಿಲ್ಲ, ಮಾನ್ಯ ಶಿವರಾಮೇಗೌಡರೇ ಇದನ್ನು ಹಾಸ್ಯವಾಗಿ ಚಿಂತನೆ ಮಾಡತಕ್ಕದ್ದಲ್ಲ. ತಾವು ವಾರ್ತಾ ಭವನ ನೋಡಿಲ್ಲ ಎಂದು ಕಾಣುತ್ತದೆ. ನೀವು ಯಾವ್ಯಾವ ಭವನಗಳನ್ನು ನೋಡಿದ್ದೀರೋ ನನಗೆ ಗೊತ್ತಿಲ್ಲ, ಆದರೆ ಒಮ್ಮೆ ವಾರ್ತಾ ಭವನವನ್ನು

ತಾವು ನೋಡಬೇಕು. ತಾವು ನೋಡಿದರೆ ನಿಮಗೆ ಕಟ್ಟಡ ಕಲ್ಪನೆ, ನಾವು ಮುಂದೆ ಏನು ಮಾಡಬೇಕು, ಇತ್ಯಾದಿ ಪರಿಸ್ಥಿತಿ ನಿಮಗೆ ಅರ್ಥವಾಗುತ್ತದೆ. ನೀವು ಸುಮ್ಮನೆ ನಾಗಮಂಗಲ ನೋಡಿ, ಇಲ್ಲಿ ಒಂದು ನಕ್ಕು ಬಿಟ್ಟರೆ ಆಗುತ್ತದೆಯೇ? ಅದು ಆಗುವುದಿಲ್ಲ. ಅದುದರಿಂದ ಮಾನ್ಯ ಅಧ್ಯಕ್ಷರೇ, ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ. ಬೇರೆ ರಾಜ್ಯಗಳ ವಾರ್ತಾ ಭವನಗಳು ಬಹಳ ಚೆನ್ನಾಗಿವೆ. ಮಹಾರಾಷ್ಟ್ರದಲ್ಲಿ ಚೆನ್ನಾಗಿ ಇದೆ, ತಮಿಳುನಾಡಿನಲ್ಲಂತೂ ವಾರ್ತಾ ಮತ್ತು ಪ್ರಚಾರ ಇಲಾಖೆಗೆ ಅವರು ಕೊಟ್ಟಿರತಕ್ಕ ಹೆಚ್ಚಿನ ಗಮನವನ್ನು ಬೇರೆ ಯಾವ ಸರ್ಕಾರವೂ ಕೊಟ್ಟಿಲ್ಲ ಎಂದು ನನಗನಿಸುತ್ತದೆ. ಅವರು ಇರುವ ದುಡ್ಡನ್ನೆಲ್ಲಾ ಅಲ್ಲಿ ಖರ್ಚು ಮಾಡುತ್ತಾರೆ. ಖರ್ಚು ಮಾಡುವುದೂ ಅಷ್ಟು ಸುಲಭವಲ್ಲ. ವಾರ್ತಾ ಇಲಾಖೆಗೆ ಅಷ್ಟೊಂದು ಜವಾಬ್ದಾರಿ ಇರುವಾಗ, ನೀವು ಅಷ್ಟೊಂದು ದುಡ್ಡು ಖರ್ಚು ಮಾಡಲೇಬೇಕು. ನಾಳೆ ನಿಮ್ಮ ಸರ್ಕಾರ ಮಾಡಿದಂತಹ ಕಾರ್ಯಕ್ರಮಗಳನ್ನು ನೀವು ಯಾವ ದಿಕ್ಕಿನಲ್ಲಿ ಪ್ರಚಾರ ಮಾಡುತ್ತೀರಿ?

ಆದುದರಿಂದ ವಾರ್ತಾ ಇಲಾಖೆಗೆ ಸಮಂಜಸವಾಗಿ ಅಷ್ಟು ಖರ್ಚು ಮಾಡಬೇಕು.. ಅಧ್ಯಕ್ಷರೇ, ವಾರ್ತಾ ಇಲಾಖೆಗೆ ಮಹಾರಾಷ್ಟ್ರ ಸರ್ಕಾರದವರು ಹೆಚ್ಚಿನ ಮಹತ್ವವನ್ನು ಕೊಟ್ಟಿದ್ದಾರೆ. ಅಲ್ಲಿ ವಾರ್ತಾ ಇಲಾಖೆಯ, ಡೈರೆಕ್ಟರ್ ಜನರಲ್ ಹುದ್ದೆಗೆ ಒಬ್ಬನನ್ನು ನೇಮಿಸಿ, ಅವರ ಕೆಳಗೆ ಮೂವರು ನಿರ್ದೇಶಕರನ್ನು ನೇಮಕ ಮಾಡಿದ್ದಾರೆ. ಅವರ ಪೈಕಿ ದೆಹಲಿಯಲ್ಲಿರುವ ಮಹಾರಾಷ್ಟ್ರದ ವಾರ್ತಾ ಭವನವನ್ನು ನೋಡಿಕೊಳ್ಳುವುದಕ್ಕೆ ಒಬ್ಬ ನಿರ್ದೇಶಕರಿದ್ದಾರೆ. ಅಧ್ಯಕ್ಷರೆ ದೆಹಲಿಯಲ್ಲಿರುವ ನಮ್ಮ ಕರ್ನಾಟಕದ ವಾರ್ತಾ ಭವನವನ್ನು ತಾವು ನೋಡಿಲ್ಲವೆಂದು ಕಾಣುತ್ತದೆ. ಆ ಸೌಭಾಗ್ಯವನ್ನು ತಾವು ಒಂದು ಸಾರಿ ದೆಹಲಿಗೆ ಹೋದಾಗ ನೋಡಬೇಕು. ದೆಹಲಿಯ ಕಾನ್‌ಟ್‌ಪ್ಲೇಸ್‌ನಲ್ಲಿರುವ ನಮ್ಮ ಕರ್ನಾಟಕದ ಭವನದಲ್ಲಿ ಒಂದು ಕಾಲದಲ್ಲಿ ವಾರ್ತಾ ಇಲಾಖೆ ಇತ್ತು. ಬಹಳ ಹಿಂದೆ, ತಮಗೆ ಗೊತ್ತಿರಬೇಕು 1967ರಲ್ಲಿ ಕರ್ನಾಟಕ ಭವನದಲ್ಲಿ ನಮ್ಮ ವಾರ್ತಾ ಇಲಾಖೆ ಇತ್ತು. 1967ರಲ್ಲಿ ನಮ್ಮ ಜೊತೆಯಲ್ಲಿ (ಬಂಗಾರಪ್ಪನವರು) ಕಪ್ಪುಬಾವುಟವನ್ನು ಹಿಡಿಯುತ್ತಿದ್ದರು, ಈಗ ಅವರು ಸೌಮ್ಯವಾಗಿದ್ದಾರೆ. ಮೊದಲು ಬಹಳ ಗದ್ದಲಗಿದ್ದಲ ಮಾಡುತ್ತಿದ್ದರು ಹಾಗೂ ಕಪ್ಪುಬಾವುಟವನ್ನು ಹಿಡಿಯುತ್ತಿದ್ದರು.

ಶ್ರೀ ಜೆ.ಹೆಚ್. ಪಟೇಲ್ : ಈಗ ಬಂಗಾರಪ್ಪನವರು ಮೊದಲಿನ ರೀತಿಯಲ್ಲ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ, ಅದಕ್ಕೆ ಕಾರಣ ಪಟೇಲರೇ. ನೋಡಿ ಸಾಕ್ಷಿ ಇಲ್ಲಿ ಇದ್ದಾರೆ. ಅದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುವುದು ಒಳ್ಳೆಯದೆ. ಅಧ್ಯಕ್ಷರೆ, ಶ್ರೀಮಾನ್ ಎಸ್. ಶಿವಪ್ಪನವರ ನಾಯಕತ್ವದಲ್ಲಿ ಮಹಾಜನ್ ವರದಿಯನ್ನು ಕಾರ್ಯಗತ ಮಾಡಬೇಕೆಂದು ನಾವೆಲ್ಲಾ ದೆಹಲಿಗೆ ಹೊರಟವರು. ಆ ಒಂದು ನಿಯೋಗದಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಶ್ರೀಮಾನ್ ಬಂಗಾರಪ್ಪನವರು ಇದ್ದರು, ನಾನು ಇದ್ದೆ ಹಾಗೂ ಪಟೇಲರು ಅಲ್ಲೇ ಲೋಕಸಭೆಯ ಸದಸ್ಯರಾಗಿದ್ದರು. ಆಗ ಬೆಳಗಿನಿಂದ ಮೂರು ದಿವಸ, ನಾವು ಬಂಗಾರಪ್ಪನವರು ಬಹಳ ಚೆನ್ನಾಗಿ ಓಡಾಡಿಕೊಂಡು ನಿಯೋಗದಲ್ಲಿದ್ದರು. ಆಮೇಲೆ ನಾವೆಲ್ಲ ಒಂದು ದಿವಸ ಸೇರಿ, ಬರೀ ಈ ಮನವಿಯನ್ನು ಕೊಟ್ಟರೆ ಏನು ಉಪಯೋಗವೇನಾಗುತ್ತದೆ, ಏನಾದರೂ ಮಾಡಬೇಕಲ್ಲ ಎಂದು ಒಂದು ತೀರ್ಮಾನಕ್ಕೆ ಬಂದೆವು. ಆಗ ಮಹಾರಾಷ್ಟ್ರದವರು ಬೋಟ್‌ಕ್ಲಬ್‌ನಲ್ಲಿ ಸತ್ಯಾಗ್ರಹ ಮಾಡುತ್ತಿದ್ದರು, ನಾವು ಬರೀ ಮನವಿಯನ್ನು ಕೊಟ್ಟಿಕೊಂಡು ಬಂದರೆ ಏನೂ ಪ್ರಯೋಜನ ಎಂದು ಚಿಂತನೆ ಮಾಡಿದೆವು. ಆಗ ಪಾರ್ಲಿಮೆಂಟ್ ಮುಂದೆ ಕಪ್ಪುಬಾವುಟ ಪ್ರದರ್ಶನ ಮಾಡೋಣ ಎನ್ನುವ ಒಂದು ತೀರ್ಮಾನಕ್ಕೆ ಬಂದೆವು. ಆವಾಗ ಬಂಗಾರಪ್ಪನವರು ಈ ಬಗ್ಗೆ ಪಟೇಲರನ್ನು ಕೇಳೋಣವೆಂದು ತೀರ್ಮಾನ ತೆಗೆದುಕೊಂಡರು. ಅವಾಗ್ಗ ಅವರ ಪಾರ್ಟಿ ಇತ್ತು. ಪಟೇಲರ ಹತ್ತಿರ ನಮ್ಮ

ನಿಯೋಗ ಹೋದ ತಕ್ಷಣ ಪಟೇಲರು ಇಂತಹದ್ದಕ್ಕೆಲ್ಲಾ ಎತ್ತಿದ ಕೈ, ಓ ಮಾಡಬಹುದು ಅದಕ್ಕೆ ಯಾವ ಅಡೆತಡೆಯಿಲ್ಲ ಎಂದು ಹೇಳಿದರು. ಆದಾದ ನಂತರ ಜಾರ್ಜ್ ಫರ್ನಾಂಡಿಸ್‌ರವರನ್ನು ಭೇಟಿ ಮಾಡಿದೆವು. ಫರ್ನಾಂಡಿಸ್‌ರವರು ಸಹ ಬಹಳ ಸಂತೋಷವೆಂದು ಹೇಳಿದರು. ನಾವು ಕಪ್ಪುಬಾವುಟವನ್ನೆಲ್ಲಾ ಸಿದ್ಧತೆ ಮಾಡಿಕೊಂಡೆವು. ಹಾಗೂ ಮನವಿಯನ್ನೆಲ್ಲಾ ಸಿದ್ಧತೆ ಮಾಡಿಕೊಂಡೆವು. ಇಬ್ಬರು ಕಂಕಳಲ್ಲೂ ಅಷ್ಟಷ್ಟು ಇಟ್ಟುಕೊಂಡೆವು. ಆಮೇಲೆ ಟ್ಯಾಕ್ಸಿಯನ್ನು ಕರೆದು, ನೋಡಪ್ಪ ನಾವು ಪಾರ್ಲಿಮೆಂಟ್ ಮುಂದು ಇಳಿಯುತ್ತೇವೆ, ಈಗಲೇ ದುಡ್ಡುಗಿಡ್ಡು ಏನು ಬೇಕೋ ಎಲ್ಲವನ್ನು ತೆಗೆದುಕೊಳ್ಳಬಹುದು, ಆದರೆ ನಾವು ಪಾರ್ಲಿಮೆಂಟ್ ಮುಂದೆ ಕೆಳಗಿಳಿದು ನಮಗೆ ಚಿಲ್ಲರೆ ಕೊಡುವಷ್ಟು ಕಾಲಾವಕಾಶವಿರುವುದಿಲ್ಲವೆಂದು ಚಾಲಕನಿಗೆ ಹೇಳಿ, ಎಲ್ಲಾ ವ್ಯವಸ್ಥೆಯನ್ನು ಮಾಡಿಕೊಂಡು ಪಾರ್ಲಿಮೆಂಟ್ ಮುಂದೆ ನಾವು ಆ ಟ್ಯಾಕ್ಸಿಯಿಂದ ಕೆಳಗಿಳಿದು ಕಪ್ಪುಬಾವುಟ ಪ್ರದರ್ಶನ ಮಾಡಿದ ತಕ್ಷಣ, ಆ ಕಡೆಯಿಂದ ಕೆಂಗಲ್ ಹನುಮಂತಯ್ಯನವರು ಬರುತ್ತಾ ಇದ್ದರು. ಇದೊಂದು ನಿದರ್ಶನ, ಇದೊಂದು ಇತಿಹಾಸ. ಆಗ ಕೆಂಗಲ್ ಹನುಮಂತಯ್ಯನವರು ಇದೇನಿದು ಬಂಗಾರಪ್ಪ ಹಾಗೂ ವಾಟಾಳ್ ನಾಗರಾಜ್‌ರವರು ಇಲ್ಲಿ ಕಪ್ಪುಬಾವುಟವನ್ನು ಹಿಡಿಯುತ್ತಿದ್ದಾರೆ, ಏನು ಪರಿಸ್ಥಿತಿ? ಎಂದು ತಿಳಿದುಕೊಂಡು ನಮ್ಮ ಹತ್ತಿರಕ್ಕೆ ಬರುವುದು ಬೇಡವೆಂದು ಬಹಳ ದೂರ ಹೊರಟು ಹೋದರು. ಇದು ನಮಗೆ ಅವರ ನೆನಪು ಅಷ್ಟೆ. ಅಂದರೆ ಅವರು ಯಾವ ಉದ್ದೇಶಕ್ಕಾಗಿ ನಮ್ಮನ್ನು ನೋಡಿ ದೂರ ಹೋದರು ಎನ್ನುವುದಕ್ಕಲ್ಲ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ.....

ಶ್ರೀ ಹೆಚ್.ಎನ್. ನಂಜೇಗೌಡ : ದುಷ್ಟರನ್ನು ಕಂಡರೆ ದೂರವಿರೋಣವೆಂದು ಹೋಗಿರಬೇಕು.

ಶ್ರೀ ವಾಟಾಳ್ ನಾಗರಾಜ್ : ಹಾಗೆ ದುಷ್ಟರು ನಾವೇನಲ್ಲ. ಪತ್ರಿಕೆಗಳಲ್ಲಿ ಕಪ್ಪುಬಾವುಟ ಪ್ರದರ್ಶನ ಮಾಡಿದ ಬಗ್ಗೆ ಫೋಟೊ ಕೂಡ ಬಂದಿತ್ತು. ಆಮೇಲೆ ಕೋರ್ಟ್ ಪ್ರಶ್ನೆ ಬಂತು. ಅದೇನೆಂದರೆ ಅಲ್ಲಿನ ನ್ಯಾಯಾಲಯಕ್ಕೆ ನನ್ನ ಮತ್ತು ಬಂಗಾರಪ್ಪನವರನ್ನು ಕರೆದುಕೊಂಡು ಹೋದರು. ಪಟೇಲರು, ನನ್ನ ಮೇಲಿ ಎಲ್ಲಿ ಬರುತ್ತದೆಯೋ ಎಂದು ನಮ್ಮ ಹಿಂದೆಯೇ ಬರುತ್ತಿದ್ದರು. ಆಮೇಲೆ ಕೋರ್ಟ್‌ನಲ್ಲಿ ಜಾಮೀನು ಇಲ್ಲದೆ ನಿಮ್ಮನ್ನು ಬಿಡುವುದಿಲ್ಲವೆಂದು ಹೇಳಿದರು. ಬಂಗಾರಪ್ಪನವರು, ಆಗುವುದಿಲ್ಲ, ನಾವು ಲೋಹಿಯಾರವರ ತತ್ವವನ್ನು ನಂಬಿದವರು ಎಂದು ಹೇಳಿದರು. ನ್ಯಾಯಾಧೀಶರ ಮುಂದೆ ಈ ತತ್ವ ಪ್ರಾರಂಭವಾಯಿತು. ಒಂದು ರೀತಿಯಲ್ಲಿ ಆ ನ್ಯಾಯಾಧೀಶರಿಗೆ ಈ ಲೋಹಿಯರವರ ಬಗ್ಗೆ ಏನು ಪ್ರೀತಿ ಇತ್ತೊ ಏನೋ, ಪ್ರೀತಿಯಿಂದ ನ್ಯಾಯಾಧೀಶರು ನಿಮ್ಮನ್ನು ಸ್ವಂತ ಜಾಮೀನಿನ ಮೇಲೆ ಬಿಡುಗಡೆ ಮಾಡುತ್ತಿದ್ದೇವೆಂದು ಹೇಳಿದರು. ಆ ಸಂಜೆ ನಾವು ಕರ್ನಾಟಕ ಭವನಕ್ಕೆ ಬರುತ್ತಿದ್ದೇವೆ, ನಮ್ಮವರೆಲ್ಲಾ, ಇವರು ಎಲ್ಲಿ ಹೋದರೆಂದು ಸ್ವಲ್ಪ ಕೋಪ ತಾಪದಲ್ಲಿದ್ದರು. ಸಂಜೆ ಹೊತ್ತಿಗೆ ದೆಹಲಿಯ ಪತ್ರಿಕೆಗಳಲ್ಲಿ ನಮ್ಮ ಫೋಟೋ ಎಲ್ಲಾ ಬಂದಿತ್ತು. ಅದನ್ನು ಕಂಡು ಬಹಳ ಅತ್ಯಂತ ಸಂತೋಷಪಟ್ಟವರೆಂದರೆ ಪಟೇಲರು ಹಾಗೂ ಜಾರ್ಜ್ ಫರ್ನಾಂಡಿಸರು. ಇದೊಂದು ನೆನಪು. ಆ ಒಂದು ದೃಷ್ಟಿಯಿಂದ......

ಶ್ರೀ ಎಸ್. ಬಂಗಾರಪ್ಪ : ಇದು ಗಡಿಯ ಬಗ್ಗೆ ಹಾಗೂ ಕನ್ನಡದ ಬಗ್ಗೆ ಮಾಡಿದ ಹೋರಾಟ ಎಂದು ಹೇಳಿ.

ಶ್ರೀ ವಾಟಾಳ್ ನಾಗರಾಜ್ : ಬೆಳಗಾವಿ ವಿಷಯದಲ್ಲಿ ಮಹಾಜನ್ ವರದಿಯನ್ನು ಜಾರಿಗೆ ತರಬೇಕೆಂದು ನಾವು ಚಳುವಳಿಯನ್ನು ನೆಡೆಸಿದೆವು. ಇವರು ಬೇರೆಯವರು ಯಾರಾದರೂ ತಪ್ಪು ತಿಳಿದುಕೊಂಡಾರು ಎಂದು ಬಂಗಾರಪ್ಪನವರು ಅದನ್ನು ತಾವು ಸ್ವಲ್ಪ ಕೇಳಬೇಕೆಂದು ನನಗೆ ಹೇಳಿದ್ದಾರೆ. ಅದನ್ನು ನಾನು ಮೊದಲೇ ಹೇಳಿದ್ದೆ,

ಅವರು ಕೇಳಲಿಲ್ಲವೆಂದು ಕಾಣುತ್ತದೆ. ಆದುದರಿಂದ ಅವರ ಸಂತೋಷಕ್ಕಾಗಿ ಇನ್ನೊಂದು ಸಾರಿ ಹೇಳೋಣ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ಅವರು ಹೇಳಿದಷ್ಟೊ ಸರಿಯಾಗಿದೆ, ಇನ್ನೊಂದು ವಿಚಾರವನ್ನು ಅವರೆ ಹೇಳದೆ ಬೇಕೆಂದೇ ಮುಚ್ಚಿಡುತ್ತಿದ್ದಾರೆ. ನಮ್ಮ ಮೇಲೆ ಕೇಸ್ ಹಾಕಿದರು. ನಾವು ಕೋರ್ಟಿಗೆ ಅಪರಾಧಿಗಳು ತಾನೆ, ಕೇಸು ಒಂದೇ ಸಾರಿ ತೀರ್ಮಾನವಾಗಬೇಕಲ್ಲ, ಬಿಡುಗಡೆ ಮಾಡಲು ಜಾಮೀನು ಕೇಳಿದರು, ನಾವು ಜಮೀನು ಇಲ್ಲ, ನಮ್ಮ ನೀತಿಯ ಪ್ರಕಾರ ನಾವು ಕಾನೂನನ್ನು ಮುರಿದಿದ್ದೇವೆ ಎಂದು ಹೇಳಿದ್ದಾಯಿತು. ಸರಿ ಮ್ಯಾಜಿಸ್ಟ್ರೇಟ್‌ರವರು ಬಹಳ ಲೋಹಿಯರವರ ಅಭಿಮಾನಿ ಎಂದು ನನಗೆ ನಂತರ ಗೊತ್ತಾಯಿತು. ಆದುದರಿಂದ ಅವರು ಸೆಲ್ಫ್ ಬಾಂಡ್ ಮೇಲೆ ನಿಮ್ಮನ್ನು ಬಿಟ್ಟಿದ್ದೇವೆ. ಎಂದರು. ಪುನಃ ಕೇಳಿದರು, ಇಲ್ಲದಿದ್ದರೆ, ಇವರು ವಾಟಾಳ್ ನಾಗರಾಜ್ ಏನು ವ್ಯವಹಾರ ಮಾಡುತ್ತಾರೆ? ಯಾವ ರೀತಿಯಾಗಿ ಕಪ್ಪುಬಾವುಟ ಪ್ರದರ್ಶನ ಮಾಡುತ್ತಾರೆ? ಎಂದು ಇವೆಲ್ಲಾ ನನಗೆ ಗೊತ್ತೇ ಇರಲಿಲ್ಲ, ನಿಜ ಹೇಳಬೇಕೆಂದರೆ ಕಪ್ಪು ಬಟ್ಟೆ ದೆಹಲಿಯಲ್ಲಿ ಎಲ್ಲಿಂದ ಬಂತೆಂದು ಗೊತ್ತಾಗಿರಲಿಲ್ಲ, ಆಮೇಲೆ ನಮ್ಮ ಮೊಕದ್ದಮೆಗೆ ಸಂಬಂಧಪಟ್ಟಂತೆ ಹಿಯರಿಂಗ್ ಆಯಿತು. ಹಿಯರಿಂಗ್ ಇಟ್ಟಾಗ ದೆಹಲಿಗೆ ನಾವು ಮುಂದಿನ ಸಾರಿ ಹೋಗಬೇಕಲ್ಲ, ಅದಕ್ಕಾಗಿ ನಾನು ವಾಟಾಳ್ ನಾಗರಾಜ್‌ರವರಿಗೆ ನಾವು ದೆಹಲಿಗೆ ಹೋಗೋಣವೆಂದರೆ ನಾನು ಬರುವುದಿಲ್ಲವೆಂದು ಹೇಳಿದರು. ಏತಕ್ಕೆ ಬರುವುದಿಲ್ಲವೆಂದರೆ, ನನ್ನನ್ನು ದೆಹಲಿಗೆ ಅವರೇ ಕರೆದುಕೊಂಡು ಹೋಗಲಿ ಎಂದು ಹೇಳಿದರು. ನಾನು ನಿಮ್ಮನ್ನು ಯಾರು ಚಾರ್ಜ್ ಕೊಟ್ಟು ಹಿಡಿದುಕೊಂಡು ಹೋಗುತ್ತಾರೆಂದರೆ, ಹಿಡಿದುಕೊಂಡು ಹೋಗುವರು ಚಾರ್ಜ್ ಕೊಟ್ಟು ಕರೆದುಕೊಂಡು ಹೋಗುತ್ತಾರೆ ನಮಗ್ಯಾಕೆ ಬೇಕೆಂದು ಇವರು ಹೇಳಿದರು. ನನಗೆ ಆಗ ತಿಳಿಯಿತು, ಅದೇ ಮೊದಲು ಮತ್ತು ಕೊನೆ ಇನ್ನು ಮುಂದೆ ಮಾತ್ರ ವಾಟಾಳ್ ನಾಗರಾಜ್ ಜೊತೆ ಸತ್ಯಾಗ್ರಹಕ್ಕೆ ಹೋಗಬಾರದೆನ್ನುವ ತೀರ್ಮಾನ ಮಾಡಿದವರು. ಅವತ್ತಿನಿಂದ ಇವತ್ತಿನವರೆಗೂ ಆ ಶುದ್ಧತೆಯನ್ನು ಕಾಪಾಡಿಕೊಂಡು ಬಂದಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಇಲ್ಲ ಈಗ ಅದು ಬದಲಾವಣೆಯಾಗಿದೆ. ಈಗ ನಾವಿಬ್ಬರೂ ಸೇರಿ ಏನೋ ಚಳುವಳಿ ಮಾಡಬೇಕೆನ್ನುವ ಒಂದು ಸಿದ್ಧಾಂತಕ್ಕೆ ಬರುತ್ತಾ ಇದ್ದೇವೆ.

ಶ್ರೀ ಜೆ.ಹೆಚ್. ಪಟೇಲ್: ನನ್ನನ್ನು ಬಿಟ್ಟು ಬಿಟ್ಟರೋ!

ಶ್ರೀ ವಾಟಾಳ್ ನಾಗರಾಜ್ : ಪಟೇಲ್‌ರವರು ನಮ್ಮ ಜೊತೆ ಬಂದರೆ ಸಂತೋಷ, ಏಕೆಂದರೆ ಅವರಿಗೂ ಆ ಹುಚ್ಚೆಲ್ಲಾ ಇದೆ, ಅಷ್ಟು ಸುಲಭವಾಗಿ ತಪ್ಪಿಸಿಕೊಳ್ಳಲು ಆಗುವುದಿಲ್ಲ, ಅಧ್ಯಕ್ಷರೆ, ಆದುದರಿಂದ ಆ ದೆಹಲಿಯ ವಾರ್ತಾ ಭವನದ ಬಗ್ಗೆ ನನಗನಿಸುತ್ತದೆ, ಅದು ನಮಗೆ ನಾಚಿಕೆ ತರತಕ್ಕಂತಹದ್ದು, ಕರ್ನಾಟಕದ ಜನತೆಗೆ, ಕರ್ನಾಟಕದ ಸರ್ಕಾರಕ್ಕೆ ನಾಚಿಕೆತರತಕ್ಕಂತಹದ್ದು. ಒಂದು ಸಣ್ಣ ಕೊಠಡಿಯಲ್ಲಿ ವಾರ್ತಾ ಇಲಾಖೆ ಇದೆ. ಅದರಲ್ಲೇ ಪ್ರವಾಸೋದ್ಯಮ ಬೇರೆ ಇದೆ. ಅಲ್ಲಿ ಪ್ರವಾಸೋದ್ಯಮದ ಅಧಿಕಾರಿಗಳಿಲ್ಲ, ಇಬ್ಬರು ಅಟೆಂಡರ್‌ಗಳನ್ನು ಮಾತ್ರ ಇಟ್ಟಿದ್ದಾರೆ, ಅವರೇ ಪ್ರವಾಸೋದ್ಯಮದ ಬಗ್ಗೆ ಮಾತನಾಡತಕ್ಕಂಥವರು. ಇದು ಮಾನ್ಯ ಉಪ ಮುಖ್ಯಮಂತ್ರಿಗಳಾದ ಪಟೇಲರಿಗೂ ಗೊತ್ತಿದೆ. ಇದು ದೆಹಲಿಯಲ್ಲಿರತಕ್ಕಂತಹ ವಾರ್ತಾ ಭವನದ ಪರಿಸ್ಥಿತಿ. ಅಧ್ಯಕ್ಷರು ನಾನು ಹೇಳುವುದೇನೆಂದರೆ, ಈ ವಾರ್ತಾ ಇಲಾಖೆ ದೆಹಲಿಯಲ್ಲಿ ಬಹಳ ಪ್ರಮುಖವಾದಂತಹದ್ದು. ದೆಹಲಿಯಲ್ಲಿ ಅದು ನಮ್ಮ ರಾಜ್ಯದ ರಾಯಭಾರಿ ಕಾರ್ಯಾಲಯವಿದ್ದಂತೆ. ನಮ್ಮ ರಾಜ್ಯದ ಸಮಗ್ರ ಅಭಿವೃದ್ಧಿಯ ಬಗ್ಗೆ ಇರುವಂಥದ್ದು ದೆಹಲಿಯಲ್ಲಿ ನಮ್ಮ ಕಾರ್ಯಾಲಯವಿರುವಂತಹದ್ದು ಕೇಂದ್ರ ಸರ್ಕಾರಕ್ಕೂ

ರಾಜ್ಯ ಸರ್ಕಾರಕ್ಕೂ ಸೇತುವೆ ಇದ್ದಂತೆ. ಆ ಕಾರ್ಯಾಲಯ ಹೇಗಿರಬೇಕೆಂದರೆ, ಆ ಕಾರ್ಯಾಲಯಕ್ಕೆ ಹೋದ ಮೇಲೆ, ಇಡೀ ಕರ್ನಾಟಕದ ಕಲ್ಪನೆಯೇ ಆ ಕಾರ್ಯಾಲಯದ ಮುಂದೆ ಬರಬೇಕು. ಯಾವುದಾದರೂ ವಿಚಾರಗಳ ಬಗ್ಗೆ ನಮ್ಮ ಲೋಕಸಭೆಯ ಸದಸ್ಯರಾಗಲಿ, ಕೇಂದ್ರದ ಮಂತ್ರಿಗಳಾಗಲಿ, ರಾಜ್ಯದಿಂದ ಹೋದವರಾಗಲಿ ಅವರು ಪ್ರತಿಯೊಂದು ಪಡೆಯತಕ್ಕಂತಹ ಅಂಕಿಅಂಶಗಳುಳ್ಳ ಉತ್ತಮವಾದ ಕಾರ್ಯಾಲಯ ಅಲ್ಲಿರಬೇಕು. ಅದಕ್ಕೆ ನನ್ನ ಒಂದು ಸಲಹೆ ಏನೆಂದರೆ.....

ಶ್ರೀ ಜೆ.ಹೆಚ್. ಪಟೇಲ್ : ಸಲಹೆ ಇತ್ತು, ಈಗ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಿದೆ, ನಾವು ಏನು ಮಾಡುತ್ತೇವೆನ್ನುವುದನ್ನು ಆಮೇಲೆ ಹೇಳುತ್ತೇನೆ. ದೆಹಲಿಯಲ್ಲಿ ಒಬ್ಬ ಸಚಿವ ಸಂಪುಟ ದರ್ಜೆಯ ಸಚಿವರೇ ಒಂದು ಕಾರ್ಯಾಲಯವನ್ನು ಇಟ್ಟುಕೊಂಡು ರಾಜ್ಯದಿಂದ ಹೋಗುವ ಯಾವುದೇ ರಾಜಕೀಯ ಪಕ್ಷದವರಿರಲಿ, ಯಾವುದೇ ರಾಜ್ಯಕ್ಕೆ ಸಂಬಂಧಪಟ್ಟ ಅಥವಾ ದೆಹಲಿಯಲ್ಲಿರುವ ಕೇಂದ್ರದ ಯಾವುದೇ ಇಲಾಖೆಗೆ ಸಂಬಂಧಪಟ್ಟ ಅಥವಾ ಯಾವುದೇ ಮಂತ್ರಿಗೆ ಸಂಬಂಧಿಸಿದ ಕೆಲಸವಿದ್ದರೆ ಸತತವಾಗಿ ಅಲ್ಲೇ ಕುಳಿತು ಕೆಲಸ ಮಾಡುವುದಕ್ಕೆ ಒಂದು ಸಚಿವಸಂಪುಟ ದರ್ಜೆಯ ಸಚಿವರ ಕಛೇರಿಯನ್ನು ತೆರೆಯಬೇಕೆಂದು ನಾವು ಹಿಂದೆಯೇ ಸಲಹೆಯನ್ನು ಕೊಟ್ಟಿದ್ದೆವು. ಈಗ ನೀವು ಮಾಡುತ್ತೀರೋ ಬಿಡುತ್ತೀರೋ ಅದನ್ನು ಆಮೇಲೆ ಮಾತನಾಡಬೇಕಾದರೆ ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಅದು ಹಿಂದಿನಿಂದಲೂ ಇರತಕ್ಕಂತಹದ್ದು. ಇದನ್ನು ಮೊದಲು ಪ್ರಾರಂಭ ಮಾಡಿದವರು ತಮಿಳುನಾಡಿನವರು. ತಮಿಳುನಾಡಿನವರು ಮೊದಲು ಸಚಿವಸಂಪುಟ ದರ್ಜೆಯ ಒಬ್ಬ ಸಚಿವರನ್ನು ದೆಹಲಿಯಲ್ಲಿ ಇಟ್ಟರು. ರಾಜಾರಾಂ ಎನ್ನುವ ಸಚಿವಸಂಪುಟ ದರ್ಜೆಯ ಸಚಿವರು ಆಗ ತಮಿಳುನಾಡಿನ ಪರವಾಗಿ ದೆಹಲಿಯಲ್ಲಿದ್ದರು. ನನ್ನ ಕಲ್ಪನೆ ಏನೆಂದರೆ, ಈಗ ಇರುವಂತಹ ವಾರ್ತಾ ಭವನದಿಂದ ನಮ್ಮ ಸರ್ಕಾರ, ರಾಜ್ಯ ಹೇಗೆ ಎಲ್ಲ ಅವಹೇಳನವಾಗುತ್ತದೆ. ಆ ವಾರ್ತಾ ಭವನ ಒಂದು ಸಣ್ಣ ಕೊಠಡಿಯಲ್ಲಿ ಇದೆ. ದೆಹಲಿಯಲ್ಲಿ ನಮ್ಮ ಸರ್ಕಾರ ಇರುವಂತಹ ವಾರ್ತಾ ಭವನದಿಂದ ನಮ್ಮ ಸರ್ಕಾರ, ರಾಜ್ಯ ಹೀಗೆ ಎಲ್ಲರ ಅವಹೇಳನವಾಗುತ್ತಿದೆ. ಆ ವಾರ್ತಾಭವನ ಒಂದು ಸಣ್ಣ ಕೊಠಡಿಯಲ್ಲಿ ಇದೆ. ದೆಹಲಿಯಲ್ಲಿ ನಮ್ಮ ಸರ್ಕಾರವನ್ನು ಪ್ರತಿನಿಧಿಸುವುದು ಯಾವುದು? ನಮ್ಮ ವಾರ್ತಾ ಇಲಾಖೆಯ ವಾರ್ತಾ ಭವನವೇ. ವಾರ್ತಾ ಭವನಕ್ಕೆ ಹೋದ ತಕ್ಷಣ ನಮ್ಮ ಸರ್ಕಾರದ ಕಲ್ಪನೆ ನಮಗೆ ಬರಬೇಕು. ದೆಹಲಿಯಲ್ಲಿ ಈ ವಾರ್ತಾಭವನದ ಕೊಠಡಿಯನ್ನು ನೋಡಿದ ತಕ್ಷಣ ನಮ್ಮ ಸರ್ಕಾರದ ಹಣೆಬರಹ ಏನು ಎನ್ನತಕ್ಕಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಆದರೆ ಅಧ್ಯಕ್ಷರೆ, ಅಲ್ಲಿಯ ವಾರ್ತಾ ಭವನಕ್ಕೆ ನಿರ್ದೇಶಕರ ಮಟ್ಟದವರು, ಅಂದರೆ ನಿರ್ದೇಶಕರ ದರ್ಜೆಯ ಅಧಿಕಾರಿಯನ್ನೇ ನೇಮಿಸಬೇಕೆಂದು ನನಗನಿಸುತ್ತಿದೆ.

ನಾನೊಂದು ಸಲಹೆಯನ್ನು ಸರ್ಕಾರಕ್ಕೆ ಕೊಡುತ್ತಿದ್ದೇನೆ. ಒಂದು ಪ್ರಾಮುಖ್ಯವಾದ ಹಾಗೂ ಪ್ರಾಮಾಣಿಕವಾದ ಚಿಂತನೆಯನ್ನು ಮಾಡಿ ಕನ್ನಡ ಭವನವೆಂದು ಒಂದು ಭವನವನ್ನು ದೆಹಲಿಯಲ್ಲಿ ಕಟ್ಟಬೇಕು. ಆ ಭವನದಲ್ಲಿ ವಾರ್ತಾ, ಪ್ರವಾಸೋದ್ಯಮ ಇನ್ನು ನಮ್ಮ ರಾಜ್ಯಕ್ಕೆ ಸಂಬಂಧಪಟ್ಟ ಎಲ್ಲಾ ಇಲಾಖೆಗಳನ್ನು ನೋಡತಕ್ಕಂಥ ಸುಂದರವಾದಂಥ ಪರಿಸ್ಥಿತಿ ಇರಬೇಕು. ಕರ್ನಾಟಕ ಭವನ ಒಂದು, ಎರಡು ಎಂದು ಹೇಳಿ ಈಗ ಮೂರಕ್ಕೆ ಹೋಗಿದೆ. ಹತ್ತು ಕೋಟಿಯಾಗಲಿ, ಹದಿನೈದು ಕೋಟಿಯಾಗಲಿ ಸುಂದರವಾದಂಥ ಕನ್ನಡ ಭವನವನ್ನು ಅಲ್ಲಿ ಕಟ್ಟಬೇಕು. ಆ ಕನ್ನಡ ಭವನದಲ್ಲಿ ವಾರ್ತಾ ಇಲಾಖೆಯ, ಪ್ರವಾಸೋದ್ಯಮ ಇಲಾಖೆಯ ಕನ್ನಡ ಮತ್ತು ಸಂಸ್ಕೃತಿಯ ಕನ್ನಡ ಸಾಹಿತ್ಯದ ಜಾನಪದದ ಎಲ್ಲಾ ಪ್ರತಿಯೊಂದು ಇಲಾಖೆಯು ದೆಹಲಿಯ ಕನ್ನಡ ಭವನದಲ್ಲಿ ಇರಬೇಕು. ಆ ಒಂದು ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು

ಎನ್ನತಕ್ಕಂಥದ್ದು ನನ್ನ ಚಿಂತನೆ. ಅದಕ್ಕೆ ಸರ್ಕಾರ ತೀವ್ರವಾದಂಥ ಪ್ರಯತ್ನವನ್ನು ಮಾಡಿ ಅದರ ಶಂಕುಸ್ಥಾಪನೆಯನ್ನು ನೆರವೇರಿಸಲಿಕ್ಕೆ ಪ್ರಾರಂಭ ಮಾಡಿ ಶಂಕು ಸ್ಥಾಪನೆಗೆ ಈ ಸದನದ ಎಲ್ಲಾ ಸದಸ್ಯರನ್ನು 224 ಸದಸ್ಯರಿಗೂ, ಕರ್ನಾಟಕದ ಪತ್ರಕರ್ತರು, ಎಲ್ಲರನ್ನು ಕರೆದುಕೊಂಡು ಹೋಗಿ ಆ ಒಂದು ಐತಿಹಾಸಿಕ ಪ್ರಸಿದ್ಧವಾಗುವಂಥ ಭವನ ನಿರ್ಮಾಣದ ಶಂಕು ಸ್ಥಾಪನೆಯನ್ನು ಸರ್ಕಾರ ಮಾಡಲಿ ಆ ಕೀರ್ತಿಸರ್ಕಾರಕ್ಕೆ ಬರಲಿ ಎನ್ನತಕ್ಕಂಥ ಮಾತನ್ನು ಕೇಳಿ ನಾನು ಪ್ರಾಮಾಣಿಕವಾದ ಚಿಂತನೆಯನ್ನು ಮಾಡುತ್ತಿದ್ದೇನೆ. ಅಧ್ಯಕ್ಷರೇ, ಜಾಹೀರಾತು, ನಮ್ಮ ವಾರ್ತಾ ಇಲಾಖೆಯ ಜಾಹೀರಾತು. ಜಾಹೀರಾತು ಯಾರೋ ಓಬಿರಾಯನ ಕಾಲದಲ್ಲಿ ವಾರ್ತಾ ಇಲಾಖೆಗೆ ಇಷ್ಟು ಹಣ ಎಂದು ನಿಗದಿ ಮಾಡಿದ್ದಾರೆ. ತಮಗೆ ನಾನು ಹೇಳುತ್ತೇನೆ ಓಬಿರಾಯನ ಕಾಲ ಎಂದರೆ ಬಹಳ ಹಳೆಯದು, ಪುರಾತನ ಕಾಲ, ಓಬಿರಾಯ ಇರೋದು ಈಗ ಇರೋ ಕಾಲ.

ಶ್ರೀ ಎಲ್.ಆರ್. ಶಿವರಾಮೇಗೌಡ : ಓಬಿರಾಯನೇ ಓಬೇರಾಯ್ ಆಗಿರಬೇಕೇನೋ.

ಶ್ರೀ ವಾಟಾಳ್ ನಾಗರಾಜ್ : ನೋಡಿ ಶಿವರಾಮೇಗೌಡರದು ಎಂಥ ಪಾಂಡಿತ್ಯ, ಅವರು ಪಂಡಿತರು, ಎಷ್ಟರ ಮಟ್ಟಿಗೆ ಅವರ ವಾಕ್ಚರಿ, ಯಾವ ರೀತಿ ನಮಗೆ ಸಲಹೆ ಕೊಡುತ್ತಿದ್ದಾರೆ. ಮಾನ್ಯ ಅಧ್ಯಕ್ಷರೆ, ಈ ಜಾಹಿರಾತಿಗೆ ನೀಡುತ್ತಿರುವ ಹಣವನ್ನು ಸರ್ಕಾರ ಜಾಸ್ತಿ ಮಾಡಬೇಕು ಎಂದು ಹೇಳಬಯಸುತ್ತೇನೆ. ಇವೊತ್ತು ಪತ್ರಿಕೆಗಳಲ್ಲಿ ಒಂದೊಂದು ವರ್ಷಕ್ಕೂ ಜಾಹೀರಾತಿನ ಬೆಲೆ ಜಾಸ್ತಿಯಾಗುತ್ತಿದೆ. ಆ ಪತ್ರಿಕೆಗಳ ಬೆಲೆ ಯಾವ ಯಾವ ಮಟ್ಟದಲ್ಲಿ ಜಾಸ್ತಿಯಾಗುತ್ತದೆಯೋ ಅದೇ ಪ್ರಕಾರ ಇಲ್ಲಿ ಆಯವ್ಯಯದಲ್ಲಿ ಹೆಚ್ಚಿನ ಹಣವನ್ನು ಒದಗಿಸಬೇಕು. ಪತ್ರಿಕೆಗಳಲ್ಲಿ ಹಣ ಜಾಸ್ತಿಯಾಗುತ್ತಿರುತ್ತದೆ. ಆದರೆ ಜಾಹೀರಾತು ಇಲಾಖೆಗೆ ಮಾತ್ರ ಪ್ರತಿ ವರ್ಷ ಕಡಿಮೆ ಹಣವನ್ನು ಕೊಡುತ್ತಿದ್ದಾರೆ. ಮಾನ್ಯ ಅಧ್ಯಕ್ಷರೇ, ಇಂದು ಅತ್ಯಂತ ಹೆಚ್ಚಿನ ಪ್ರಚಾರಯುಗವಾಗಿದೆ, ಈ ಪ್ರಚಾರ ಯುಗದಲ್ಲಿ ಸರ್ಕಾರ ಎಲ್ಲಾ ರೀತಿಯ ಪ್ರಚಾರಕ್ಕೂ ವಾರ್ತಾ ಇಲಾಖೆಯನ್ನೇ ನಂಬಿದೆ. ಇದರ ಜೊತೆಗೆ ಎಲ್ಲಾ ಇಲಾಖೆಗಳು ನೀವು ಯಾವುದೇ ಇಲಾಖೆಯನ್ನು ತೆಗೆದುಕೊಳ್ಳಿ ಒಂದು ಸಣ್ಣ ಟೆಂಡರ್ ಜಾಹೀರಾತನ್ನು ಹಿಡಿದುಕೊಂಡು ಅವರ ಇಲಾಖೆಯ ಪ್ರಗತಿಯ ಜಾಹೀರಾತಿನವರೆಗೂ ಅವರು ವಾರ್ತಾ ಇಲಾಖೆಯನ್ನು ಅವಲಂಬಿಸಿದ್ದಾರೆ. ಆದ್ದರಿಂದ ನನಗನಿಸುತ್ತದೆ ವಾರ್ತಾ ಇಲಾಖೆಗೆ ಎಂದೇ ಇಷ್ಟು ಹಣ ಎಂದು ಹೇಳಿ ಮುಡುಪಾಗಿ ಇಡಬೇಕು ಎಂದು ಹೇಳತಕ್ಕಂಥದ್ದು ನನ್ನ ಒತ್ತಾಯ. ಆ ರೀತಿ ಮಾಡಲಿಲ್ಲವೆಂದು ಹೇಳಿದರೆ ಈಗ ತಾವು ನೋಡುತ್ತಿದ್ದೀರಿ ಮಾನ್ಯ ಅಧ್ಯಕ್ಷರೇ, ಸ್ವಾತಂತ್ರ್ಯೋತ್ಸವ, ಬೇರೆ ಬೇರೆ ಇಂತಹ ಉತ್ಸವಗಳಲ್ಲಿ ಸರ್ಕಾರದ ಪ್ರಗತಿಯ ಬಗ್ಗೆ ಜಾಹೀರಾತುಗಳನ್ನು ನೀಡುತ್ತಾರೆ. ಈ ಜಾಹೀರಾತನ್ನು ನೀಡಿದ ತಕ್ಷಣ ಅವರಿಗೆ ಹೆಚ್ಚಿನ ಹಣವನ್ನು ಕೊಡಲಿಕ್ಕೆ ಹಣವಿಲ್ಲ, ಸರ್ಕಾರದ ಸಮಗ್ರ ಪ್ರಚಾರಕ್ಕೆ ಹಣವೇ ಇಲ್ಲ, ಆ ದೃಷ್ಟಿಯಿಂದ ನಾನು ಹೇಳುತ್ತೇನೆ. ಹಣವನ್ನು ಜಾಹೀರಾತಿಗೆ ಕೊಡುವಾಗ ಎಷ್ಟು ವಾರ್ತಾ ಇಲಾಖೆಯವರು ಒಂದು ವರ್ಷದಲ್ಲಿ ಇಡೀ ಸರ್ಕಾರದ ಪ್ರಚಾರವನ್ನು ಜಾಹೀರಾತಿನ ರೂಪದಲ್ಲಿ ಮಾಡುತ್ತಾರೆ ಅಷ್ಟು ಹಣವನ್ನು ಧಾರಾಳವಾಗಿ ವಾರ್ತಾ ಇಲಾಖೆಗೆ ಸರ್ಕಾರ ನೀಡಬೇಕು ಎನ್ನತಕ್ಕಂಥದ್ದು ನನ್ನ ಕಳಕಳಿಯ ಮನವಿ.

ಅಧ್ಯಕ್ಷರೇ, ಪತ್ರಿಕಾ ಅಕಾಡೆಮಿಯನ್ನು ರಚನೆ ಮಾಡಿದ್ದೇವೆ. ಅಕಾಡೆಮಿಗೆ ಐದು ಲಕ್ಷರೂಪಾಯಿಗಳನ್ನು ಸರ್ಕಾರ ಒದಗಿಸಿದೆ. ಪತ್ರಿಕಾ ಅಕಾಡೆಮಿ ಬಹಳ ಘನವಾದ ಉದ್ದೇಶಗಳನ್ನು ಇಟ್ಟುಕೊಂಡಿದೆ. ಉತ್ತಮವಾದಂಥ ಕೆಲಸಗಳನ್ನು ಮಾಡುತ್ತಿದೆ. ಈ ಪತ್ರಿಕಾ ಅಕಾಡೆಮಿಗೆ ಹೆಚ್ಚಿನ ಶಕ್ತಿಯನ್ನು ಕೊಡಬೇಕು. ಅಕಾಡೆಮಿಯ ಕೆಲಸ ಇಡೀ ರಾಜ್ಯಾದ್ಯಂತ ವಿಸ್ತಾರವಾಗುವುದಕ್ಕೆ ಮತ್ತು ಅಕಾಡೆಮಿಯ ಸದಸ್ಯರು ಮತ್ತು ಅಧ್ಯಕ್ಷರು

ಉತ್ತಮ ಚಿಂತನೆಯುಳ್ಳವರಾಗಿದ್ದಾರೆ. ಈ ಅಕಾಡೆಮಿಗೆ ಐದು ಲಕ್ಷದ ಬದಲು ಕನಿಷ್ಠ 15 ಲಕ್ಷ ರೂ.ಗಳನ್ನಾದರೂ ಸರ್ಕಾರ ನೇರವಾಗಿ ಕೊಡಬೇಕು ಎನ್ನತಕ್ಕಂಥದ್ದು ನನ್ನ ಅತ್ಯಂತ ಪ್ರಾಮಾಣಿಕವಾದಂಥ ಚಿಂತನೆ. ಇನ್ನು ಈ ಪತ್ರಕರ್ತರಿಗೆ ವೈದ್ಯಕೀಯ ನೆರವು ಎಂದು ಹೇಳಿ ಎಷ್ಟು ದುಡ್ಡು ಇಟ್ಟಿದ್ದಾರೆ ಎಂದು ಹೇಳಿದರೆ ವರ್ಷಕ್ಕೆ ಕೇವಲ 60 ಸಾವಿರ ರೂಪಾಯಿಗಳನ್ನು ಇಟ್ಟಿದ್ದಾರೆ. ಎಲ್ಲಾದರೂ ಉಂಟೇ, ಅದ್ಯಾಕೆ ಅಷ್ಟು ಕಡಿಮೆ ಇಟ್ಟಿದ್ದೀರಿ ಅದೂ ಕೂಡ ಬೇಕಾಗಿರಲಿಲ್ಲ, ಇದು ತಲೆ ನೋವಿಗೆ ಅನಾಸಿನ್ ತೆಗೊಳ್ಳುವುದಕ್ಕೂ ಕೂಡ ಸಾಕಾಗುವುದಿಲ್ಲ.

ಶ್ರೀ ಜೆ.ಹೆಚ್. ಪಟೇಲ್ : ಸಾಮಾನ್ಯವಾಗಿ ಪತ್ರಕರ್ತರು ಬಹಳ ಆರೋಗ್ಯವಾಗಿರುತ್ತಾರೆ ಅವರಿಗೆ ಹೆಚ್ಚು ಮೆಡಿಸಿನ್ ಬೇಕಾಗುವುದಿಲ್ಲ, ಪತ್ರಕರ್ತರಿಗೆ ಏನು ಬೇಕು ಎನ್ನುವುದು ಗೊತ್ತಿಲ್ಲ ನಿಮಗೆ. ಅದಕ್ಕೆಲ್ಲಾ ದುಡ್ಡು ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಈಗ ಏನು ಬೇಕು ಎಂಬುದು ಪಟೇಲರಿಗೂ ಗೊತ್ತು, ನನಗೂ ಗೊತ್ತು, ಅವರಿಗೂ ಗೊತ್ತು ಈಗ ಅದನ್ನು ಬಹಿರಂಗ ಮಾಡುವುದು ಬೇಡ. ಆದ್ದರಿಂದ ಅಧ್ಯಕ್ಷರೇ ಈ ವೈದ್ಯಕೀಯ ನೆರವಿಗೆ ವರ್ಷಕ್ಕೆ ಕನಿಷ್ಠ ಐದರಿಂದ ಆರುಲಕ್ಷ ರೂಪಾಯಿಗಳನ್ನಾದಾರೂ ಇಡಬೇಕು ಎನ್ನತಕ್ಕಂಥದ್ದು ನನ್ನ ಕಳಕಳಿಯ ಮನವಿ. ಏಕೆಂದರೆ ಇದರಲ್ಲಿ ನಾವು ಸಣ್ಣತನ ತೋರುವುದು ಬೇಡ. ನಾವು ಸ್ವಲ್ಪ ಧಾರಾಳತನದಿಂದ ಇರಬೇಕಾಗುತ್ತದೆ. ಆ ವ್ಯವಸ್ಥೆಯಲ್ಲಿ ನಾವು ಕನಿಷ್ಠ ಐದು ಲಕ್ಷ ರೂಪಾಯಿಗಳನ್ನಾದರೂ ಇಡಬೇಕು ಎನ್ನತಕ್ಕಂಥದ್ದು. ಇನ್ನೂ ಪತ್ರಕರ್ತರ ಪ್ರವಾಸ, ಏಕೆ ಪ್ರವಾಸದ ಕಾರ್ಯಕ್ರಮವನ್ನು ಇಡಬೇಕು ಎಂದರೆ ನಮ್ಮ ಕರ್ನಾಟಕದ ಅಭಿವೃದ್ಧಿ ಕಾರ್ಯಕ್ರಮಗಳು 20 ಜಿಲ್ಲೆಗಳಲ್ಲಿ ಬೇರೆ ಬೇರೆ ತಾಲ್ಲೂಕುಗಳಲ್ಲಿ, ಮತ್ತು ಬೇರೆ ಬೇರೆ ರಾಜ್ಯದಲ್ಲಿ ಏನೇನು ನಡೆದಿವೆ ಎಂಬುದನ್ನು ನೋಡುವುದಕ್ಕಾಗಿ ಈ ಪ್ರವಾಸವನ್ನು ಹಾಕುವುದರಿಂದ ಕರ್ನಾಟಕದ ಅಭಿವೃದ್ಧಿಗೆ ಹೆಚ್ಚಿನ ಚಾಲನೆ ಸಿಗುತ್ತದೆ. ಅವರು ಪ್ರವಾಸ ಹೋಗಿ ಲೇಖನಗಳನ್ನು ಬರೆದರೆ ಅದರಿಂದ ನಮಗೆ ಹೆಚ್ಚಿನ ಲಾಭ ಸಿಗುತ್ತದೆ. ಕರ್ನಾಟಕ ಸರ್ಕಾರದ ಕೆಲಸ ಕಾರ್ಯಗಳ, ಅಭಿವೃದ್ಧಿ ಕಾರ್ಯಗಳ ಬಗ್ಗೆ ಒಂದು ಹೊಸ ಚಿಂತನೆ ಮಾಡುವುದಕ್ಕೆ ಅವಕಾಶ ದೊರಕುತ್ತದೆ. ಆದ್ದರಿಂದ ಈ ಪ್ರವಾಸವನ್ನು ಬಹಳ ಹೆಚ್ಚಿನ ರೀತಿಯಲ್ಲಿಸಿ ಕನಿಷ್ಠ ತಿಂಗಳಿಗೆ ಒಂದು ಬಾರಿಯಂತೆ ವರ್ಷಕ್ಕೆ 12 ಪ್ರವಾಸಗಳನ್ನು ನಡೆಸುವುದು ಒಳ್ಳೆಯದು. ತಮಗೆ ಗೊತ್ತಿರಬೇಕು ಉತ್ತರ ಪ್ರದೇಶದಿಂದ ಪತ್ರಕರ್ತರೆಲ್ಲರೂ ನಮ್ಮಲ್ಲಿಗೆ ಬಂದಿದ್ದರು ನಾವು ಅವರಿಗೆ ಇಲ್ಲಿ ಒಂದು ಔತಣವನ್ನು ಕೊಟ್ಟಿದ್ದಾಯಿತು. ಈ ತರಹ ಕರ್ನಾಟಕದ ಪತ್ರಕರ್ತರನ್ನು ಬೇರೆ ರಾಜ್ಯಕ್ಕೆ ಕರೆದುಕೊಂಡು ಹೋಗತಕ್ಕಂಥದ್ದು, ಆ ರಾಜ್ಯದ ಪತ್ರಕರ್ತರನ್ನು ಇಲ್ಲಿಗೆ ಕರೆಯತಕ್ಕಂಥದ್ದು ಇದು ಒಂದು ಆ ರಾಜ್ಯ ಈ ರಾಜ್ಯದ ಬಾಂಧವ್ಯ ಹೆಚ್ಚುತ್ತದೆ.

2.50 ಪಿ.ಎಂ.

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಹೋದಾಗಲೂ ಅಷ್ಟೇ, ನಾನು ಹೋದಾಗಲೂ ಅಷ್ಟೇ, ಸಿಂಗಾಪುರದ ಪತ್ರಕರ್ತರ ಸಂಘದವರು ಒಂದು ಸಲಹೆಯನ್ನು ಕೊಟ್ಟರು. ಅದೇನೆಂದರೆ ನಾವು ಭಾರತದಲ್ಲಿ ಅದರಲ್ಲೂ ಕರ್ನಾಟಕಕ್ಕೆ ವಿಶೇಷವಾಗಿ ಬಂದು ಪ್ರವಾಸೋದ್ಯಮ ಕೇಂದ್ರಗಳು ಯಾವವು ಎಂಬ ಬಗ್ಗೆ ಪ್ರಾಜೆಕ್ಟ್ ಮಾಡುವುದಕ್ಕೋಸ್ಕರ ಜರ್ನಲಿಸ್ಟ್‌ಗಳು ಬರುತ್ತೇವೆಂದರು. ನಾನು ಅದಕ್ಕೆ, ನೀವು ಗೆಸ್ಟ್ ಆಗಿ ನಮ್ಮ ಕರ್ನಾಟಕಕ್ಕೆ ಬನ್ನಿ ಎಂದು ಹೇಳಿದ್ದೇನೆ. ಅವರೂ ಕೂಡ ನಮ್ಮ ಕರ್ನಾಟಕದಿಂದ ಪತ್ರಕರ್ತರ ಒಂದು

ಸಣ್ಣ ಕೂಟವನ್ನು ರೆಪ್ರೆಸೆಂಟಿಟಿವ್ ಆಗಿ ಡೆಲಿಗೇಶನ್ ಕಳುಹಿಸಿ ಎಂದು ಹೇಳಿದ್ದಾರೆ. ನಾನು ಒಪ್ಪಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ಚಿಂತನೆಯ ಬಗ್ಗೆ ನನಗೆ ಬಹಳ ಸಂತೋಷವಿದೆ. ನಿಮಗೆ ನಮ್ಮ ಕರ್ನಾಟಕದ ಪತ್ರಕರ್ತರನ್ನು ಸಿಂಗಾಪುರಕ್ಕೆ ಕರೆದುಕೊಂಡು ಹೋಗಬೇಕೆನ್ನುವ ಚಿಂತನೆ ಇದೆಯೇ ಎನ್ನತಕ್ಕ ಪ್ರಶ್ನೆಯನ್ನು ನಾನು ಕೇಳಿದ್ದೆ. ನಾನು ಹೇಳುತ್ತೇನೆ, ಬರೀ ಸಿಂಗಾಪುರಕ್ಕೆ ಮಾತ್ರವಲ್ಲ, ಇಡೀ ವಿಶ್ವದ ಎಲ್ಲಾ ಮೂಲೆಗಳಿಗೆ ನಮ್ಮ ಪತ್ರಕರ್ತರನ್ನು ಕರೆದುಕೊಂಡು ಹೋಗುವ ವ್ಯವಸ್ಥೆ ನಡೆಸಬೇಕಾಗಿದೆ. ನಮ್ಮ ಸರ್ಕಾರದಲ್ಲಿ ಅನೇಕ ವಿಚಾರಗಳಿಗೆ ಹಣವನ್ನು ಖರ್ಚು ಮಾಡುತ್ತಾರೆ. ನಮ್ಮ ಪ್ರವಾಸೋದ್ಯಮ ದೃಷ್ಟಿಯಿಂದ ಈ ರೀತಿಯ ವ್ಯವಸ್ಥೆ ಮಾಡಿದರೆ ಲಾಭ ಬರುತ್ತದೆಯೇ ಹೊರತು ನಷ್ಟ ಏನೂ ಆಗುವುದಿಲ್ಲ. ಆದುದರಿಂದ ನಮ್ಮ ಉಪ ಮುಖ್ಯಮಂತ್ರಿಕಗಳು ಪ್ರವಾಸೋದ್ಯಮ ಇಲಾಖೆಯನ್ನು ಹೊಂದಿರತಕ್ಕಂಥವರು ಮತ್ತು ಈ ಬಗ್ಗೆ ಬಹಳ ಕಾಳಜಿಯನ್ನು ಹೊಂದಿರತಕ್ಕಂಥವರು. ಅವರಿಗೆ ನಾನು ಸಲಹೆಯನ್ನು ಮಾಡುತ್ತೇನೆ. ಪ್ರಪ್ರಥಮವಾಗಿ ಒಂದು ಪತ್ರಕರ್ತರ ಗುಂಪನ್ನು ತಾವು ಕರೆದುಕೊಂಡು ಹೋಗಲು ಬಹಳಷ್ಟು ಶೀಘ್ರವಾಗಿ ಅದಕ್ಕೆ ಒಂದು ದಾರಿಯನ್ನು ಹಾಕಿ ಎನ್ನತಕ್ಕಂಥ ಮಾತನ್ನು ತಮ್ಮಲ್ಲಿ ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ, ಇನ್ನು ಅಧಿಕೃತ ಪತ್ರಕರ್ತರ ಕಲ್ಯಾಣ. ಇದರ ಬಗ್ಗೆ ನಾವೇನೂ ಚಿಂತನೆಯನ್ನು ಮಾಡುತ್ತಿಲ್ಲ. ಇದರ ಬಗ್ಗೆ ಬಹಳ ಪ್ರಾಮಾಣಿಕವಾಗಿ ಚಿಂತನೆ ನಡೆಯಬೇಕಾಗಿದೆ. ಕೆಲಸ ಆಗಬೇಕಾಗಿದೆ. ಖಾದ್ರಿ ಶಾಮಣ್ಣ ಪ್ರತಿಷ್ಠಾನಕ್ಕೆ ಸಂಬಂಧಪಟ್ಟದ್ದು. ಖಾದ್ರಿ ಶಾಮಣ್ಣನವರು ಕರ್ನಾಟಕದ ಒಬ್ಬ ಹಿರಿಯ ಸಮಾಜವಾದಿ ಮತ್ತು ಚಿಂತನೆಯನ್ನು ನಡೆಸತಕ್ಕಂಥ ಒಬ್ಬ ದೊಡ್ಡ ವ್ಯಕ್ತಿತ್ವ ಉಳ್ಳವರಾಗಿದ್ದರು. ಪ್ರಾಮಾಣಿಕ ಪತ್ರಕರ್ತರು, ಅಪಾರವಾಗಿ ಪತ್ರಿಕಾ ರಂಗದಲ್ಲಿ ಕೆಲಸ ಮಾಡಿದಂಥ ದಿಗ್ಗಜ. ಅವರ ನೆನಪಿನಲ್ಲಿ ಮೇಲುಕೋಟೆಯಲ್ಲಿ ಖಾದ್ರಿ ಶಾಮಣ್ಣ ಪ್ರತಿಷ್ಠಾನ ಮಾಡಿದರು. ನಾನು ಹೋದ ವರ್ಷ ಈ ಒಂದು ಪ್ರತಿಷ್ಠಾನಕ್ಕೆ 2 ಲಕ್ಷ ರೂ.ಗಳನ್ನು ಕೊಡಬೇಕೆಂದು ನನ್ನ ವರದಿಯಲ್ಲಿ ಸಲಹೆ ಮಾಡಿದ್ದೆ. ಆದರೆ ಆ 2 ಲಕ್ಷ ರೂ.ಗಳು ಬರಲಿಲ್ಲ, ಮತ್ತು ಈಗ ಸುಮಾರು 2 ತಿಂಗಳ ಹಿಂದೆ ನನ್ನನ್ನೂ ಮತ್ತು ಉಪ ಮುಖ್ಯಮಂತ್ರಿಗಳನ್ನೂ ಖಾದ್ರಿ ಶಾಮಣ್ಣ ಪ್ರತಿಷ್ಠಾನದವರು ಕರೆದಿದ್ದರು. ನನಗೆ ಅನಿಸಿತು ಅಲ್ಲಿ ಖಾದ್ರಿ ಶ್ಯಾಮಣ್ಣನವರ ಧ್ವನಿಯನ್ನು ಟೇಪ್ ಮಾಡಿ ಬಿಡುಗಡೆ ಮಾಡಿದಾಗ ಒಂದು ರೀತಿಯಲ್ಲಿ ಮನಸ್ಸಿನಲ್ಲಿ ಕಣ್ಣೀರು ಬಂತು. ಆ ವ್ಯಕ್ತಿತ್ವ, ಆ ಮಾತು, ಆ ಭಾಷೆ, ಆ ಬರವಣಿಗೆ, ಇವೆಲ್ಲವೂ ನನಗೆ ಮತ್ತೆ ಮರುಕಳಿಸಿತು. ಇಂಥ ವ್ಯಕ್ತಿತ್ವ ಇರತಕ್ಕಂಥ ವ್ಯಕ್ತಿಯ ಸ್ಮಾರಕ ಆದಲ್ಲಿ ಅವರ ವ್ಯಕ್ತಿತ್ವ ಸಮಗ್ರವಾಗಿ ಬೆಳೆಯಲಿಕ್ಕೆ ಅವರ ಒಂದು ಚಿಂತನೆಗೆ ಒಂದು ಆಯಾಮ ಸಿಗುತ್ತದೆ. ಈ ಪ್ರತಿಷ್ಠಾನಕ್ಕೆ 2 ಲಕ್ಷ ರೂ.ಗಳನ್ನು ಹೋದ ವರ್ಷ ಕೊಡಬೇಕಾದುದು ಇನ್ನೂ ಕೊಟ್ಟಿಲ್ಲ, ಆದುದರಿಂದ ಹೋದ ವರ್ಷಕ್ಕೆ 2 ಲಕ್ಷ ರೂ. ಮತ್ತು ಈ ವರ್ಷದ್ದು 2 ಲಕ್ಷ ರೂ.ಗಳನ್ನು ಬಿಟ್ಟು 4 ಲಕ್ಷ ರೂ.ಗಳನ್ನು ಕೊಡಬೇಕೆಂದು ನಾನು ವರದಿಯಲ್ಲಿ ಹೇಳಿದ್ದೇನೆ.

ಶ್ರೀ ಬಿ.ಆರ್. ಯಾವಗಲ್ : ಮಾನ್ಯ ಅಧ್ಯಕ್ಷರೇ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ. ನಾವೆಲ್ಲಾ ವಿಷಯ ಸಮಿತಿಯಲ್ಲಿ ಕೆಲಸ ಮಾಡಿದ್ದೇವೆ. ನನಗೆ ತಮ್ಮಿಂದ ಒಂದು ಕ್ಲಾರಿಫಿಕೇಶನ್ ಬೇಕು. ಮಾನ್ಯ ವಾಟಾಳ್ ನಾಗರಾಜ್‌ರವರು ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ ಸಮಿತಿಯ ಅಧ್ಯಕ್ಷರು. ನಾನು ಗ್ರಾಮೀಣಾಭಿವೃದ್ಧಿ ಮತ್ತು ಪ್ರವಾಸೋದ್ಯಮ ಇಲಾಖೆ ಸಮಿತಿಯ ಅಧ್ಯಕ್ಷರು. ನಾನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖಾ ಸಮಿತಿಯ ಅಧ್ಯಕ್ಷನಾಗಿದ್ದೇನೆ ಮತ್ತು ಸದಸ್ಯರುಗಳಾದ ಮಾನ್ಯ ನಾಗೇಗೌಡರಿರಬಹುದು, ಶಿವಕುಮಾರ್‌ರವರು

ಇರಬಹುದು; ಆದರೆ ನಮಗೆ ಒಂದು ಸಂಶಯ ಇದೆ. ವಿಷಯ ಸಮಿತಿಯ ಅಧ್ಯಕ್ಷರಾದವರು ಮತ್ತು ಸದಸ್ಯರಾದವರು ಈ ಸದನದಲ್ಲಿ ಆಯಾ ಇಲಾಖೆಯ ವಿಷಯದ ಮೇಲೆ ಪುನಃ ಚರ್ಚೆಯಲ್ಲಿ ಭಾಗವಹಿಸಬಹುದೇ? ಇವರ ಬಗ್ಗೆ ತಾವು ಒಂದು ಕ್ಲಾರಿಫಿಕೇಶನ್ ಕೊಡಬೇಕು.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಉಪಾಧ್ಯಕ್ಷರೇ, ಇದೊಂದು ವಿಚಾರವಲ್ಲ, ಮಾನ್ಯ ಬಿ.ಆರ್. ಯಾವಗಲ್‌ರವರು ಒಂದು ರಿಲೆವೆಂಟ್ ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದ್ದಾರೆ. ನೀವು ಸ್ವಲ್ಪ ಟೈಮ್ ತೆಗೆದುಕೊಂಡು ರೂಲಿಂಗ್ ಕೊಡಿ. ಆತುರ ಮಾಡುವುದಕ್ಕೆ ಹೋಗಬೇಡಿ. ಇದು ಕೇವಲ ಮಾನ್ಯ ವಾಟಾಳ್ ನಾಗರಾಜ್‌ರವರು ಮಾತನಾಡುವ ವಿಷಯಕ್ಕೆ ಮಾತ್ರ ಸಂಬಂಧಪಟ್ಟ ಪ್ರಶ್ನೆಯಲ್ಲ. ವಾಟಾಳ್ ನಾಗರಾಜ್‌ರವರು ಎಷ್ಟು ಹೊತ್ತು ಬೇಕಾದರೂ ಮಾತನಾಡಲಿ, ಅವರು ಬಹಳ ಹೋರಾಟ ಮಾಡಿ ಅವರ ಜೀವನವನ್ನೇ ಮಾತನಾಡುತ್ತಾ ಕಳೆದಿದ್ದಾರೆ. ನಾವೆಲ್ಲರೂ ಅವರ ಮಾತನ್ನು ಕೇಳುವುದಕ್ಕೆ ಕುಳಿತುಕೊಂಡಿದ್ದೆವು. ನಾವು ಸಬ್ಜೆಕ್ಟ್ ಕಮಿಟಿ ಪ್ರೊಸೀಜರ್‌ನ್ನು ಪಾರ್ಲಿಮೆಂಟರಿ ಸಿಸ್ಟಮ್‌ನಲ್ಲಿ ಅಡಾಪ್ಟ್ ಮಾಡಿದ್ದೇಕೆಂದರೆ ಈ ಸದನದ ವೇಳೆಯನ್ನು ಹೆಚ್ಚು ತೆಗೆದುಕೊಳ್ಳುವುದಕ್ಕೆ ಬದಲಾಗಿ ಪರಿಣಿತರಾಗಿರತಕ್ಕಂಥ ವಾಟಾಳ್ ನಾಗರಾಜ್‌ರವಂಥವರನ್ನು ಅಧ್ಯಕ್ಷರನ್ನಾಗಿ ಮಾಡಿ ಅಲ್ಲಿಗೆ ಎಲ್ಲಾ ಅಧಿಕಾರಿಗಳು ಸಹಿತ ಬಂದು ಇಡೀ ಒಂದು ವರ್ಷದ ಬಜೆಟ್‌ನೊಳಗಡೆ ಆ ಸಬ್ಜೆಕ್ಟ್ ವಿಚಾರದಲ್ಲಿ ಆ ಒಂದು ಇಲಾಖೆಯ ವಿಚಾರದಲ್ಲಿ ಎಲ್ಲಾ ತಿಳುವಳಿಕೆಯನ್ನು ಸಮಗ್ರವಾಗಿ ಸದನಕ್ಕೆ ಹೊಸ ಬೆಳಕನ್ನು, ಉನ್ನತ ಬೆಳಕನ್ನು, ತಿಳುವಳಿಕೆಯನ್ನು ಸಲ್ಲಿಸಬೇಕು ಎನ್ನುವ ದೃಷ್ಟಿಯಿಂದ ಈ ಸಬ್ಜೆಕ್ಟ್ ಕಮಿಟಿಯನ್ನು ಇಂಟ್ರಡ್ಯೂಸ್ ಮಾಡಿ ಪಾರ್ಲಿಮೆಂಟರಿ ಸಿಸ್ಟಂನಲ್ಲಿ ಇಲ್ಲೂ ಇಂಟ್ರಡ್ಯೂಸ್ ಮಾಡಿದ್ದೇವೆ. ಹಾಗಿರುವಾಗ ಪುನಃ ಮತ್ತೆ ಅದೇ ಅಧ್ಯಕ್ಷರು ಇಲ್ಲಿ ಬಂದು ಮಾತನಾಡಬಹುದೇ? ನಾನು ಈಗ ನೀರಾವರಿ ಸಮಿತಿಯಲ್ಲಿ ಇದ್ದೇನೆ. ನಾನು ನೀರಾವರಿ ಮೇಲೆ ಚರ್ಚೆಯಲ್ಲಿ ಭಾಗವಹಿಸಬಹುದೇ? ನಾನು ಚರ್ಚೆ ಮಾಡಬಹುದೇ ಎನ್ನತಕ್ಕಂಥ ಬಹಳ ಒಳ್ಳೆಯ ರಿಲೆವೆಂಟ್ ಪಾಯಿಂಟ್ ಇದೆ, This is most relevent point ಏಕೆಂದರೆ ಇದರ ಬಗ್ಗೆ ತಾವು ರೂಲಿಂಗ್ ಕೊಡಬೇಕು. ಏಕೆಂದರೆ ಮುಂದಿನ ಹತ್ತಾರು ವರ್ಷಗಳ ಕಾಲ ವಿಷಯ ಸಮಿತಿಯ ಕರ್ತವ್ಯಗಳೇನು, ಸದನದ ಕರ್ತವ್ಯಗಳೇನು? ಸದಸ್ಯರ ಕರ್ತವ್ಯವೇನು? ವಿಷಯ ಸಮಿತಿಯ ಸದಸ್ಯರ ಕರ್ತವ್ಯವೇನು? ಅಧ್ಯಕ್ಷರು ಸಮಿತಿಯಲ್ಲೂ ಮಾತನಾಡಿ ಇಲ್ಲೂ ಮಾತನಾಡಿದರೆ ಆಗ ಅದು ಹೀಗೆ ರಿಲೆವೆಂಟ್ ಆಗುತ್ತಿದೆ? ಈಗ ನಾವೆಲ್ಲ ಕೊಟ್ಟಿರತಕ್ಕ ರಿಪೋರ್ಟ್ ಏನಾಗುತ್ತದೆ ಎನ್ನತಕ್ಕಂಥ ಬಹಳ ಗಂಭೀರವಾದ ಪಾಯಿಂಟ್ ಆಫ್ ಆರ್ಡರ್‌ನ್ನು ಬಿ.ಆರ್. ಯಾವಗಲ್‌ರವರು ಎತ್ತಿದ್ದಾರೆ. ಅದರ ಬಗ್ಗೆ ಉಪಾಧ್ಯಕ್ಷರು ಆ ಇಲಾಖೆಯ ಬಗ್ಗೆ ಆ ಇಲಾಖೆಯ ಸಮಿತಿಯ ಅಧ್ಯಕ್ಷರು ಪುನಃ ಮಾತನಾಡಬಹುದೇ ಅಥವಾ ಇಲ್ಲವೇ ಎನ್ನತಕ್ಕಂಥದ್ದನ್ನು ಸ್ವಲ್ಪ ಯೋಚನೆ ಮಾಡಿ. ರೂಲಿಂಗ್ ಕೊಡಬೇಕೆಂದು ವಿನಂತಿ. ಏಕೆಂದರೆ ಬಿ.ಆರ್. ಯಾವಗಲ್‌ರವರು ಏನು ಎತ್ತಿದ್ದಾರೆ ಅದು ರಿಲೆವೆಂಟ್ ಎಂದು ನನಗೆ ಅನ್ನಿಸುತ್ತಿದೆ. ಅದರ ಬಗ್ಗೆ ತಾವು ರೂಲಿಂಗ್ ಕೊಡಬೇಕು.

(ಶ್ರೀ ರಮೇಶ್‌ಕುಮಾರ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರು : ಏನು ವಿಷಯ ಗೊತ್ತಾಗಲಿಲ್ಲ, ನಾನು ಬಂದ ತಕ್ಷಣ ರೂಲಿಂಗ್ ಎಂದು ಹೇಳುತ್ತಿದ್ದೀರಿ.

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) : ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಬಿ.ಆರ್. ಯಾವಗಲ್‌ರವರ ಪಾಯಿಂಟ್ ಆಫ್ ಆರ್ಡರ್ ಬಗ್ಗೆ ಮತ್ತು

ವಾರ್ತಾ ಇಲಾಖೆಯ ವಿಷಯ ಸಮಿತಿಯ ಅಧ್ಯಕ್ಷರಾಗಿರುವ ವಾಟಾಳ್‌ರವರು, ವಿಷಯ ಸಮಿತಿಯಲ್ಲಿ ಹೆಚ್ಚು ಚರ್ಚೆಯಾಗಬೇಕು ಮತ್ತು ಸದನದಲ್ಲಿ ಈ ಬಗ್ಗೆ ಚರ್ಚೆಗೆ ಹೆಚ್ಚು ಕಾಲವನ್ನು ತೆಗೆದುಕೊಳ್ಳಬಾರದು ಎಂದು ಇಲಾಖೆಯ ಎಲ್ಲಾ ಅಧಿಕಾರಿಗಳನ್ನು ವಿಷಯ ಸಮಿತಿಗೆ ಕರೆದು ವಿಷಯಗಳ ಚರ್ಚೆಯಾಗಿರುತ್ತದೆ. ಹೀಗಿರುವಾಗ ವಿಷಯ ಸಮಿತಿಯ ಅಧ್ಯಕ್ಷರೇ ಪುನಃ ವಿಷಯದ ಪ್ರಸ್ತಾಪವನ್ನು ಈ ಸದನದಲ್ಲಿ ಮಾಡಬಹುದೇ ಎಂಬ ವಿಷಯ. ಏಕೆಂದರೆ ಅವರೂ ಕೂಡ ಒಂದು ವಿಷಯ ಸಮಿತಿಯ ಅಧ್ಯಕ್ಷರಾಗಿದ್ದಾರೆ. ಹಾಗೆಯೇ ಬಿ.ಆರ್. ಯಾವಗಲ್‌ರವರೂ ಕೂಡ ಒಂದು ವಿಷಯ ಸಮಿತಿಯ ಅಧ್ಯಕ್ಷರು. ಆದ್ದರಿಂದ ಇದನ್ನು ತಮ್ಮ ತೀರ್ಮಾನಕ್ಕೆ ಬಿಟ್ಟಿದೆ. ಹೆಚ್ಚು ಹೊತ್ತು ಈ ಸದನದಲ್ಲಿ ಆ ವಿಷಯ ಸಮಿತಿಯ ಅಧ್ಯಕ್ಷರೇ ಆ ವಿಷಯದ ಮೇಲೆ ಹೇಳುವುದು ಬೇಡ.

ಶ್ರೀ ಜಿ.ಬಿ. ಶಿವಕುಮಾರ್ : ಮಾನ್ಯ ಅಧ್ಯಕ್ಷರೇ, ವಿಷಯ ಸಮಿತಿಯು ಕೂಡ ಒಂದು ಮಿನಿ ಲೆಜಿಸ್ಲೇಚರ್ ಇದ್ದ ಹಾಗೆ. ಹಿಂದಿನ ಕಲಾಪಗಳಲ್ಲಿ ಮಾನ್ಯ ಕೌಜಲಗಿಯವರು ಆಗ ತಮ್ಮ ಸ್ಥಾನದಲ್ಲಿ ಇದ್ದಾಗ ಮಾಡಿದಂಥದ್ದು. ಆಗ ನಾನು ಸದಸ್ಯನಾಗಿ ಇಂಧನ ಇಲಾಖೆಯ ವಿಷಯ ಸಮಿತಿಯಲ್ಲಿದ್ದೆ. ಈಗ ನನ್ನನ್ನು ಈ ಸಮಿತಿಯ ಅಧ್ಯಕ್ಷನನ್ನಾಗಿ ಮಾಡಿದ್ದೀರಿ. ನಿನ್ನೆ ಇಂಧನ ಇಲಾಖೆಯ ಬಗ್ಗೆ ನಾಗೇಗೌಡರವರು ಮಾತನಾಡುತ್ತಿರುವಾಗ ನಾನು ಕೆಲವು ಮಾಹಿತಿಗಳನ್ನು ಹೇಳಿದೆ. ನಾವು ಸರ್ಕಾರಕ್ಕೆ ಕಾಗದ ಬರೆದು ಕೊಟ್ಟಿದ್ದೇವೆ. ತಾವು ಮಾತನಾಡುವಂಥದ್ದು ಇನ್ನೂ ಕೂಡ ಹೆಚ್ಚು ಹೊತ್ತು ಪ್ರಸ್ತಾಪ ಮಾಡಬಹುದಾಗಿದೆ. ಏಕೆಂದರೆ ಮಾನ್ಯ ವಾಟಾಳ್‌ರವರು ಸಾಕಷ್ಟು ಅನುಭವವನ್ನು ಹೊಂದಿರತಕ್ಕಂಥವರು, ಸಾಕಷ್ಟು ಇಲಾಖೆಗಳ ಮೇಲೆ ವಿವರಗಳನ್ನು ಕೊಟ್ಟಾಗ, ಅವರೇ ಅಧ್ಯಕ್ಷರಾಗಿ ಇಲಾಖೆಯ ಬಗ್ಗೆ ಮಾತನಾಡಲು ಕಾಲವನ್ನು ಜಾಸ್ತಿ ಉಪಯೋಗಿಸಿ ಕೊಂಡರೆ ಬೇರೆ ಸಬ್ಜೆಕ್ಟ್‌ಗಳ ಮೇಲೆ ಅವರಿಗೆ, ಮಾತನಾಡಲು ಕೊರತೆಯಾದೀತೇನೋ ಎಂಬುವುದು ಒಂದು ಪ್ರಶ್ನೆ, ಜೊತೆಗೆ ನಮ್ಮ ಕರ್ತವ್ಯವೇನು ಅಧ್ಯಕ್ಷರು ಆ ರೀತಿ ಮಾತನಾಡಬಹುದೇ ಎಂಬ ತಮ್ಮಿಂದ ತಿಳುವಳಿಕೆ ಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಆರ್. ಯಾವಗಲ್ : ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದ್ದೇನೆ. ವಿಷಯ ಸಮಿತಿಯ ವಿಷಯಗಳಿಗೆ ಸದನದಲ್ಲಿ ಹೆಚ್ಚು ಚರ್ಚೆ ಮಾಡಲು ಆಗುವುದಿಲ್ಲ ಎನ್ನುವ ದೃಷ್ಟಿಯಿಂದ ಇದನ್ನು ಕೂಲಂಕುಷವಾಗಿ ಪರಿಶೀಲಿಸಬೇಕು ಎನ್ನುವುದರ ಬಗ್ಗೆ ಸ್ಪಷ್ಟವಾದ ಶಿಫಾರಸ್ಸುಗಳನ್ನು ಹೇಳಬೇಕು ಎನ್ನುವ ಉದ್ದೇಶದಿಂದ ವಿಷಯ ಸಮಿತಿಯನ್ನು ಮಾಡಿರುವಂಥದ್ದು ಮತ್ತು ಇದೊಂದು ಮಿನಿ ವಿಧಾನ ಸಭೆ ಎಂದು ಏನು ಮಾನ್ಯ ಸದಸ್ಯರು ಹೇಳಿದ್ದಾರೆ ಅದನ್ನು ಸಮರ್ಥನೆ ಮಾಡುತ್ತೇನೆ. ಈಗ ಮಾನ್ಯ ವಾಟಾಳ್ ನಾಗರಾಜ್‌ರವರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ, ಆ ಪ್ರಶ್ನೆ ಇಲ್ಲಿ ಬರುವುದಿಲ್ಲ. ನಮಗೇನು ಒಂದು ಸಂಶಯವಿದೆಯೆಂದರೆ ಈಗಾಗಲೇ ನಾನೂ ಒಬ್ಬ ವಿಷಯ ಸಮಿತಿಯ ಅಧ್ಯಕ್ಷನಾಗಿ ವಿಷಯಗಳನ್ನು ಅಧ್ಯಯನ ಮಾಡಿ ವರದಿಯನ್ನು ಸದನದಲ್ಲಿ ಮಂಡಿಸಿದ್ದೇನೆ. ಇದರ ಮೇಲೆ ಚರ್ಚೆಯಾಗತಕ್ಕಂಥದ್ದು ಸಾಮಾನ್ಯವಾದ ಸಂಗತಿ. ಆದರೆ ಈ ವಿಷಯ ಸಮಿತಿಯ ಅಧ್ಯಕ್ಷನಾಗಿ ನಾನೂ ಕೂಡ ಚರ್ಚೆಯಲ್ಲಿ ಭಾಗವಹಿಸಬಹುದೇ ಮತ್ತು ಇದರ ಬಗ್ಗೆ ಇನ್ನೂ ಹೆಚ್ಚಿನ ಬೆಳಕನ್ನು ಚೆಲ್ಲಲು ನಮಗೆ ಅವಕಾಶವಿದೆಯೇ? ಇದರ ಬಗ್ಗೆ ತಮ್ಮ ತೀರ್ಪನ್ನು ಕೊಟ್ಟರೆ ಅನುಕೂಲವಾದೀತು ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಯು.ಆರ್. ಸಭಾಪತಿ : ಅಧ್ಯಕ್ಷರೇ, ನಾನು ಇದರಲ್ಲಿ ಸ್ವಲ್ಪ ಭಾಗಿಯಾಗಬೇಕಾಗಿದೆ. ಏಕೆಂದರೆ ನಾನು ಸಹ ಕೃಷಿ, ಪಶು ಸಂಗೋಪನಾ ಇಲಾಖಾ ವಿಷಯ ಸಮಿತಿಯ ಅಧ್ಯಕ್ಷನಾಗಿದ್ದೇನೆ. ನಿನ್ನೆ ನಾನು ಆ ವಿಷಯದ ಬಗ್ಗೆ

ಮಾತನಾಡಲಿಲ್ಲ, ಏಕೆಂದರೆ ನಾನೇ ಅಧ್ಯಕ್ಷನಾಗಿ ನನ್ನ ಸಮಿತಿಯ ಬಗ್ಗೆ ನಾನೇ ಏಕೆ ಹೆಚ್ಚು ಜಸ್ಟಿಫಿಕೇಶನ್ ಮಾಡಬೇಕು. ಬೇರೆಯುವರು ಜಸ್ಟಿಫಿಕೇಶನ್ ಮಾಡಲಿ ಎನ್ನುವ ದೃಷ್ಟಿಯಿಂದ ನಾನು ಶಿಕ್ಷಣ ಇಲಾಖೆ ಮೇಲೆ ಮಾತ್ರ ಮಾತನಾಡಿದೆ. ಆದ್ದರಿಂದ ನಮಗೆ ಇದರ ಬಗ್ಗೆ ಮಾರ್ಗದರ್ಶನವನ್ನು ತಾವು ಸೂಚಿಸಬೇಕು.

ಅಧ್ಯಕ್ಷರು : ಈ ಅನುಮಾನ ಏಕೆ ಬಂತೋ ನಾಗೇಗೌಡರಿಗೆ.

ಶ್ರೀ ಕಾಗೋಡು ತಿಮ್ಮಪ್ಪ : ಅಧ್ಯಕ್ಷರೇ, ಇವೊತ್ತು ಇದನ್ನು ಬಗೆಹರಿಸಿಕೊಳ್ಳತಕ್ಕದ್ದು ಒಳ್ಳೆಯದು. ಏಕೆಂದರೆ ಹಿಂದೆ ನಾನು ಜಂಟೀ ಸಲಹಾ ಸಮಿತಿಯ ಸದಸ್ಯನಾಗಿ ನಾನು ಕೆಲಸ ಮಾಡತಕ್ಕಂಥ ಸಂದರ್ಭದಲ್ಲಿ ಮಸೂದೆಗಳು ಸದನದಲ್ಲಿ ಚರ್ಚೆಗೆ ಬಂದಾಗ ಡಿಸೆಂಟಿ ನೋಟ್ ಕೊಟ್ಟ ಸಂದರ್ಭದಲ್ಲಿ ಮಾತ್ರ ಮಾತನಾಡಲಿಕ್ಕೆ ಅವಕಾಶವಿದೆಯೇ ಹೊರತು ಡಿಸೆಂಟಿ ನೋಟ್ ಕೊಡದೇ ಇದ್ದರೆ ಆ ಸಮಿತಿಯ ಸದಸ್ಯನಾಗಿದ್ದರೂ ಮಾತನಾಡಲು ಅವಕಾಶವಿಲ್ಲ ಎನ್ನುವ ಒಂದು ಸಂಪ್ರದಾಯವಿದೆ.

ಹಾಗೆ ರೂಲ್‌ನಲ್ಲಿ ನಮಗೆ ನಿಖರವಾಗಿಲ್ಲದಿದ್ದರೂ ಒಂದು ಸಂಪ್ರದಾಯ ಇದೆ. ನಮ್ಮಲ್ಲಿ ವಿಷಯ ಸಮಿತಿಯ ಒಂದು ಹೊಸ ವ್ಯವಸ್ಥೆ ಆಗಿದೆ. ವಿಷಯ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು ಅಲ್ಲೂ ಕೂಡ ಅಧಿಕಾರಿಗಳೊಡನೆ ಕುಳಿತು ಚರ್ಚೆ ಮಾಡುತ್ತಾರೆ. ಇಲ್ಲಿ ಯಾವರೀತಿ ಇಲಾಖೆಯ ಅಧಿಕಾರಿಗಳೂ ಕುಳಿತು ಸದಸ್ಯರು ಹೇಳುವುದನ್ನು ಕೇಳುತ್ತಾರೋ ಅದೇ ರೀತಿ ಅಲ್ಲೂ ಕೂಡ ಇದಕ್ಕಿಂತ ಹೆಚ್ಚಿನ ರೀತಿಯಲ್ಲಿ ಸಂಪರ್ಕ ಮತ್ತು ಸಂಭಾಷಣೆಯೊಂದಿಗೆ ಚರ್ಚೆ ಮಾಡಿ ಅಭಿಪ್ರಾಯವನ್ನು ಸಂಗ್ರಹಣೆ ಮಾಡಿ ಒಂದು ತೀರ್ಮಾನಕ್ಕೆ ಬರುತ್ತೇವೆ. ಅಂದರೆ ದೀರ್ಘವಾದ ಚರ್ಚೆ ಆ ಸಮಿತಿಯಲ್ಲಿ ನಡೆಯುತ್ತದೆ. ನಾವೆಲ್ಲಾ ಏನು ವರದಿಗಳನ್ನು ಕೊಟ್ಟಿದ್ದೇವೆ ಅವು ಈ ಸದನದ ಮುಂದಿವೆ. ಆ ವಿಷಯ ಸಮಿತಿಯ ಅಧ್ಯಕ್ಷರಾಗಲಿ, ಸದಸ್ಯರಾಗಲಿ ಅದೇ ವಿಷಯಗಳನ್ನು ಸದನದಲ್ಲೂ ಚರ್ಚೆ ಮಾಡುವುದಕ್ಕೆ ಅವಕಾಶ ಸಿಕ್ಕಿದರೆ ಬೇರೆ ಸದಸ್ಯರು ಆ ಇಲಾಖೆಯ ಮೇಲೆ ಚರ್ಚೆ ಮಾಡಲು ಕಾಲಾವಕಾಶ ಕಡಿಮೆ ಪಡೆಯುತ್ತಾರೆ. ಆದ್ದರಿಂದ ಅದೇ ಇಲಾಖೆಯ ಬಗ್ಗೆ ಅದೇ ವಿಷಯ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರಿಗೆ ಚರ್ಚೆ ಮಾಡಲು ತಾವು ಅವಕಾಶವನ್ನು ಮಾಡಿಕೊಡುವುದಾದರೆ ಆಗ ಡೂಪ್ಲಿಕೇಷನ್ ಆಫ್ ಡಿಸ್ಕಷನ್ಸ್ ಆಗುತ್ತದೆ. ಬೇರೆ ಸದಸ್ಯರಿಗೆ ಭಾಗವಹಿಸುವುದಕ್ಕೆ ಅವಕಾಶ ತಪ್ಪಿಹೋಗುತ್ತದೆಂಬ ಸಂಶಯ ಕೂಡ ಬರುತ್ತದೆ. ಆದ್ದರಿಂದ ಒಂದು ಸಂಪ್ರದಾಯವನ್ನು ರೂಢಿಗೆ ತರತಕ್ಕದ್ದು ಒಳ್ಳೆಯದೆಂದು ನನ್ನ ಅಭಿಪ್ರಾಯ.

ಶ್ರೀ ವಾಟಾಳ್ ನಾಗರಾಜ್ : ಇಲ್ಲಿ ವಿಷಯ ಸಮಿತಿಯಲ್ಲಿದ್ದವರು ಮಾತನಾಡಬಾರದೆಂದು ಕಾನೂನಿನಲ್ಲಿ ಎಲ್ಲೂ ಇಲ್ಲ. ಮತ್ತು ಈ ವಿಷಯ ಸಮಿತಿಯ ವರದಿ ಶಾಸನ ಸಭೆಯಲ್ಲಿ ಚರ್ಚೆ ಆಗಬೇಕೇ, ಬೇಡವೇ ಎಂಬ ಅನುಮಾನದಿಂದ ಕಳೆದ ಶಾಸನ ಸಭೆಯಲ್ಲಿ ಅದು ಚರ್ಚೆಗೆ ಬರಲಿಲ್ಲ.

ಒಬ್ಬ ಮಾನ್ಯ ಸದಸ್ಯರು : ತಾವು ಸಮರ್ಥಿಸಿಕೊಳ್ಳುವುದು ಸರಿಯಲ್ಲ. ವಿಷಯ ಸಮಿತಿಗಳಲ್ಲಿ ವಿಷಯಪ್ರಸ್ತಾಪ ಆಗಿರುತ್ತದೆ, ಇಲಾಖೆಯಲ್ಲಿ ಏನೇನು ಕಾರ್ಯಕ್ರಮಗಳು ಆಗಿರುತ್ತವೆ ಅದರ ಒಂದು ಪಟ್ಟಿ ಬಂದಿರುತ್ತದೆ. ಅದರ ಬಗ್ಗೆ ಬೇರೆ ಸದಸ್ಯರಾದ ನಾವುಗಳು ಪ್ರಶ್ನೆಯನ್ನು ಕೇಳಬೇಕೇ ಹೊರತು ಆ ಸಮಿತಿಯ ಅಧ್ಯಕ್ಷರು, ಸದಸ್ಯರುಗಳೇ ಸರ್ಕಾರವನ್ನು ಪ್ರಶ್ನೆ ಕೇಳುವುದು ಸರಿಯಲ್ಲ ಎನಿಸುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಲೋಕಸಭೆಯಲ್ಲೂ ವಿಷಯ ಸಮಿತಿಗಳ ವರದಿ ಸಮಗ್ರವಾಗಿ ಚರ್ಚೆಯಾಗುತ್ತದೆ. ಆ ವಿಷಯ ಸಮಿತಿಯ ಸದಸ್ಯರೂ ಕೂಡ ಆ ಚರ್ಚೆಯಲ್ಲಿ ಭಾಗವಹಿಸುತ್ತಾರೆ. ಇದರಲ್ಲಿ ಬೇರೆ ಸದಸ್ಯರಿಗೆ ಚರ್ಚೆ ಮಾಡಲು

ಅವಕಾಶವನ್ನು ಕೊಡಬೇಕೆಂದು ಮಾನ್ಯ ಸದಸ್ಯರಾದ ತಿಮ್ಮಪ್ಪನವರು ಏನು ಹೇಳಿದರು ಹಾಗೆ ಕೊಡಬಾರದೆಂದು ಏನೂ ಅಡ್ಡಿ ಇಲ್ಲ, ಈ ವಾರ್ತಾ ಇಲಾಖೆಗೆ ಸೇರಿದಂಥ ಸುಮಾರು 12-13 ಇಲಾಖೆಗಳ ಬಗ್ಗೆ ಕಳೆದ 3 ದಿನಗಳಿಂದ ಇಲ್ಲಿ ಚರ್ಚೆಯಾಗುತ್ತಿದೆ. ಈ ಚರ್ಚೆಯಲ್ಲಿ ಯಾರು ಕೂಡ ಭಾಗವಹಿಸಲಿಲ್ಲ ಎಂಬ ಅಂಶವನ್ನು ತಮ್ಮ ಗಮನಕ್ಕೆ ನಾನು ತರುತ್ತಿದ್ದೇನೆ. ಬೇರೆಯವರಿಗೆ ಅವಕಾಶ ಮಾಡಿಕೊಡಬೇಕೆಂಬ ಉದ್ದೇಶದಿಂದ ನಾವು ಚರ್ಚೆಯಲ್ಲಿ ಭಾಗವಹಿಸಬಾರದೆಂದು ಎಲ್ಲೂ ಅಡ್ಡಿ ಇಲ್ಲ.

ಇನ್ನೊಂದು ವಿಚಾರ ಎಂದರೆ, ನಮ್ಮನ್ನು ಮತ್ತು ಬೇರೆಯವರನ್ನು ಬೇರ್ಪಡಿಸುವ ವ್ಯವಸ್ಥೆ ಈ ಸಭೆಯಲ್ಲಿಲ್ಲ.

ಶ್ರೀ ಎ.ಟಿ. ರಾಮಸ್ವಾಮಿ : ಮಾನ್ಯ ಅಧ್ಯಕ್ಷರೆ, ಇಲಾಖೆಗಳ ಬಗ್ಗೆ ವಿವರವಾಗಿ ಚರ್ಚೆ ಮಾಡುವುದಕ್ಕೆ ಸದನದಲ್ಲಿ ಕಾಲಾವಕಾಶ ಸಾಕಾಗುವುದಿಲ್ಲ ಎಂದು ವಿಷಯ ಸಮಿತಿಗಳನ್ನು ರಚಿಸಿ ಅವುಗಳ ಮುಂದೆ ಕೂಲಂಕಷವಾಗಿ ಚರ್ಚೆಯಾಗುತ್ತಿದೆ. ಸಮಿತಿಯ ಅಧ್ಯಕ್ಷರು ಶಿಫಾರಸುಗಳನ್ನು ಮಾಡುತ್ತಾರೆ. ಆ ಸಮಿತಿಯ ಅಧ್ಯಕ್ಷರು ಚರ್ಚೆಮಾಡಬಾರದೆಂದು ಹೇಳುವುದಾದರೆ, ಆ ಶಿಫಾರಸ್ಸನ್ನು ಸರ್ಕಾರ ಒಪ್ಪಿಕೊಳ್ಳುತ್ತದೆಯೆ? ಆ ಶಿಫಾರಸನ್ನು ಒಪ್ಪಿಕೊಳ್ಳುವುದಾದರೆ ಚರ್ಚೆ ಅನಾವಶ್ಯಕ. ಅವರ ಶಿಫಾರಸನ್ನು ಒಪ್ಪಿಕೊಳ್ಳದಿದ್ದರೆ ಅವರು ಚರ್ಚೆ ಮಾಡಬೇಕಾಗುತ್ತದೆ. ತಾವು ಅವಕಾಶ ಮಾಡಿ ಕೊಡಬೇಕಾಗುತ್ತದೆ. ವಿಷಯ ಸಮಿತಿಯು ಒಂದು ಮಿನಿ ಅಸೆಂಬ್ಲಿ ಎಂದು ಹೇಳುವುದಾದರೆ ಅದು ಶಿಫಾರಸು ಮಾಡಿದ್ದನ್ನು ಸರ್ಕಾರ ಒಪ್ಪಿಕೊಳ್ಳಬೇಕಾಗುತ್ತದೆ.

ಶ್ರೀ ಎಚ್.ಡಿ. ಕುಮಾರಸ್ವಾಮಿ : ನನ್ನ ಅಭಿಪ್ರಾಯದಲ್ಲಿ ವಿಷಯ ಸಮಿತಿಗಳೂ ಕೂಡ ಈ ಸದನದ ಒಂದು ಅಂಗವಾದ್ದರಿಂದ ಇದೇ ಬೇಡಿಕೆಗಳು ಅಲ್ಲಿ ಚರ್ಚೆಯಾಗಿರುವುದರಿಂದ, ಆ ಸಮಿತಿಯ ಅಧ್ಯಕ್ಷರಾಗಲಿ, ಸದಸ್ಯರಾಗಲಿ ಇಲ್ಲಿ ಚರ್ಚೆ ಮಾಡುವುದಕ್ಕೆ ಅಭ್ಯಂತರವಿಲ್ಲ ಎನಿಸುತ್ತದೆ. ಅವರು ಸದಸ್ಯರು ಅಥವಾ ಅಧ್ಯಕ್ಷರಾಗಿದ ಮಾತ್ರಕ್ಕೆ ಇಲ್ಲಿ ಮಾತನಾಡಬಾರದೆಂದು ಏನೂ ಇಲ್ಲ, ಅದೇ ವಿಷಯಗಳನ್ನೇ ಇಲ್ಲಿ ನಾವು ಚರ್ಚೆ ಮಾಡುತ್ತೇವೆ ಅಷ್ಟೆ.

Sri QUAMARUL ISLAM : This is not a good tradition to say that a member of the subject committee should not participate. I want Chairman or Members of the subject committee should participate for debate purpose.

ಶ್ರೀ ಕೆ.ಎನ್. ನಾಗೇಗೌಡ : ಈ ವಿಷಯ ಸಮಿತಿಗಳ ರಚನೆಯ ಉದ್ದೇಶ ಹಾಳಾಗದ ರೀತಿಯಲ್ಲಿ ತಾವು ಆದೇಶವನ್ನು ನೀಡಬೇಕೆಂಬುದು ನನ್ನ ಮನವಿ. ಏಕೆಂದರೆ ಪಾರ್ಲಿಮೆಂಟ್ನಲ್ಲಿ ಸದಸ್ಯರು ಚರ್ಚೆಮಾಡುವುದಿಲ್ಲ, ಮಾನ್ಯ ಕಾಗೋಡು ತಿಮ್ಮಪ್ಪನವರು ಬಹಳ ರಿಲೆಪ[illegible] ಒಟ್ಟು ಹೇಳಿದ್ದಾರೆ. ಇದು ನಮ್ಮ ಕೌಲ್ ಅಂಡ್ ಶಕ್ಧರ್ನಲ್ಲಿ ಇರುವುದನ್ನು [illegible] ತಮಗೆ ಗೊತ್ತಿರುವಂತೆ ಕುದುರೆಮೋತಿಗೆ ಸಂಬಂಧಪಟ್ಟಂತೆ ಒಂದು ವಿಚಾರ [illegible]ಯಲ್ಲಿ ಚರ್ಚೆಗೆ ಬಂತು. ಆಗಿನ ಒಂದು ರೂಲಿಂಗ್ ನನಗೆ ನೆನಪಿಗೆ ಬರುತ್ತದೆ. ಮಾನ್ಯ ಮಂಜನಾಥವರೇ ಛೇರ್ಮನ್ ಆಗಿದ್ದರು.ಅಲ್ಲಿ ಒಂದು ರೂಲಿಂಗ್ ಏನನ್ನು ಕೊಟ್ಟರು ಎಂದರೆ ಯಾರೋ ಇಬ್ಬರು ಸದಸ್ಯರು ಡಿಸೆಂಟ್ ನೋಟ ಹಾಕಿದ್ದರು. ಅವರ ಡಿಸೆಂಟನೋಟ್ ಬಗ್ಗೆ ಕೇಳುವುದಕ್ಕೆ ಮಾತ್ರ ಅವಕಾಶವನ್ನು ಕೊಟ್ಟರೇ ಹೊರತು ರೆಕಮೆಂಡೇಷನನ್ನು ಯಾರು ಒಪ್ಪಿಕೊಂಡಿದ್ದರು ಅಂಥ ಸದಸ್ಯರಿಗೆ ಮಾತನಾಡಲು ಅವಕಾಶವನ್ನು ಕೊಡಲಿಲ್ಲ, ಈ ಸದನ ಆ ಸಮಿತಿಯ ವರದಿಯನ್ನು ಒಪ್ಪಿಕೊಳ್ಳಬಹುದು ಅಥವಾ ತಿರಸ್ಕರಿಸಬಹುದು. ಈ ಸದನ ಶ್ರೇಷ್ಠವಾದುದು. ಇದು ಸುಪ್ರೀಂ ಆ ಸಮಿತಿಯಲ್ಲಿ ಕೂಲಂಕುಷ ಚರ್ಚೆಮಾಡಿ ಮತ್ತೆ ಇಲ್ಲಿ ಚರ್ಚೆಗೆ ತೆಗೆದುಕೊಳ್ಳುವ ಬಗ್ಗೆ ನಮ್ಮ ನಿಯಮಾವಳಿಯಲ್ಲಿ ಇಲ್ಲದೇ ಇರಬಹುದು.

ಆದರೆ ಇದು ಒಂದು ಕೆಟ್ಟ ಸಂಪ್ರದಾಯ. ಇದು ಆಗಬಾರದೆಂಬುದು ನನ್ನ ಅಭಿಪ್ರಾಯ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೆ, ತಾವು ರೂಲಿಂಗ್ನು ಕೊಡುವುದಕ್ಕೆ ಮುಂಚೆ ಇದನ್ನು ನಾವು ಸರಿಯಾಗಿ ಯೋಚನೆ ಮಾಡಬೇಕಾಗುತ್ತದೆ. ಉದಾಹರಣೆಗೆ ಹೇಳುವುದಾದರೆ ಅಮೆರಿಕನ್ ಕಮಿಟಿ ಸಿಸ್ಟಂ ಮತ್ತು ನಮ್ಮ ಲೋಕ ಸಭೆಯಲ್ಲಿರತಕ್ಕ ಕನ್ಸಲ್ಟೇಟಿವ್ ಕಮಿಟಿ ಸಿಸ್ಟಂ ಮತ್ತು ಇಲ್ಲಿರತಕ್ಕ ಸಬ್ಜೆಕ್ಟ್ ಕಮಿಟಿಯ ಸಿಸ್ಟಂ ಒಂದೇ ಸಮನಲ್ಲ. Senate Committee whatever decision they take, is accepted by the Government. ಲೋಕಸಭೆಯ ಕನ್ಸಲ್ಟೇಟಿವ್ ಕಮಿಟಿಯಲ್ಲಿ ನಾವೆಲ್ಲಾ ಚರ್ಚೆಮಾಡುತ್ತೇವೆ. ಇದು it is not the decision of the House.

ಮಾನ್ಯ ನಂಜೇಗೌಡರಿಗೂ ಗೊತ್ತಿದೆ. ಆದರೆ ಕಮಿಟಿಯಲ್ಲಿ ನಾವು ಚರ್ಚೆಮಾಡಿ ಏನು ಶಿಫಾರಸ್ಸು ಮಾಡಿರುತ್ತೇವೆ ಅದನ್ನು ಅಂತಿಮವಾಗಿ ಒಪ್ಪಿಕೊಳ್ಳುವುದು, ಬಿಡುವುದು ಸರ್ಕಾರಕ್ಕೆ ಬಿಟ್ಟಿದು., ಈ ಸದನದಲ್ಲಿ ಡಿಸ್ಕೈಡ್ ಆದರೆ ಒಪ್ಪಿಕೊಳ್ಳಲೇಬೇಕು. ಆದರೆ ಸಮಿತಿಯಲ್ಲಿ ಏತಕ್ಕೆ ಚರ್ಚೆಮಾಡುತ್ತಿದ್ದಾರೆಂದು ಸದನದ ಸಮಯವನ್ನು ಹಾಳಾಮಾಡಬಾರದು ಎಂಬ ಉದ್ದೇಶದಿಂದ ಒಂದು ರಿಸ್ಟ್ರಿಕ್ಷನ್ ಇತ್ತು. ಒಂದು ಉದಾಹರಣೆ ಹೇಳುವುದಾದರೆ ಯಾವುದೋ ಒಂದು ಬಿಲ್ಲು ಬಗ್ಗೆ ಒಂದು ಸಮಿತಿಯನ್ನು ರಚನೆ ಮಾಡುತ್ತೇವೆ, ಆ ಬಿಲ್ಲಲ್ಲಿ ಡಿಸೆಂಟ್ ನೋಟ್ ಇದ್ದರೆ ನೀವು ಅದನ್ನು ವಿರೋಧ ಮಾಡಿ ಮಾತನಾಡಬಹುದು. ನೀವು ಆ ಸಮಿತಿಯಲ್ಲಿದ್ದು ಆ ಬಿಲ್ಲು ಒಪ್ಪಿಕೊಂಡು ಶಿಫಾರಸ್ಸು ಮಾಡಿದ್ದರೆ ಮತ್ತೆ ಅದನ್ನು ಸಪೋರ್ಟ್ ಮಾಡಿ ಮಾತನಾಡುವ ಅವಶ್ಯಕತೆ ಇಲ್ಲ, ಇವೆಲ್ಲಾ ಒಂದು ನೀತಿ. ನಮಗೆ ಇದರಲ್ಲಿ ವ್ಯವಸ್ಥಿತವಾದ ನಿಯಮಾವಳಿ ಇಲ್ಲ. ವಿವರಣೆ ಇಲ್ಲ, ಈ ವಿಚಾರ ಈ ಸದನದಲ್ಲ ಇನ್ನೂ ಪ್ರಾರಂಭದಲ್ಲೇ ಬಂದಿರುವುದು ಬಹಳ ಒಳ್ಳೆಯದು. ಸಮಿತಿಯ ಸಭೆಯಲ್ಲಿ ಇದಕ್ಕೆ ಹೆಚ್ಚು ಹೊತ್ತು ತೆಗೆದುಕೊಂಡು ಈಗ ಮತ್ತೆ ಅದೇ ವಿಷಯಕ್ಕೆ ಈ ಸದನದ ಸಮಯವನ್ನು ತೆಗೆದುಕೊಳ್ಳುವುದಾದರೆ ಮುಂದಿನ ದಿನಗಳಲ್ಲಿ ನಾವು ಇಲ್ಲಿ ಯಾವ ರೀತಿ ಕಾರ್ಯ ಕಲಾಪಗಳನ್ನು ನಡೆಸಬಹುದನ್ನು ಯೋಚನೆ ಮಾಡಬೇಕಾಗುತ್ತದೆ. ತಾವು ಇದರ ಬಗ್ಗೆ ತಮ್ಮ ತೀರ್ಪನ್ನು ಕೊಡುವುದಕ್ಕೆ ಈಗ ಸಾಧ್ಯವಾಗದಿದ್ದರೆ ಸಮಯವನ್ನು ತೆಗೆದುಕೊಳ್ಳಿ. ಬೇರೆಯವರೊಂದಿಗೆ ಕನ್ಸಲ್ಟ್ ಮಾಡಿಕೊಳ್ಳಿ. ಆದರೆ ತಮ್ಮ ತೀರ್ಪಿನಲ್ಲಿ ಈ ಸದನದ ಸಮಯ ಉಳಿಯಬೇಕು, ಸರ್ಕಾರಕ್ಕೆ ನಿರ್ದಿಷ್ಟವಾದ ಸೂಚನೆಗಳೂ ಬರಬೇಕು, ಆ ಸೂಚನೆಗಳನ್ನು ಒಪ್ಪಿಕೊಳ್ಳುವುದು, ಬಿಡುವುದು ತಮ್ಮ ಅಧಿಕಾರ ವ್ಯಾಪ್ತಿಗೆ ಬಿಟ್ಟಿದ್ದುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ವಿಷಯ ಸಮಿತಿ ತನ್ನ ವರದಿಯನ್ನು ಕೊಡುತ್ತದೆ. ಆ ಅಂಶಗಳನ್ನು ಒಪ್ಪುವುದು. ಬಿಡುವುದು ಈ ಸದನಕ್ಕೆ ಬಿಟ್ಟ ವಿಚಾರ. ಆದರೆ ಇಲ್ಲಿ ಬಂದಿರತಕ್ಕದ್ದು ಎಂದರೆ ವಿಷಯ ಸಮಿತಿಯಲ್ಲಿ ಚರ್ಚೆಯಾದ ವಿಷಯ ಮತ್ತೆ ಇಲ್ಲಿ ಚರ್ಚೆಯಾಗಬಾರದೆಂದು ಬರುವುದಿಲ್ಲ, ಇದನ್ನು ಸದನ ತೀರ್ಮಾನ ಮಾಡತಕ್ಕದ್ದು. ಸದನದಲ್ಲಿ ಈ ವಿಚಾರ ಚರ್ಚೆ ಮಾಡುವುದಕ್ಕೆ ಇಂಥ ಸದಸ್ಯರಿಗೆ ಅವಕಾಶ ಇದೆ, ಇಂಥವರಿಗೆ ಅವಕಾಶ ಇಲ್ಲವೆಂದು ಹೇಳುವುದು ಸರಿಯಲ್ಲ, ಇಲ್ಲಿ ಸಮಯದ ಬಗ್ಗೆ ಆಲೋಚನೆ ಮಾಡಬೇಕಾಗುತ್ತದೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದ ಒಂದು ವಿಚಾರವನ್ನು ಆಲೋಚನೆ ಮಾಡಬೇಕಾಗುತ್ತದೆ. ಇದು ಸದನದ ಸಮಯದ ಪ್ರಶ್ನೆ. ಆದರೆ ಸದಸ್ಯರು ಮಾತನಾಡಬಾರದೆಂದು ಹೇಳುವುದು ಸರಿಯಲ್ಲ.

ಅಧ್ಯಕ್ಷರು : ಅದು ಸರಿ. ನಿಯಮ ಬೇರೆ, ಸಂಪ್ರದಾಯ ಬೇರೆ. ನಿಯಮಗಳಲ್ಲಿ ಮಾತನಾಡಬಾರದೆಂದು ಏನೂ ಇಲ್ಲ, ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದಂತೆ ಇದು ಡೂಪ್ಲಿಸಿಟಿ ಆಫ್ ಡಿಸ್ಕಷನ್ ಆಗುವುದರಿಂದ ಒಂದು ಒಳ್ಳೆಯ ಸಂಪ್ರದಾಯವನ್ನು

ಹಾಕಿಕೊಳ್ಳಬೇಕು. ನಮ್ಮಲ್ಲಿ ಈ ಸಬ್ಜೆಕ್ಟ್ ಕಮಿಟೀಸ್ ಅಸ್ತಿತ್ವಕ್ಕೆ ಬರುವುದಕ್ಕೆ ಮೊದಲು ಇದ್ದಂಥ ವ್ಯವಸ್ಥೆಯಲ್ಲಿ ಬೇಡಿಕೆಗಳ ಬಗ್ಗೆ ಸದನದಲ್ಲಿ ಚರ್ಚೆಮಾಡುತ್ತಿದ್ದೆವು. ಪ್ರತಿಯೊಂದಕ್ಕೂ ಸಮಯವನ್ನು ನಿಗದಿ ಮಾಡುತ್ತಿದ್ದೆವು. ಆದರೆ ವಿಷಯ ಸಮಿತಿಗಳು ಅಸ್ತಿತ್ವಕ್ಕೆ ಬಂದಮೇಲೆ ಬೇಡಿಕೆಗಳ ಮೇಲಿನ ಚರ್ಚೆಯೇ ಇಲ್ಲದಂತಾಗುತ್ತಿದೆ ಎಂಬ ಅಭಿಪ್ರಾಯ ಮೂಡಿಬಂತು. ಸದನದ ಎಲ್ಲಾ ಸದಸ್ಯರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು 15 ಮಂದಿ....

ಶ್ರೀ ಹೆಚ್.ಎನ್. ನಂಜೇಗೌಡ : ವಿಷಯ ಸಮಿತಿಗಳ ವರದಿಗಳು ಏನಿವೆ ಇದಕ್ಕೆ there is no statutory provision, by which the Government is compelled to implement that report. The report of the subject committee is a report for reference unlike the committee like P.A.C. which has statutory provision. ಉದಾಹರಣೆಗೆ ನಮ್ಮ ಪಬ್ಲಿಕ್ ಅಕೌಂಟ್ಸ್ ಕಮಿಟಿ ಇರಬಹುದು There is no compelling provision. Report is only for reference by the press because while considering, viwes are given for the guidance of the members to deliberate in the House. ಈ ಅರ್ಥಕ್ಕೆ ನಾವು ಇಟ್ಟುಕೊಳ್ಳಬೇಕಾಗುತ್ತದೆ. ಜೊತೆಗೆ ಆಕ್ಸಿಡೆಂಟಲಿ ಶ್ರೀವಾಟಾಳ್ನಾಗರಾಜ್‌ರವರು ಆ ಸಮಿತಿಯಲ್ಲಿದ್ದಾರೆ. ಸಮಿತಿಯಲ್ಲಿದ್ದಾರೆಂದು ಸದನದಲ್ಲಿ ಹೇಳಲಿಲ್ಲ ಎಂದರೆ, where is the transparency for debates. ಈಗ ಅವರಿಗೆ ಆ ವಿಚಾರಗಳು ಗೊತ್ತಿರುವುದು ಇಲ್ಲಿ ಅವರು ಹೇಳಲೇಬೇಕಾಗುತ್ತದೆ. This is openness of the demands or administration of the Government or the omissions and commissions for the public consumption ಜನಕ್ಕೆ ಗೊತ್ತಾಗಲಿ ಎಂದೇ ನಾವು ಹೇಳಬೇಕಾದುದು. ಆ ದೃಷ್ಟಿಯಿಂದ ಸಾಮರ್ಥ್ಯ ಇರತಕ್ಕಂಥವರು ಅನುಭವವಿರತಕ್ಕಂಥವರು ಸಮಿತಿಯಲ್ಲಿ ಹೊರಗಡೆ ಇರಲಿ ಅಥವಾ ಇಲ್ಲದೇನೇ ಇರಲಿ ಅವರು ಮಾತನಾಡಲೇಬೇಕು ಅದು ಅವಶ್ಯ.

ಒಬ್ಬ ಮಾನ್ಯ ಸದಸ್ಯರು : ವಿಷಯ ಸಮಿತಿಯಲ್ಲಿ ಏನಾಗುತ್ತದೆಂದರೆ ಅಲ್ಲಿ ತಂತ್ರಜ್ಞಾನರು ಇರುತ್ತಾರೆ, ನಾವು ವಿಚಾರ ಮಾಡಿರುತ್ತೇವೆ, ನಾವು ಜನ ಪ್ರತಿನಿಧಿಗಳಾಗಿ ಬಂದಿರುತ್ತೇವೆ, ಅಲ್ಲಿ ನಮ್ಮ ಸಮಸ್ಯೆಗಳನ್ನು ಅವರ ಹತ್ತಿರ ಹೇಳಿರುತ್ತೇವೆ, ಅದು ಅಲ್ಲಿ ವರದಿಯಾಗಿರುತ್ತದೆ. ನಾವೊಂದು ಸಮಿತಿಯ ಅಧ್ಯಕ್ಷರಾಗಿ ವರದಿಯನ್ನು ಸಭೆಗೆ ಕೊಟ್ಟ ಮೇಲೆ ಅದರ ಮೇಲೆ ನಾವು ಹೆಚ್ಚು ಮಾತನಾಡಲಿಕ್ಕೆ ಕಾಲವ್ಯಯಮಾಡಲಿಕ್ಕೆ ಅವಕಾಶವನ್ನು ಸಭಾಧ್ಯಕ್ಷರು ಕೊಡಬಾರದು ಎಂದು ನನ್ನ ಮನವಿ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ನಂಜೇಗೌಡರು ಹೇಳಿದ ಒಂದು ಪಾಯಿಂಟ್ಗೆ ನನ್ನದು ಒಂದು ಸಣ್ಣ ಮನವಿ ಏನೆಂದರೆ, ಅವರು ಹೇಳಿದ್ದು ನಾವು ಏನು ಮಾತನಾಡುತ್ತೇವೆ ಎನ್ನುವುದು ಜನರಿಗೆ ಗೊತ್ತಾಗಬೇಕು ಆ ದೃಷ್ಟಿಯಿಂದ ಹೇಳಬೇಕು ಎನ್ನತಕ್ಕಂಥದ್ದನ್ನು ಒತ್ತಿ ಹೇಳಿದ್ದಾರೆ. ಅದಕ್ಕೆ ನನಗೆ ಏನು ಅನಿಸುತ್ತದೆ ನಮ್ಮ ಎಲ್ಲಾ Committees, it may be Joint Select Committee or Standing Committees or Subject Committees ಅವುಗಳಿಗೆ kindly allow the Press. Press will report to the public. That is the better position. Not for again discussing the same subject here.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಧ್ಯಕ್ಷರೆ, ವಿಷಯಸಮಿತಿಗಳಿಗೆ ನಿಯಮದಲ್ಲಿ ಪ್ರಾವಿಜನ್ ಇರಬಹುದು ಆದರೆ ಅದಕ್ಕೆ ಸ್ಟ್ಯಾಟುಟರಿ ಅಥಾರಿಟಿ ಇಲ್ಲ. ಆ ರೀತಿ ಇರತಕ್ಕ ಸಂದರ್ಭದಲ್ಲಿ ವಿಷಯ ಸಮಿತಿಗಳನ್ನು ರೂಪಿಸುವುದಕ್ಕೆ ಸರ್ಕಾರ ಒಪ್ಪುವುದಾದರೆ ಅದರ ಬಗ್ಗೆ ಚರ್ಚೆ ಮಾಡಬೇಕು ಇಲ್ಲ ಮಾಡಬಾರದು ಎನ್ನತಕ್ಕ ಪ್ರಶ್ನೆ ಬರುತ್ತದೆ. It is not obligatory and there is no statutory authority for the Subject

Committees. Then, the question of not discussing by any member or Chairman of that committee does not arise at all. No. 2, It is the question of right of the member of the House; as a member, not as a member of the subject committee.

ಶ್ರೀ ಬಿ.ಆರ್. ಯಾವಗಲ್ : ಅಧ್ಯಕ್ಷರೆ, ಸನ್ಮಾನ್ಯ ನಾಗೇಗೌಡರು ಹೇಳಿರುವುದನ್ನು ಸಮರ್ಥನೆ ಮಾಡುತ್ತ ನಾನು ಹೇಳುವುದೇನೆಂದರೆ ವಿಷಯ ಸಮಿತಿಯ ವರದಿಯನ್ನು ಅದರ ಪ್ರೊಸೀಡಿಂಗ್ಸ್‌ನ್ನು ಸಹ ಗೌಪ್ಯವೆಂದು ನಾವು ಪರಿಗಣನೆ ಮಾಡುತ್ತೇವೆ. ಆ ಅರ್ಥದಲ್ಲಿ ನಾವು ಟ್ರೀಟ್ ಮಾಡುತ್ತೇವೆ. ವಿಷಯ ಸಮಿತಿಯ ವರದಿಯನ್ನು ವಿಧಾನ ಸಭೆಯಲ್ಲಿ ಮಂಡಿಸುವವರೆಗೆ ಅದು ಗೌಪ್ಯವಾದುದು ಎಂದು ಇಲ್ಲಿಯವರೆಗೆ ನಡೆದುಕೊಂಡು ಬಂದಿದೆ. ಇಲ್ಲದಿದ್ದರೆ ಅವರು ಹೇಳಿದಂತೆ ಪ್ರೆಸ್ಸಿನವರನ್ನು ಅಲೋ ಮಾಡಿದರೆ ಅವರು ಸಮಿತಿಯ ವರದಿಯನ್ನು ವರದಿ ಮಾಡಬಹುದಾಗಿತ್ತು. ಅದು duplicity of work,ಇದನ್ನು ತಡೆಮಾಡಲು ಸಾಧ್ಯವಾದೀತೇನೋ. ವಿಷಯ ಸಮಿತಿಯಲ್ಲಿ ಇದ್ದಂಥ ಸದಸ್ಯರಿಗೋ ಅಥವಾ ಅಧ್ಯಕ್ಷರಿಗೋ ಅದರ ಮೇಲೆ ಪುನಃ ಇಲ್ಲಿ ಚರ್ಚೆಗೆ ಅವಕಾಶ ಮಾಡಿಕೊಟ್ಟರೆ, ಅವರಿಗೆ ಆ ವಿಷಯದ ಮೇಲೆ ತಿಳುವಳಿಕೆ ಜಾಸ್ತಿ ಇರುವುದರಿಂದ ಆ ರೀತಿ ಚರ್ಚೆ ಮಾಡಲು ಅವಕಾಶ ಮಾಡಿಕೊಟ್ಟರೂ ಸಹ ತಪ್ಪೇನಿಲ್ಲ. ವಿಷಯ ಸಮಿತಿಯಲ್ಲೂ ಚರ್ಚೆ ಮಾಡಿ ಇಲ್ಲಿಯೂ ಸಹ ಚರ್ಚೆ ಮಾಡಲು ಅವಕಾಶ ಕೊಡುವುದರಿಂದ ಒಳ್ಳೆಯ ಸಂಪ್ರದಾಯವನ್ನು ಹಾಕಿದಂತಾಗುತ್ತದೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಅಧ್ಯಕ್ಷರೆ, ವಿಷಯ ಸಮಿತಿಯಲ್ಲಿ ಚರ್ಚೆ ಮಾಡಿದ್ದನ್ನು ಮತ್ತೆ ಇಲ್ಲಿ ಚರ್ಚೆ ಮಾಡಬಾರದೆಂದೇನಿಲ್ಲ. ಏಕೆಂದರೆ ವಿಷಯ ಸಮಿತಿಯಲ್ಲಿ 15 ಜನರು ಸದಸ್ಯರುಗಳಿರುತ್ತಾರೆ ಆದರೆ ಇಲ್ಲಿ 224 ಜನ ಸದಸ್ಯರಿಗೆ ವಿಷಯ ಗೊತ್ತಾಗಬೇಕಾದರೆ ಇಲ್ಲಿ ಚರ್ಚೆ ಮಾಡಿದರೆ ಒಳ್ಳೆಯದು. ವಿಷಯ ಸಮಿತಿಯಲ್ಲಿ ಇರತಕ್ಕವರು ಯಾವುದೇ ಶಿಫಾರಸ್ಸನ್ನು ಒಪ್ಪಿಕೊಳ್ಳಲು ಅಥವಾ ಅದನ್ನು ತಿರಸ್ಕರಿಸಲು ಕಾರಣವೇನು ಎಂಬ ಬಗ್ಗೆ ಇಲ್ಲಿ ಹೇಳುವುದರಿಂದ ತಪ್ಪೇನಾಗುವುದಿಲ್ಲ. ಏಕೆಂದರೆ ವಿಷಯ ಸಮಿತಿಯ ವರದಿಯನ್ನು ತಮಗೆ ಕೊಟ್ಟಿರುತ್ತಾರೆ. ಒಂದುಸಲ ಸಮಿತಿಯ ವರದಿಯನ್ನು ಸದನಕ್ಕೆ ಸಲ್ಲಿಸಿದ ಮೇಲೆ ಅದೇನು ಗೌಪ್ಯವಾಗಿ ಉಳಿಯುವುದಿಲ್ಲ. ಸಮಿತಿಯ ವರದಿಯನ್ನು ಸದನಕ್ಕೆ ಸಲ್ಲಿಸುವ ಮೊದಲು ಅದು ಗೌಪ್ಯವಾಗಿರಬೇಕು, ಪ್ರೆಸ್ಗೆ ಹೋದಬಾರದೆಂದು ಅವರು ಹೇಳಿದ್ದಾರೆ, ಅದರ ಬಗ್ಗೆ ಆದೇಶವೂ ಇದೆ. ಅದರ ಪ್ರಕಾರ ಯಾವುದೂ ಪ್ರೆಸ್ಗೆ ಹೋಗುತ್ತಿಲ್ಲ, ಆದರೆ ಒಂದು ಸಲ ಅದನ್ನು ಸದನದಲ್ಲಿ ಮಂಡಿಸಿದಮೇಲೆ, ಅದು ಸದನದ ಪ್ರಾಪರ್ಟಿಯಾದಮೇಲೆ ಅದರ ಮೇಲೆ ಚರ್ಚೆಮಾಡುವುದು, ವಿಷಯದ ಬಗ್ಗೆ ರೆಫರ್ ಮಾಡುವುದು ಸಹಜವಾದ ಕ್ರಿಯೆಯಾಗುತ್ತದೆ.

Dr. SHANKAR NAIK : ಸನ್ಮಾನ್ಯ ಅಧ್ಯಕ್ಷರೆ, ತಾವೇನು ವಿಷಯ ಸಮಿತಿಯನ್ನು ಮಾಡಿದ್ದೀರಿ. ಆ ವಿಷಯ ಸಮಿತಿಯನ್ನು ಮಾಡಿದ ಮೇಲೆ ಒಂದೊಂದೇ ವಿಷಯದ ಬಗ್ಗೆ ಸದನದಲ್ಲಿ ನಿಗದಿಯಾದ ದಿನಾಂಕ ಮತ್ತು ವೇಳೆಯಲ್ಲಿ ಚರ್ಚೆಯಾಗಬಹುದೆಂದು ನಮ್ಮಗಳ ಭಾವನೆಯಾಗಿತ್ತು. ಆದರೆ ತಾವು ಹತ್ತು ಹದಿನೈದು. ಇಲಾಖೆಗಳನ್ನು ಒಟ್ಟಿಗೇ ಸೇರಿಸಿ ಅದರ ಮೇಲೆ ಮಾತನಾಡಿ ಎಂದು ಸೂಚನೆ ನೀಡಿದ್ದೀರಿ. ತಾವು ವಿಷಯ ಸಮಿತಿಯನ್ನು ಮಾಡಿದ ಮೇಲೆ ಒಂದೊಂದು ವಿಷಯಕ್ಕೆ ಒಂದು ಇಲ್ಲವೆ ಅರ್ಧ ದಿವಸ ಸಮಯವನ್ನು ನಿಗದಿ ಮಾಡಿ ಆ ನಿಗದಿಯಾದ ಸಮಯದಲ್ಲಿ ಆ ವಿಷಯದ ಬಗ್ಗೆ ಮಾತ್ರ ಚರ್ಚೆ ಮಾಡಬೇಕೆಂದಾಗ ಎಲ್ಲಾ ಮಾನ್ಯ ಸದಸ್ಯರುಗಳು

ಆ ವಿಷಯದ ಬಗ್ಗೆ ಅಧ್ಯಯನ ಮಾಡಿಕೊಂಡು ಬರುತ್ತಾರೆ, ಮತ್ತು ಆ ವಿಷಯದ ಬಗ್ಗೆ ಇಲ್ಲಿ ಕೂಲಂಕಷವಾಗಿ ಚರ್ಚೆಯೂ ಆಗುತ್ತದೆ. ಆ ರೀತಿ ತಾವೇನಾದರೂ ಮಾಡಲು ಸಾಧ್ಯವೇ?

ಅಧ್ಯಕ್ಷರು : ನಾನು ಅದರ ಬಗ್ಗೆಯೇ ಹೇಳುತ್ತಿದ್ದೆ. ವಿಷಯ ಸಮಿತಿಗಳು ಅಸ್ತಿತ್ವಕ್ಕೆ ಬಂದ ಮೇಲೆ ವಿಷಯ ಸಮಿತಿಯ ವರದಿಯನ್ನು ಸದನದಲ್ಲಿ ಚರ್ಚೆ ಮಾಡುತ್ತಿರಲಿಲ್ಲ. ವಿಷಯ ಸಮಿತಿಯು ಬರುವುದಕ್ಕೂ ಮೊದಲು ಇದ್ದ ಅವಕಾಶದಿಂದ ವಂಚಿತರಾಗುತ್ತಿದ್ದೇವೆ, ಆದ್ದರಿಂದ ಚರ್ಚೆಯಾಗಬೇಕು ಎನ್ನತಕ್ಕ ಅಭಿಪ್ರಾಯ ಬಂದಾಗ, ಒಟ್ಟು ಇರುವ ಹದಿನೈದು ವಿಷಯ ಸಮಿತಿಗಳಲ್ಲಿ ಏಳು ಸಮಿತಿಗಳ ವರದಿಯ ಬಗ್ಗೆ ಚರ್ಚೆಗೆ ತೆಗೆದುಕೊಳ್ಳೋಣ ಎನ್ನತಕ್ಕ ಹೊಸದಾದ ತೀರ್ಮಾನಕ್ಕೆ ಈ ವರ್ಷ ಬಂದಿದ್ದೇವೆ. ಬೇಡಿಕೆಗಳ ಮೇಲೆ ಚರ್ಚೆ ಮಾಡತಕ್ಕ ಸಮಯದಲ್ಲಿ ಪಕ್ಷಗಳ ಆಧಾರದ ಮೇಲೆ ಆಯಾಯ ಪಕ್ಷದಲ್ಲಿ ಎಷ್ಟು ಸದಸ್ಯರು ಇದ್ದಾರೆ, ಎಷ್ಟು ಸಮಯ ನಮಗೆ ಲಭ್ಯವಾಗುತ್ತದೆ. ಯಾವ್ಯಾವ ಪಕ್ಷಕ್ಕೆ ಎಷ್ಟೆಷ್ಟು ಸಮಯ ನಿಗದಿ ಮಾಡಿದ್ದೇವೆ ಎಂಬ ಬಗ್ಗೆ ತೀರ್ಮಾನ ಮಾಡಿದ್ದೇವೆ. ಇದು ಮೂಲಭೂತವಾದ ಪ್ರಶ್ನೆ.

ಆ ರೀತಿ ನಿಗದಿಯಾದ ಸಮಯವನ್ನು ಬಳಿಕೆ ಮಾಡಿಕೊಳ್ಳತಕ್ಕ ಸಮಯದಲ್ಲಿ ಯಾರ್‍ಯಾರು ಏನೇನು ಮಾತನಾಡುತ್ತಾರೆ ಅದು ಅವರವರ ಹಕ್ಕು. ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದ ಡೂಪ್ಲಿಸಿಟಿ ಆಫ್ ವರ್ಕ್ ಆಗಬಾರದು ಎನ್ನತಕ್ಕದ್ದು ಒಂದು ನಿಯಮ, ಸಂಪ್ರದಾಯ ಸಮಯ ವ್ಯರ್ಥವಾಗಬಾರದು ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದು ನನ್ನ ಮನಸ್ಸಿಗೆ ಹಿಡಿಸಿದೆ. ಮಾನ್ಯ ನಂಜೇಗೌಡರು ಹೇಳಿದ ಹಾಗೆ ಯಾರು ಒಂದು ವಿಷಯ ಸಮಿತಿಯ ಸಮಿತಿಯ ಸದಸ್ಯರಾಗಿಯೋ ಅಧ್ಯಕ್ಷರಾಗಿಯೋ ಕೆಲಸ ಮಾಡತಕ್ಕ ಸಮಯದಲ್ಲಿ ಕೆಲವಾರು ವಿಷಯಗಳು ಅವರ ಗಮನಕ್ಕೆ ಬಂದು ಅವರು ಪರಿಣತಿಯನ್ನು ಪಡೆದಿರುತ್ತಾರೆ, ಅವರು ವಿಶೇಷವಾದ ಅನುಭವವನ್ನು ಪಡೆದಿರುತ್ತಾರೆ, ಅದರ ಹಿನ್ನೆಲೆಯಲ್ಲಿ ಅವರು ಇಲ್ಲಿ ವ್ಯಾಖ್ಯಾನ ಮಾಡಲು, ಸಲಹೆಯನ್ನು ಕೊಡಲು, ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಅದು ಪ್ರಯೋಜನವಾಗುತ್ತದೆಂದು ಹೇಳಿದರು. ನನ್ನ ನಿರ್ಬಂದವೇನು ಇಲ್ಲದಿರುವುದರಿಂದ ಅದಕ್ಕೆ ತಡೆ ಹಾಕುವುದು ಬೇಡ. ಮಾನ್ಯ ಡಾ॥ ಶಂಕರ್‍ನಾಯಕ್ರವರು ಸಹ ಇದರ ಬಗ್ಗೆ ಹೇಳಿದ್ದಾರೆ. ಚರ್ಚೆಗೆ ಅವಕಾಶಮಾಡಿಕೊಡಬೇಕು ಎನ್ನುವ ಬಗ್ಗೆ ನನ್ನದೇನು ಅಭ್ಯಂತರವಿಲ್ಲ. ಆದರೆ ವಿಷಯ ಸಮಿತಿಯವರದಿಯ ಬಗ್ಗೆ ಚರ್ಚೆ ಮಾಡಲು ಸಮಯವಿಲ್ಲವೆಷ್ಟೆ. ಇದರ ಬಗ್ಗೆ ಚರ್ಚೆ ಮಾಡಲು ಎಲ್ಲರಿಗೂ ಅವಕಾಶವನ್ನು ಕೊಡಲು ಆಗುತ್ತಿಲ್ಲ. ನೀವು ಹೇಳಿದ ಸಲಹೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಮುಂದಿನ ವರ್ಷ ವ್ಯವಸ್ಥೆ ಮಾಡೋಣ. ಹೆಚ್ಚು ಸಮಯವನ್ನು ಶಾಸನಸಭೆಯಲ್ಲಿ ಕುಳಿತು ಕಳೆಯುವುದಕ್ಕೆ ನಾವುಗಳು ಮಾನಸಿಕವಾಗಿ ತಯಾರಾದರೆ ಎಲ್ಲಾ ವಿಷಯ ಸಮಿತಿಯ ವರದಿಯನ್ನು ಸಹ ಚರ್ಚೆ ಮಾಡುವುದಕ್ಕೆ ಅವಕಾಶವಾಗುತ್ತದೆ. ಈಗ ದಯವಿಟ್ಟು ಚರ್ಚೆಯನ್ನು ಮುಂದುವರೆಸೋಣ.

ಶ್ರೀ ಹೆಚ್.ಎನ್. ನಂಜೇಗೌಡ : ತಾವು ಒಂದು ಸೂಚನೆಯನ್ನು ಕೊಡಬಹುದು. ನಮ್ಮ ಪಕ್ಷಕ್ಕೆ ಸಮಯವನ್ನು ಅಲಾಟ್ ಮಾಡಿದ್ದೀರಿ. ನಮ್ಮ ಸಮಯದಲ್ಲಿ ಮಾತನಾಡುವವರು ವಿಷಯ ಸಮಿತಿಯಲ್ಲಿದ್ದರು ಮಾತನಾಡಬೇಕೋ ಅಥವಾ ಇಲ್ಲದವರು ಮಾತಡಬೇಕೋ ಎಂಬುದನ್ನು ನಮ್ಮ ಪಕ್ಷದವರೇ ತೀರ್ಮಾನ ಮಾಡಿಕೊಳ್ಳಲಿ. ಅಷ್ಟು ಮಾಡಿಕೊಂಡರೆ ಸರಿಯಾಗುತ್ತದೆ.

That is exactly what I said.

ಅಧ್ಯಕ್ಷರು : ನೀವು ನಿಮ್ಮ ನಿಮ್ಮ ಪಕ್ಷದಲ್ಲಿ ಒಂದು ವ್ಯವಸ್ಥೆಯನ್ನು ಮಾಡಿಕೊಂಡಿದ್ದೀರಿ. ನಾವು ನಿಮಗೆ ಇಷ್ಟು ಸಮಯವೆಂದು ನಿಗದಿ ಮಾಡುತ್ತೇವೆ. ನೀವು ನಿಮ್ಮ ಪಕ್ಷದಿಂದ ಯಾರ್ಯಾರು ಮಾತನಾಡುತ್ತಾರೆಂದು ಪಟ್ಟಿಯನ್ನು ಕಳಿಸಿದ್ದೀರಿ. ನಿಮ್ಮಲ್ಲಿ ಯಾರು ಮಾತನಾಡುತ್ತಾರೆ, ಅವರು ಯಾವ ವಿಷಯ ಸಮಿತಿಯಲ್ಲಿ ಇದ್ದರು, ಅವರೇನು ಮಾತನಾಡಬೇಕು ಎಂಬುದನ್ನು ತೀರ್ಮಾನ ಮಾಡುವುದು ನನ್ನ ಕರ್ತವ್ಯವಲ್ಲ,

Sri J.H. PATEL : Instead of demands connected to each Ministry, ಹದಿನೈದು ವಿಷಯ ಸಮಿತಿಗಳೇನಿವೆಯೋ ಆ ಸಮಿತಿಯ ವರದಿಯನ್ನೇ as a basis ಆಗಿ ಇಟ್ಟುಕೊಂಡು ಚರ್ಚೆ ಮಾಡಬಹುದು.

ಶ್ರೀ ಹೆಚ್.ಎನ್. ನಂಜೇಗೌಡ : ಕಮಿಟಿಯವರಿಗೆ ನಾವು ಓಟನ್ನು ಕೊಡುವಂತಿಲ್ಲ, ನಾವು ಈ ಬೇಡಿಕೆಗೇ ಓಟನ್ನು ಕೊಡಬೇಕಾಗುತ್ತದೆ. ಬಜೆಟ್ ಪಾಸಿಂಗ್ ಎಂದರೆ ಆ ರೀತಿಯೇ ಮಾಡಬೇಕಾಗುತ್ತದೆ.

ಶ್ರೀ ಜೆ.ಹೆಚ್. ಪಟೇಲ್ : ಬೇಡಿಕೆಗಳಿಗೆ ಓಟನ್ನು ಕೊಡುವುದು ಅದರ ಮೂಲಕ ಫೈನಾಶ್ಸಿಯಲ್ ಸ್ಯಾಂಕ್ಷನ್ ತೆಗೆದುಕೊಳ್ಳುವುದು ಬೇರೆ. ಚರ್ಚೆ ಮಾಡುವ ದೃಷ್ಟಿಯಿಂದ ವಿಷಯ ಸಮಿತಿಯಲ್ಲಿ ಇಲ್ಲದವರಿಗೂ ಚರ್ಚೆಗೆ ಅವಕಾಶ ಕೊಡಬೇಕಾಗುತ್ತದೆ, ವಿಷಯ ಸಮಿತಿಯಲ್ಲಿ ಇದ್ದವರಿಗೂ ಚೆನ್ನಾಗಿ ವಿಷಯವನ್ನು ಬಲ್ಲವರೂ ಸಹ ಚರ್ಚೆ ಮಾಡಬೇಕಾಗಿರುತ್ತದೆ. ನಿಮ್ಮ ಮತ್ತು ನಮ್ಮ ಪಕ್ಷದಲ್ಲಿ ನಾವು ಚರ್ಚೆ ಮಾಡಲು ಯಾರ್ಯಾರಿಗೆ ಅವಕಾಶ ಕೊಡಬೇಕು ಎಂಬುದು ಪಕ್ಷಕ್ಕೆ ಸಂಬಂಧಪಟ್ಟ ವಿಚಾರ.

Mr. SPEAKER : I am sure my learned friend Mr. Nage Gowda would appreciate ಯಾವ ಸದಸ್ಯರು ವಿಷಯ ಸಮಿತಿಯಲ್ಲಿ ಭಾಗವಹಿಸಿರುತ್ತಾರೆ ಅವರು ಇಲ್ಲಿ ಬಂದು ಮಾತನಾಡಲು they will be on a better footing ಮೊದಲು ಏನಾಗುತ್ತಿದ್ದೆಂದರೆ ವ್ಯಾಕ್ಯೂಮ್ನಲ್ಲಿ ಬಂದು ಅವರಿಗೆ ತೋಚಿದ್ದ ಒಂದೆರಡು ವಿಚಾರವನ್ನು ಜನರಲ್ ಮಾಹಿತಿಯ ಮೇಲೆ ಮಾತನಾಡುತ್ತಿದ್ದರು. ಈಗ ಅವರಿಗೆ ದೊರಕಿರುವ opportunity to scrutinise the budget of each demands ಈ ಅನುಕೂಲ ಮೊದಲು ಇರಲಿಲ್ಲ. In the light of the experience, the member will be on a better footing to participate in the proceedings.

There fore,

3.20 ಪಿ.ಎಂ.

ನಮ್ಮ ಡಿಬೇಟ್ಸ್ ಕ್ವಾಲಿಟಿ ಇನ್ನಷ್ಟು ಇಂಪ್ರೂವ್ ಆಗುತ್ತದೆಯೇ ಹೊರತು ಇದರಿಂದ ತೊಂದರೆ ಏನೂ ಆಗುವುದಿಲ್ಲ, ನೀವು ಹೇಳಿದ ಒಂದು ಸಲಹೆ ಏನೆಂದರೆ ಡೂಪ್ಲಿಸಿಟಿ ಆಫ್ ವರ್ಕ್ ಆಗಿ ಟೈಂ ವೇಸ್ಟ್ ಆಗುತ್ತದೆ. ಅದು ಹಾಗೆ ಆಗದಂತೆ ನೋಡಿಕೊಳ್ಳಿ ಎಂದು ತಮ್ಮ ಅನುಭವ ಹೇಳಿದಿರಿ.

ಶ್ರೀ ಜೆ.ಹೆಚ್. ಪಟೇಲ್ : ನಾವು ಈಗ ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಹೋಗೋಣ. ವಿಷಯ ಸಮಿತಿಯ ಸದಸ್ಯರಿಗೆ ಯಾವ ವಿಷಯ ಚೆನ್ನಾಗಿ ತಿಳಿದಿದೆಯೋ ಅದನ್ನು ಸದನಕ್ಕೆ ಹೇಳಿ ಬೇರೆ ಸದಸ್ಯರಿಗೆ ಮಾರ್ಗದರ್ಶನ ಮಾಡಲಿ. ಅವರು ಇರಿಗೇಷನ್ ಮೇಲೆ ಹೋಗುವುದು, ಟೂರಿಸಂ ಮೇಲೆ ಹೋಗುವುದು, ಹಾಗಾಗಬಾರದು. ಅಲ್ಲಿ ಡೂಪ್ಲಿಕೇಷನ್ ಮತ್ತು ಡೂಪ್ಲಿಸಿಟಿ ಆಗಿ, ಪುನರಾವರ್ತನೆಯಾಗಬಾರದು.

ಅಧ್ಯಕ್ಷರು : ವಿಷಯ ಸಮಿತಿಗಳು ಇಲ್ಲದೆ ಇದ್ದಾಗ ಮೊದಲು ಚರ್ಚೆ ಮಾಡುವಾಗ ನೀರಾವರಿ, ಕೊನೆಗೆ ಹೋಗುತ್ತಾ ಹೋಗುತ್ತಾ ಅಧ್ಯಕ್ಷರು ಟೈಂ ನೋಡುತ್ತಾ 3 ನಿಮಿಷ ಎನ್ನುತ್ತಿದ್ದರು. ಸದಸ್ಯರು ನಮ್ಮ ಊರು ಕಾಲುವೆ ಎಂದು ಹೇಳುವುದರಲ್ಲಿ ಅವರು ಗಂಟೆ ಹೊಡೆಯೋರು.

ಶ್ರೀ ಕೆ.ಎನ್. ನಾಗೇಗೌಡ : ತಾವು ಹೇಳಿದ್ದು ಒಪ್ಪುತ್ತೇನೆ. ವಿಷಯ ಸಮಿತಿಗೆ ಹೋದರೆ ವಿಷಯ ಚೆನ್ನಾಗಿ ತಿಳಿದುಕೊಂಡು ನೇರವಾಗಿ ರಿಲೆವೆಂಟ್ ಪೋರ್ಷನ್ ರೆಪ್ರಸೆಂಟ್ ಮಾಡಬಹುದೆಂದು ತಾವು ಏನು ಅಡ್ವೈಸ್ ಮಾಡಿದಿರಿ ಅದು 100 ಪರ್ಸೆಂಟ್ ಕರೆಕ್ಟ್. ಕೆಲವು ಸಂದರ್ಭದಲ್ಲಿ 37 ಮಂದಿ ಪ್ರಧಾನ ಇಂಜಿನಿಯರ್ಗಳು ಇದ್ದರೆ ವಿಷಯ ಸಮಿತಿ 12 ಜನರನ್ನು ಮಾತ್ರ ಸಲಹೆ ಮಾಡುತ್ತದೆ. ಕೆಲವು ಸಮಯದ ನಂತರ ನಾವು ಏನು ಮಾಡುತ್ತೇವೆಂದರೆ ಇಲ್ಲ, ಇಲ್ಲ, 37 ಮಂದಿ ಪ್ರಧಾನ ಇಂಜಿನಿಯರ್ಗಳು ಇರತಕ್ಕದ್ದು ಸರಿ, 12 ಜನ ಇರತಕ್ಕದ್ದು ಸರಿಯಲ್ಲವೆಂದು ಹೇಳುತ್ತೇವೆ. 37 ಹುದ್ದೆಗಳು ಇರುತ್ತವೆ ಅಂದಾಗ ಅಲ್ಲಿ ಒಪ್ಪಿಕೊಳ್ಳುವುದು,ಇಲ್ಲಿ ಒಪ್ಪಿಕೊಳ್ಳದೆ ಇರುವುದು. ಇಲ್ಲಿ ಒಪ್ಪಿಕೊಳ್ಳುವುದು ಅಲ್ಲಿ ಒಪ್ಪದೆ ಇರುವುದು. ಈ ರೀತಿ ಭಿನ್ನಾಭಿಪ್ರಾಯಗಳಿಗೆ ಅವಕಾಶವಾಗುತ್ತದೆ.

Mr. Speaker : Inconsistency is the prerogative of the politicians, Politicians cannot be consistent about their statement, or about their actions etc.,

ಶ್ರೀ ಕಾಗೋಡು ತಿಮ್ಮಪ್ಪ : ಒಂದು ಅರ್ಥ ಇದು ಏನು ಕೊಡುತ್ತದೆಂದರೆ ವಿಷಯ ಸಮಿತಿಗಳು ಕೊಟ್ಟಂಥ ವರದಿಯನ್ನು ಸರ್ಕಾರಗಳು ಬಹಳ ಲಘುವಾಗಿ ಕಾಣುತ್ತಿವೆ.

ಅಧ್ಯಕ್ಷರು : ಅವರು ಹೇಳಿದ್ದುದು ಇದೇ ವರ್ಷನ್.

ಶ್ರೀ ಕಾಗೋಡು ತಿಮ್ಮಪ್ಪ : ಅದೇ ವಿಷಯ ತಾವು ಹೇಳಿದಿರಿ, ಒಪ್ಪುತ್ತೇವೆ. ವಿಷಯ ಸಮಿತಿ ಚರ್ಚೆಯಲ್ಲಿ ಭಾಗವಹಿಸಿ ಇಲ್ಲಿಗೆ ಬಂದ ಮೇಲೆ ವಿಷಯವನ್ನು ಸಮರ್ಥನೀಯವಾಗಿ ಮಂಡಿಸುವುದಕ್ಕೆ ಅವಕಾಶವಾಗುತ್ತದೆ. ಬೆಟರ್ ಫುಟಿಂಗ್ ಇರುತ್ತದೆ, ಅದರಲ್ಲಿ ಭಿನ್ನಾಭಿಪ್ರಾಯ ಇಲ್ಲ. ಅದನ್ನು ನಾನು ಒಪ್ಪುತ್ತೇನೆ. ವಿಷಯ ಸಮಿತಿ ಮಾಡಿದ ಉದ್ದೇಶ ಏನೆಂದರೆ ವಿಷಯ ಸಮಿತಿ ಸಣ್ಣದಾಗಿದ್ದರೂ ದೀರ್ಘವಾಗಿ ಹೋಗಿ ಅಲೋಚನೆ ಮಾಡಿ ಒಂದು ವರದಿಯನ್ನು ಕೊಟ್ಟಮೇಲೆ ಅ ವರದಿಯನ್ನು ಸರ್ಕಾರಗಳು ತತ್ವಶಃ ಅಕ್ಷರಶಃ ಒಪ್ಪಿ ಕೆಲಸ ಮಾಡತಕ್ಕ ಒಂದು ವಾತಾವರಣ ಮತ್ತು ಸಂಪ್ರದಾಯವನ್ನು ನಾವು ಸೃಷ್ಟಿ ಮಾಡಬೇಕು. ಇಲ್ಲದಿದ್ದರೆ ವಿಷಯ ಸಮಿತಿಗಳಿಗೆ ಅರ್ಥವಿಲ್ಲ, ಗಂಧವಿಲ್ಲ, ಅದನ್ನು ಕೈ ಬಿಡುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ.

ಅಧ್ಯಕ್ಷರು : ಈ ಪದ್ಧತಿ ಪ್ರಾರಂಭವಾದ ಮೇಲೆ ಎರಡು ವರ್ಷ ಅಧಿಕಾರದಲ್ಲಿದ್ದವರು ನೀವು. ಅವರು ಬಂದಮೇಲೆ ಮೊದಲನೇ ಅವಕಾಶ ಅವರಿಗೆ ಸಿಗುತ್ತಿರುವುದು. ಈ ವರದಿಯನ್ನು ಜಾರಿಗೆ ತರುತ್ತೇವೆ ತರುವುದಿಲ್ಲವೆಂದು ನಿಮ್ಮ ಅನುಭವವನ್ನು ಅವರ ಮೇಲೆ ಹಾಕಿದರೆ ಅವರು ಏನು ಮಾಡಬೇಕು?

ಶ್ರೀ ಕಾಗೋಡ ತಿಮ್ಮಪ್ಪ : ಈಗ ಹೊಸ ಪದ್ಧತಿಯನ್ನು ಅನುಸರಿಸಿದ್ದೇವೆ. ಎರಡು ವರ್ಷಗಳಲ್ಲಿ ನನಗೆ ಆದ ಅನುಭವ ಏನೆಂದರೆ, ವಿಷಯ ಸಮಿತಿಗಳು ಬಂದು ನಮ್ಮ ಬೇಡಿಕೆಗಳ ಮೇಲೆ ಚರ್ಚೆ ನಡೆಯುತ್ತಿಲ್ಲ, ಒಂದು ಕಾಲದಲ್ಲಿ 23-24-27 ದಿನಗಳನ್ನು ಬೇಡಿಕೆಗಳಿಗೋಸ್ಕರ ಸಮಯವನ್ನು ತೆಗೆದುಕೊಂಡು ಚರ್ಚೆ ಮಾಡಿದ ಸಂದರ್ಭಗಳು ಉಂಟು. ಬಂದು ಬಂದು ಎಲ್ಲಿಗೆ ಬಂತು ಎಂದರೆ

13-12-8 ದಿನಗಳಿಗೆ ಬೇಡಿಕೆಗಳ ಮೇಲೆ ಚರ್ಚೆ ಬಂದಿದೆ. ಆದುದರಿಂದ ನನಗೆ ಸಂಶಯ ಕಾಡುತ್ತಿರುವುದು ಈ ವಿಷಯ ಸಮಿತಿಗಳು ಅಸ್ತಿತ್ವಕ್ಕೆ ಬಂದ ಮೇಲೆ ನಮ್ಮ ಬೇಡಿಕೆಗಳ ಮೇಲೆ ಸದನದಲ್ಲಿ ಚರ್ಚೆ ಪರಿಪೂರ್ಣವಾಗಿ ಆಗುತ್ತಿಲ್ಲ. ತನ್ನ ಪ್ರಾಮುಖ್ಯತೆಯನ್ನು ಕಳೆದು ಕೊಳ್ಳುತ್ತಿದೆ ಎಂಬ ಸಂಶಯ ನನಗೆ ಕಾಣುತ್ತಿದೆ. ತಾವು ನಮ್ಮ ಹಕ್ಕುಬಾಧ್ಯತೆಗಳನ್ನು ರಕ್ಷಿಸತಕ್ಕವರು.

ಅಧ್ಯಕ್ಷರು : 23-24 ದಿನಗಳ ಕಾಲ ಬೇಡಿಕೆಗಳ ಮೇಲೆ ಚರ್ಚೆಯಾಗುತ್ತಿದ್ದ ಅವಧಿಯಲ್ಲಿ ಕೂಡ ನನಗೆ ಗೊತ್ತಿದ್ದ ಹಾಗೆ 5-6 ಜನರಿಗೆ ಮಾತ್ರ ಸಮಯ ಸಿಗುತ್ತಿತ್ತು.ಉಳಿದವರಿಗೆ 3-3 ನಿಮಿಷ ಸಿಗುತ್ತಿತ್ತು. ಈಗ ವಿಷಯ ಸಮಿತಿಯಲ್ಲಿ ಪಾಲ್ಗೊಳ್ಳುವುದಕ್ಕೆ ಸದಸ್ಯರಿಗೆ ಸಿಗತಕ್ಕ ಅವಕಾಶವನ್ನು ಲೆಕ್ಕಕ್ಕೆ ತೆಗೆದುಕೊಂಡು ಈಗ ನಾವು ಮೀಸಲಿಟ್ಟಿರತಕ್ಕ ಸಮಯವನ್ನು ತೆಗೆದುಕೊಂಡರೆ ಸಾಕಷ್ಟು ಸುಧಾರಿಸಿದೆ. ಇದನ್ನು ತಾವು ಒಪ್ಪಬಹುದು.

ಶ್ರೀ ಕಾಗೋಡು ತಿಮ್ಮಪ್ಪ : ಹಾಗಿದ್ದ ಮೇಲೆ ಈ ಸದನದಲ್ಲಿ ಚರ್ಚೆಯಾಗತಕ್ಕ ವಿಷಯಗಳು ವಿಷಯ ಸಮಿತಿಯ ಮುಂದೆ ಚರ್ಚೆಯಾಗುವುದರಿಂದ ವಿಷಯಕ್ಕೆ ಹೆಚ್ಚಿಗೆ ಮಹತ್ವ ಕೊಟ್ಟಿದೆ ಮತ್ತು ಹೆಚ್ಚು ಅರ್ಥಪೂರ್ಣವಾಗಿ ಚರ್ಚೆಯಾಗಿದೆ ಎಂದು ಹೇಳಿದ ಮೇಲೆ ಸರ್ಕಾರಗಳು ಅವುಗಳನ್ನು ತತ್ವಶಃ ಸಂಪೂರ್ಣ ಒಪ್ಪಿಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು : ಅದಕ್ಕೆ ಅವರು ಉತ್ತರ ಹೇಳುತ್ತಾರೆ.

Sri. H.N. NANJEGOWDA : Sir, I refer to rule 304 of Rules of procedure. It reads:

'The reports of the Subject Committees shall have persuasive value and shall be treated as considered advice given by the Committees'.

ಅಷ್ಟಕ್ಕೆ ಸೀಮಿತ ಇದರ ವರದಿ. ಇಲ್ಲಿ ಚರ್ಚೆಮಾಡುವುದು ಬೇರೆ ಆಯಿತು. ಡಿಮ್ಯಾಂಡ್ಸ್ ಮೇಲೆ ಚರ್ಚೆಯಾಗಲೇಬೇಕಾಗುತ್ತದೆ.

Mr. SPEAKER : For any Government which is sensitive to the recommendations of the House, visa-vis the Committee- that provision is enough if it is to be taken as a considered advice, which should have sufficient bearing on the Government. If the Government which doesn't want to agree for the recommendations that is a different thing but we have no reason to infer that this Government would treat the recommendations like that. Let us hope that they whould take the recommendations of the Subject Committee with all seriousness.

ಶ್ರೀ ಜೆ.ಹೆಚ್. ಪಟೇಲ್ : ಸರ್ಕಾರದ ಕೆಲವು ಕಷ್ಟಗಳನ್ನು ಹೇಳಬೇಕಾಗುತ್ತದೆ. ಮಾನ್ಯ ತಿಮ್ಮಪ್ಪನವರು ಹೇಳಿದ ಹಾಗೆ ಮಿನಿಸ್ಟ್ರಿ ವೈಸ್ ಡಿಮ್ಯಾಂಡ್ ಇದ್ದಾಗ ತಾವು ಇದ್ದಿರಿ, ನಾನು ಇದ್ದೆ ನಾವು ಡಿಮ್ಯಾಂಡ್ ಬಗ್ಗೆ ಕನ್ವೆನ್ ಯಾರ್‍ಯಾರು ಯಾವ್ಯಾವ ಪಾರ್ಟಿಯವರು ಮಾತನಾಡಬೇಕೆಂದು, ಎಲೆಕ್ಟ್ರಿಸಿಟಿ ಬಗ್ಗೆ ಯಾರು ಮಾತನಾಡಬೇಕು, ಇರಿಗೇಷನ್ ಬಗ್ಗೆ ಯಾರು ಮಾತನಾಡಬೇಕು, ರೆವಿನ್ಯೂ ಬಗ್ಗೆ ಯಾರು ಮಾತನಾಡಬೇಕೆಂದು ಇದ್ದಾಗ ನಮ್ಮ ಇಲಾಖೆಗೆ ತಕ್ಕ ಹಾಗೆ ಇಡೀ ದಿನ ಕುಳಿತು ಚರ್ಚೆ ಮಾಡುತ್ತಿದ್ದೆವು, ಈಗ ಒಂದು ದಿನ ಎಜುಕೇಷನ್ನಿಂದ ಶುರುವಾಗಿ ತೋಟಗಾರಿಕೆಗೆ ಹೋಗಿ ಅಲ್ಲಿಂದ ಮೀನುಗಾರಿಕೆಗೆ ಬಂದು ಕೊನೆಗೆ ಕೊಜೆಂಟ್ರಿಕ್ಸ್

ಬಂದರೆ ನಾನು ಏನು ಹೇಳಲಿ? This is really my difficulty. Since you can understand the difficulty,...

Sri KAGODU THIMMAPPA : It is an advice which really has got due regard,.....

ಅದಕ್ಕೋಸ್ಕರ ಅಧ್ಯಕ್ಷರು ಇದ್ದಾರೆ, ಸರ್ಕಾರ ಇದೆ, ಸಲಹಾ ಸಮಿತಿ ಇದೆ.

ಶ್ರೀ ಎಂ.ಸಿ. ನಾಣಯ್ಯ : ವಿಷಯ ಸಮಿತಿಗಳು ಬಂದಮೇಲೆ ಈ ಸದನದ ಮತ್ತು ಆ ಸದನದ ಎಲ್ಲಾ ಸದಸ್ಯರಿಗೆ ಪ್ರತಿಯೊಂದು ಇಲಾಖೆಯ ವಿಚಾರಗಳ ಬಗ್ಗೆ ಚರ್ಚೆ ಮಾಡಿ ಕಳೆದ ವರ್ಷ ಬಜೆಟ್ನಲ್ಲಿ ಮಾಡಿರತಕ್ಕ ಕೆಲಸ, ಈ ವರ್ಷದ ಬಜೆಟ್ಟಿನಲ್ಲಿ ನಮೂದಿಸಿರತಕ್ಕದ್ದನ್ನು ಅವರು ಎಕ್ಸರೇ ಮಾಡತಕ್ಕದ್ದಕ್ಕೆ ಒಂದು ಅವಕಾಶದ ಜೊತೆಗೆ ಯಾವ ಯಾವ ಬಾಬಿಗೆ ಹಣ ತೊಡಗಿಸಿರುತ್ತೇವೆ ಆ ಬಾಬುಗಳಿಗೆ ಕಳೆದ ವರ್ಷದ ಅನುಭವದ ಅಧಾರದ ಮೇಲೆ ಈ ವರ್ಷ ಆ ಬಾಬಿಗೆ ಹಣ ಒದಗಿಸಿರತಕ್ಕದ್ದು, ಅದು ಬೇಡ ಇನ್ನೊಂದು ಬಾಬಿಗೆ ಕೊಡಿ ಎಂದು ಹೇಳತಕ್ಕದ್ದು ಮತ್ತು ಕೆಲವು ಸಂದರ್ಭದಲ್ಲಿ ಹೆಚ್ಚಿಗೆ ಹಣವನ್ನು ಯಾವುದೋ ಇನ್ನೊಂದು ಬಾಬಿಗೆ ಹೆಚ್ಚಿಗೆ ಕೊಡಿ ಎಂದು ಸರ್ಕಾರಕ್ಕೆ ಸಲಹೆ ಕೊಟ್ಟಾಗ ನಾವು ತಾತ್ವಿಕವಾಗಿ ಒಪ್ಪುತ್ತೇವೆ. ಆದರೆ ಅದನ್ನು ಕಾರ್ಯಾಚರಣೆಗೆ ತರಬೇಕಾದ ಸಂದರ್ಭ ಬಂದಾಗ ತಮಗೆ ಗೊತ್ತಿದೆ ಅಧ್ಯಕ್ಷರೆ, ರಿಸೋರ್ಸಸ್ ಯಾವುದು ಇದೆ, ಎಷ್ಟಿದೆ ಆ ರಿಸೋರ್ಸ್‌ಗೆ ಒಳಪಟ್ಟು ಕೆಲಸ ಮಾಡಬೇಕಾಗುತ್ತದೆ. ಬಜೆಟ್ ಮಂಡನೆ ಮಾಡುವಾಗ ರೆವಿನ್ಯೂ ಮತ್ತು ಎಕ್ಸ್‌ಪೆಂಡಿಚರ್ ಎರಡನ್ನೂ ಮಾಡಿ ಆ ರೆವಿನ್ಯೂ ಒಳಗೆ ನಾವು ಕೆಲಸ ಮಾಡಬೇಕಾದ ಪರಿಸ್ಥಿತಿ ಬಂದಾಗ ಬಹುಶಃ ಅವರು ರೆಕ್ಮೆಂಡೇಷನ್ ಮಾಡುತ್ತಿರತಕ್ಕದ್ದು ಎಲ್ಲಾ ಇಲಾಖೆಗಳಿಗೆ ಸಾವಿರ ಕೋಟಿ ರೂಪಾಯಿ ಜಾಸ್ತಿ ಬಂದಾಗ ಕೆಲವು ಸಂದರ್ಭದಲ್ಲಿ ನಾವು ಹೇಳತಕ್ಕದ್ದು ರಿಸೋರ್ಸ್‌ಗೆ ಒಳಪಟ್ಟು ನಾವು ಈ ಕೆಲಸ ಮಾಡುತ್ತೇವೆಂದು ಹೇಳತಕ್ಕದ್ದು.

ರೆಕಮಂಡೇಷನ್ ಮಾಡಿರತಕ್ಕದ್ದು ಈ ಸದನ ಚರ್ಚೆ ಮಾಡಿ ಆದಮೇಲೆ Government should ensure to see that many of the recommendations are accepted, but subject to one condition-availability of resources.

ಶಾಶ್ವತವಾಗಿ ಚರ್ಚೆ ಮುಂದೆ ನೆಡೆಯುತ್ತದೆ. ತಾವು ಕೂಡ ಹಿಂದೆ ಇದನ್ನು ವಿಚಾರ ಮಾಡಿ ವಿಷಯ ಸಮಿತಿಯಲ್ಲಿ ಭಾಗವಹಿಸತಕ್ಕವರು ಇಲ್ಲಿ ಚರ್ಚೆಯಲ್ಲಿ ಭಾಗವಹಿಸಬಾರದೆಂದು ಹೇಳತಕ್ಕ ಒಂದು ನಿಯಮವೇನು ಇಲ್ಲ, ಆದುದರಿಂದ ಮಾತನಾಡತಕ್ಕ ಸಂದರ್ಭದಲ್ಲಿ ಸದನದಲ್ಲಿ ಎಲ್ಲರೂ ಕೂರಬೇಕಾಗುತ್ತದೇ. ತಾವು ಎತ್ತಿರತಕ್ಕ ವಿಚಾರದಲ್ಲಿ 708 ಇಲಾಖೆಗಳಿಗೆ ಸಂಬಂಧಪಟ್ಟಿರತಕ್ಕದ್ದು ಇದ್ದಾಗ ಸದನದಲ್ಲಿ ನಾವೆಲ್ಲರೂ ಕುಳಿತು ಕೇಳಬೇಕಾಗುತ್ತದೆ. ಯಾರ ಯಾರ ವಿಷಯ ಯಾವ ಯಾವ ಸಂದರ್ಭಕ್ಕೆ ಬರುತ್ತದೆಂದು ಅದನ್ನು ಕೇಳಿಕೊಂಡು ಆ ಕೆಲಸ ಮಾಡಬೇಕಾದ ಪರಿಸ್ಥಿತಿಯಲ್ಲಿ ತಾವು ತೆಗೆದುಕೊಂಡಿರತಕ್ಕ ತೀರ್ಮಾನ ಕೇವಲ ಎರಡು ವರ್ಷವಾಗಿದೆ. ಮುಂದಿನ ಅನುಭವದಲ್ಲಿ ಯಾವ ರೀತಿ ಮಾಡೋಣವೆಂದು ನಾವು ಹೋಗೋಣ.

ಅಧ್ಯಕ್ಷರು : ಮಾನ್ಯ ಉಪ ಮುಖ್ಯ ಮಂತ್ರಿಗಳು ಏನು ಹೇಳಿದರು, ಎಲ್ಲಾ ವಿಷಯ ಸಮಿತಿಗಳ ವರದಿಗಳನ್ನು ಓಟಿಗೆ ಹಾಕಿ ಎಂದು. ಪ್ರಾರಂಭದಲ್ಲಿ ನಾವು ಈ ಸಲ ಅಧಿವೇಶನವನ್ನು ಪ್ರಾರಂಭ ಮಾಡಿದಾಗ ಸದನದ ಕಾರ್ಯಕಲಾಪಗಳ ಸಮಿತಿ ಸೇರಿದಾಗ ತತ್ವಶಃ ಒಂದು ನಿರ್ಣಯಕ್ಕೆ ಬಂದೆವು ವಿಷಯ ಸಮಿತಿಗಳ ವರದಿಗಳನ್ನು ಚರ್ಚೆ ಮಾಡಬೇಕು ಎಂದು. ಚರ್ಚೆ ಮಾಡುವುದಕ್ಕೆ ಎಷ್ಟು ದಿನ ಬೇಕು, ಎಷ್ಟು ವರದಿಗಳನ್ನು ಚರ್ಚೆ ಮಾಡಬೇಕೆಂಬ ತೀರ್ಮಾನಕ್ಕೆ ಬಂದೆವು. ಅನಂತರ ಒಂದೊಂದು

ವಿಷಯ ಸಮಿತಿ ವರದಿಯನ್ನು ಒಂದೊಂದು ದಿನ ಚರ್ಚೆ ಮಾಡುವುದೆಂದು ಶಂಕರ್ನಾಯಕ್ ಅವರು ಹೇಳಿದಂತೆ ಕಾರ್ಯಕ್ರಮ ರೂಪಿಸಿದ್ದು ಆಯಿತು. ಆದರೆ ನಮ್ಮ ಕೈಮೀರಿ ಸದನದ ಸಮಯ ವ್ಯರ್ಥವಾದುದರಿಂದ ನಾವು ಆಲೋಚನೆ ಮಾಡಿದಷ್ಟು ಸಮಯ ನಮಗೆ ಸಿಗದೆ ಹೋದುದರಿಂದ ಎಲ್ಲವನ್ನು ಕ್ಲಬ್ ಮಾಡುತ್ತಾ ಹೋದೆವು. ಮೊದಲು ಬೇಡಿಕೆಗಳ ಮೇಲೆ ಚರ್ಚೆ ಮಾಡುವಾಗ ಮಾನ್ಯ ತಿಮ್ಮಪ್ಪನವರಿಗೆ ನೆನಪಿರಬಹುದು, 8-10 ಬೇಡಿಕೆಗಳನ್ನು ಒಟ್ಟಿಗೆ ತೆಗೆದುಕೊಂಡಾಗ ಕೋಟಿಗಟ್ಟಲೆ ಹಣದ ಬೇಡಿಕೆಗಳನ್ನು ಧರಣಿ ಗಲಾಟೆ ಮಾಡಿದಾಗ ಗಿಲೋಟಿನ್ ಮಾಡಿದ್ದು ಉಂಟು. ಈ ಎಲ್ಲ ಪರಿಚಯ ತಮಗಿದೆ. ಆ ಎಲ್ಲಾ ಪರಿಚಯ ನಿಮಗಿದೆ. ನೀವು ಅದರಲ್ಲಿ ಸಕ್ರೀಯವಾಗಿ ಭಾಗವಹಿಸಿರುವುದರಿಂದ ಈಗ ಮತ್ತೆ ಪ್ರಸ್ತಾಪ ಬೇಡ. ವಾಟಾಳರೆ, ತಾವು ಯಾರಿಗೂ ಈಲ್ಡ್ ಆಗಬೇಡಿ. ಆಮೇಲೆ ಈ ಟೈಮೆಲ್ಲಾ ನಿಮ್ಮ ಲೆಕ್ಕಕ್ಕೆ ಹಾಕಿ ಇಷ್ಟು ಟೈಮ್ ತೆಗೆದುಕೊಂಡರು ಎಂದು ಹೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ನಮ್ಮ ಲೆಕ್ಕಕ್ಕೆ ಹಾಕಬೇಡಿ ದಯವಿಟ್ಟು.

ಅಧ್ಯಕ್ಷರು : ನಾನು ಹಾಕಿಲ್ಲ, ತಾವು ಮುಂದುವರೆಸಿ.

ಶ್ರೀ ವಾಟಾಳ್ ನಾಗರಾಜ್ : ನಾನು ಅದನ್ನೇ ನಾಗೇಗೌಡರಿಗೆ ಹೇಳುತ್ತಿದ್ದೆ ಸ್ವಲ್ಪ ಗೋಪ್ಯವಾಗಿ.

ಅಧ್ಯಕ್ಷರು : ಒಂದು ನಿಮಿಷ, ಅವರೇನೋ ಹೇಳುತ್ತಾರಂತೆ.

ಶ್ರೀಮತಿ ಬಿ.ಟಿ. ಲಲಿತಾನಾಯಕ್ : ಮಾನ್ಯ ಸಭಾಧ್ಯಕ್ಷರೆ, ಒಂದು ವಿಚಾರಸಂಕಿರಣ ನಡೆಯುವಾಗ ಎಷ್ಟು ಜನ ಉಪನ್ಯಾಸಕಾರರು ಇರುತ್ತಾರೆ ಅವರು ಒಬ್ಬರು ಮಾತನಾಡಿದ್ದನ್ನು ಇನ್ನೊಬ್ಬರು ಆಡುವುದಿಲ್ಲ. ಆ ರೀತಿ ಇದ್ದಾಗ ಸಭೆ ಬಹಳ ಶೋಭೆ ಇರುತ್ತದೆ ಮತ್ತು ವಿಷಯಗಳು ಗೊತ್ತಾಗುತ್ತದೆ. ಅದೇ ರೀತಿ ಇಲ್ಲೂ ಕೂಡ ಯಾರು ಪರಿಣಿತರು ಇರುತ್ತಾರೋ ಅವರಿಗೆ ಅವರ ಪಾರ್ಟಿಯವರು ಅವಕಾಶ ಕೊಡುವಂಥದ್ದು ಒಳ್ಳೆಯದು. ತಮ್ಮ ಪಕ್ಷದಲ್ಲಿ ಯಾರು ಈ ವಿಷಯದ ಮೇಲೆ ಉತ್ತಮವಾಗಿ ಬೆಳಕು ಚೆಲ್ಲುತ್ತಾರೆ ಎನ್ನುವುದನ್ನು ಅವರು ಮೊದಲೇ ತೀರ್ಮಾನ ತೆಗೆದುಕೊಂಡು ಕೆಲವರಿಗೆ ಒಂದೊಂದು ವಿಷಯದ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಾಗ ಅನುಕೂಲವಾಗುತ್ತದೆ. ಉದಾಹರಣೆಗೆ ವಾಟಾಳ್ ನಾಗರಾಜ್ ಅವರು ನಮ್ಮ ಇಲಾಖೆಗೆ ಸಂಬಂಧಪಟ್ಟ ಹಾಗೆ ಅವರು ಬಹಳ ಚೆನ್ನಾಗಿ ಬೆಳಕು ಬೀರುವುದಕ್ಕೆ ಸಮರ್ಥರಾಗಿದ್ದಾರೆ. ಹಾಗೆ ಬೇರೆ ಬೇರೆ ಸಾಮರ್ಥ್ಯ ಬೇರೆ ಬೇರೆಯವರಿಗಿದೆ. ಎಲ್ಲರೂ ಎಲ್ಲಾ ವಿಷಯದಲ್ಲೂ ಪರಿಣಿತರಾಗುವುದಕ್ಕೆ ಸಾಧ್ಯವೇ ಇಲ್ಲ. ಆದ್ದರಿಂದ ದಯವಿಟ್ಟು ಆ ರೀತಿ ಒಂದು ಶಿಸ್ತಿಗೆ ಒಳಪಡಿಸುವಂಥದ್ದಾಗಬೇಕು. ಬ್ಲೈಂಡ್ ಆಗಿ ಮಾತನಾಡಬಾರದು. ಅಥವಾ ಚರ್ವಿತಚರ್ವಣ ಆಗಬಾರದು.

ಶ್ರೀ ಚಂದ್ರಶೇಖರ ಸಿ. ಮಾಮನಿ : ಅಧ್ಯಕ್ಷರೆ, ಪರಿಣಿತರಾದವರೇ ಮಾತನಾಡಿದರೆ ಪರಿಣಿತರಾಗದವರು ಪರಿಣಿತರು ಯಾವಾಗ ಆಗುವುದು?

ಅಧ್ಯಕ್ಷರು : ನೀವು ಮೂರು ನಾಲ್ಕು ದಿವಸದಿಂದ ಪರಿಣಿತರೇ. ಈಗ ಮಾತನಾಡುತ್ತಾ ಇದ್ದೀರಲ್ಲ ಹಾಗೇ ಮಾತನಾಡುತ್ತಿದ್ದರೆ ಇನ್ನೊಂದು ಅಧಿವೇಶನಕ್ಕೆ ಪರಿಣಿತರಾಗಿಬಿಡುತ್ತೀರಿ.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ, ಅಧ್ಯಕ್ಷರೇ, ನಾಗೇಗೌಡರಿಗೆ ಸ್ವಲ್ಪ ಗೋಪ್ಯವಾಗಿ ಹೇಳಿದೆ. ನನ್ನ ಭಾಷಣ ಮುಗಿದಮೇಲೆ ನೀವು ಶುರು ಮಾಡಿ, ಏತಕ್ಕೆ ಹೀಗೆ ಮಾಡುತ್ತಿದ್ದೀರಿ ಅಂತ. ನೀವು ಭಾಷಣ ಮಾಡುವುದಕ್ಕೆ ಶುರು ಮಾಡಿದರೆ ಅದಕ್ಕೊಂದು ಮಹತ್ವ ಅಂತ ಹೇಳಿ ಮತ್ತೆ ನನಗೆ ಹೇಳಿದರು. ಮಾನ್ಯ

ಅಧ್ಯಕ್ಷರೇ, ಅಗಲೇ ನಾನು ಮಾತನಾಡುವಾಗ ಹೇಳುತ್ತಿದ್ದೆ ಖಾದ್ರಿ ಶಾಮಣ್ಣನವರ ಪ್ರತಿಷ್ಠಾನಕ್ಕೆ 2 ಲಕ್ಷ ರೂಪಾಯಗಳನ್ನು ಕೊಡಬೇಕೆಂದು ನಾವು ಹೋದವರ್ಷ ಶಿಫಾರಸ್ಸು ಮಾಡಿದ್ದೆವು. ಮತ್ತೆ ಈ ವರ್ಷವೂ 2 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಹೇಳಿದ್ದೆವು. ಈ ಮಧ್ಯೆ ಅವರ ಪ್ರತಿಷ್ಠಾನದ ವಿಚಾರ ಸಂಕಿರಣದಲ್ಲಿ ನಾನು ಮತ್ತೆ ಉಪಮುಖ್ಯಮಂತ್ರಿಗಳು ಇನ್ನೂ ಅನೇಕ ಅತಿಥಿಗಳು ಭಾಗವಹಿಸಿದ್ದೆವು. ಅಲ್ಲಿ ಉಪಮುಖ್ಯಮಂತ್ರಿಗಳು ಒಂದು ಭರವಸೆಯನ್ನು ನೀಡಿದರು. ನಮ್ಮ ಸರ್ಕಾರ ಇದುವರೆಗೂ ನಾವೆಂದೂ ಇದನ್ನು ತಪ್ಪಿಸುವುದಿಲ್ಲ, ಸ್ಪಷ್ಟವಾಗಿ ಕೊಡುತ್ತೇವೆ ಎನ್ನುವ ಮಾತನ್ನು ಹೇಳಿದ್ದರು. ನಾನು ಅದನ್ನೇ ತಮ್ಮ ಮೂಲಕ ಅವರ ಗಮನಕ್ಕೆ ತರುತ್ತಿದ್ದೇನೆ, ನಾಲ್ಕು ಲಕ್ಷ ರೂಪಾಯಿಯನ್ನು ತಾವು ಚಾಚೂತಪ್ಪದೆ ಅವರ ಪ್ರತಿಷ್ಠಾನಕ್ಕೆ ಬಿಡುಗಡೆ ಮಾಡಬೇಕೆಂದು ಸ್ಪಷ್ಟವಾಗಿ ತಮ್ಮನ್ನು ಕಳಕಳಿಯಿಂದ ನಾನು ಮನವಿ ಮಾಡುತ್ತಿದ್ದೇನೆ. ಆದ್ದರಿಂದ ನಾನು ತಮಗೆ ಹೇಳಿದೆ, ಹೋದವರ್ಷ 2 ಲಕ್ಷ ಈ ವರ್ಷ 2 ಲಕ್ಷ ಎರಡೂ ಸೇರಿ 4 ಲಕ್ಷ ಕೊಡಿ ಅಂತ. ತಮಗೆ ಗೊತ್ತಿದೆ ಈ ಪ್ರತಿಷ್ಠಾನ ಬಹಳ ಒಳ್ಳೆಯ ಕೆಲಸ ಮಾಡುತ್ತಿದೆ. ಮತ್ತು ಸಮಾಜದಲ್ಲಿ ಅಪಾರ ಸೇವೆ ಮಾಡಿದಂಥವರು ಖಾದ್ರಿ ಶಾಮಣ್ಣನವರು. ಅದರ ಬಗ್ಗೆ ಇದರಲ್ಲಿ ಚಕಾರ ಎತ್ತದೆ ಸರ್ಕಾರ ಅದನ್ನು ಒಪ್ಪುತ್ತದೆ ಅಂತ ನಾನು ಅಂದುಕೊಂಡಿದ್ದೇನೆ.

ಆ ಹಣವನ್ನು ಬೇಗ ಬಿಡುಗಡೆ ಮಾಡಿ. ಮತ್ತೆ ವಾರ್ತಾ ಇಲಾಖೆಯ ಉಪ ವಿಭಾಗೀಯ ಕಛೇರಿ, ಇದು ಹೆಸರಿಗಷ್ಟೆ ವಿಭಾಗೀಯ ಕಛೇರಿ. ಯಾವ ವ್ಯವಸ್ಥೆಯೂ ಇಲ್ಲ, ಒಂದು ವಾರ್ತಾ ಇಲಾಖೆಗೆ ಇರಬೇಕಾದಂಥ ಕನಿಷ್ಟ ಸೌಲಭ್ಯಗಳೂ ಕೂಡ ಇಲ್ಲ ನಾನು ತಮಗೆ, ವಾರ್ತಾ ಇಲಾಖೆಯ ಸಚಿವರಿಗೆ ಹೇಳುತ್ತಿದ್ದೇನೆ ಕನಿಷ್ಠ ಸೌಲಭ್ಯ ಕೂಡ ಇಲ್ಲ ಆ ಉಪ ವಿಭಾಗೀಯ ಕಚೇರಿಯಲ್ಲಿ, ಸುಮ್ಮನೆ ವಿಭಾಗಾಧಿಕಾರಿ ಇರುತ್ತಾರೆ. ವ್ಯವಸ್ಥೆ ಇಲ್ಲ, ತಮಗೆ ನಾನು ನೇರವಾಗಿ ಹೇಳುತ್ತೇನೆ, ಜಿಲ್ಲೆಯಲ್ಲಿರತಕ್ಕ ವಾರ್ತಾಧಿಕಾರಿಗಳಿಗೆ ಕನಿಷ್ಠ ದೊಡ್ಡ ವಾಹನ ಕೊಡದಿದ್ದರೂ ಜೀಪ್ಗಳನ್ನಾದರೂ ಕೊಡಬೇಡವೆ? ಒಂದೊಂದು ಜಿಲ್ಲಾ ವಾರ್ತಾಧಿಕಾರಿಗೆ ಓಡಾಡುವುದಕ್ಕೆ ಕನಿಷ್ಠ ಜೀಪನ್ನು ಕೊಡುವ ವ್ಯವಸ್ಥೆಯನ್ನು ಈ ಸಾರಿಯಿಂದ..... ತಮ್ಮಲ್ಲಿ ನಾನು ಏನು ಅರಿಕೆ ಮಾಡಿಕೊಳ್ಳುತ್ತಿದ್ದೇನೆ ಅಂದರೆ ಬೇರೆ ಇಲಾಖೆಯ ಅದೇ ದರ್ಜೆಯ ಅಧಿಕಾರಿಗಳಿಗೆ ಸ್ವಲ್ಪ ಹೆಚ್ಚು ಕಡಿಮೆ ಅಂಬಾಸಿಡರ್ ಕಾರ್ಗಳಿವೆ. ನಾನು ಬೇರೆ ಇಲಾಖೆಗೆ ಹೋಲಿಸುವುದಕ್ಕೆ ಹೋಗುವುದಿಲ್ಲ, ವಾರ್ತಾ ಇಲಾಖೆ ಬಹಳ ಪ್ರಾಮುಖ್ಯವಾದಂಥ ಇಲಾಖೆ. ತಮಗೆ ಗೊತ್ತಿದೆ, ಒಬ್ಬ ಮುಖ್ಯ ಮಂತ್ರಿಯಾಗಬಹುದು, ಸಚಿವರುಗಳಾಗಬಹುದು ಆ ಜಿಲ್ಲೆಗೆ ಹೋದನಂತರ ಅವರ ಎಲ್ಲಿ ಹೋಗುತ್ತಾರೆ ಎಲ್ಲಿ ಬರುತ್ತಾರೆ ಪ್ರಚಾರ ವ್ಯವಸ್ಥೆ ಇದನ್ನೆಲ್ಲಾ ಮಾಡತಕ್ಕ ಪ್ರಮುಖವಾದಂಥ ಇಲಾಖೆ ವಾರ್ತಾ ಇಲಾಖೆ.

ಆದ್ದರಿಂದ ನಾನು ಏನು ಹೇಳುತ್ತೇನೆ ಎಂದರೆ ಒಂದು ಜಿಲ್ಲೆಗೆ ಒಬ್ಬ ವಾರ್ತಾಧಿಕಾರಿಗೆ ದೂರವಾಣಿ ವ್ಯವಸ್ಥೆ ಜೊತೆಗೆ ವಾಹನ ವ್ಯವಸ್ಥೆಯನ್ನು ನೀವು ಮಾಡಿದರೆ, ಅನುಕೂಲವಾಗುತ್ತದೆ. ಇಲ್ಲದೇ ಇದ್ದರೆ ಅವರು ಏನು ಮಾಡಬೇಕಾಗುತ್ತದೆ? ನಾವು ಒಂದು ಜಿಲ್ಲೆಯಲ್ಲಿ ಪ್ರವಾಸ ಹೋದಾಗ ನೀವು ಎಲ್ಲವನ್ನೂ ಜಿಲ್ಲಾ ವಾರ್ತಾಧಿಕಾರಿಗೆ ಹೇಳಿರುತ್ತೀರಿ. ಟಿ.ವಿ. ಯವರನ್ನು ಕರೆದುಕೊಂಡು ಬನ್ನಿ ಎಂದು ಹೇಳುತ್ತೀರಿ, ಪತ್ರಕರ್ತರನ್ನು ಕರೆದುಕೊಂಡು ಬನ್ನಿ ಎಂದು ಹೇಳುತ್ತೀರಿ. ಇವೆಲ್ಲವನ್ನೂ ಅವನೊಬ್ಬನೇ ಮಾಡಬೇಕಾಗುತ್ತದೆ. ಆಗ ಅವರಿಗೆ ಓಡಾಡಲಿಕ್ಕೆ ತೊಂದರೆಯಾಗುತ್ತಿದೆ ಈ ದೃಷ್ಟಿಯಿಂದ ನಾನು ತಮಗೆ ಹೇಳುತ್ತಿದ್ದೇನೆ, ನಾನು ಸರ್ಕಾರದ ಅನುಕೂಲಕ್ಕೆ ಹೇಳುತ್ತಿದ್ದೇನೆ. ಆದ್ದರಿಂದ ನೀವು ಜಿಲ್ಲೆಯ ಆ ಅಧಿಕಾರಿಗೆ ಒಂದೊಂದು ವಾಹನ ಸೌಲಭ್ಯ, ಕಡೆಗೆ ಜೀಪನ್ನಾದರೂ ನೀವು ಕೊಡಬೇಕೆಂಬುದು ನನ್ನ ಅತ್ಯಂತ ಕಳಕಳಿಯ ಒತ್ತಾಯ.

ಸ್ವಾಮಿ, ಜಿಲ್ಲಾ ವಾರ್ತಾಧಿಕಾರಿಗಳನ್ನು ಇದುವರೆಗೂ ಮೇಲ್ದರ್ಜೆಗೇರಿಸಿಲ್ಲ. ಹತ್ತಾರು ವರ್ಷಗಳಿಂದ ಹಾಗೆಯೇ ಇಟ್ಟಿದ್ದೇವೆ. ಬೇರೆ ಬೇರೆ ಇಲಾಖೆಯಲ್ಲಿ ಬಡ್ತಿ ಕೊಟ್ಟು ಇಂಥ ಸಂದರ್ಭದಲ್ಲಿ ಮೇಲಕ್ಕೆ ಬಂದಿದ್ದಾರೆ. ವಾರ್ತಾ ಇಲಾಖೆಯಲ್ಲಿ ಆ ಜಿಲ್ಲಾ ವಾರ್ತಾಧಿಕಾರಿಗಳ ಹುದ್ದೆಯನ್ನು ಮೇಲ್ದರ್ಜೆಗೇರಿಸಬೇಕಾದುದು ಕರ್ತವ್ಯ. ಏಕೆಂದರೆ ಜಿಲ್ಲಾ ವಾರ್ತಾಧಿಕಾರಿಗಳು ಎಲ್ಲಾ ಹಿರಿಯ ಅಧಿಕಾರಿಗಳ ಜೊತೆಯಲ್ಲಿ, ಜಿಲ್ಲಾಧಿಕಾರಿಗಳ ಜೊತೆಯಲ್ಲಿ, ಐ.ಎ.ಎಸ್. ಅಧಿಕಾರಿಗಳ ಜೊತೆಯಲ್ಲಿ ಬೇರೆಬೇರೆ ಇಲಾಖೆಯ ಮುಖ್ಯಸ್ಥರ ಜೊತೆಯಲ್ಲಿ ಸರಿಸಮಾನವಾಗಿ ಮಾತನಾಡಬೇಕಾದರೆ, ವ್ಯವಹಾರ ಮಾಡಬೇಕಾದರೆ ಎಲ್ಲಾ ವಿಚಾರದಲ್ಲೂ ಈ ಅಧಿಕಾರಿಯ ದರ್ಜೆಯನ್ನು ಮೇಲ್ದರ್ಜೆಗೇರಿಸತಕ್ಕದ್ದು ಒಳ್ಳೆಯದು. ಮತ್ತು ನಾನು ಈಗಾಗಲೇ ವಾರ್ತಾ ಇಲಾಖೆಗೆ ಪ್ರತಿ ವಿಭಾಗಗಳಿಗೆ ಯುಮ್ಯಾಟಿಕ್ ಕ್ಯಾಮೆರಾ, ತಮಗೆ ಗೊತ್ತಿರಬೇಕು ಅಧ್ಯಕ್ಷರೆ, ಮೊನ್ನೆ ನಮ್ಮ ಮುಖ್ಯಮಂತ್ರಿಗಳು ಪ್ರವಾಸದಲ್ಲಿದ್ದರು. ಅರ್ಜಿಗಳನ್ನು ಸ್ವೀಕಾರ ಮಾಡಿದರು. ಇವೆಲ್ಲವೂ ದೂರದರ್ಶನದಲ್ಲಿ ಪ್ರಸಾರ ಆಗಬೇಕಾದರೆ ನಮ್ಮ ವಾರ್ತಾ ಇಲಾಖೆ ಕ್ಯಾಮೆರಾ ಒಂದರಿಂದ ಸಾಕಾಗಲಿಲ್ಲ, ಇದನ್ನು ತಾವು ಗಮನಿಸಬೇಕು. ಪ್ರತಿಯೊಂದನ್ನು ವಾರ್ತಾ ಇಲಾಖೆಯವರು ಬಾಡಿಗೆಗೆ ಪಡೆದು ಅಲ್ಲಿಂದ ಅದನ್ನು ಚಿತ್ರೀಕರಣ ಮಾಡಿ ದೂರದರ್ಶನಕ್ಕೆ ಕೊಟ್ಟರು. ಇದರಿಂದ ಪ್ರತಿ 20 ಜಿಲ್ಲೆಯ ಮುಖ್ಯಮಂತ್ರಿಗಳ ಪ್ರವಾಸ ನೇರವಾಗಿ ಪ್ರಚಾರ ಆಗತಕ್ಕಂಥದ್ದು. ಈ ಬಾಡಿಗೆ ಕ್ಯಾಮರಾವನ್ನೂ ತೆಗೆದುಕೊಳ್ಳದೇ ವಾರ್ತಾ ಇಲಾಖೆ ಕ್ಯಾಮರಾ ನಂಬಿಕೊಂಡಿದ್ದರೆ ಆಗುತ್ತಿರಲಿಲ್ಲ, ದೂರದರ್ಶನದವರ ಕ್ಯಾಮರಾ ಐದೋ ಮೂರೋ ಇದೆ. ಅವರು ಎಲ್ಲಿಗೋ ಕಳುಹಿಸಿರುತ್ತಾರೆ. ಒಟ್ಟಾರೆ ಮುಖ್ಯಮಂತ್ರಿಗಳ ಪ್ರವಾಸದಲ್ಲಿ, ಮಂತ್ರಿಗಳ ಪ್ರವಾಸದಲ್ಲಿ ಈ ಎಲ್ಲಾ ವ್ಯವಸ್ಥೆ ಆಗಬೇಕಾದರೆ ನನಗನ್ನಿಸುತ್ತದೆ ಕನಿಷ್ಠ ನನಗನ್ನಿಸುತ್ತದೆ ನಾಲ್ಕು ಕ್ಯಾಮರಾಗಳನ್ನಾದರೂ, ಜಿಲ್ಲೆಗೊಂದಲ್ಲದಿದ್ದರೂ ವಿಭಾಗಕ್ಕೆ ಒಂದೊಂದರಂತೆ ನಾಲ್ಕು ನಾಲ್ಕು ಜಿಲ್ಲೆಗೆ, ಮೂರು ಮೂರು ಜಿಲ್ಲೆಗೆ ಒಂದೊಂದು ಯುಮ್ಯಾಟಿಕ್ ಕ್ಯಾಮರಾ ತೆಗೆದುಕೊಳ್ಳಬೇಕು. ಅದು ಎಷ್ಟು ಉಪಯುಕ್ತ ಅಂದರೆ ತಮಗೆ ನಾನು ಹೇಳುತ್ತೇನೆ, ನಿಮ್ಮ ಈ ಅರ್ಜಿ ಸ್ವೀಕಾರದ್ದು ಆಯಾ ಜಿಲ್ಲೆಗೆ ಹೋಗತಕ್ಕ ಎಡಿಷನ್ಗಳೇನಿವೆ ಆ ಪತ್ರಿಕೆಗಳಲ್ಲಿ ಬಂತೇ ಹೊರತು ನೇರವಾಗಿ ಇಡೀ ರಾಜ್ಯದ ಎಲ್ಲಾ ಜನರಿಗೆ ದೂರದರ್ಶನದ ಮೂಲಕ ಆ ಪ್ರಚಾರ ಸಿಕ್ಕಬೇಕಾದರೆ ಈ ಕ್ಯಾಮರಾಗಳ ಅವಶ್ಯಕತೆ ಅತಿ ಮುಖ್ಯ.

ಶ್ರೀ ಕಾಗೋಡು ತಿಮ್ಮಪ್ಪ : 20 ಜಿಲ್ಲೆಗೆ 20 ಬೇಕು.

ಶ್ರೀ ವಾಟಾಳ್ ನಾಗರಾಜ್ : 20 ಜಿಲ್ಲೆಗೆ 20 ಬೇಕು. ದುಡ್ಡಿಲ್ಲ ಎಂದು ಹೇಳುತ್ತಿದ್ದಾರೆ ಈಗ.

ಶ್ರೀ ಕಾಗೋಡು ತಿಮ್ಮಪ್ಪ : ಬರೀ ಮುಖ್ಯಮಂತ್ರಿಗಳ ಕಾರ್ಯಕ್ರಮ ಮಾತ್ರ ಪ್ರೊಜೆಕ್ಟ್ ಆದರೆ ಸಾಕಾಗುವುದಿಲ್ಲ, ಶಾಸನಸಭಾ ಸದಸ್ಯರು, ಲೋಕಸಭಾ ಸದಸ್ಯರು ಅಥವಾ ಇನ್ನಿತರ ಸದಸ್ಯರ ಅಥವಾ ಪ್ರಮುಖವಾದಂಥ ಯಾವುದೇ ಕಾರ್ಯಕ್ರಮ ಸಾರ್ವಜನಿಕವಾಗಿ ನಡೆಯಲ್ಲಿ ಅವುಗಳನ್ನೆಲ್ಲಾ ಟಿ.ವಿ.ಯಲ್ಲಿ ತೋರಿಸಬೇಕಾದರೆ ಜಿಲ್ಲೆಗೊಂದು ಕ್ಯಾಮರಾ ಅವಶ್ಯಕತೆ ಇದೆ. ಬರೀ ಚಾಮರಾಜನಗರದ್ದು ಮಾತ್ರ ಟಿ.ವಿ.ಯಲ್ಲಿ ಬಂದುಬಿಟ್ಟರೆ ಸಾಕಾಗುತ್ತದೆಯೇ?

ಶ್ರೀ ವಾಟಾಳ್ ನಾಗರಾಜ್ : ಈ ತರಹ ಕಿತಾಪತಿ ಮಾಡುವುದರಲ್ಲಿ ಇವರಿದ್ದಾರೆಯೇ ಹೊರತು ವಸ್ತುಸ್ಥಿತಿಯನ್ನು ಅರ್ಥವನ್ನೇ ಮಾಡಿಕೊಳ್ಳುವುದಿಲ್ಲ. ಚಾಮರಾಜನಗರಕ್ಕೆ ವಾರ್ತಾ ಇಲಾಖೆಯವರು ಎಂದೂ ಕ್ಯಾಮರಾವನ್ನು ಕಳುಹಿಸಿಲ್ಲ. ಆ ರೀತಿ ಕ್ಯಾಮರಾ ಕಳುಹಿಸುವ ಹಾಗಿದ್ದರೆ ಪ್ರತಿದಿನ ಕಳುಹಿಸಿ ಎಂದು ಹೇಳುತ್ತಿದ್ದೆ. ತಿಮ್ಮಪ್ಪನವರು ತಿಳಿದುಕೊಂಡಾದರೂ ಕೇಳಿದ್ದರೆ ನಾನು ಹೇಳುತ್ತಿದ್ದೆ. ಚಾಮರಾಜನಗರಕ್ಕೆ

ದೂರದರ್ಶನದವರನ್ನು ಕಾಡಿಬೇಡಿ, ವಾರ್ತಾ ಇಲಾಖೆಯದಲ್ಲ, ನನ್ನ ವರದಿಯಲ್ಲಿ ಅಧ್ಯಕ್ಷರೇ, ನನ್ನ ವರದಿಯಲ್ಲಿ ಹೇಳಿದ್ದೇನೆ ಬರೀ ಮಂತ್ರಿಗಳೇ ಅಲ್ಲ, ಮುಖ್ಯಮಂತ್ರಿಗಳೇ ಅಲ್ಲ ಲೋಕಸಭಾ ಸದಸ್ಯರಲ್ಲ, ಆಯಾ ಕ್ಷೇತ್ರದ ಶಾಸಕರುಗಳು ಹೋಗಿ ನಡೆಸತಕ್ಕಂಥ ಅಭಿವೃದ್ಧಿ ಕಾರ್ಯಕ್ರಮಗಳನ್ನೂ ದೂರದರ್ಶನದಲ್ಲಿ ಪ್ರಸಾರ ಮಾಡತಕ್ಕ ವ್ಯವಸ್ಥೆಯನ್ನು ವಾರ್ತಾ ಇಲಾಖೆಯವರು ಮಾಡಬೇಕು ಎಂದು ನನ್ನ ವರದಿಯಲ್ಲಿ ಸ್ಪಷ್ಟವಾಗಿ ಹೇಳಿದ್ದೇನೆ. ಆ ಒಂದು ಕ್ಯಾಮರಾಕ್ಕೆ 15 ಲಕ್ಷ ರೂಪಾಯಿ ಆಗುತ್ತದೆ. ನಾನು ಈಗಾಗಲೇ ಒತ್ತಾಯ ಮಾಡಿದ್ದೇನೆ, ಬಹಳ ತೀವ್ರವಾಗಿ ಒತ್ತಾಯ ಮಾಡಿದ್ದೇನೆ. ನಾನೂ ತಿಮ್ಮಪ್ಪನವರ ವಾದಕ್ಕೆ ಬರುತ್ತೇನೆ.

ಜಿಲ್ಲೆಗೊಂದು ಕ್ಯಾಮರಾ ಬೇಕೆಂದು ನಾನು ಹೇಳಿದ್ದೇನೆ. ಈ ಸಾರಿ ಮೊದಲನೆ ಹಂತದಲ್ಲಿ ಕೊನೆಗೆ ವಿಭಾಗಕ್ಕೆ ಒಂದರಂತೆ ನಾಲ್ಕೈದು ಕ್ಯಾಮರಾಗಳನ್ನು ತೆಗೆದುಕೊಂಡರೆ ಸಾಮಾನ್ಯವಾಗಿ ಒಂದು ವಾಹನದಲ್ಲಿ ಅಲ್ಲಿ ಇಲ್ಲಿ ಓಡಾಡಿದರೆ ಸ್ವಲ್ಪ 50 ಭಾಗ ಕೆಲಸ ಆಗುತ್ತದೆ. ಆದ್ದರಿಂದ ಸರ್ಕಾರ ಕನಿಷ್ಟ, ನಿಮಗೆ ಏನೇ ಅಡಚಣೆ ಇದ್ದರೂ ಹಣಕಾಸು ಸಚಿವರ ಕಡೆಗೂ ಹೇಳುತ್ತಿದ್ದೇನೆ, ತಮ್ಮ ಕಡೆಗೂ ಹೇಳುತ್ತಿದ್ದೇನೆ ಮಾನ್ಯ ಅಧ್ಯಕ್ಷರ ಮೂಲಕ ಕನಿಷ್ಟ 4 ಕ್ಯಾಮರಗಳನ್ನಾದರೂ ತಾವು ಖರೀದಿ ಮಾಡಿ ಅದಕ್ಕೆ ತಕ್ಕಂತೆ ಸಿಬ್ಬಂದಿ ಕೊಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ : ಕೇಂದ್ರ ಸರ್ಕಾರದಲ್ಲಿ ಆದರೆ 5 ವರ್ಷದ ಪಂಚವಾರ್ಷಿಕ ಯೋಜನೆಗಳ ಕಾರ್ಯಕ್ರಮವಿದೆ. ಹಾಗೆ ದಯವಿಟ್ಟು ಮಾಡಿ ಇವತ್ತು ಒಂದು ವರ್ಷಕ್ಕೆ ಆಗದಿದ್ದರೂ 2 ವರ್ಷದ ಕಾರ್ಯಕ್ರಮ ಹಾಕಿಕೊಂಡು ಈ ವರ್ಷ 10ಟಿ.ವಿ. ಖರೀದಿ ಮಾಡುವುದು ಮುಂದಿನ ವರ್ಷ 10ಟಿ.ವಿ.ಗಳನ್ನು ತೆಗೆದುಕೊಳ್ಳುವುದು ಹಾಗೆ ಮಾಡಿ.

ಶ್ರೀ ವಾಟಾಳ್ ನಾಗರಾಜ್ : ಈಗ ನನ್ನ ಅಭ್ಯಂತರ ಏನೆಂದರೆ ತಾವು ಅದಕ್ಕೆ ಬೆಂಬಲ ಕೊಡುತ್ತೀರಿ. ಏಕೆಂದರೆ ತಮ್ಮ ಕ್ಷೇತ್ರ ಬರುತ್ತದೆ. ಆದ್ದರಿಂದ ಇದರಲ್ಲಿ ನಿಮ್ಮ ಬೆಂಬಲ ತೆಗೆದುಕೊಳ್ಳಬೇಕಾಗುತ್ತದೆ ನಾವು. ಮತ್ತು ನಮ್ಮ ಮಾತು ವಾರ್ತಾ ಸಚಿವರಿಗೆ ಬಹಳ ಅಪ್ಯಾಯಮಾನವಾಗಿರಬೇಕು ಅಂತ ಎನಿಸುತ್ತದೆ. ಏಕೆಂದರೆ ಅವರ ಕೈ ಹಿಡಿದಿತ್ತು. ಆದ್ದರಿಂದ ತಮ್ಮ ಕಡೆಯಿಂದ ಮಾನ್ಯ ಹಣಕಾಸಿನ ಸಚಿವರ ಕಡೆಗೆ ಬರುತ್ತಿದ್ದೇನೆ. ಈ ವಿಚಾರದಲ್ಲಿ ಸ್ವಲ್ಪ ಸಂಘಟನೆ ಮಾಡುತ್ತಿದ್ದೇನೆ. ತಿಮ್ಮಪ್ಪನವರು ಹೇಳಿದ್ದನ್ನು ನಾನು ಪುಷ್ಟೀಕರಣ ಮಾಡುತ್ತೇನೆ. ಈ ವರ್ಷ ಕನಿಷ್ಟ 10 ಕ್ಯಾಮರಗಳನ್ನಾದರೂ ತಾವು ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತಿದ್ದೇನೆ. ಏಕೆಂದರೆ ನಾವು ನಿಮಗೆ ಶಕ್ತಿ ಕೊಡುತ್ತಾ ಇದ್ದೇವೆ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಇಡೀ ಇಲಾಖೆ ಒಂದು ರೀತಿಯ ದನದ ಕೊಟ್ಟಿಗೆ ತರಹ ಮಾಡಿದ್ದಾರೆ. ಆ ಬೆಳಕನ್ನು ವಾರ್ತಾ ಇಲಾಖೆ ಮೂಲಕ ಎಷ್ಟು ಚೆನ್ನಾಗಿ ಚೆಲ್ಲಬೇಕಾಗಿತ್ತೋ... ನಾನೇನು ಅಧಿಕಾರಿಗಳನ್ನು ದೂಷಣೆ ಮಾಡುತ್ತಿಲ್ಲ, ಅಲ್ಲಿರತಕ್ಕಂಥ ಅಧಿಕಾರಿಗಳೇ ಕೊಟ್ಟದ್ದರಲ್ಲೇ ವ್ಯವಸ್ಥಿತವಾಗಿ, ಪ್ರಾಮಾಣಿಕವಾಗಿ ಚಿಂತನೆ ಮಾಡಿ ಕೆಲಸ ಮಾಡುತ್ತಿದ್ದಾರೆ ಎನ್ನತಕ್ಕಂಥದ್ದು ನನ್ನ ಅತ್ಯಂತ ಪ್ರಾಮಾಣಿಕ ಚಿಂತನೆ. ಆದ್ದರಿಂದ ಕ್ಯಾಮರಗಳನ್ನು ಅತಿಬೇಗ ತಾವು ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ನಾನು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಇನ್ನು ಬಜೆಟ್ ವಿಷಯ. ಈ ಸಾರಿ ಬಜೆಟ್‌ನಲ್ಲಿ ಎಷ್ಟು ಹಣ ಇಟ್ಟಿದ್ದಿರೋ ಅದೇ ರೀತಿ ಪ್ರತಿ ವರ್ಷ ಅಷ್ಟೆ ಬಜೆಟ್‌ನಲ್ಲಿ ಇಡುತ್ತಾ ಇದ್ದೀರಿ. 11 ಕೋಟಿ ಹತ್ತೂವರೆ ಕೋಟಿ ಇದೇ ತರಹಃ ಬರುತ್ತದೆ. ಇದು ಅಲ್ಲ, ಈ ವರ್ಷ ಕನಿಷ್ಟ 5 ಕೋಟಿ ರೂಪಾಯಿಗಳನ್ನಾದರೂ ಇಡಬೇಕೆಂದು ಮಾನ್ಯ ಹಣಕಾಸಿನ ಸಚಿವರನ್ನು ನಾನು ನೇರವಾಗಿ ಕೇಳುತ್ತಿದ್ದೇನೆ. ಇದು ಬೆಳೆದರೆ ತಮ್ಮ ಸರ್ಕಾರ, ರಾಜ್ಯದ ಸಾಧನೆ ಇದು ಬೆಳವಣಿಗೆಯಾಗುತ್ತದೆ.

ನಾನು ಇದಕ್ಕೆ 10 ರಿಂದ 15ಕೋಟಿ ರೂಪಾಯಿ ಅಥವಾ ನೂರಾರು ಕೋಟಿ ರೂಪಾಯಿ ಕೊಡಿ ಎಂದು ಕೇಳಲಿಲ್ಲ. ಈ ಇಲಾಖೆಯ ಬೆಳವಣಿಗೆ ಕನಿಷ್ಟ 5 ಕೋಟಿ ರೂಪಾಯಿಗಳನ್ನಾದರೂ ತಾವು ಒದಗಿಸಿಕೊಡುವುದಕ್ಕೆ ಸಹಕಾರ ಮಾಡಬೇಕೆಂದು ಹೇಳಿ ತಮ್ಮನ್ನು ನಾನು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಈ ವಾರ್ತಾ ಇಲಾಖೆಯ ರೀತಿಯಲ್ಲಿಯೇ ಪ್ರತಿ ಇಲಾಖೆಗೂ ಒಬ್ಬೊಬ್ಬ ಜಂಟಿ ವಾರ್ತಾ ನಿರ್ದೇಶಕರನ್ನು ನೇಮಕ ಮಾಡುವಂಥ ಅವಕಾಶವನ್ನು ಮಾಡಿಕೊಡಬೇಕು ತಾವು. ಈಗ ಲೋಕೋಪಯೋಗಿ ಇಲಾಖೆಯಾಗಲಿ, ನೀರಾವರಿ ಇಲಾಖೆಯಾಗಲಿ, ತೋಟಗಾರಿಕೆ ಇಲಾಖೆಯಾಗಲಿ ಈ ಎಲ್ಲಾ ಇಲಾಖೆಗಳಿಗೆ ವಾರ್ತಾ ಅಧಿಕಾರಿಗಳನ್ನು ನೇಮಕ ಮಾಡಿದರೆ ಪ್ರತಿಯೊಂದನ್ನು ನೇರವಾಗಿ ನೀವು ವಾರ್ತಾ ಇಲಾಖೆಗೆ ಸಮಾಚಾರ ಇತ್ಯಾದಿಗಳನ್ನು ಕಳುಹಿಸಿಕೊಡಬೇಕು. ಆದ್ದರಿಂದ ನಿಮ್ಮದೇ ಆದಂಥ ವಾರ್ತಾ ಇಲಾಖೆಯ ಮೂಲಕ ಒಬ್ಬೊಬ್ಬ ಅಧಿಕಾರಿಯನ್ನು ತಾವು ಅಲ್ಲಿ ನೇಮಕ ಮಾಡಿಕೊಂಡರೆ ಇಲಾಖೆಯ ಪ್ರಗತಿಗೆ ಇಲಾಖೆಯ ಪ್ರಚಾರ ದೃಷ್ಟಿಯಿಂದ ಅತಿ ಮುಖ್ಯವಾಗಿ ಅವಶ್ಯಕತೆಯಿದೆಯೆಂದು ನಾನು ತಮಗೆ ಸ್ಪಷ್ಟಪಡಿಸುತ್ತೇನೆ. ಅದನ್ನು ನೇರವಾಗಿ ಪ್ರತಿ ಇಲಾಖೆಯ ಮುಖ್ಯಸ್ಥರಿಗೆ ಹೇಳಿ ಅವರಿಗೆ ತಿಳಿಸಿ ಆದ್ದರಿಂದ ದಯಮಾಡಿ ಪ್ರತಿ ಇಲಾಖೆಗೂ ಒಬ್ಬೊಬ್ಬ ಜಂಟಿ ನಿರ್ದೇಶಕ ಮಟ್ಟದವರನ್ನು ನೇಮಿಸಬೇಕು. ಅತಿಮುಖ್ಯವಾಗಿ ಶಾಸಕಾಂಗ ಇಲಾಖೆಗೆ ಒಬ್ಬರನ್ನು ಮತ್ತು ನಿಮಗೆ ಬರತಕ್ಕಂಥ ನಿಮ್ಮ ಅಧೀನದಲ್ಲಿ ಬರತಕ್ಕಂಥ ಇಲಾಖೆಗೆ ಒಬ್ಬ ಜಂಟಿ ನಿರ್ದೇಶಕು ಇರಬೇಕು. ಅವರಿಗೆ ಪ್ರತಿಯೊಂದು ವ್ಯವಸ್ಥೆ, ಈ ಸದನದಲ್ಲಿ ನಡೆಯತಕ್ಕಂಥದ್ದು, ಸದನಕ್ಕೆ ಸಂಬಂಧಪಟ್ಟಂತಹ ಪ್ರತಿಯೊಂದನ್ನೂ ನೇರವಾಗಿ ಪ್ರಚಾರ ಮಾಡತಕ್ಕಂಥ ವ್ಯವಸ್ಥೆಗೆ ಒಬ್ಬ ವಾರ್ತಾಧಿಕಾರಿ ಇರಬೇಕಾದದ್ದು ಕರ್ತವ್ಯ, ಅದನ್ನು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಜೆ.ಹೆಚ್. ಪಟೇಲ್ : ಪ್ರಚಾರಕ್ಕೆ ಏಕೆ ಸರ್ಕಾರ ಪ್ರಯತ್ನ ಮಾಡಬೇಕು. ಅದಕ್ಕೆ ವಿಚಾರವೂ ಇಲ್ಲ ಆಚಾರವೂ ಇಲ್ಲ ಎಂದು ಒಬ್ಬ ಮಾನ್ಯ ಸದಸ್ಯರು ಹೇಳುತ್ತಿದ್ದರು. ಆದರೆ ಈಗ ಈ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಹೇಳುತ್ತಾ ಇರುವುದು ಈ ಸರ್ಕಾರಕ್ಕೆ ಆಚಾರ ಇದೆ, ವಿಚಾರ ಇದೆ ಆದ್ದರಿಂದ ಸ್ವಲ್ಪ ಪ್ರಚಾರ ಮಾಡಿಕೊಳ್ಳಿ ಎಂದು ಹೇಳುತ್ತಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ : ಆದ್ದರಿಂದ ಅವರು ಹೇಳಿದ ಪ್ರಕಾರ 10 ಪೇಪರ್ಸ್‌ಗೆ ಪೂರ್ತಿ ಪೇಜ್ ಜಾಹಿರಾತು 8 ದಿವಸ ಕೊಟ್ಟುಬಿಟ್ಟರೆ ಒಂದು ಕೋಟಿ ರೂಪಾಯಿ ಆದಾಯ ಆಗುತ್ತದೆ. ನೀವು 5 ಕೋಟಿ ರೂಪಾಯಿ ತೆಗೆದುಕೊಂಡು ಏನು ಮಾಡುವುದಕ್ಕಾಗುತ್ತದೆ. 5 ದಿವಸ ಮಾಡುವುದಕ್ಕಾಗುತ್ತದೆಯೇ ಪಟೇಲರೆ. ಫುಲ್ ಪೇಜ್ ಆರ್ಟಿಕಲ್ ಹಾಕಬೇಕಾದರೆ ಒಂದೂವರೆ ಲಕ್ಷ ರೂಪಾಯಿಂದ 2 ಲಕ್ಷ ರೂಪಾಯಿ ಆಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಪದೇ ಪದೇ ಒಂದು ಫುಲ್ ಪೇಜ್, 2 ಪೇಜ್ 3 ಪೇಜ್ ಕೊಡುವುದಕ್ಕೆ ಆದಾಯ ಎಲ್ಲಿಂದ ತಂದು ಕೊಡಬೇಕು. ನೀವು ಹೇಳುತ್ತಿದ್ದೀರಿ. ಏನೇನು ಮಾತನಾಡಿದ್ದಾರೆ ಎಂದು ಜಾಹೀರಾತು ಕೊಡಬೇಕು ಅಷ್ಟೆ. ಜಾಹೀರಾತು ಕೊಡಬೇಕಾದರೆ ಏನೇನು ಮಾಡಿದ್ದಾರೆ ಎಂಬುದನ್ನಾದರೂ ಬೇಕಲ್ಲ. ಈಗ ಯಾರಾದರೂ ಜಾಹೀರಾತು ಕೊಡುವವರು ನಮ್ಮ ಪ್ರಾಡಕ್ಟ್ ಹೀಗಿದೆ, ಈ ರೀತಿ ಕ್ವಾಲಿಟಿ, ಇಷ್ಟು ಪ್ರಮಾಣ ಇದೆ ಅಂತ ಹೇಳಿ ಜಾಹೀರಾತು ಕೊಡುತ್ತಾರೆ. ಅವರಿಗೆ ಏನೂ ಇಲ್ಲದೆಯೇ ಕೊಡಿ ಕೊಡಿ ಎಂದು ಕೇಳಿದರೆ ಅವರು ಏನು ಕೊಡಬೇಕು? ಅದಕ್ಕೆ ಅವರು ತಡೆಹಿಡಿದು ನೋಡಿರಿ ಅವರ ಪರಿಸ್ಥಿತಿ ಹೇಗೆ ಆಗಿದೆ.

ಅಧ್ಯಕ್ಷರು : ಖರ್ಗೆಯವರೆ, ನಿಮಗೆ ಎಲ್ಲಾ ವಿಚಾರ ಗೊತ್ತಿದೆ ಎಂದು ನಾನು ಸುಮ್ಮನಿದ್ದೆ. ಪಟೇಲರು ಪ್ರಚಾರ ಕೊಡುವುದಕ್ಕೆ ಪ್ರಾರಂಭ ಮಾಡಿದರೆ ಪೇಪರ್ ಎಲ್ಲಿ ಸಾಕಾಗುತ್ತದೆ? ಅವರು ಬೇಡ ಎಂದು ಸುಮ್ಮನಿದ್ದಾರೆ ಅಷ್ಟೆ..... ಅವರದ್ದು ಎಂದರೆ ಅವರ ಸರ್ಕಾರದ್ದು ನಾನು ಹೇಳಿದ್ದುದು.

ಶ್ರೀ ವಾಟಾಳ್ ನಾಗರಾಜ್: ಈ ಇಲಾಖೆಯಲ್ಲಿ ವಾರ್ತಾ ಸಹಾಯಕರು ಎನ್ನತಕ್ಕಂಥ ಹುದ್ದೆ ಇದೆ ಅಧ್ಯಕ್ಷರೆ. ಈ ವಾರ್ತಾ ಸಹಾಯಕರು ಎನ್ನತಕ್ಕಂಥ ನೌಕರರಿಗೆ 15 ವರ್ಷವಾದರೂ ಬಡ್ತಿ ಕೊಟ್ಟಿಲ್ಲ, ಅವರು ಹಾಗೆಯೇ ಇದ್ದಾರೆ. ಅವರನ್ನು ಯಾವ ರೀತಿಯಲ್ಲೂ ಮೇಲ್ದರ್ಜೆಗೆ ಏರಿಸಿಲ್ಲ, ಆದ್ದರಿಂದ ಅದನ್ನು ವಾರ್ತಾ ಇಲಾಖೆಯ ಮಾನ್ಯ ಮಂತ್ರಿಗಳು ಮಾಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಕನ್ನಡ ಚಿತ್ರಗಳಿಗೆ ಸರ್ಕಾರ ಸಹಾಯಧನವನ್ನು ನೀಡುತ್ತಾ ಇದೆ. ಈ ಸಹಾಯಧನ ನೀಡತಕ್ಕಂಥದ್ದು ಕನ್ನಡ ಚಿತ್ರಗಳ ಬೆಳವಣಿಗೆ, ಕನ್ನಡ ಚಿತ್ರೋದ್ಯಮ ಕರ್ನಾಟಕದಲ್ಲಿ ಬೇರೂರಬೇಕು, ಕನ್ನಡ ಚಿತ್ರೋದ್ಯಮದ ಅಭಿವೃದ್ಧಿ ಆಗಬೇಕು ಎನ್ನುವ ದೃಷ್ಟಿಯಿಂದ ಸಹಾಯ ಧನವನ್ನು ಪ್ರಾರಂಭ ಮಾಡಿತು.

3.50 ಪಿ.ಎಂ

ಸ್ವಲ್ಪ ಹೆಚ್ಚು ಕಡಿಮೆ 224 ಚಲನಚಿತ್ರಗಳು ಒಂದು ಹೆಚ್ಚುಕಡಿಮೆ ಇರಬಹುದು. ಇಷ್ಟು ಚಿತ್ರಗಳಿಗೆ ಸಹಾಯಧನವನ್ನು ಇದುವರೆವಿಗೂ ನೀಡಿಲ್ಲ. ಸ್ವಲ್ಪ ಹೆಚ್ಚು ಕಡಿಮೆ 7.5 ಕೋಟಿ ರೂಪಾಯಿ

ಶ್ರೀ ಸಿದ್ಧರಾಮಯ್ಯ : ಎಲ್ಲಿಲ್ಲಿದೆ?

ಶ್ರೀ ವಾಟಾಳ್ ನಾಗರಾಜ್ : ಇಲ್ಲ ಕೊಟ್ಟಿಲ್ಲ, ಇದನ್ನು ಉಳಿಸಿಕೊಂಡು ಹೋದರೆ ಹೇಗೆ? ಒಂದು ನೇರವಾಗಿ ನೀವು ಹೇಳಬೇಕು. ಆ ಸಹಾಯಧನದ ನೀತಿಯನ್ನು ಮುಂದುವರಿಸುತ್ತೇವೆ ಇಲ್ಲ ಮುಂದುವರಿಸುವುದಿಲ್ಲ ಅಂತ ಹೇಳಿ ನೀವು. ಒಂದು ಕಡೆ ಸಹಾಯಧನದ ನೀತಿ ನಿಮಗೆ ಉಂಟು. ಮತ್ತೊಂದು ಕಡೆ ಚಲನಚಿತ್ರದ ಸಮಾರಂಭದಲ್ಲಿ ಹೋಗಿ ಕುಣಿಯುತ್ತೀರಿ? ತಾಳಕ್ಕೆ ತಕ್ಕಂತೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನೋಡಿ ಚಲನಚಿತ್ರದ ಸಮಾರಂಭದ ಸಭೆಯಲ್ಲಿ ಹೋಗಿ ಯಾರು ಕುಣಿದಾಡಿದೆವು ನಾವು? ಅವರ ಸಭೆಗೆ ನಮ್ಮನ್ನು ಕರೆಯಿಸಿದ್ದರು. ನಾನೇ ಹೋಗಿದ್ದೆ.

ಶ್ರೀ ಸಿದ್ಧರಾಮಯ್ಯ : ನಮ್ಮನ್ನೂ ಕರೆದಿದ್ದರು.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾವೆಲ್ಲ ಹೋಗಿದ್ದೆವು. ನಾನು ಹೋಗಿದ್ದೆ, ಶ್ರೀ ಸಿದ್ಧರಾಮಯ್ಯನವರು ಹೋಗಿದ್ದರು. ಏನು ಕುಣಿದೆವು? ಸ್ವಲ್ಪ ದಯವಿಟ್ಟು ಹೇಳಿ.

ಶ್ರೀ ವಾಟಾಳ್ ನಾಗರಾಜ್ : ನಾವೆಲ್ಲಿ ಕುಣಿದೆವು ಅಂತ ಹೇಳುತ್ತಾರೆ, ಪಾಪ ಇವರಿಗೆ ಹೊಟ್ಟೆ ಜಾಸ್ತಿಯಾಗಿ ಕುಣಿಯುವುದಕ್ಕಾಗಲಿಲ್ಲ. ನಾಣಯ್ಯನವರು ಕುಣಿದರು. ನಾಣಯ್ಯನವರು ಸಮರ್ಥವಾಗಿ ಕುಣಿದರು.

ಶ್ರೀ ಸಿದ್ಧರಾಮಯ್ಯ : ನೀವು ನೋಡಿದಿರೋ?

ಶ್ರೀ ವಾಟಾಳ್ ನಾಗರಾಜ್ : ನಾನು ಸಂಪೂರ್ಣವಾಗಿ ನೋಡಿದೆ. ಕುಣಿದದ್ದನ್ನೆಲ್ಲಾ ದೂರದರ್ಶನದಲ್ಲಿ ನೋಡಿ ಎಷ್ಟು ಖುಷಿಯಾಯಿತು ಅಂತ ಹೇಳಿದರೆ....

ಅಧ್ಯಕ್ಷರು : ಎಲ್ಲಿ?

ಶ್ರೀ ರಮೇಶ್ ಜಿಗಜಿಣಗಿ : ಅದನ್ನು ನೋಡಿ ತಾವು ಕುಣಿದಿರೋ?

ಶ್ರೀ ವಾಟಾಳ್ ನಾಗರಾಜ್ : ಅದರಲ್ಲಿ ಏನೂ ತಕರಾರೇ ಇಲ್ಲ, ಕುಣಿಯುವುದು ಇದ್ದರೆ ಕುಣಿದೇ ಕುಣಿಯುತ್ತೇನೆ. ಅದರಲ್ಲೇನೂ ನಿಮ್ಮನ್ನು ಕೇಳಿಕೊಂಡು ಕುಣಿಯಬೇಕು ಅಂತ ಇಲ್ಲ ಕುಣಿಯುತ್ತೇನೆ.

ಶ್ರೀ ಹೆಚ್.ಎನ್. ನಂಜೇಗೌಡ : ಏನು ಕುಣಿತಾ?

ಶ್ರೀ ವಾಟಾಳ್ ನಾಗರಾಜ್ : ಶ್ರೀಮಾನ್ ನಾಣಯ್ಯನವರು ಕುಣಿತದ ಬಗ್ಗೆ ಚಲನಚಿತ್ರ ಪ್ರಶಸ್ತಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈ ರೀತಿ ಅಲಿಗೇಷನ್ ಮಾಡುವುದು ಸರಿಯಲ್ಲ, ಯಾರು ಕುಣಿದವರನ್ನು ಬಿಟ್ಟು, ಅಲ್ಲಿ ಇಣುಕಿ ನೋಡಿದವರನ್ನು ಏಕೆ ನೋಡಿದ್ದಿರಿ ನೀವು? ಯಾರು ಕುಣಿದರೋ ಅವರನ್ನು ಬಿಟ್ಟಿದ್ದೀರಿ. ಪಾಪ ಅವರು ಇಣುಕಿ ನೋಡಿದವರನ್ನು ಹಿಡಿದುಕೊಂಡು ಬಿಟ್ಟಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ : ನಾನು ಸಿದ್ಧರಾಮಯ್ಯನವರು ಹಾಗೂ ಸಿಂಧ್ಯಾರವರು ಅಂತ ಎಲ್ಲೂ ಹೇಳಲಿಲ್ಲ, ನಾನು ಹೇಳಿದೆವೇ ತಮಗೆ?

ಅಧ್ಯಕ್ಷರು : ಇವರಿಬ್ಬರು ಕುಣಿಯುವುದಕ್ಕೂ ತಯಾರು, ಇರಬಹುದು. ಆದರೆ ಇವರ ಜೊತೆಗೆ ಯಾರು ಬರುತ್ತಾರೆ? ಕುಣಿಯುವುದಕ್ಕೆ?

ಶ್ರೀ ವಾಟಾಳ್ ನಾಗರಾಜ್ : ನೀವು ಸರಿಯಾಗಿ ಹೇಳಿದಿರಿ

ಅಧ್ಯಕ್ಷರು : ನಾಣಯ್ಯನವರಿಗಾದರೆ, ಸರಿ.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ ತಾವು ಬಹಳ ಅನುಭವದ ಮಾತನ್ನು ಹೇಳಿದಿರಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನೀವು ಹೇಳಿದರೂ ಕುಣಿಯುವುದಿಲ್ಲ, ಕ್ಷಮಿಸಬೇಕು ತಾವು. ಎಲ್ಲರ ತಾಳಕ್ಕೆ ತಕ್ಕಂತೆ ಕುಣಿಯುವುದಕ್ಕಾಗುವುದಿಲ್ಲ.

ಶ್ರೀ ಸಿದ್ಧರಾಮಯ್ಯ : ಕುಣಿಯುವುದೂ ಇಲ್ಲ, ನಮ್ಮ ಜೊತೆ ಯಾರೂ ಕುಣಿಯಬೇಕಾದಂತಹ ಅಗತ್ಯವೂ ಇಲ್ಲ, ಆದರೆ ಕುಣಿಯುವಂತಹ ಸಂದರ್ಭ ಬಂದರೆ ಕುಣಿಯುವಂತಹ ಶಕ್ತಿಯೂ ಇದೆ.

ಅಧ್ಯಕ್ಷರು : ಇವರು ಕುಣಿಯಿರಿ ಅಂದರೆ ಬೇರೆಯವರ ಕಾಲು ತುಳಿದುಬಿಡುತ್ತಾರೆ ಅಷ್ಟೆ. ನಾಣಯ್ಯನವರಿಗೇ ಸರಿ ಕುಣಿತಾ,

ಶ್ರೀ ವಾಟಾಳ್ ನಾಗರಾಜ್ : ನಾಣಯ್ಯನವರೂ ಕುಣಿದರು. ಚೆನ್ನಾಗಿ ಕುಣಿದರು. ತಾಳಕ್ಕೆ ತಕ್ಕಂತೆ ಕುಣಿಯಲಿಲ್ಲ ಅಂತ ಇಟ್ಟುಕೊಳ್ಳಿ.

ಶ್ರೀ ಜೆ.ಹೆಚ್. ಪಟೇಲ್ : ಮಂತ್ರಿಗಳು ಆದ ತಕ್ಷಣ, ಅವರ ರಸಿಕತೆ, ಸಂಗೀತ ಪ್ರಿಯತೆ ಅಥವಾ ಯಾವುದಾದರೊಂದು ನೃತ್ಯವನ್ನು ನೋಡಿ, ಅದನ್ನು ಇವಿಷ್ಟನ್ನೂ ಬಿಟ್ಟು ಬಿಡಬೇಕು ಎನ್ನುವ ಒಂದು ವಿಚಾರ ಇದೆಯಲ್ಲಾ, ಆ ಕಾಲಕ್ಕೆ ಸೇರಿದವರಲ್ಲ ಇವರು. ಅದು ಬಹಳ ಅನಾಗರೀಕ ಕಾಲ. ಹಿಂದೆಲ್ಲಾ, ಬಹಳ ಒಳ್ಳೆಯ ರಾಜ ಅಂದರೆ, ಈಗ ಪ್ರಜೆಗಳೇ ರಾಜರು ತಾನೆ, ಹಿಂದೆ ಬಹಳ ಒಳ್ಳೆಯರಾಜ ಅಂದರೆ, ಯಾವುದರಿಂದ ಹೆಸರು ಆಗುತ್ತಿದ್ದರು ಗೊತ್ತೆ? ಅವರಲ್ಲಿದ್ದಂತಹ ಕವಿಗಳು, ಅವರಲ್ಲಿದ್ದಂತಹ ಸಂಗೀತಕಾರರು, ನಾಟಕರಾರರು, ಅವರಿಂದ ಬಹಳ ಹೆಸರು ಬರುತ್ತತ್ತು. ಈಗ ನಮ್ಮನ್ನು ಕರೆದಿದ್ದರು, ನಾವೂ ಹೋಗಿದ್ದೆವು. ಚಲನಚಿತ್ರದ ಸಮಾರಂಭಕ್ಕೆ ಬಹಳ ಸ್ವಲ್ಪ ಹೊತ್ತು, ಆ ಸುಂದರವಾದ ವಾತಾವರಣ, ಆ ಸುಂದರಿಯರು, ಹಾಡುಗಾರರು ಅವರ ಜೊತೆಗೆ ಇದ್ದರೆ ನಾವು ಸ್ವಲ್ಪ

ಸುಧಾರಣೆಯಾಗಬಹುದು. ಯಾರಿಗಾದರೂ ಈ ವಿಷಯಗಳು ಗೊತ್ತಿಲ್ಲವೋ ಅವರೆಲ್ಲಾ ಸ್ವಲ್ಪ ಹೊತ್ತು ಹೋಗಿ ಅಲ್ಲಿ ಇರುವುದು ಒಳ್ಳೆಯದು. ನಾಣಯ್ಯನವರು ಹೇಳಿದ್ದಾದರೂ ಒಂದೇ ಒಂದು. ನಮ್ಮ ರುಚಿ taste for all ಅಂದರೆ ಅಭಿರುಚಿ, ಕಲೆಯ ಬಗ್ಗೆ, ಸಂಗೀತದ ಬಗ್ಗೆ, ಪ್ರೋತ್ಸಾಹ ಮಾಡುವುದರ ಬಗ್ಗೆ ಚಿತ್ರದವರಿಗೆ ಏನು ಹೇಳಿದರು ಅಂದರೆ, ಸಾಂಸ್ಕೃತಿಕವಾಗಿ ಸಾಹಿತಿಕವಾಗಿ, ಜಗತ್ತಿನ ಬೇರೆ ಕಡೆ ನೋಡಿದರೆ ಇದು ಉತ್ತಮವಾದ ಚಿತ್ರ ಅಂತ ಮಾಡಿಕೊಂಡು ಬಂದರೆ ಸರ್ಕಾರ ಸಹಾಯಧನವನ್ನು ನೀಡುತ್ತದೆ. ಅದರಷ್ಟಕ್ಕೆ ಅದೇ ದುಡ್ಡು ದುಡಿಯುವ ಚಿತ್ರಗಳು ಬೇರೆ ಇದ್ದಾವೆ. ಅದರೊಳಗೆ ಯಾವ ಸಂಸ್ಕೃತಿಯೂ ಇಲ್ಲ, ಸಾಹಿತ್ಯವೂ ಇಲ್ಲ, ಅಭಿರುಚಿ ಬಹಳ ಕೆಳಗೆ ಹೋಗಿದೆ. ಆದ್ದರಿಂದ ನಮ್ಮ ಮಿನಿಸ್ಟರ್ ಹೇಳಿದ್ದುದು ಆ ರೀತಿಯ ಟೇಸ್ಟ್ ಡೆವಲಪ್‌ಮೆಂಟ್, ಜನರಲ್ಲಿ ಸಾಹಿತ್ಯಕ್ಕೆ, ಮತ್ತು ಸಂಗೀತದಲ್ಲಿ ಅಭಿರುಚಿಯನ್ನು ಜಾಸ್ತಿ ಮಾಡತಕ್ಕಂತಹದ್ದು ಇದ್ದರೆ ನಾವು ಕೊಡುತ್ತೇವೆ, ಇಲ್ಲದಿದ್ದರೆ ನಾವು ಕೊಡುವುದಿಲ್ಲ ಅಂತ ಹೇಳಿದರು.

ಶ್ರೀ ವಾಟಾಳ್ ನಾಗರಾಜ್ : ಪಟೇಲ್‌ರವರು ಹೇಳಿದ್ದು ಒಂದಂತೂ ನಿಜ.

ಶ್ರೀಮತಿ ಪ್ರಮೀಳ ನೇಸರ್ಗಿ : ಮಾನ್ಯ ಉಪ ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದ್ದಾರೆ. ರಸಿಕತೆ ಬೇಕೋ, ಬೇಡವೋ ಎಂಬುದರ ಬಗ್ಗೆ ರಸಿಕತೆ ಬೇಕು ಅಂತ ಹೇಳಿದರೆ, ಆದರೆ ಆ ರಸಿಕತೆ ಹೇಗಿರಬೇಕು ಅಂದರೆ, ನಿಮ್ಮ ಹೆಂಡತಿ, ನಿಮ್ಮ ಹೆಣ್ಣುಮಕ್ಕಳು, ಅವರನ್ನೆಲ್ಲಾ ಕರೆದುಕೊಂಡು ಹೋಗಿ ಅದನ್ನು ನೋಡುವುದಕ್ಕೆ ಆಗುವಂತಹ ಚಿತ್ರಗಳು ಇದ್ದರೆ ದಯವಿಟ್ಟು ನೋಡಿ. ಆದರೆ ಅವರ ಕಣ್ಣಿಗೆ ಕಾಣದ ಹಾಗೆ, ಕಣ್ಣುತಪ್ಪಿಸಿ ಹೋಗುತ್ತೀರಲ್ಲಾ, ಅಂತಹ ರಸಿಕತೆ ಮೊದಲು ಬೇಡ ಎನ್ನತಕ್ಕಂತಹದ್ದನ್ನು ಮಾತ್ರ ನಾನು ಹೇಳುತ್ತಿದ್ದೇನೆ.

ಶ್ರೀ ಜೆ.ಹೆಚ್. ಪಟೇಲ್ : ಕಣ್ಣು ತಪ್ಪಿಸಿಕೊಂಡು ಹೋಗಿ ನೋಡುವುದು ರಸಿಕತೆ ಅಲ್ಲ, ಅದು ಲಂಪಟತನ ಶಬ್ದಗಳನ್ನು ಸರಿಯಾಗಿ ಉಪಯೋಗ ಮಾಡಬೇಕು. ಈಗ ನಾವು ರಸಿಕತೆ ಅಂದರೆ, ಅದರೊಳಗೆ ಸಾಹಿತ್ಯ ಇರಬೇಕು. ಸಂಗೀತ ಇರಬೇಕು. ಮನೆಯ ಹೆಂಡತೀಯೂ ಇರಬೇಕು, ಮಕ್ಕಳು ಇರಬೇಕು. ಅಥವಾ ನಮಗೆ ಬೇಕಾದಂತಹ ಸ್ನೇಹಿತರೂ ಇರಬೇಕು. ಎಲ್ಲ ಇರಬೇಕು.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮನೆಯವರು ಅಂದರೆ ಅಕ್ಕ-ತಂಗಿ, ತಾಯಿಯವರನ್ನು ಕೂರಿಸಿಕೊಂಡು ನೋಡಿ. ಆದರೆ ಮತ್ತೊಬ್ಬರು ಯಾರಾದರೂ ಇರುತ್ತಾರೆ ಅಂದರಲ್ಲಾ, ಅದು ಮಾತ್ರ ಬೇಡ. ಅದನ್ನು ತಪ್ಪಿಸಿ ಬೇಕಾದರೆ ಏನು ಬೇಕಾದರೂ ಮಾಡಬಹುದು.

ಅಧ್ಯಕ್ಷರು : ಈಗ ನಾವು ಅನುಮಾನಗಳ ಮೇಲೆ ಮಾತನಾಡಿದರೆ ನಾವು ಏನು ಮಾಡುವುದಕ್ಕಾಗುತ್ತದೆ?

ಶ್ರೀ ಹೆಚ್.ಎನ್. ನಂಜೇಗೌಡ : ಇದ್ದಾಗ ಬಹಳ ಪ್ರಯತ್ನ ಪಡುತ್ತಿದ್ದರು. ಅದು ಇರಲಿ. ಈಗ ಏನಾಗುತ್ತೆ ರಸಿಕತೆ ಅಂದರೆ, ಶ್ರೀಮಾನ್ ವಾಟಾಳ್‌ರವರು ಏನು ಹೇಳುತ್ತಾರೆ ಅಂದರೆ, ನೀವೇ ಹೇಳಿಬಿಡಿ ಅದನ್ನ. ಅದೇನನ್ನೋ ಹೇಳುತ್ತಿದ್ದರಲ್ಲಾ, ಮಹಾರಾಜರು ಸಂಗೀತಕ್ಕೆ ಹೇಗೆ ಪ್ರೋತ್ಸಾಹ ಕೊಟ್ಟರು ಎಂಬುದನ್ನು ಹೇಳಿ ಸ್ವಲ್ಪ.

ಶ್ರೀ ವಾಟಾಳ್ ನಾಗರಾಜ್ : ಈಗ 2 ವಿಚಾರ ಹೇಳಿಬಿಡುತ್ತೇನೆ. ಒಂದು ಪಟೇಲ್‌ರವರು ಹೇಳಿದರು, ಒಂದು ಸುಂದರವಾದಂತಹ ವಾತಾವರಣ, ಸಂಗೀತಕಾರರು, ಸುಂದರಿಯವರು. ಅವರ ಹತ್ತಿರ ನಿಂತಾಗ ನಮಗೆ ಸ್ಫೂರ್ತಿ ಬರುತ್ತದೆ ಅಂತ ಹೇಳಿದರು. ಕಲೆ, ಸಾಹಿತ್ಯ, ಸಂಸ್ಕೃತಿ ಎಲ್ಲವೂ ಇದ್ದು, ಅವರ ಹತ್ತಿರಕ್ಕೆ ಹೋದಾಗ

ಸ್ಪೂರ್ತಿ ಬರುತ್ತದೆ ಅಂತ. ಅವರ ಹತ್ತಿರಕ್ಕೆ ಹೋಗದೆ ಸ್ಪೂರ್ತಿ ಬರುತ್ತಿದ್ದಂತಹ ಕಾಲ ಮುಗಿದು ಹೋಯಿತು. ಈಗ ಹತ್ತಿರಕ್ಕೆ ಹೋದಾಗಲೇ ಸ್ಪೂರ್ತಿ ಬರುವುದು ಇವರಿಗೆ

ಶ್ರೀ ಜೆ.ಹೆಚ್. ಪಟೇಲ್ : ಇಲ್ಲ ಇಲ್ಲ, ವಯಸ್ಸಿನಲ್ಲಿ ನೀವು ನನಗಿಂತ ಚಿಕ್ಕವರು. ಅರ್ಥಾತ್ ಸಂಬಂಧ ಇಲ್ಲ, ಅಂತಹವರ ಜೊತೆ ಇದ್ದರೆ ಸ್ಪೂರ್ತಿ ಬರುತ್ತದೆ ಅಂತ ಹೇಳಿದೆ. 24 ಗಂಟೆ ವಾಟಾಳ್ ನಾಗರಾಜ್‌ರವರಂತವರ ಜೊತೆಗೆ ಇದ್ದರೆ ಏನೂ ಉಳಿಯುವುದಿಲ್ಲ ತಲೆಯೊಳಗೆ, ಎಲ್ಲಾ ಹೋಗಿ ಬಿಡುತ್ತವೆ. ಬರೀ ಕನ್ನಡ ಚಳುವಳಿ, ಅಂತ (ನಗು)

ಶ್ರೀ ವಾಟಾಳ್ ನಾಗರಾಜ್ : ನಾನು ಸ್ಪೂರ್ತಿಯನ್ನು ಇವರ ತರಹ ಪ್ರಚಾರ ಮಾಡುವುದಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು : ನಿಮ್ಮದು ಬಿಡಿ ನಮಗೆ ಗೊತ್ತಿದೆ. ನೀವು ಎಂತಹವರು ಎಂಬುದು ನಮಗೊಂದು ಅಂದಾಜು ಇದೆ.

ಶ್ರೀ ಹೆಚ್.ಎನ್. ನಂಜೇಗೌಡ : ವಾಟಾಳ್‌ರವರು ಎಲ್ಲರ ಹಾಗೆ ಅಲ್ಲ, ಬಹಳ ಗುಟ್ಟಾಗಿ ವ್ಯವಹಾರ ಮಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಈಗ ನನಗೆ ಸ್ಪೂರ್ತಿ ಬೇಕು ಬೇಕು ಎಂದು ಪಟೇಲ್‌ರವರು, ನಂಜೇಗೌಡರ ತರಹ ಹತ್ತತ್ರ ಹೋಗುತ್ತೇನೋ ನಾನು? ಏನೂ ಇಲ್ಲ, ಸ್ಪೂರ್ತಿ ಅನ್ನುವಂತಹದ್ದು ಒಂದು ಚಿಂತನೆ. ಅದು ಯಾವುದೋ ಒಂದು ಕಲ್ಪನೆ ಅದು. ಅದಕ್ಕೆ ನಾನು ಆ ವಸ್ತುವಿನ ಹತ್ತಿರಕ್ಕೆ ಹೋಗುತ್ತೇವೆ ಅನ್ನುವುದು ಸ್ಪೂರ್ತಿ ಅಲ್ಲ, ಆದ್ದರಿಂದ ಇವರು ಏನಿದ್ದರೂ ಸುಮ್ಮನೆ ನೋಡತಕ್ಕಂತಹದ್ದು, ಆ ದೃಷ್ಯದಿಂದ ಅನುಭವಿಸುವಂಥಹದ್ದು, ಇದೇ ಇವರಿಗೆ ಸ್ಪೂರ್ತಿ, ಅದರಿಂದ ಮುಂದೆ ಹೋಗತಕ್ಕಂಥ ವ್ಯವಸ್ಥೆ ಇಲ್ಲ, ಆದರೆ ಒಂದು ನಂಜೇಗೌಡರು ಜ್ಞಾಪಿಸಿದರು. ಈ ಸಾಹಿತ್ಯ ಮತ್ತು ಸಂಗೀತ. ಈ ಸಂಗೀತಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕು ಅಂತ ಹೇಳಿ ಒಂದು ರಾಜ್ಯದಲ್ಲಿ ಒಬ್ಬ ರಾಜ ಎಲ್ಲಾ ಕಡೆ ಹೇಳಿಬಿಟ್ಟ. ಇನ್ನು ಮೇಲೆ, ಸಂಪೂರ್ಣ ನಿಂತರೆ, ಕುಳಿತರೆ, ಎಲ್ಲರೂ ಬರೀ ಸಂಗೀತದಲ್ಲೇ ನಡೆಯಬೇಕು. ಸಂಗೀತ ಬಿಟ್ಟು ಯಾವುದೂ ಆಗಕೂಡದು ಎನ್ನುವುದು ರಾಜನ ಆಜ್ಞೆ, ಊಟಕ್ಕೆ ಪ್ರತಿಯೊಂದಕ್ಕೂ. ಏನಾಯಿತು ಅಂತ ಹೇಳಿದರೆ, ರಾಜ್ಯದ ರಸ್ತೆಯಲ್ಲೆಲ್ಲಾ ಜನ ಸಂಗೀತದಲ್ಲೇ. ಪ್ರತಿಯೊಂದೂ ಸಂಗೀತದಲ್ಲೇ ಹೇಳಬೇಕು. ಅವರ ತಬಲ ಇರಲಿ, ತಾಳ ಇರಲಿ, ತಂಬೂರಿ ಇರಲಿ, ಪ್ರತಿಯೊಂದು ಆಡಳಿತ ಸಂಗೀತದಲ್ಲೇ ಇರಬೇಕು. ರಾಜರ ಅರಮನೆಯ ಕುದುರೆ ಲಾಯಕ್ಕೆ ಬೆಂಕಿ ಬಿದ್ದು ಹೋಗಿಬಿಡ್ತು. ಬಂದಾ "ಸ್ವಾಮೀ... (ಸಂಗೀತದಲ್ಲೇ) ಕುದುರೇ ಲಾಯಕ್ಕೇ, (ಸಂಗೀತದಲ್ಲೇ), ಬೆಂಕಿ ಬಿದ್ದಿದೆ, ಅಂದ. ಹೇಳುವುದಕ್ಕೆ ಆಲೋಚನೆ ಮಾಡಬೇಕಾದರೆ ಒಂದು ಗಂಟೆ ತೆಗೆದುಕೊಂಡ. ಅಷ್ಟರೊಳಗೆ ಎಲ್ಲಾ ಸುಟ್ಟು ಬೆಂದುಹೋಗಿತ್ತು. (ನಗು) ಆ ತರಹ ಇದು ಆಗುವುದು ಬೇಡ ಎಂಬ ಮಾತನ್ನು ತಮಗೆ ಹೇಳುತ್ತಿದ್ದೇನೆ. ಸಂಗೀತದಲ್ಲೇ ಅವನು ಬೆಂಕಿ ಬಿದ್ದಿದೆ ಅಂತ ಹೇಳುವಷ್ಟೊತ್ತಿಗೆ ಆ ರಾಗ ಬಿಟ್ಟು ಬರುವವಷ್ಟೊತ್ತಿಗೆ, ರಾಗ ಹಿಡಿದು ಆಲೋಚನೆ ಮಾಡಿ ಬರುವಷ್ಟೊತ್ತಿಗೆ ಬೆಂಕಿ ಬಿದ್ದು, ಕುದುರೆ ಸತ್ತು, ಎಲ್ಲಾ ಫಜೀತಿ ಆಯಿತು.

ಶ್ರೀ ಜೆ.ಹೆಚ್. ಪಟೇಲ್ : ಅದನ್ನೇ ಮಾನ್ಯ ಅಧ್ಯಕ್ಷರೇ, ಇಂತಹ ಭವ್ಯ ಸದನದಲ್ಲಿ ನೀವು ಸಂಗೀತ ಹೇಳುತ್ತಾ ಹೇಳುತ್ತಾ ಇದ್ದರೆ, ಅಲ್ಲಿ ಜನ ಸತ್ತು ಹೋಗುತ್ತಾರೆ, ವಿಷಯಕ್ಕೆ ಬನ್ನಿ ಅಂತ ಹೇಳುತ್ತಿರುವುದು (ನಗು)

ಶ್ರೀ ವಾಟಾಳ್ ನಾಗರಾಜ್ : ನಾನು ಹೇಳುವುದೂ ಅದನ್ನೇ. ನಾನು ಹೇಳುವುದು ನಿಮ್ಮ ಸರ್ಕಾರ ಈ ರೀತಿ ಆಗಬಾರದು ಎಂದು ನೇರವಾಗಿ ಹೇಳುತ್ತಿದ್ದೇನೆ. ಸರ್ಕಾರಕ್ಕೆ ಬರೀ ಸಂಗೀತ ಹೇಳಿಕೊಂಡೇ ಕಾಲ ಕಳೆಯಬೇಡಿ, ಅಂತ ನೇರವಾಗಿ ಸರ್ಕಾರಕ್ಕೆ ಹೇಳುತ್ತಿದ್ದೇನೆ. ಕನ್ನಡ ಚಿತ್ರಗಳ ಬಗ್ಗೆ ತಾವೂ ಕೆಲವು ಕಡೆ ಮಾತನಾಡಿದ್ದೀರಿ. ನಿಮ್ಮ ಮಾತಿನ ಧಾಟಿ ನೋಡಿ ನಿಜವಾಗಿಯೂ ಸಂತೋಷವಾಯಿತು. ಒಂದು ಕಾಲದಲ್ಲಿ ಕನ್ನಡ ಚಿತ್ರಗಳ ಬೆಳವಣಿಗೆ ಬಗ್ಗೆ ನಿರಂತರವಾದಂತಹ ಹೋರಾಟ ನಡೆಯಿತು. ಕನ್ನಡ ಚಿತ್ರಗಳು ಕರ್ನಾಟಕದಲ್ಲಿ ಉಳಿಯಬೇಕು ಅಂತ ಹೇಳಿ 1960ನೇ ಇಸವಿ ಸೆಪ್ಟೆಂಬರ್ 7ನೇ ತಾರೀಖು ನಮಗೆಲ್ಲಾ ಪೋಲೀಸ್ ಸ್ಟೇಷನ್‌ನಲ್ಲಿ ಬಂಧಿಸಿ ಇಟ್ಟಿದ್ದರು, ಥಿಯೇಟರ್ ಮುಂದೆ ಕನ್ನಡ ಚಿತ್ರಕ್ಕಾಗಿ ಒತ್ತಾಯ ಮಾಡಿದ್ದು, ಗದ್ದಲ ಮಾಡಿದ್ದಕ್ಕೆ ಅಂತ ಬೂಟ್ಸನ್ ಏಟು ಹೊಡೆದಾಗ ಇದೇ ಸದನದಲ್ಲಿ ಶ್ರೀ ಗೋಪಾಲಗೌಡರು ನಿರಂತರವಾಗಿ ಚರ್ಚೆ ನಡೆಸಿದ್ದರು. ಅಂದು ಪ್ರಾರಂಭವಾದಂತಹ ಕನ್ನಡ ಚಿತ್ರಗಳು ಆ ಚಿತ್ರದ ವೈಭವ ಅದೆಲ್ಲಾ ನೋಡಿದಾಗ ಇವತ್ತು ಆ ಮಟ್ಟದಲ್ಲಿ ಕನ್ನಡ ಚಿತ್ರಗಳು ಬರುತ್ತಾ ಇಲ್ಲ. ಇದು ಸ್ಪಷ್ಟ. ಕನ್ನಡ ಸಂಸ್ಕೃತಿಗೆ, ಕನ್ನಡ ಸಾಹಿತ್ಯಕ್ಕೆ, ಕನ್ನಡ ಕಲೆಗೆ, ಕನ್ನಡ ಇತಿಹಾಸಕ್ಕೆ ಧಕ್ಕೆ ಬರತಕ್ಕಂತಹ ಕನ್ನಡ ಚಿತ್ರಗಳು ಇವತ್ತು ಬರುತ್ತಾ ಇವೆ. ನಾವು ಈ ಬಗ್ಗೆ ಚಿಂತನೆ ಮಾಡಬೇಕು.ಆದರೆ ಯಾವ ಮಟ್ಟದಲ್ಲಿ ನಾವು ಚಿಂತನೆ ನಡೆಸಬೇಕೆಂಬುದನ್ನು ತಾವು ತೀವ್ರವಾಗಿ ಆಲೋಚನೆ ಮಾಡಬೇಕು. ಏಕೆಂದರೆ ಇಡೀ ಸಮಾಜವನ್ನು ನಾಶ ಮಾಡತಕ್ಕ ದಿಕ್ಕಿಗೆ ಹೋಗುವಂಥವು, ಸಮಾಜಘಾತಕ ಶಕ್ತಿಗೆ ಪ್ರೇರಣೆ ಕೊಡತಕ್ಕಂಥದ್ದು, ನಮ್ಮ ಸಾಹಿತ್ಯ ಸಂಸ್ಕೃತಿಗೆ ಅಪಾಯವನ್ನು ತರತಕ್ಕಂತಹ, ಇಂತಹ ಚಿತ್ರಗಳು. ಈ ಬಗ್ಗೆ ನಾವು ಚಿಂತನೆ ಮಾಡಬೇಕಾದುದು ನಮ್ಮ ಕರ್ತವ್ಯ. ನಾನು ತಮಗೆ ಹೇಳುತ್ತಿದ್ದೇನೆ, ಕನ್ನಡ ಚಿತ್ರಗಳು ವಿಶ್ವದ ಮಾರುಕಟ್ಟೆಯಲ್ಲಿ ಉನ್ನತವಾಗಿ ಮೆರೆದಂತಹ ಚಿತ್ರಗಳನ್ನು ನಾವು ನೋಡಿದ್ದೇವೆ. ಆದರೆ ಇತ್ತೀಚೆಗೆ ಬರತಕ್ಕಂತಹ ಕೆಟ್ಟ ಪ್ರವೃತ್ತಿಯ ಚಿತ್ರಗಳ ಬಗ್ಗೆ ನಾವು ಚಿಂತನೆ ಮಾಡಬೇಕು. ಚಿಂತನೆ ಅಂದರೆ ಎರಡು ದೃಷ್ಟಿ. ಒಂದು ಸೆನ್ಸಾರ್ ಮಂಡಲಿ ಅಂತ ಹೇಳಿ, ಅದು ಇದೆಯೋ ಅಥವಾ ಸತ್ತಿದೆಯೇ ಅಂತ ನಾನು ಅಭಿಪ್ರಾಯಪಡುತ್ತೇನೆ. ಏಕೆಂದರೆ ತಾವು ತಮ್ಮ 2-3 ಭಾಷಣದಲ್ಲಿ ನಾನು ನೋಡಿದೆ. ತಾವು ಬಹಳ ಚಿಂತನೆ ಮಾಡಿ ಹೇಳಿದ್ದೀರಿ. ಸೆನ್ಸಾರ್ ಮಂಡಲಿ ಅವರ ಕೆಲಸ ಪ್ರಾಮಾಣಿಕವಾಗಿ ನಡೆಯುತ್ತಿಲ್ಲ, ಮತ್ತು ಪರಿಶುದ್ಧವಾಗಿ ಮಾಡುತ್ತಿಲ್ಲ, ಅಲ್ಲಿರತಕ್ಕಂತಹ ಸದಸ್ಯರು ಪ್ರಮಾಣಿಕರಾಗಿಲ್ಲ. ಇದು ನನ್ನ ಅತ್ಯಂತ ಚಿಂತನೆ.

ಆದ್ದರಿಂದ ಸೆನ್ಸಾರ್ ಮಂಡಳಿ ಇದೆಯೆಂದು ಹೇಳುವುದಾದರೆ, ಉತ್ತಮ ಚಿತ್ರಗಳು ಮಾರ್ಕೆಟ್‌ಗೆ ಬರಬೇಕು. ಉತ್ತಮ ಚಿತ್ರಗಳ ಬೆಳವಣಿಗೆಯಾದರೆ ಕನ್ನಡ ಸಾಹಿತ್ಯ ಸಂಸ್ಕೃತಿಗೆ ಒಂದು ಆಯಾಮ ಸಿಗುತ್ತದೆನ್ನುವುದು ನನ್ನ ವಾದ.

ಶ್ರೀ ಜಿ.ಬಿ. ಶಿವಕುಮಾರ್ : ಮಾನ್ಯ ಅಧ್ಯಕ್ಷರೇ, ಮಾನ್ಯ ವಾಟಾಳ್ ನಾಗರಾಜ್‌ರವರು ಸಾಕಷ್ಟು ಹೇಳಿ ಬೆಳಕು ಚೆಲ್ಲುವಂತಹ ಕೆಲಸವನ್ನು ಕನ್ನಡ ಮತ್ತು ಸಂಸ್ಕೃತಿಯ ಬಗ್ಗೆ ಮಾಡಿದ್ದಾರೆ ಅದರ ಬಗ್ಗೆ ನಮ್ಮ ವಿರೋಧವಿಲ್ಲ. ಸಿನಿಮಾಗಳ ಹೆಸರು ಬರುತ್ತವೆ, ತರ್ಲೆನನ್ಮಗ ಬಲ್‌ನನ್ಮಗ ರೌಡಿ ಎಂಎಲ್‌ಎ ಪಕ್ಕದವಳನ್ನು ಇಟ್ಟುಕೊಂಡಿದ್ದಾನೆ, ಈ ಕಡೆ ಗಂಡ ಆ ಹೆಂಡತಿ ಆ ಸಿನಿಮಾ ಹೆಸರುಗಳನ್ನು ನೋಡಿದರೆ ಈ ತರಹ ಹೆಸರುಗಳ ಬಗ್ಗೆ ಕಡಿವಾಣ ಹಾಕದಿದ್ದರೆ ಒಳ್ಳೆಯ ಹೆಸರು ಬರುವುದಿಲ್ಲ, ನಮ್ಮ ಮುಂದಿನ ಪೀಳಿಗೆಯ ಬಗ್ಗೆ ಕನ್ನಡ, ಸಂಸ್ಕೃತಿಯ ಬಗ್ಗೆ ಏನು ಕೊಡುಗೆಯನ್ನು ಕೊಡಬೇಕೆನ್ನುವ ಬಗ್ಗೆ ಯೋಚನೆ ಮಾಡಬೇಕು.

ಡಾ|| ಶಂಕರನಾಯಕ್ : ಕನ್ನಡದಲ್ಲಿ ಉತ್ತಮ ಚಿತ್ರಗಳು ಬರುತ್ತಿಲ್ಲವೆಂದು

ಉತ್ತಮ ಚಿತ್ರಗಳಾಗಿವೆಯೆ? ಅವುಗಳಿಗೆ ಸರ್ಕಾರ ಸಹಾಯಧನವನ್ನು ನೀಡಬೇಕೇ ಅದನ್ನು ತಾವೇ ಹೇಳಿಬಿಡಿ.

ಶ್ರೀ ವಾಟಾಳ್ ನಾಗರಾಜ್ : ಸಹಾಯಧನ ಕೊಡತಕ್ಕದ್ದು ಸರ್ಕಾರದ ನೀತಿ. ಸಹಾಯಧನವನ್ನು ಕರ್ನಾಟಕದಲ್ಲಿ ತಯಾರಾಗತಕ್ಕ ಎಲ್ಲಾ ಕನ್ನಡ ಚಿತ್ರಗಳಿಗೂ ಸಹಾಯಧನ ಕೊಡಬೇಕೆಂದು ಇದೆ. ನಾನು ಏನು ಹೇಳುತ್ತೇನೆಂದರೆ, ಚಿತ್ರ ತಯಾರಿಕರಿಗೆ ನಿರ್ಮಾಪಕರುಗಳಿಗೆ, ನಿರ್ದೇಶಕರುಗಳಿಗೆ ಚಿತ್ರಕತೆಯನ್ನು ಬರೆಯತಕ್ಕ ಸಾಹಿತಿಗಳಿಗೆ ಈ ಸದನದ ಮೂಲಕ ನಾನು ಕೈ ಮುಗಿದು ಪ್ರಾರ್ಥನೆ ಮಾಡುತ್ತೇನೆ, ನಮ್ಮ ಕನ್ನಡ ಚಿತ್ರರಂಗ ಯಾವ ಒಂದು ಹಿಮಾಲಯ ಪರ್ವತಮಟ್ಟಕ್ಕೆ ಏರಿತ್ತು ಅಲ್ಲಿಂದ ಕೆಳಗೆ ಇಳಿಯತಕ್ಕ ಅವಕಾಶವನ್ನು ತಾವು ಕಲ್ಪಿಸದೆ ಮೇಲ್ಮಟ್ಟದಲ್ಲಿರತಕ್ಕ ಚಿತ್ರಗಳನ್ನು ತೆಗೆಯಬೇಕೆಂದು ಹೇಳತಕ್ಕದ್ದು ನನ್ನ ವಾದ.

ಶ್ರೀ ಎಂ.ಸಿ. ನಾಣಯ್ಯ (ಕಾನೂನು, ಸಂಸದೀಯ ವ್ಯವಹಾರ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮಿತ್ರರಾಗಿರತಕ್ಕ ವಾಟಾಳ್ ನಾಗರಾಜ್‌ರವರು ಕನ್ನಡ ಸಂಸ್ಕೃತಿ, ಕಲೆ, ಪರಂಪರೆ ಇದರ ಬಗ್ಗೆ ಬಹಳಷ್ಟು ವರ್ಷಗಳಿಂದ ಹೋರಾಟ ಮಾಡಿಕೊಂಡು ಬಂದಿರತಕ್ಕವರು. ಕನ್ನಡ ಸಂಸ್ಕೃತಿ, ಕಲೆಭಾಷೆ, ಪರಂಪರೆ, ಕನ್ನಡದ ಎತ್ತರ ಈ ಬಗ್ಗೆ ಬಹಳ ವರ್ಷಗಳಿಂದ ಹೋರಾಟ ಮಾಡಿಕೊಂಡು ಬಂದಿದ್ದಾರೆ. ಆದ್ದರಿಂದ ಕನ್ನಡ ಚಿತ್ರ ಮಾಧ್ಯಮ ಯಾವುದು ಇದೆ, ಈ ಮಾಧ್ಯಮದ ಮುಖಾಂತರವೂ ನಮ್ಮ ಕಲೆ, ಸಂಸ್ಕೃತಿ, ಪರಂಪರೆ ಇದನ್ನು ಎತ್ತರದಲ್ಲಿ ಬೆಳೆಸಬೇಕೆಂದು ಹೇಳುವುದು ಒಂದು ಭಾಗ. ಅದೇ ಸಂದರ್ಭದಲ್ಲಿ ತಾವು ಕೂಡ ಇದನ್ನು ಒಪ್ಪಿದ್ದೀರಿ, ಈಗ ಬರತಕ್ಕ ಕೆಲವು ಚಿತ್ರಗಳು ಯಾವುದು ಇದೆ ಹಿಂಸೆ, ಕೊಲೆ, ಅಶ್ಲೀಲತೆ ಸಮಾಜಘಾತುಕ ಶಕ್ತಿಗಳಿಗೆ ಕೊಡುತ್ತಿರತಕ್ಕ ಕೆಲವು ಪುರಸ್ಕಾರಗಳು ಇಂತಹ ಚಿತ್ರಗಳು ಯಾವುವು ಇವೆ, ಇವತ್ತಿನ ಸರ್ಕಾರದ ಒಂದು ನೀತಿಯ ಪ್ರಕಾರ ಯಾವ ಚಿತ್ರ ಹೇಗೆ ಬೇಕಾದರೂ ಚಿತ್ರೀಕರಣ ಮಾಡಿದರೂ ಅದಕ್ಕೆ ಅನುದಾನ ಇರತಕ್ಕ ಹಿನ್ನೆಲೆಯಲ್ಲಿ ಬಹುಶಃ ಸರ್ಕಾರದ ಒಂದು ನೀತಿಯಾಗಬೇಕು. ಸರ್ಕಾರದ ನೀತಿ ಅಂದರೆ, ಕನ್ನಡ ಚಿತ್ರಗಳಿಗೆ ನಾವು ಅನುದಾನ ಕೊಡುತ್ತಿರುವ ಸಂದರ್ಭದಲ್ಲಿ ಕನ್ನಡ ಬೆಳವಣಿಗೆಗೆ, ಸಂಸ್ಕೃತಿಗೆ, ಪರಂಪರೆಗೆ ಎತ್ತರಕ್ಕೆ ತರತಕ್ಕ ರೀತಿಯಲ್ಲಿ ಅದು ಸಮಾಜದ ಮೇಲೆ ಬೀರತಕ್ಕ ಪರಿಣಾಮದ ಹಿನ್ನೆಲೆಯಲ್ಲಿ ನಾವು ಇಂತಹ ಕನ್ನಡ ಚಿತ್ರಗಳಿಗೆ ಅನುದಾನವನ್ನು ಕೊಡಬೇಕೆಂದು ಹೇಳತಕ್ಕ ಗುಣಮಟ್ಟ ಇದೆಯಲ್ಲ, ಗುಣಮಟ್ಟ ಎಂದು ಹೇಳತಕ್ಕದ್ದನ್ನು ನಾವು ಕಾರ್ಯರೂಪಕ್ಕೆ ತರಲಿಕ್ಕೆ ಈಗಾಗಲೇ ಒಂದು ಮಾತನ್ನು ಹೇಳಿದ್ದೇನೆ. ಮಾನ್ಯ ಸಭಾಧ್ಯಕ್ಷರು ಅದನ್ನು ಒಪ್ಪಿದ್ದಾರೆ. ಮುಂಗಡಪತ್ರದಲ್ಲಿ ಕೂಡ ಇದರ ಬಗ್ಗೆ ನಾವು ಬೆಳಕನ್ನು ಚೆಲ್ಲಿದ್ದೇವೆ. ನೀವು ಕೂಡ ಇದರ ಬಗ್ಗೆ ನನ್ನ ಸಹಮತ ವ್ಯಕ್ತಮಾಡುತ್ತೇನೆಂದು ಹೇಳತಕ್ಕ ಮಾತು ಪರಿಪೂರ್ಣವಾಗಿ ಹೇಳದೇ ಹೋದರೂ ಕೂಡ ಅದನ್ನು ನಿಲ್ಲಿಸಬೇಕಾದರೆ ಅಥವಾ ನಿಲ್ಲಿಸುವುದಕ್ಕಾಗುವುದಿಲ್ಲ, ಸೆನ್ಸಾರ್ ಮುಖಾಂತರ ಹೋದರೆ ಕೆಲವು ಸಂದರ್ಭದಲ್ಲಿ ಅದು ಸೆನ್ಸಾರ್ ಆಗುವುದಿಲ್ಲ. ಆದರೂ ಕೂಡ ಇಂತಹ ಚಿತ್ರಗಳು ಬರುತ್ತವೆ. ಸರ್ಕಾರ ಅನುದಾನವನ್ನು ಕೊಡುವ ಮುಖಾಂತರ ನಾವು ಇಂತಹ ಚಿತ್ರಗಳಿಗೆ ಇನ್ನು ಹೆಚ್ಚಿನ ಪ್ರೋತ್ಸಾಹ ಕೊಟ್ಟಂತೆ ಆಗಲಿಲ್ಲವೆ? ಇದು ಸರ್ಕಾರದ ನೀತಿಯ ಪ್ರಶ್ನೆಯೇ ಎಂದು ಕೇಳತಕ್ಕ ಪ್ರಶ್ನೆ ಬಂದಾಗ ಇದಕ್ಕೆ ತಮ್ಮ ಮನಸ್ಸಿನ ಚಿಂತನೆ ಏನು ಎನ್ನುವುದನ್ನು ತಾವು ದಯವಿಟ್ಟು ಸ್ಪಷ್ಟವಾಗಿ ಹೇಳಿ.

ಶ್ರೀ ವಾಟಾಳ್ ನಾಗರಾಜ್ : ಇದರ ಬಗ್ಗೆ ಸಮಗ್ರ ಚಿಂತನೆಯಾಗಬೇಕು. ನಾನು ನಿಮ್ಮ ಮಾತನ್ನು ತಳ್ಳಿಹಾಕಬೇಕೆಂದು ಇಲ್ಲ. ನಾವೆಲ್ಲ ಕನ್ನಡ ಚಿತ್ರರಂಗ ಉಳಿಯಬೇಕೆಂದು ಹೇಳತಕ್ಕದ್ದು ಅಷ್ಟೆ. ಉತ್ತಮ ಚಿತ್ರಗಳು ಬರಬೇಕೆಂದು ಹೇಳುವುದರಲ್ಲಿ

ನನ್ನದೇನೂ ಎರಡನೆಯ ಅಭಿಪ್ರಾಯವಿಲ್ಲ. ಉತ್ತಮ ಚಿತ್ರಗಳು ಯಾವ ರೀತಿ? ಆ ಬಗ್ಗೆ ನಾವು ಚಿಂತನೆಯನ್ನು ಮಾಡೋಣ. ಅದರ ಬಗ್ಗೆ ಎರಡನೆಯ ಅಭಿಪ್ರಾಯವಿಲ್ಲ. ಆ ದೃಷ್ಟಿಯಿಂದ ಯಾವ ಒಂದು ಚಿತ್ರಗಳಿಗೆ ಸಹಾಯಧನವನ್ನು ಬಿಡುಗಡೆ ಮಾಡದೆ ತಾವು ಸ್ವಲ್ಪ ಹೆಚ್ಚು ಕಡಿಮೆ ಏಳೂವರೆ ಕೋಟಿ ರೂಪಾಯಿ ಉಳಿಸಿಕೊಂಡಿದ್ದೀರಿ, ಅನೇಕ ಜನ ನಿರ್ಮಾಪಕರುಗಳು ಬೀದಿಪಾಲಾಗಿದ್ದಾರೆ. ಮನೆಮಠ ಮಾರಿಕೊಂಡಿದ್ದಾರೆ, ಮತ್ತೆ ಅವರ ಕೈಯಿಂದ ಚಿತ್ರ ತೆಗೆಯುವುದಕ್ಕೆ ಆಗುತ್ತಿಲ್ಲ, ಈ ಪರಿಸ್ಥಿತಿಯಲ್ಲಿ ಅನೇಕರು ಇದ್ದಾರೆ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೆ, 7.36 ಕೋಟಿ ರೂಪಾಯಿ ಅನುದಾನ ಯಾವುದು ಇದೆ ಅದು 1995-96ನೇ ಸಾಲಿನಲ್ಲಿ ಚಿತ್ರೀಕರಣ ಆಗಬಹುದಾದ ಸುಮಾರು 80 ಚಿತ್ರಗಳನ್ನು ಗಣನೆಗೆ ತೆಗೆದುಕೊಂಡು ಅಷ್ಟು ಹಣ ನಿಗದಿಪಡಿಸಲಾಗಿದೆ. ಆದರೆ ಕೊಡಲಿಕ್ಕೆ ಈಗ ಬಾಕಿಯಿರತಕ್ಕದ್ದು 140 ಚಿತ್ರಗಳಿಗೆ ಸಂಬಂಧಪಟ್ಟ ಹಾಗೆ ಮಾತ್ರ ಅದು 4 ಕೋಟಿ 36 ಲಕ್ಷ ರೂಪಾಯಿ 1995 ಮಾರ್ಚಿ 31ನೇ ತಾರೀಖಿನ ಒಳಗಡೆ ಇರತಕ್ಕದ್ದು ಇದುಹಿಂದಿನ ಬಾಕಿ. 1995-96ನೇ ಸಾಲಿಗೆ ಮುಂದೆ ಇರತಕ್ಕ ಬಗ್ಗೆ ಮುಂದೆ ಇನ್ನು ಸರ್ಕಾರ ಇದರ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಹಿಂದಿನ ಬಾಕಿಯ ಬಗ್ಗೆ ನೀವು ಹೇಳತಕ್ಕದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ನೀತಿಯ ಪ್ರಕಾರ ಕೊಡಬೇಕಾಗಿರತಕ್ಕದ್ದು ಅದು ಸರ್ಕಾರದ ಕಮಿಟ್‌ಮೆಂಟ್ ಆಗುತ್ತದೆ. 1995-96ರ ಬಗ್ಗೆ ನೀತಿಯ ಬಗ್ಗೆ ನಾವು ಇನ್ನು ಚಿಂತನೆ ಮಾಡಬೇಕಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಇದರಲ್ಲಿ ನಾವು ಎರಡು ಮಾಡಿದ್ದೇವೆ. ಮಾನ್ಯ ಅಧ್ಯಕ್ಷರೆ ತಮ್ಮ ಗಮನಕ್ಕೆ ನಾನು ತರುತ್ತಿದ್ದೇನೆ. ಸಹಾಯಧನ ಕೊಡುವುದರಲ್ಲಿ ಎರಡು ನೀತಿಯಿದೆ. ಉತ್ತಮ ನಿರ್ದೇಶನ ಚಿತ್ರಕತೆ, ಮತ್ತು ಹೊಸ ಆಯಾಮವನ್ನು ರಚನೆ ಮಾಡತಕ್ಕ ಚಿತ್ರಗಳಿಗೆ ಒಂದು ಲಕ್ಷ ರೂ.ಗಳನ್ನು ಜಾಸ್ತಿ ಕೊಡುತ್ತಿದ್ದೇವೆ, ಆ ಚಿತ್ರಗಳಿಗೆ ನಾವು ಒಂದು ರೀತಿಯಲ್ಲಿ ಗುಣಮಟ್ಟಕ್ಕೆ ದಾರಿ ಕೊಟ್ಟಹಾಗೆ ಆಗಿದೆ. ಈ ರೀತಿ, ಈ ರೀತಿ ಬಂದರೆ ನಾವು ಜಾಸ್ತಿ ಕೊಡುತ್ತೇವೆಂದು. ಮಿಕ್ಕ ಚಿತ್ರಗಳಿಗೆ ನಾವು 4 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಆದ್ದರಿಂದ ನಾವು ತಕ್ಷಣವೇ ಸಹಾಯಧನವನ್ನು ನಿಲ್ಲಿಸತಕ್ಕ ಚಿಂತನೆ ಮಾಡುವುದು ಬೇಡ. ನಾನು ತಮಗೆ ಏಕೆ ಹೇಳುತ್ತಿದ್ದೇನೆಂದರೆ, ಅದರಿಂದ ಅಪಾಯ ಇದೆಯೇ ಹೊರತು ಒಳ್ಳೆಯದು ಆಗುವುದಿಲ್ಲ, ಅದಕ್ಕೆ ಚಿತ್ರರಂಗದವರು ನಾವು ಕುಳಿತು ಚರ್ಚೆ ಮಾಡಿ ಯಾವ ಮಟ್ಟದ ಚಿತ್ರಗಳು ಬರಬೇಕೆಂಬುದರ ಬಗ್ಗೆ ಒಂದು ಚರ್ಚೆಯನ್ನು ಆರಂಭಿಸಬೇಕು. ಮತ್ತು ಸೆನ್ಸಾರ್ ಮಂಡಳಿಗೆ ನೀವು ನೇರವಾಗಿ ಹೇಳಬೇಕು. ಕರ್ನಾಟಕ ಸರ್ಕಾರದಲ್ಲಿ ಸೆನ್ಸಾರ್ ಮಂಡಳಿ ಇದೆಯೇ ಅಥವಾ ಇಲ್ಲವೇ ಅಂತ ಹೇಳಬೇಕು ಇಲ್ಲ, ಸೆನ್ಸಾರ್ ಮಂಡಳಿಯನ್ನು ಮುಚ್ಚಿಸುವುದಾದರೆ ಮುಚ್ಚಿಯೆಂದು ಹೇಳಿ. ಇದೆಲ್ಲವನ್ನು ನಾವು ಚರ್ಚೆ ಮಾಡಬೇಕಾಗಿಲ್ಲ, ಸೆನ್ಸಾರ್ ಮಂಡಳಿಯ ಅಡಿಯಲ್ಲಿಯೇ ಬರತಕ್ಕ ಒಂದೊಂದು ಚಿತ್ರಗಳನ್ನು ಹೊರಗಡೆ ಬಿಡುಗಡೆ ಮಾಡಬೇಕಾದರೆ ಸೆನ್ಸಾರ್ ಮಂಡಳಿಯ ನಿಯಮಗಳಿವೆ. ಯಾವ್ಯಾವ ರೀತಿ ಇರಬೇಕು, ಸಂಭಾಷಣೆ ಯಾವ ರೀತಿ ಇರಬೇಕು, ನಟನೆ ಯಾವ ರೀತಿ ಇರಬೇಕು. ಸಂಗೀತ ಯಾವ ರೀತಿ ಇರಬೇಕು ಪ್ರತಿಯೊಂದು ಆ ಸೆನ್ಸಾರ್ ಮಂಡಳಿಯ ಮಿತಿಗೆ ಬರುತ್ತದೆ. ಸೆನ್ಸಾರ್ ಮಂಡಳಿಯವರು ಒಂದು ರೀತಿಯಲ್ಲಿ ಭ್ರಷ್ಟಾಚಾರ ಮಾಡುವುದಕ್ಕೆ ಹೊರಟಿದ್ದಾರೆ. ಭ್ರಷ್ಟಾಚಾರದ ಅಡಿಯಲ್ಲಿ ಸೆನ್ಸಾರ್ ಮಂಡಳಿ ಸಿಕ್ಕಿರುವುದರಿಂದ ಇವತ್ತು ಚಿತ್ರರಂಗಕ್ಕೆ ಇಷ್ಟೊಂದು ಅಪಾಯ ಉಂಟಾಗಿದೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ.

ಮಾನ್ಯ ಅಧ್ಯಕ್ಷರೆ, ತಾವು ಒಂದು ಸಾರಿ ಕಂಠೀರವ ಸ್ಟುಡಿಯೋಕ್ಕೆ ಸಂದರ್ಶನ ಮಾಡಬೇಕು. ಅನೇಕರು ಆ ಸ್ಟುಡಿಯೋವನ್ನು ಉಳಿಸುವುದಕ್ಕೆ ಹಿಂದೆ ಗುಬ್ಬಿ

ವೀರಣ್ಣನವರು ಕರಿಬಸಯ್ಯನವರು ಅವರೆಲ್ಲ ಕಟ್ಟಿದಂತಹ ಸ್ಟುಡಿಯೋ ಸ್ವಲ್ಪ ಹೆಚ್ಚುಕಡಿಮೆ 19 ಎಕರೆ ಪ್ರದೇಶದಲ್ಲಿ ಒಳ್ಳೆಯ ಸುಂದರವಾದ ಸ್ಥಳದಲ್ಲಿರತಕ್ಕ ಸ್ಟುಡಿಯೋ. ಇದು ನಷ್ಟದಲ್ಲಿ ನಡೆಯುತ್ತಿದೆ ಎನ್ನತಕ್ಕದ್ದು ಚಿಂತನೆ. ನಷ್ಟದಲ್ಲಿ ಹೇಗೆ ನಡೆಯುತ್ತಿದೆ, ನಮ್ಮಲ್ಲಿ ಒಳ್ಳೆಯ ಕ್ಯಾಮೆರಾ ಬೇಕು. ಒಳ್ಳೆಯ ವ್ಯವಸ್ಥೆಬೇಕು, ಇವು ಯಾವುವು ಇಲ್ಲದೆ ಸುಮ್ಮನೆ ನಷ್ಟದಲ್ಲಿ ನಡೆಯುತ್ತಿದೆಂದು ಹೇಳಿದರೆ ನಾನು ಒಪ್ಪುವುದಿಲ್ಲ. ನನ್ನ ವರದಿಯಲ್ಲಿ ಕಂಠೀರವ ಸ್ಟುಡಿಯೋವನ್ನು ಅಭಿವೃದ್ಧಿಪಡಿಸುವುದಕ್ಕೆ ಕೆಲವು ಸಲಹೆಗಳನ್ನು ಕೊಟ್ಟಿದ್ದೇನೆ. ದಯಮಾಡಿ ನೀವು ಅದರಲ್ಲಿ ಕನಿಷ್ಟ ಸಲಹೆಗಳನ್ನು ಒಪ್ಪಿ ಕಂಠೀರವ ಸ್ಟುಡಿಯೋವನ್ನು ಯಾವುದೇ ಕಾರಣಕ್ಕೆ ಪರಭಾರೆ ಮಾಡುವುದಕ್ಕೆ ಅವಕಾಶ ಕೊಡಬಾರದು. ಇದು ಸ್ಪಷ್ಟ. ಆ ಸ್ಟುಡಿಯೋವನ್ನು ತಮ್ಮ ಪಾಲಿಗೆ ತೆಗೆದುಕೊಳ್ಳಬೇಕೆಂದು ಖಾಸಗಿಯವರು ರಣಹದ್ದಿನ ರೀತಿಯಲ್ಲಿ ಕಾದಿದ್ದಾರೆ. ಆ ಆಸ್ತಿ ಇವತ್ತು ನಿಮಗೆ ಸಿಗುವುದಿಲ್ಲ, ಆ ಕಂಠೀರವ ಸ್ಟುಡಿಯೋ ಇವತ್ತು ನೀವು ಮಾಡುತ್ತೇವೆಂದು ಹೊರಟರೆ ಆ ಆಸ್ತಿ ಇವತ್ತು ನಿಮಗೆ ಸಿಗುವುದಿಲ್ಲ. ಅಂತಹ ಆಸ್ತಿಯನ್ನು ನಿಮ್ಮ ಕಾಲದಲ್ಲಿ ಉಳಿಸಿ ಆ ಸ್ಟುಡಿಯೋ ಕರ್ನಾಟಕದಲ್ಲಿ ಮಾದರಿಯಾಗುವಂತಹ ಸ್ಟುಡಿಯೋ ಆಗಿ ಮಾಡುವುದಕ್ಕೆ ಅವಕಾಶ ಇದೆ. ನಮ್ಮಲ್ಲಿ ಅಂತಹ ಒಳ್ಳೆಯ ಅಧಿಕಾರಿಗಳು ಇದ್ದಾರೆ. ಇಲ್ಲವೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಒಳ್ಳೆಯ ಅಧಿಕಾರಿಗಳನ್ನು ಇಟ್ಟು ಅವರಿಗೆ ಸಂಪೂರ್ಣ ಸರ್ವ ಸ್ವಾತಂತ್ರ್ಯವನ್ನು ಕೊಟ್ಟು ಆ ಸ್ಟುಡಿಯೋವನ್ನು ತಾವು ಬೆಳವಣಿಗೆ ಮಾಡಿದರೆ ನಮಗೆ ಲಾಭದಾಯಕವಾಗಿ ಖಂಡಿತಾ ಅನುಕೂಲವಾಗುತ್ತದೆ ಎನ್ನತಕ್ಕ ಮಾತನ್ನು ತಮ್ಮ ಗಮನಕ್ಕೆ ನಾನು ತರುತ್ತಿದ್ದೇನೆ. ಇದರ ಜೊತೆಗೆ ಚಿತ್ರನಗರಿ ಅದು ಎಷ್ಟು ಎಕರೆ ಸ್ವಾಮಿ?

ಶ್ರೀ ಎಂ.ಸಿ. ನಾಣಯ್ಯ : ಈಗ ನಮ್ಮ ಸ್ವಾಧೀನದಲ್ಲಿರತಕ್ಕದ್ದು 260 ಎಕರೆ.

ಶ್ರೀ ವಾಟಾಳ್ ನಾಗರಾಜ್ : 260 ಎಕರೆ, ಅಲ್ಲಿ ಪ್ರತಿಮಾ ಬೇಡಿಗೆ ಒಂದು ಕಡೆ 10 ಎಕರೆ ಕೊಟ್ಟಿದ್ದಾರೆ ಇನ್ನೊಂದು ಆದರ್ಶ ಫಿಲಂ ಇನ್ಸಿಟ್ಯೂಟ್‌ನವರಿಗೆ 10 ಎಕರೆ ಕೊಟ್ಟಿದ್ದಾರೆ. ಇನ್ನುಳಿದ ಭೂಮಿಯನ್ನು ಖಾಸಗಿ ನಿರ್ಮಾಪಕರುಗಳು ನಮಗೆ 30, 30 ಎಕರೆ ಕೊಡಿಯೆಂದು ಕೇಳುತ್ತಿದ್ದಾರೆ. ನಾನು ಹೇಳುತ್ತೇನೆ, ಯಾವ ಕಾರಣಕ್ಕೂ ಕೊಡಬೇಡಿ. ಒಂದು ಇಂಚು ನೆಲವನ್ನು ಕೊಡಕೂಡದು. ತಮಿಳುನಾಡಿನಲ್ಲಿ 15 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಸುಂದರವಾದ ಒಂದು ಚಿತ್ರನಗರಿಯನ್ನು ಅವರು ನಿರ್ಮಾಣ ಮಾಡಿದ್ದಾರೆ. ಇವತ್ತು ಅದು ಚಿನ್ನದ ಗಣಿ. 245 ಎಕರೆ ಭೂಮಿ ಚಿನ್ನದ ಗಣಿ ಅದರಲ್ಲಿ ಬೇರೆ ಏನೂ ಮಾತಿಲ್ಲ. ಮಾನ್ಯ ನಾಣಯ್ಯನವರೇ ನಿಮಗೆ ಆ ಕೀರ್ತಿ ಉಳಿಯುತ್ತದೆ. ಕಷ್ಟಪಟ್ಟು ಅದನ್ನು ಸರ್ಕಾರವೇ ಉಳಿಸಿ. 15 ಕೋಟಿ ರೂಪಾಯಿ ಖರ್ಚಾದರೂ ಚಿಂತೆಯಿಲ್ಲ, ಈ ವರ್ಷ ನೀವು ಕನಿಷ್ಟ 5 ಕೋಟಿ ರೂಪಾಯಿಗಳಿಂದ ಪ್ರಾರಂಭ ಮಾಡಿ ನಿಮ್ಮದೇ ಆದಂತಹ ಚಿತ್ರನಗರಿಯನ್ನು ನಿರ್ಮಾಣ ಮಾಡಿ ಇದು ಸರ್ಕಾರದ ಆಸ್ತಿಯೆಂದು ಉಳಿಸುವುದಕ್ಕೆ ತಾವು ಸಂಪೂರ್ಣವಾದಂತಹ ಪ್ರಯತ್ನವನ್ನು ಮಾಡಬೇಕೆಂದು ಹೇಳಿ ತಮ್ಮಲ್ಲಿ ನಾನು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ.

ಅಧ್ಯಕ್ಷರೇ, ಸುಮಾರು 61, 50 ಶಿಫಾರಸ್ಸುಗಳನ್ನು ಈಗಾಗಲೇ ಮಾಡಿದ್ದೇವೆ. ವಾರ್ತಾ ಇಲಾಖೆಗೆ ಸಂಬಂಧಪಟ್ಟ ಹಾಗೆ ಅನೇಕ ವಿಚಾರಗಳನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಅತಿ ಮುಖ್ಯವಾದ ವಿಚಾರಗಳನ್ನು ತಂದಿದ್ದೇನೆ. ಅದನ್ನು ತಾವು ಚಾಚೂ ತಪ್ಪದೇ ಸರ್ಕಾರದ ಜೊತೆಯಲ್ಲಿ ಮಾತನಾಡಿ ಅದನ್ನು ತಾವು ಸರಿಪಡಿಸಬೇಕು ಎಂದು ಹೇಳಿ ಬಹಳ ಅತ್ಯಂತ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಅತಿ ಮುಖ್ಯವಾಗಿ ಉಪ ವಿಭಾಗೀಯ ಕಛೇರಿಗಳ ಬಲವರ್ಧನೆ, ಜಿಲ್ಲಾ ವಾರ್ತಾಧಿಕಾರಿಗಳ ಕಛೇರಿಯನ್ನು

ಅತಿ ಮುಖ್ಯ. ಆಧುನಿಕವಾದಂಥ ವಾಹನಗಳನ್ನು ಖರೀದಿ ಮಾಡಿ, ಆ ವಾಹನಗಳಲ್ಲಿ ಕ್ಯಾಮರಾ ಮತ್ತು ಅದಕ್ಕೆ ತಕ್ಕಂಥ ಸಲಕರಣೆಗಳು, ಅದಕ್ಕೆ ತಕ್ಕಂಥ ಸಿಬ್ಬಂದಿ ಈ ವ್ಯವಸ್ಥೆಯನ್ನು ಇಟ್ಟು ತಾವು ಆ ಒಂದು ಕೆಲಸವನ್ನು ಮಾಡಬೇಕಾದುದು ಕರ್ತವ್ಯ ಎನ್ನತಕ್ಕಂಥ ಮಾತನ್ನು ತಮ್ಮ ಗಮನಕ್ಕೆ ನಾನು ತರುತ್ತಿದ್ದೇನೆ. ಈ ವಾರ್ತಾ ಇಲಾಖೆಯ ಬೆಳವಣಿಗೆಯ ಬಗ್ಗೆ ತಮ್ಮನ್ನು ನಾನು ಪ್ರಶಂಸೆ ಮಾಡುತ್ತೇನೆ. ನಿಮಗೆ ಇದರ ಬಗ್ಗೆ ಕಾಳಜಿ ಇದೆ ಮತ್ತು ಮಾಡಬೇಕು ಎನ್ನತಕ್ಕಂಥ ಉತ್ಸಾಹ ಇದೆ. ಇವೆಲ್ಲವನ್ನೂ ಇಟ್ಟುಕೊಂಡು, ನಿಮ್ಮ ಕಾಲದಲ್ಲಿ ಈ ಇಲಾಖೆಗೆ ಹೆಚ್ಚಿನ ಮಹತ್ವ ಬಂತು ಎಂದು ನಾನು ಅಂದುಕೊಂಡಿದ್ದೇನೆ. ಆ ಕಟ್ಟಡದ ವಿನ್ಯಾಸವನ್ನು ಬದಲಾವಣೆ ಮಾಡಿ, ಈ ಕೂಡಲೇ ಶಂಕು ಸ್ಥಾಪನೆಯನ್ನು ಮಾಡಿ ಹೊಸ ಕಟ್ಟಡವನ್ನು ಕಟ್ಟುವಂತಾಗಬೇಕು. ಅಲ್ಲಿ ಅವರು ನಿರ್ದೇಶಕರು ಆಗಬೇಕು. ಅನೇಕ ವಿಚಾರಗಳನ್ನು ತಮಗೆ ಹೇಳಿದ್ದೇನೆ. ಅದನ್ನು ತಾವು ಮಾಡುತ್ತೀರಿ ಎನ್ನತಕ್ಕಂಥ ಮನವಿಯನ್ನು ತಮ್ಮ ಮೂಲಕ ನಾನು ಸಲ್ಲಿಸಿ ಅಧ್ಯಕ್ಷರೇ, ಎರಡು ಚಿತ್ರಮಂದಿರಗಳು ಏನಿವೆ, ಪುಟ್ಟಣ್ಣ ಚಿತ್ರಮಂದಿರ ಒಂದು, ಇನ್ನೊಂದು ಶಂಕರ್‌ನಾಗ್ ಚಿತ್ರಮಂದಿರ ಏನಿವೆ ಇವನ್ನೂ ಸಹ ತಾವು ಪರಭಾರೆ ಮಾಡಬಾರದು, ಬೇರೆ ಯಾರಿಗೂ ಕೊಡಬಾರದು ಎನ್ನತಕ್ಕಂಥ ಮಾತನ್ನು ನಾನು ಅತ್ಯಂತ ಪ್ರಾಮಾಣಿಕವಾಗಿ ತಮಗೆ ತಿಳಿಸುತ್ತಿದ್ದೇನೆ. ಇದರ ಜೊತೆಗೆ 75 ಸಾವಿರ ಪ್ರತಿಗಳಲ್ಲಿ ನಮ್ಮ ಸರ್ಕಾರದ ಒಂದು "ಜನಪದ" ಹೊತ್ತಿಗೆ ಮುದ್ರಣ ಆಗುತ್ತಾ ಇತ್ತು. ತಾವು ಅದನ್ನು 40 ಸಾವಿರಕ್ಕೆ ಇಳಿಸಿಬಿಟ್ಟಿದ್ದೀರಿ. ಅದು ಸರಿಯಲ್ಲ, 75 ಸಾವಿರ ಮುದ್ರಣ ಆಗಬೇಕು, ಜನಗಳಿಗೆ ಪ್ರಚಾರ ಸಿಗಲಿ ಎಂದು. ಇದು ತಮ್ಮ ಗಮನಕ್ಕೆ ಯಾವ ರೀತಿ ಬರುತ್ತದೆಯೋ ನೋಡಿ ಹೇಳಿ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಮಿತ್ರರಾಗಿರತಕ್ಕಂಥ ವಾಟಾಳ್ ನಾಗರಾಜ್‌ರವರು ನಮ್ಮ ಇಲಾಖೆಯ ವತಿಯಿಂದ ಹೊರಬರುತ್ತಾ ಇರತಕ್ಕಂಥ ಕೆಲವು ಪತ್ರಿಕೆಗಳ ಬಗ್ಗೆ ಹೇಳಿದ್ದಾರೆ. "ಮುನ್ನಡೆ" ಎಂದು ಹೇಳುತ್ತಾ ಇರತಕ್ಕಂಥ ಒಂದು 15 ದಿವಸಕ್ಕೆ ಒಂದು ಚಿಕ್ಕದಾಗಿರತಕ್ಕಂಥ ಒಂದು ಪತ್ರಿಕೆಯನ್ನು ಪ್ರತಿ ಜಿಲ್ಲಾ ಮಟ್ಟದಲ್ಲಿ ನಾವು ತರುತ್ತಿದ್ದೇವೆ. ತಿಂಗಳಿಗೆ ಎರಡು. ನಾನು ಬಂದು ಆದಮೇಲೆ ನೋಡಿದೆ ಈ 'ಮುನ್ನಡೆ' ಎಂದು ಹೇಳುತ್ತಾ ಇರತಕ್ಕಂಥಾದ್ದನ್ನು. 15 ದಿವಸಕ್ಕೆ ಒಂದು ಪಾಂಪ್ಲೆಟನ್ನು ತರುವುದು. ಬರೀ ಒಂದು ಪಾಂಪ್ಲೆಟ್. 15 ದಿವಸದಲ್ಲಿ ನಡೆದಿರತಕ್ಕಂಥ ಕೆಲವು ವಿಚಾರಗಳನ್ನು, ಯಾವುದೋ ಒಬ್ಬ ಮಂತ್ರಿಯದು ಫೋಟೋ ಹಾಕಿ ಇಲ್ಲ ಒಬ್ಬ ಶಾಸಕರ ಫೋಟೋ ಹಾಕಿ ಅದರಲ್ಲಿ ನಡೆದಿರತಕ್ಕ ವಿಚಾರಗಳನ್ನು 15 ದಿವಸ ಕಳೆದು ಆದಮೇಲೆ ಒಂದು ಸಾವಿರ ಪ್ರತಿಯನ್ನು ಹಂಚುವುದು. ಇದನ್ನು ಇಡೀ 19 ಜಿಲ್ಲೆಗಳಲ್ಲಿ ನೋಡಿದಾಗ ನಾವು ಇದಕ್ಕೆ ಒಂದು ವರ್ಷಕ್ಕೆ ಖರ್ಚು ಮಾಡುತ್ತಾ ಇರತಕ್ಕಂಥ ಹಣ ಸುಮಾರು 7 ಲಕ್ಷ ರೂಪಾಯಿ. ಬರೀ ಪಾಂಪ್ಲೆಟ್‌ಗೆ. ಯಾರೂ ಓದುವುದಿಲ್ಲ, ನೋಡುವುದಿಲ್ಲ, ತೆಗೆದ ಜಾಗದಲ್ಲಿ ಅದನ್ನು ಬಿಸಾಡುತ್ತಾರೆ. ಇದನ್ನು ನೋಡಿಯಾದ ಮೇಲೆ ನನಗೆ ಅನ್ನಿಸಿತು,

ಸರ್ಕಾರದ ಹಣವನ್ನು ನಾವು ಈ ರೀತಿ ಪೋಲು ಮಾಡಬಾರದು ಎಂದು ಹೇಳಿ ಅದನ್ನು ಕೂಡಲೇ ನಿಲ್ಲಿಸಿದ್ದೇವೆ. ಎರಡನೆಯದು "ಜನಪದ" ಒಂದು, ಇನ್ನೊಂದು "ಮಾರ್ಚ್ ಆಫ್ ಕರ್ನಾಟಕ" ಎಂದು ಹೇಳುತ್ತಿರತಕ್ಕಂಥಾದ್ದು. "ಮಾರ್ಚ್ ಆಫ್ ಕರ್ನಾಟಕ" ಇಂಗ್ಲೀಷಿನಲ್ಲಿ ಬರುತ್ತಾ ಇದೆ. "ಜನಪದ" ಎನ್ನತಕ್ಕಂಥಾದ್ದು ಕನ್ನಡದಲ್ಲಿ ಬರುತ್ತಿದೆ. ಇಂಗ್ಲೀಷಿನಲ್ಲಿ ಬರುತ್ತಾ ಇರತಕ್ಕಂಥಾದ್ದು ಸುಮಾರು 15,000, ಕನ್ನಡದಲ್ಲಿ ಬರುತ್ತಾ ಇರತಕ್ಕಂಥಾದ್ದು 70,000. ಇದಕ್ಕೆ ನಾವು ಒಂದು ವರ್ಷಕ್ಕೆ ಖರ್ಚು ಮಾಡುತ್ತಾ ಇರತಕ್ಕಂಥಾದ್ದು ಮತ್ತು ತಿಂಗಳಿಗೆ ಬರುತ್ತಾ ಇರತಕ್ಕಂಥ ಈ ಒಂದು ಮ್ಯಾಗಜೈನ್‌ನಲ್ಲಿ ಏನನ್ನು ಇದರಲ್ಲಿ ತರುತ್ತಾ ಇದ್ದಾರೆ ಎನ್ನುವುದನ್ನೂ ಕೂಡ

ನೋಡಿದೆ ನಾನು. ನೋಡಿ ಆದಮೇಲೆ ನನಗೆ ಅನ್ನಿಸಿತು. ಇಲಾಖೆಯ ವತಿಯಿಂದ, ಸರ್ಕಾರದ ವತಿಯಿಂದ ಹಲವಾರು ಯೋಜನೆಗಳು, ಕಾರ್ಯಕ್ರಮಗಳು ಜನರಿಗೆ ನೇರವಾಗಿ ತಲುಪಬೇಕು ಎನ್ನುವಂಥ ದೃಷ್ಟಿಕೋನವನ್ನು ಇಟ್ಟುಕೊಂಡು ಈ ಹಿಂದೆ ಅದನ್ನು ಸ್ಥಾಪನೆ ಮಾಡಿಕೊಂಡು ಬಂದಿದ್ದಾರೆ.

ಬಹುಶಃ ಅದನ್ನು ನೋಡಿ ಆದಮೇಲೆ ನನ್ನ ಮನಸ್ಸಿಗೆ ಬಂದಾಗ, ಒಂದು ವರ್ಷಕ್ಕೆ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಹೋದಾಗ ನಮ್ಮಲ್ಲಿ ಇರತಕ್ಕಂಥ ಗ್ರಾಮ ಪಂಚಾಯತಿಯ ಸದಸ್ಯರು ಸುಮಾರು 80 ಸಾವಿರ ಜನ ಸದಸ್ಯರು ಇದ್ದಾರೆ. 80 ಸಾವಿರ ಸದಸ್ಯರಲ್ಲೂ ಒಂದು 60 ಸಾವಿರ ಸದಸ್ಯರಿಗೆ ಅದನ್ನು ಪುಕ್ಕಟೆ ಕಳುಹಿಸುವುದು. ಇದೆಲ್ಲಾ ನೋಡಿಯಾದ ಮೇಲೆ ಎಲ್ಲಿಗೆ ಹೋಗುತ್ತದೆ, ಎಲ್ಲಿಗೆ ತಲುಪುತ್ತದೆ ಎಂದು ನೋಡಿ ಆದಮೇಲೆ ಬಹುತೇಕ ಇದು ಯಾರಿಗೂ ತಲುಪಿಲ್ಲ. ಬಹುತೇಕ ತಲುಪಲಿಲ್ಲ ಮಾನ್ಯ ಸಭಾಧ್ಯಕ್ಷರೇ. ಒಂದು ವರ್ಷಕ್ಕೆ ನಾವು ಇದಕ್ಕೆ ಖರ್ಚು ಮಾಡುತ್ತಾ ಇರತಕ್ಕಂಥ ಹಣ ಸುಮಾರು 60 ಲಕ್ಷ ರೂಪಾಯಿಗಳು. ನಾನು ಯೋಚನೆ ಮಾಡಿದೆ, ಇದನ್ನು ಈ ರೀತಿ ಮಾಡಲಿಕ್ಕೆ ಬಿಡಬಾರದು ಎಂದು ಹೇಳಿ 70 ಸಾವಿರ ಇದ್ದುದನ್ನು 40 ಸಾವಿರ ಮಾಡಿ ಪ್ರತಿ ಗ್ರಾಮ ಪಂಚಾಯಿತಿಯ ಆಫೀಸಿಗೆ ಐದೈದು ಪ್ರತಿಗಳನ್ನು ಕಳುಹಿಸಿ, ಜಿಲ್ಲಾ ಪಂಚಾಯಿತಿ ಮೆಂಬರುಗಳಿಗೆ ಒಬ್ಬೊಬ್ಬರಿಗೇ ಕಳುಹಿಸಿ, ಏಕೆಂದರೆ ಸಂಖ್ಯೆ ಕಡಿಮೆಯಾಗುತ್ತದೆ, ತಾಲ್ಲೂಕು ಪಂಚಾಯಿತಿ ಮೆಂಬರುಗಳಿಗೆ ಕಳುಹಿಸಿ, ಎಲ್ಲಾ ಆಫೀಸುಗಳಿಗೆ ಕಳುಹಿಸಿ ಮತ್ತು ಅದರ ಗುಣಮಟ್ಟವನ್ನು ಸ್ವಲ್ಪಮಟ್ಟಿಗೆ ಎತ್ತರಿಸುವುದಕ್ಕೆ ನಾನು ಈಗಾಗಲೇ ಒಂದು ಸಭೆಯನ್ನು ಕರೆದು ಚಿಂತನೆ ಮಾಡುತ್ತಿದ್ದೇನೆ. ನಾವು ಹಣ ಖರ್ಚು ಮಾಡುತ್ತಾ ಇರತಕ್ಕಂಥಾದ್ದು ನೇರವಾಗಿ ಜನರಿಗೆ ತಲುಪಿ, ಜನರು ಅದಕ್ಕೆ ಸ್ಪಂದಿಸಿದರೆ ಹಣ ಖರ್ಚು ಮಾಡಿದ್ದಕ್ಕೂ ಏನಾದರೂ ಒಂದು ಲಾಭ ಸಿಗುತ್ತದೆ. ಹೀಗೆ ಲಾಭ ಸಿಗದೇ ಇರತಕ್ಕಂಥ ಸಂದರ್ಭ ಬಂದಿದ್ದರಿಂದ ಸ್ವಲ್ಪ ಕಡಿವಾಣ ಹಾಕಿದ್ದೇನೆ ಅಷ್ಟೇ. ಅದರ ಬಗ್ಗೆ ಚಿಂತನೆಯನ್ನೂ ಮಾಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಸನ್ಮಾನ್ಯ ಅಧ್ಯಕ್ಷರೇ, ಇವರು ಚಲನಚಿತ್ರ ಪ್ರಶಸ್ತಿಗಳನ್ನು ನೀಡುತ್ತಾರೆ. ಇವರಿಗೆ ಇಚ್ಛೆ ಬಂದಾಗ ಯಾವಾಗಲೋ ಒಂದು ಸಾರಿ ನೀಡುತ್ತಾರೆ. ಒಂದು ವರ್ಷದಲ್ಲಿ ಇವರಿಗೆ ಯಾವಾಗ ಬೇಕೆಂದರೆ ಆಗ. ಇದಕ್ಕೆ ಒಂದು ನಿಗದಿಯಾದ ವೇಳೆಯಿಲ್ಲ, ಇಂಥ ತಿಂಗಳು, ತಿಂಗಳಲ್ಲಿ ದಿನ ಸ್ವಲ್ಪ ಹೆಚ್ಚು ಕಡಿಮೆಯಾಗಲಿ. ವರ್ಷದಲ್ಲಿ ಇಂಥ ತಿಂಗಳಲ್ಲೇ ನಾವು ಪ್ರಶಸ್ತಿಗಳನ್ನು ನೀಡುತ್ತೇವೆ ಎನ್ನುವ ಒಂದು ವ್ಯವಸ್ಥೆಯಾಗಬೇಕು. ಇಲ್ಲಿ ಏನಾಗಿದೆ, ಮುಖ್ಯ ಮಂತ್ರಿಗಳು ಯಾರು ಬರುತ್ತಾರೋ ಅವರ ಜಿಲ್ಲೆಗೆ ಹೋಗುವುದು, ಪ್ರಶಸ್ತಿ ಹಂಚುವುದು, ಅವರಿಗೆ ಕಿರೀಟ ಹಾಕುವುದು, ಅಲ್ಲಿ ಹೋಗಿ ಕುಣಿಯುವುದು. ಹೀಗಾಗಬಾರದು ಇದು. ಕಿರೀಟಗಳು ಎಂದರೆ ಹಾರ, ತುರಾಯಿ, ಕುಣಿತ. ನನಗನ್ನಿಸುತ್ತದೆ, ನಾನು ಆ ದೃಷ್ಟಿಯಿಂದ ತಮಗೆ ಹೇಳುತ್ತಿದ್ದೇನೆ, ಇದು ಒಂದು ನಿಗದಿತ ವೇಳೆಯಲ್ಲಿ ಆಗಬೇಕು. ವರ್ಷದಲ್ಲಿ ಇಂಥ ಒಂದು ತಿಂಗಳಲ್ಲಿ ಎಂದು. ಅದನ್ನು ತಾವು ತೀರ್ಮಾನ ತೆಗೆದುಕೊಳ್ಳಿ. ಅದನ್ನು ಯಾರಿಗಾದರೂ ಕೊಡಿ, ನನ್ನದು ಏನೂ ಅಭ್ಯಂತರವಿಲ್ಲ, ಆದರೆ ವರ್ಷದಲ್ಲಿ ಇಂಥ ತಿಂಗಳಲ್ಲೇ ಆಗಬೇಕು ಎನ್ನತಕ್ಕಂಥ ಒಂದು ಚಿಂತನೆ, ಅದಕ್ಕಾಗಿ ಒಂದು ನೀತಿಯನ್ನು ತಾವು ಅಳವಡಿಸಬೇಕು.ಇದಕ್ಕೆ ಈ ವರ್ಷದಿಂದ ಒಂದು ಕಾರ್ಯಕ್ರಮ ಹಾಕಿಕೊಳ್ಳಿ. ಈ ವರ್ಷದಲ್ಲಿ ಇಂಥ ತಿಂಗಳು ಎಂದು. ಕನಿಷ್ಟ ಸಂತೋಷವಾಗಿರತಕ್ಕಂಥ ರಾಜ್ಯೋತ್ಸವ ತಿಂಗಳಾದ ನವೆಂಬರ್ ತಿಂಗಳಲ್ಲೇ ಮಾಡಿ. ನವೆಂಬರ್ ತಿಂಗಳು ಬಹಳ ಅತ್ಯಂತ ಒಳ್ಳೆಯ ತಿಂಗಳು. ಆ ತಿಂಗಳಿನಲ್ಲಿ ನೀವು ಎಲ್ಲಿ ಬೇಕಾದರೂ ಮಾಡಿ. ನಾನು ಸುಮ್ಮನೆ ಹೇಳಿದೆ, ಯಾವ ಮುಖ್ಯ ಮಂತ್ರಿಗಳು ಎಲ್ಲಿ ಬೇಕಾದರೂ

ಮಾಡಲಿ. ನನ್ನದು ಏನೂ ಅಭ್ಯಂತರ ಇಲ್ಲ. ನಿಮಗೆ ಸೇರಿದ್ದು, ಅದರ ಬಗ್ಗೆ ವಾದ ಏನೂ ಇಲ್ಲ. ಎಲ್ಲಿ ಬೇಕಾದರೂ ಮಾಡಿ. ಆದರೆ ವರ್ಷದಲ್ಲಿ ಇಂಥ ತಿಂಗಳಲ್ಲಿ ಆಗಬೇಕು ಎನ್ನತಕ್ಕಂಥಾದ್ದನ್ನು ತಾವು ನಿಗದಿಪಡಿಸಬೇಕು ಎಂದು ತಮ್ಮಲ್ಲಿ ನಾನು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ.

ಇನ್ನು ಜಿಲ್ಲೆಗಳಲ್ಲಿ ಕ್ಷೇತ್ರ ಪ್ರಚಾರ ಹಾಗೂ ಪತ್ರಕರ್ತರ ಪ್ರವಾಸಕ್ಕೆ ಈಗಿರತಕ್ಕಂಥ ವಾಹನಗಳು ಏನಿವೆ, ಅವು ಹಳೆಯ ಕಾಲದ ವಾಹನಗಳು. ಅವು ಸಾಕೆ ಅಂತ ನೀವೇ ಹೇಳಿ. ಆ ವಾಹನಗಳಲ್ಲಿ ಪತ್ರಕರ್ತರನ್ನು ಕರೆದುಕೊಂಡು ಹೋಗಿ, ಮುಖ್ಯಮಂತ್ರಿಗಳೋ, ಬೇರೆ ಮಂತ್ರಿಗಳೋ ಎಲ್ಲೋ ಭಾಷಣ ಮಾಡುತ್ತಿರುತ್ತಾರೆ. ಇನ್ನೊಂದು ಕಡೆಯಿಂದ ಅವರನ್ನು ಕರೆದುಕೊಂಡು ಹೋಗಬೇಕು. ರಸ್ತೆಯಲ್ಲಿ ಟೈರ್‌ಹೋಗಿರುತ್ತದೆ, ಇಂಜಿನ್ ಕೆಟ್ಟಿರುತ್ತದೆ, ಸ್ಟೇರಿಂಗ್ ಹೋಗಿರುತ್ತದೆ. ಇಂಥ ವಾಹನಗಳೇ ನಿಮ್ಮಲ್ಲಿ ಇರುವುದು. ಗುಜರಿಗೆ ಹಾಕಬೇಕಾದಂಥ ವಾಹನಗಳೆಲ್ಲಾ ವಾರ್ತಾ ಇಲಾಖೆಯಲ್ಲಿ ಇವೆ. ವಾರ್ತಾ ಇಲಾಖೆ, ಇಂಥ ವಾಹನದಲ್ಲಿ ಪತ್ರಕರ್ತರನ್ನು ಕರೆದುಕೊಂಡು ಹೋಗಿ, ನಿಮ್ಮ ಮಂತ್ರಿಗಳ ಭಾಷಣದ ಪ್ರಚಾರಕ್ಕೆ ಕರೆದುಕೊಂಡು ಹೋದರೆ ಎಷ್ಟರಮಟ್ಟಿಗೆ ಆಗಬಹುದು. ಇದನ್ನು ತಾವು ಸ್ವಲ್ಪ ನೋಡಿ. ಈ ವಿಚಾರದಲ್ಲಿ ತಾವು ಪ್ರತಿ ಜಿಲ್ಲೆಗೂ ಉತ್ತಮವಾದಂಥ ವಾಹನ ಸೌಲಭ್ಯವನ್ನು ಒದಗಿಸತಕ್ಕಂಥ ವ್ಯವಸ್ಥೆ ಮಾಡಬೇಕು. ಇದಕ್ಕೆಲ್ಲಾ ಹಣದ ಅಡಚಣೆ ಇದೆ, ಹಣ ಇಲ್ಲ ಎಂದು ನಾವು ಹೋದರೆ ಇದು ಸಾಧ್ಯವಿಲ್ಲ. ಆದ್ದರಿಂದ ಈ ಬಗ್ಗೆ ತಾವು ಪ್ರಾಮಾಣಿಕ ಚಿಂತನೆಯನ್ನು ಮಾಡಬೇಕು ಎಂದು ತಮ್ಮಲ್ಲಿ ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಸ್ವಾಮಿ ಇನ್ನು ಸಣ್ಣ ಪತ್ರಿಕೆಗಳಿಗೆ ಜಾಹೀರಾತು. ಅದಕ್ಕೆ ಪ್ರತ್ಯೇಕ ಅಕೌಂಟ್, ಪ್ರತ್ಯೇಕ ಶೀರ್ಷಿಕೆಯನ್ನು ಮಾಡಬೇಕು ತಾವು. ಸಣ್ಣ ಪತ್ರಿಕೆಗಳನ್ನು ಕಡೆಗಣಿಸತಕ್ಕದ್ದು ಸರಿಯಲ್ಲ, ಸಣ್ಣ ಪತ್ರಿಕೆಗಳ ಬಗ್ಗೆ ಎಂ.ಬಿ. ಸಿಂಗ್‌ರವರು ವರದಿ ಕೊಟ್ಟಿದ್ದಾರೆ. ಆ ವರದಿ ಏನಾಯಿತು? ಇವತ್ತಿನವರೆಗೂ ಆ ವರದಿ ಸಮಗ್ರವಾಗಿ ಜಾರಿಯಾಗಿದೆ ಎಂದು ನಾನು ಅಂದುಕೊಂಡಿಲ್ಲ, ತಾವು ಮಾಡಿದ್ದರೆ, ನನಗೆ ಸಂತೋಷ. ಆದ್ದರಿಂದ ಸಣ್ಣ ಪತ್ರಿಕೆಗಳ ಬಗ್ಗೆ ತೀವ್ರ ಗಮನಹರಿಸಬೇಕು. ಮತ್ತು ಸಣ್ಣ ಪತ್ರಿಕೆಗಳಿಗೆ ಕೊಡತಕ್ಕಂಥ ಜಾಹೀರಾತು ದರವನ್ನು ಜಾಸ್ತಿ ಮಾಡಬೇಕು. ಸಣ್ಣ ಪತ್ರಿಕೆಗಳನ್ನು ರಾಜ್ಯದಲ್ಲಿ ಅತ್ಯಂತ ಪ್ರಾಮುಖ್ಯತೆ ಪಡೆದಿರತಕ್ಕಂಥ ವ್ಯವಸ್ಥೆ. ಆದ್ದರಿಂದ ಅವುಗಳಿಗೆ ಹೆಚ್ಚಿನ ವ್ಯವಸ್ಥೆಯನ್ನು ತಾವು ಮಾಡಬೇಕು. ವಾರ್ತಾ ಇಲಾಖೆಯ ಬಗ್ಗೆ ಇನ್ನೂ ಬಹಳಷ್ಟು ವಿಚಾರಗಳು ಇವೆ. ಅವುಗಳಲ್ಲಿ ಬಹಳ ಪ್ರಾಮುಖ್ಯವಾದಂಥ ವಿಚಾರಗಳನ್ನು ತಮ್ಮ ಗಮನಕ್ಕೆ ನಾನು ತಂದಿದ್ದೇನೆ. ನಾನು ಕೊಟ್ಟಿರತಕ್ಕಂಥ ವರದಿಯಲ್ಲಿ ಅತ್ಯಂತ ಪರಿಣಾಮಕಾರಿಯಾಗಿ, ಇಲಾಖೆಯ ಅಧಿಕಾರಿಗಳು, ಹೊರಗಡೆ ಇರತಕ್ಕಂಥ ಪರಿಣಿತರು ಎಲ್ಲರನ್ನೂ ಭೇಟಿ ಮಾಡಿ, ಸಮಂಜಸವಾಗಿ ಈ ಇಲಾಖೆಗೆ ಒಂದು ಕಾಯಕಲ್ಪ, ಒಂದು ಹೊಸ ರೂಪ ಕೊಡಬೇಕು ಎನ್ನತಕ್ಕಂಥ ಶಕ್ತಿಯಿಂದ ಇಷ್ಟು ಮಾತನ್ನು ಈ ವಾರ್ತಾ ಇಲಾಖೆಯ ಬಗ್ಗೆ ತಮಗೆ ತಿಳಿಸಿದ್ದೇನೆ. ತಾವು ಹೆಚ್ಚಿನ ರೀತಿಯಲ್ಲಿ ಗಮನ ಕೊಟ್ಟಿದ್ದೀರಿ ಎಂದು ನಾನು ಅಂದುಕೊಂಡಿದ್ದೇನೆ. ಈ ಮಧ್ಯೆ, ನಮ್ಮ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರು ಬಹಳ ಉತ್ಸಾಹದಲ್ಲಿ ಇಲಾಖೆಯ ಬಗ್ಗೆ ಕೆಲಸ ಮಾಡಬೇಕು ಎನ್ನತಕ್ಕಂಥ ಆಕಾಂಕ್ಷೆ ಇಟ್ಟುಕೊಂಡಿದ್ದಾರೆ.

4.20. ಪಿ.ಎಂ.

ಅವರು ಮಂತ್ರಿಗಳಾಗುವುದಕ್ಕೆ ಮುಂಚೆ ನಮ್ಮ ಜೊತೆಯಲ್ಲಿ ಓಡಾಡಿದವರು ಮತ್ತು ಕನ್ನಡದ ಪ್ರಶ್ನೆ ಎಲ್ಲಿ ಬರುತ್ತದೆ, ಅಲ್ಲೆಲ್ಲ ಅವರು ಬಹಳ ಪ್ರಾಮಾಣಿಕವಾಗಿ

ಭಾಗವಹಿಸಿ ಕೆಲಸ ಮಾಡಿದಂಥವರು. ಸುದೈವಕ್ಕೆ ಅವರಿಗೆ ಅದೇ ಇಲಾಖೆ ದೊರೆತಿರುವುದು ನಮಗೆಲ್ಲರಿಗೆ ಬಹಳ ಸಂತೋಷವಾಗಿದೆ. ಮತ್ತು ಕೆಲವು ವಿಚಾರಗಳಲ್ಲಿ ಧೈರ್ಯವಾಗಿ ಕೆಲವು ಮಾತುಗಳನ್ನು ಸಾರ್ವಜನಿಕವಾಗಿ ಆಡುತ್ತಾರೆ. ಆದರೆ ಅಂತಿಮವಾಗಿ ಅವರಿಗೆ ಒಂದೊಂದು ಸಾರಿ ಕಡಿವಾಣ ಬಿದ್ದು ಮುಂದಕ್ಕೆ ಹೋದರೆ ಏನು ಪರಿಸ್ಥಿತಿ ಎನ್ನುವ ರೀತಿಯಲ್ಲಿ ಅವರು ಹಿಂದೆ ಸರಿಯುವಂಥಾದ್ದು ಎರಡು-ಮೂರು ಸಂದರ್ಭಗಳಲ್ಲಿ ನನಗೆ ನೋಡಿ ಈ ಉತ್ಸಾಹದಲ್ಲಿರತಕ್ಕಂಥ ಕನ್ನಡ, ಸಂಸ್ಕೃತಿ ಇಲಾಖೆಯ ಸಚಿವರು ಹಿಂದೆ ಬಿದ್ದರಲ್ಲ ಎನ್ನತಕ್ಕಂಥ ನೋವು ನನಗೆ ಇದೆ. ಆದರೆ ಈ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇದೊಂದು ತಬ್ಬಲಿ ಇಲಾಖೆ ಇದ್ದಹಾಗೆ ಇದೆ. ಇದಕ್ಕೆ ಹೆಚ್ಚಿಗೆ ಹಣ ಏನೂ ಇಲ್ಲ. ಇದೂ ಒಂದು ಇಲಾಖೆ. ಒಬ್ಬರು ಕಾರ್ಯದರ್ಶಿ, ಒಂದು ವ್ಯವಸ್ಥೆ ಎಲ್ಲವೂ ಇದೆ. ಆದರೆ ಹಣಕಾಸು ಮಾತ್ರ ಇಲ್ಲ. ಮುಖ್ಯಮಂತ್ರಿಗಳು, ಮಂತ್ರಿಗಳು ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಹೋದಾಗಲೆಲ್ಲ ಬಹಳ ಸುದೀರ್ಘವಾದಂಥ ಭಾಷಣವನ್ನು ಮಾಡುತ್ತಾರೆ. ನಮ್ಮ ಯೋಜನೆಗಳು ಏನು, ಕನ್ನಡ ಬೆಳವಣಿಗೆ ಬಗ್ಗೆ ಏನು ಮಾಡಬೇಕು ಎನ್ನುವ ಬಗ್ಗೆ ಸುದೀರ್ಘವಾದ ಚಿಂತನೆಯನ್ನು ಮಾಡುತ್ತಾರೆ. ನನಗೆ ಅನ್ನಿಸುತ್ತದೆ ಪ್ರತಿವರ್ಷ ಕೊಡತಕ್ಕಂಥ ಹಣ ಏನಿದೆ ಇದು ಸಾಲದು. ನಮ್ಮ ರಾಜ್ಯದ ನೀತಿ ಕನ್ನಡ, ನಮ್ಮ ರಾಜ್ಯದ ಬೆಳವಣಿಗೆ ಕನ್ನಡ ಸಂಸ್ಕೃತಿಯ ಮೇಲೆ ನಿಂತಿರತಕ್ಕಂಥಾದ್ದು ಇದ್ದು ಕನ್ನಡ ಆಡಳಿತ ಭಾಷೆಯಾಗಿದೆ. ಈ ದೃಷ್ಟಿಯಿಂದ ಈ ಇಲಾಖೆಗೆ ಹೆಚ್ಚಿನ ಸೌಲಭ್ಯ ಕೊಡತಕ್ಕಂಥಾದ್ದು ಇದೆ.

ನಾನು ಮೊದಲಿನಿಂದಲೂ ಈ ಇಲಾಖೆಗೆ ಒಬ್ಬರು ಸಂಪುಟ ದರ್ಜೆಯ ಮಂತ್ರಿಗಳು ಬೇಕೆಂದು ಹೇಳುತ್ತಿದ್ದೆ. ಈಗಲೂ ನಾನು ಶ್ರೀಮತಿ ಬಿ.ಟಿ. ಲಲಿತಾ ನಾಯಕ್ ಅವರನ್ನು ಸಂಪುಟದರ್ಜೆಗೆ ಏರಿಸಿ ಎಂದು ಹೇಳಿ ತಮ್ಮ ಮೂಲಕ ಸರ್ಕಾರವನ್ನು ಅತ್ಯಂತ ಕಳಕಳಿಯಿಂದ ಮನವಿಮಾಡುತ್ತಿದ್ದೇನೆ. ಅವರೇ ಮಂತ್ರಿಯಾಗಿರಲಿ. ಆದರೆ ರಾಜ್ಯ ಸಚಿವೆಯಿಂದ ಸಂಪುಟದರ್ಜೆಗೆ ಬರಲಿ ಎಂಬುದು ನಮ್ಮ ಅಪೇಕ್ಷೆ. ಏಕೆಂದರೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಸಂಪುಟ ದರ್ಜೆಯ ಸಚಿವರು ಬಂದಾಗ ಈ ಇಲಾಖೆಗೆ ಹೆಚ್ಚಿನ ಶಕ್ತಿ ಬರುತ್ತದೆ ಎಂದು ನಾನು ಅಂದುಕೊಂಡಿದ್ದೇನೆ. ಆದ್ದರಿಂದ ಇದನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಬೇಕು. ಇದಕ್ಕೆ ಮಾನ್ಯ ಉಪಮುಖ್ಯಮಂತ್ರಿಗಳು, ಮಿಕ್ಕವರು ಮುಖ್ಯಮಂತ್ರಿಗಳಿಗೆ ಸಹಕಾರ ಕೊಡಬೇಕು ಮತ್ತು ಈ ಬಗ್ಗೆ ಹೇಳಬೇಕು ಎಂದು ಈ ಮೂಲಕ ನಾನು ಅವರ ಗಮನಕ್ಕೆ ತರುತ್ತಿದ್ದೇನೆ. ಕನ್ನಡದ ಅಭಿವೃದ್ಧಿ ಯಾವ ಮಟ್ಟದಲ್ಲೂ ಆಗಿಲ್ಲ. ಇದನ್ನು ಅವರು ಒಪ್ಪಿಕೊಳ್ಳುತ್ತಾರೆ ಎಂದು ನಾನು ಅಂದುಕೊಂಡಿದ್ದೇನೆ. ಸುಮ್ಮನೆ ಇದನ್ನು ಹೇಳಿಕೊಂಡು ನಾವು ಸರ್ಕಾರದಲ್ಲಿ ಇದ್ದೇವೆ, ಮಾಡಿದ್ದೇವೆ ಎನ್ನತಕ್ಕಂಥ ಮಾತು ಅದು ಸಮಂಜಸವಾದುದು ಅಲ್ಲ, ಸ್ವಾಮಿ, ಕನ್ನಡವನ್ನು ಆಡಳಿತ ಭಾಷೆಯಾಗಿ ನಾವು ಒಪ್ಪಿದ್ದೇವೆ. ಕನ್ನಡ ಆಡಳಿತ ಭಾಷೆ ಎನ್ನತಕ್ಕಂಥಾದ್ದನ್ನು ನಾವು ಒಪ್ಪಿಕೊಂಡಿದ್ದೇನೆ.

ಹಿಂದೆ ಈ ಸಭೆಯಲ್ಲಿ ಸ್ವಲ್ಪ ಕನ್ನಡದ ಪ್ರಶ್ನೆ ಬಂದಾಗ ಭಯ, ಭೀತಿ ಇತ್ತು. ಕನ್ನಡದ ಬಗ್ಗೆ ಸ್ವಲ್ಪವಾದರೂ ಚಿಂತನೆಯನ್ನು ಶ್ರೀಮಾನ್ ಮೊಯಿಲಿಯವರು ಮಾಡುತ್ತಿದ್ದರು. ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಕನ್ನಡ ವಿಶ್ವವಿದ್ಯಾನಿಲಯ ಆಯಿತು. ಮತ್ತು ಅನೇಕ ಸಂದರ್ಭದಲ್ಲಿ ಕನ್ನಡದ ಬಗ್ಗೆ ಇಲ್ಲಿ ಚರ್ಚೆ ಮಾಡಿದಾಗೆಲ್ಲ ಚಾಚೂ ತಪ್ಪದೆ ಪ್ರಾಮಾಣಿಕವಾಗಿ ಕನ್ನಡ ಬಗ್ಗೆ ಅವರು ಉತ್ತರ ಕೊಡುತ್ತಿದ್ದರು, ಭರವಸೆ ಕೊಡುತ್ತಿದ್ದರು. ಏಕೆಂದರೆ ನಾನೇನೆ ಅನೇಕ ಸಂದರ್ಭದಲ್ಲಿ ಧರಣಿ ಮಾಡಿ ಕಾಡಿ, ಬೇಡಿರುವಾಗ ಅವರು ಉತ್ತರ ಕೊಟ್ಟಿದ್ದನ್ನು ಕಂಡು ಸಂತೋಷಪಟ್ಟಿದ್ದು ಈ ಕಾರಣದಿಂದ. ಆದರೆ ಈ ದಿಸೆಯಲ್ಲಿ ಪರಿಣಾಮಕಾರಿಯಾಗಿ ಏನು ಆಗಬೇಕಾಗಿತ್ತು ಅದು ಆಗುತ್ತಿಲ್ಲ. ತಾವು ಸರ್ಕಾರದಲ್ಲಿದ್ದಾಗ ಏಪ್ರಿಲ್ ಒಂದನೇ ತಾರೀಖಿನಿಂದ

ಕನ್ನಡ ಆಡಳಿತಭಾಷೆಯಾಗಿ ಜಾರಿಗೆ ಬರುತ್ತದೆ ಎಂದು ಹೇಳಿ ಒಂದು ಆದೇಶವನ್ನು ಹೊರಡಿಸಲಾಯಿತು. ವಿಧಾನಸೌಧದ ನಾಲ್ಕೂ ಬಾಗಿಲುಗಳಲ್ಲಿ ಏಪ್ರಿಲ್ ಒಂದರಿಂದ ಆಡಳಿತ ಭಾಷೆ ಅಂತ ಬಂತು. ಆದರೆ ಅದು ಸರಿಯಾದ ರೀತಿಯಲ್ಲಿ ಜಾರಿಗೆ ಬರಲಿಲ್ಲ. ಅಂದರೆ ಎಷ್ಟು ಭಾಗವಾಯಿತು, ಬಿಟ್ಟಿತು ಆ ಪ್ರಶ್ನೆ ಬೇರೆ. ನಾನು ಯಾರನ್ನೂ ದೂಷಣೆ ಮಾಡತಕ್ಕಂಥ ಭಾವನೆಯಿಂದ ಇಲ್ಲ. ನಾನು ಈ ವಿಚಾರದಲ್ಲಿ ಮಾತ್ರ ರಾಜಕೀಯ ಮಾಡುತ್ತಿಲ್ಲ. ವಸ್ತುಸ್ಥಿತಿಯನ್ನು ನಾನು ಹೇಳುತ್ತಿದ್ದೇನೆ. ಸ್ವಾಮಿ, ಕನ್ನಡ ಜಾಗೃತಿ, ಸಭೆ, ಸಮ್ಮೇಳನ ಆಯಿತು. ಸಮಾರಂಭವಾಯಿತು. ಆ ಮಟ್ಟದಲ್ಲೇ ಉಳಿಯಿತು, ಮೇಲಕ್ಕೆ ಬರಲಿಲ್ಲ, ತಮಗೆ ಹೇಳುವುದಾದರೆ ಕನ್ನಡ ವಿಶ್ವವಿದ್ಯಾನಿಲಯವನ್ನು ಹಂಪೆಯಲ್ಲಿ ಏನು ಸ್ಥಾಪನೆ ಮಾಡಿದರು, ಅದಕ್ಕೆ ಕಾರಣ ಮಾನ್ಯ ಮೊಯಿಲಿಯವರು. ಇದರಲ್ಲಿ ಎರಡನೆಯ ಅಭಿಪ್ರಾಯ ಇಲ್ಲ. ಆದರೆ ಒಂದು ಸಮಾರಂಭಕ್ಕೂ ಅವರನ್ನು ಕರೆಯಲಿಲ್ಲ. ನಾನು ಸಮಾರಂಭದ ಆಹ್ವಾನ ಪತ್ರಿಕೆಯನ್ನು ನೋಡಿದೆ, ಆ ವಿಶ್ವವಿದ್ಯಾನಿಲಯದವರು ರಾಜಕಾರಣವನ್ನು ಮಾಡಿಬಿಟ್ಟರು. ರಾಜಕಾರಣವನ್ನು ಅವರು ಮಾಡಬಾರದಾಗಿತ್ತು. ಈ ವಿಶ್ವವಿದ್ಯಾಲಯ ಸ್ಥಾಪನೆಗೆ ಕಾರಣಕರ್ತರಾದ ಅವರನ್ನು ಕರೆಯುವ ಸೌಜನ್ಯಕ್ಕಿಂತ ಹೆಚ್ಚಾಗಿ ಶಿಷ್ಟಾಚಾರವನ್ನು ಅವರು ಅನುಸರಿಸಲಿಲ್ಲ ಎನ್ನತಕ್ಕಂಥಾದ್ದು ಅತ್ಯಂತ ನೋವಿನ ಪ್ರಸಂಗವೆಂಬುದನ್ನು ತಮಗೆ ನಾನು ತಿಳಿಸುತ್ತಿದ್ದೇನೆ. ಇನ್ನು ಯಾವುದೇ ಹಿಂದಿನ ಸರ್ಕಾರದವರು ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಭಾಷಣ ಮಾಡಿದಾಗ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಿಗೆ ಮಂತ್ರಿಗಳಿಗೆ ಕೊಡತಕ್ಕಂಥ ಸೌಲಭ್ಯ, ಸಮ್ಮೇಳನ ಅಧ್ಯಕ್ಷರಿಗೆ ಕೂಡ ಮಂತ್ರಿಗಳಿಗೆ ಕೊಡತಕ್ಕಂಥ ಸೌಲಭ್ಯ, ಕಾರು, ಮಿಕ್ಕ ಎಲ್ಲಾ ವ್ಯವಸ್ಥೆ ಮಾಡುತ್ತೇವೆ ಎಂದು ಹೇಳಿದರು. ಆದರೆ ಇದನ್ನು ಇವತ್ತಿನವರೆಗೂ ಕೊಟ್ಟಿಲ್ಲ. ಈ ದೃಷ್ಟಿಯಿಂದ ನಾನು ತಮಗೆ ಏನು ಹೇಳುತ್ತಿದ್ದೇನೆ ಎಂದರೆ.......

ಶ್ರೀ ಎಂ. ವೀರಪ್ಪ ಮೊಯಿಲಿ : ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಿಗೆ ಕ್ಯಾಬಿನೆಟ್ ದರ್ಜೆಯೆಂದು ಹೇಳಿಲ್ಲ. ಕಾರು ಕೊಡುತ್ತೇವೆ ಎಂದು ಹೇಳಲಿಲ್ಲ. ಇವರಿಗೆ ವಾರ್ಷಿಕ ಅನುದಾನ ಏನು 19 ಲಕ್ಷ ಕೊಡಲಾಗುತ್ತಿತ್ತು, ಅದನ್ನು ಇನ್ನೂ ಜಾಸ್ತಿಮಾಡಿ 25 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೆವು. ಏಕೆಂದರೆ ಬರೀ ಸಮ್ಮೇಳನಕ್ಕೆ ಮಾತ್ರ ಅಲ್ಲ, ಕಾರ್ಯ ಕ್ರಮಗಳಿಗೆ ಕೂಡಬೇಕು ಎಂದು ಅದನ್ನು ಮಾಡಿದ್ದೇವೆ. ಹತ್ತು ಲಕ್ಷ ರೂಪಾಯಿಗಳು ಪ್ರತಿವರ್ಷ ಸಾಹಿತ್ಯ ಸಮ್ಮೇಳನಕ್ಕೆ ಏನು ಖರ್ಚಾಗುತ್ತಿತ್ತು,ಅದನ್ನು ನಾವು ಹೆಚ್ಚು ಮಾಡಿ 15 ಲಕ್ಷ ರೂಪಾಯಿ ಕೊಡುವುದಕ್ಕೆ ಪ್ರಾರಂಭ ಮಾಡಿದ್ದೇವೆ. ಈ ಹಣ ಜಾಸ್ತಿ ಮಾಡಿದ್ದೇವೆ. ಅವರಿಗೆ ಸವಲತ್ತು ಕೊಡುತ್ತೇವೆ ಎಂದು ಹೇಳಲಿಲ್ಲ. ಆದರೆ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು ಏನಿದ್ದಾರೆ, ಅವರಿಗೆ ಅವರ ಹೆಡ್‌ಕ್ವಾಟರ್ಸ್‌ನಿಂದ ಎಲ್ಲಿಯಾದರೂ ಹೋಗಬೇಕಾದರೆ ಅವರಿಗೆ ಕಾರಿನ ವ್ಯವಸ್ಥೆ ಮಾಡುತ್ತೇವೆ ಎಂದು ಈ ನಿರ್ಣಯವನ್ನು ತೆಗೆದುಕೊಂಡು ಕಾರನ್ನು ಕೊಟ್ಟಿದ್ದೇವೆ. ಇದನ್ನು ಸ್ವಲ್ಪ ಚೆಕ್‌ಅಪ್ ಮಾಡಿ. ಇನ್ನೊಂದು ಸಮ್ಮೇಳನ ಆಗುವವರೆಗೆ ಯಾರು ಸಮ್ಮೇಳನ ಅಧ್ಯಕ್ಷರು ಆಗಿರುತ್ತಾರೆ, ಅವರಿಗೆ ಅವರವರ ಜಿಲ್ಲೆಯಿಂದ ಎಲ್ಲಿಗಾದರೂ ಹೋಗಬೇಕಾದರೆ ಕಾರಿನ ವ್ಯವಸ್ಥೆ ಮತ್ತು ಅವರಿಗೆ ಸರ್ಕಾರಿ ಪ್ರವಾಸಿ ಮಂದಿರಗಳಲ್ಲಿ ಮಂತ್ರಿಗಳಿಗೆ ಮುಂಚಿತವಾಗಿ ರಿಸರ್ವೇಶನ್ ಮಾಡುವಹಾಗೆ ಮಾಡಬೇಕೆಂದು, ಇಷ್ಟು ಆಶ್ವಾಸನೆಗಳನ್ನು ಕೊಟ್ಟಿದ್ದೆವು. ಇದನ್ನು ನಾವು ಮಾಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಇನ್ನು ಈ ಅಕಾಡೆಮಿಗಳ ನೇಮಕ. ಇದು ಒಂದು ವಿಪರ್ಯಾಸ. ಈ ಮಾತನ್ನು ಕನ್ನಡದ ಸಂಸ್ಕೃತಿ ಇಲಾಖೆಯ ಸಚಿವರು, ಮಾನ್ಯ ಉಪಮುಖ್ಯಮಂತ್ರಿಗಳು ಒಪ್ಪುತ್ತಾರೆ ಎಂದು ನನಗನ್ನಿಸುತ್ತದೆ. ಅಕಾಡೆಮಿ

ಅಧ್ಯಕ್ಷರ ನೇಮಕದಲ್ಲಿ ರಾಜಕೀಯ ಆಗಬಾರದು. ಇದರ ವ್ಯವಸ್ಥೆಯೇ ಬೇರೆ. ನಮ್ಮ ಬೇರೆ ಮಂಡಳಿಗಳ ತರಹ, ಬೇರೆ ಕಾರ್ಪೋರೇಷನ್‌ಗಳ ತರಹ, ಬೇರೆ ಸಂಸ್ಥೆಗಳ ತರಹ ಇದು ಆಗಬಾರದು. ಬೇರೆ ಸಂಸ್ಥೆಗಳು, ಕಾರ್ಪೋರೇಷನ್‌ಗಳಲ್ಲಿ, ಸಂಸ್ಥೆಗಳಲ್ಲಿ ಅವರ ಬಗ್ಗೆ ರಾಜಕೀಯವಾಗಿ ನಿರ್ಧಾರವಾಗಲಿ. ಇದಕ್ಕೆ ನನ್ನದೇನೂ ಅಭ್ಯಂತರ ಇಲ್ಲ, ಅಕಾಡೆಮಿಗಳ ಏನು ನೇಮಕವಾಗುತ್ತವೆ, ಮುಖ್ಯಮಂತ್ರಿಗಳ ಬದಲಾವಣೆಯ ನಂತರ ಅವೂ ಬದಲಾವಣೆಯಾಗುತ್ತವೆ. ಇದು ಆಗಬಾರದು. ಮತ್ತು ಹೀಗೆ ಬದಲಾವಣೆ ಮಾಡುವಾಗ, ಅಕಾಡೆಮಿಗಳಿಗೆ ಅಧ್ಯಕ್ಷರನ್ನು ನೇಮಕ ಮಾಡುವಾಗ ಅವರ ಅವಧಿಯನ್ನು ನೀವು ಅವರಿಗೆ ಕೊಡತಕ್ಕಂಥ ನೇಮಕ ಆದೇಶದಲ್ಲಿ ಸ್ಪಷ್ಟಪಡಿಸಬೇಕು. ಈ ಸಾರಿ ನೇಮಕವಾಗಿರತಕ್ಕಂಥ ಅಧ್ಯಕ್ಷರಿಗೆ ಅವಧಿ ಇಲ್ಲ.

ಮುಂದೆ ನಾವು ಕಾಣಿಸುವವರೆಗೆ ನೀವು ಅಧ್ಯಕ್ಷರಾಗಿರಬೇಕು ಎಂದು ಇದೆ. ಯಾವಾಗಬೇಕಾದರೂ ಇವರನ್ನು ಕಿತ್ತು ಹಾಕಬಹುದು. ಇದು ಒಳ್ಳೆಯದಲ್ಲ. ಈ ಅಕಾಡೆಮಿಗಳಿಗೆ ಅಧ್ಯಕ್ಷರಾಗಿತಕ್ಕಂಥವರು ನಾಡು ನುಡಿಗೆ, ಕರ್ನಾಟಕಕ್ಕೆ ಸೇವೆ ಮಾಡಿದಂಥ ವಿವಿಧ ಕ್ಷೇತ್ರಗಳ ಗಣ್ಯರಾಗಿರುತ್ತಾರೆ. ಇಂತಹವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಿರುತ್ತಾರೆ. ಇವರನ್ನು ನೀವು ಮುಂದೆ ನಾವು ಹೇಳುವವರೆಗೆ ಇರಿ ಎಂದು ಹೇಳುವುದು ಇದೆಯಲ್ಲ, ಇದಕ್ಕಿಂತ ಅಗೌರವದ ಪರಿಸ್ಥಿತಿ ಬರಬಾರದು. ಈ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ, ಸರ್ಕಾರ ಈ ಬಗ್ಗೆ ಚಿಂತನೆ ಮಾಡಿ ತಾವು ಇದನ್ನು ನೇರವಾಗಿ ಇಂತಿಷ್ಟು ದಿನ ಎಂದು ಹೇಳಿ ಒಂದು ವರ್ಷಕ್ಕೆ ಬೇಕಾದರೆ ಕೊಡಿ, ಎರಡು ವರ್ಷಕ್ಕೆ ಬೇಕಾದರೂ ಕೊಡಿ. ಇಷ್ಟು ವರ್ಷಗಳ ಕಾಲ ಅಧ್ಯಕ್ಷರನ್ನಾಗಿ ಮಾಡಿದ್ದೇವೆ ಎಂದು ಹೇಳಿ. ಇದು ಆಗಲಿಲ್ಲವೆಂದರೆ ಅದು ಸರಿಯಲ್ಲ.

ಶ್ರೀಮತಿ ಬಿ.ಟಿ. ಲಲಿತನಾಯಕ್ : ಮಾನ್ಯ ಉಪಾಧ್ಯಕ್ಷರೇ, ಅಧ್ಯಕ್ಷರ ಅವಧಿ ಮೂರು ವರ್ಷಎಂದು ಇದೆ. ಇದರಲ್ಲಿ ಬದಲಾವಣೆ ಇಲ್ಲ, ಇದು ಒಂದು-ಎರಡು-ಮೂರು ಅಂತ ಇಲ್ಲ, ಅವರು ಸರಿಯಾಗಿ ಮೂರು ವರ್ಷ ಇರುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಎಲ್ಲಿಯಾದರೂ ಭಾಷಣ, ಉತ್ತರವನ್ನು ಒಟ್ಟಿಗೇ ಮಾಡಿಸುತ್ತಿದ್ದೀರಾ? ನನಗಂತೂ ಇದು ಅರ್ಥವಾಗುತ್ತಿಲ್ಲ, ಒಂದು ಸಾರಿ ಯಾರು ಮಾತನಾಡುತ್ತಾರೆ ಎಂದು ಮಾತನಾಡಲಿ. ಮಂತ್ರಿಗಳು ಉತ್ತರ ಕೊಡುತ್ತಾರೆ ತಾನೆ? ಸಮಯದ ಅಭಾವ ಇದೆ. ಈ ಕಡೆ ಇಬ್ಬರು ಬಿಟ್ಟರೆ ಇನ್ನು ಯಾರೂ ಮಾತನಾಡಿಲ್ಲ. ಆರು ಗಂಟೆಯ ನಂತರ ಅವಕಾಶ ಸಿಗುತ್ತಿಲ್ಲ. ಪತ್ರಿಕಾಕರ್ತರು ಹೋದ ಮೇಲೆ ನಿನ್ನೆಮುಕ್ಕಾಲು ಗಂಟೆ ನಮ್ಮವರು ಮಾತನಾಡಿದರು. ದಯವಿಟ್ಟು ಅವಕಾಶಕೊಡುವುದಾದರೆ ಅಲಾಟ್‌ಮೆಂಟ್ ಮಾಡಿಕೊಡಿ. ಇಲ್ಲದಿದ್ದರೆ ನಾವು ಯಾರೂ ಮಾತನಾ ವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಆದ್ದರಿಂದ ನನಗನಿಸುತ್ತದೆ, ಮೂರು ವರ್ಷಗಳೆಂದು ತಾವೇನು ಹೇಳುತ್ತಿದ್ದೀರಿ, ಅದನ್ನು ತಾವು ಮಾಡಿದ್ದರೆ ಅತ್ಯಂತ ಸಂತೋಷ, ನನ್ನದೇನೂ ಅಭ್ಯಂತರವಿಲ್ಲ, ನಾನು ನೋಡಿದ ಪ್ರಕಾರ, ನಿಮ್ಮ ಆದೇಶದಲ್ಲಿ ಮೂರು ವರ್ಷವೆಂದು ಇಲ್ಲ, ಆದ್ದರಿಂದ ನೀವು ಮಾಡಿದ್ದರೆ, ನಾನು ಅತ್ಯಂತ ಸಂತೋಷಪಡುತ್ತೇನೆ. ತಾವು ಮತ್ತೆ ಉತ್ತರ ಕೊಡುವುದಕ್ಕೆ ಹೋಗಬೇಡಿ, ಇಲ್ಲಿ ಜಗಳ ಶುರುವಾಗಿಬಿಡುತ್ತದೆ. ದಯಮಾಡಿ ಆಮೇಲೆ ಉತ್ತರ ಕೊಡಿ. ನಿಮ್ಮ ಬಗ್ಗೆ ನನಗೆ ಗೌರವವಿದೆ. ನೀವು ಈಗಲೇ ಉತ್ತರ ಕೊಡುವುದಕ್ಕೆ ಹೋಗುವುದು, ನಮ್ಮಲ್ಲಿ ರಗಳೆ ಶುರುವಾಗಿ, ನನ್ನ ಭಾಷಣಕ್ಕೆ ಏಟಾಗಬಾರದು. ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ ಸದಸ್ಯರ ನೇಮಕ ಬಂತು. ನನ್ನನ್ನು ಕೇಳದೆ ಸದಸ್ಯರ ನೇಮಕ ಮಾಡಿದರೆಂದು ಮಾನ್ಯ ಮಂತ್ರಿಗಳು ಪತ್ರಿಕೆಗಳಿಗೆ ಹೇಳಿಕೆ ನೀಡಿದರು. ಅದನ್ನು ನಾವೆಲ್ಲರು ನೋಡಿದೆವು.

ಭೇಷ್, ಕನ್ನಡ ಸಂಸ್ಕೃತಿ ಇಲಾಖೆಗೆ ಹೆಣ್ಣುಮಗಳು ಮಂತ್ರಿಯಾಗಿದ್ದರೂ ಸಹ, ಧ್ವನಿ ಎಷ್ಟು ಭದ್ರವಾಗಿದೆ ಎಂದು ನಾವೆಲ್ಲರೂ ಪತ್ರಿಕೆಯನ್ನು ಓದಿದೆವು. ಮತ್ತೆ ಬೆಳಗ್ಗೆ ಎದ್ದು ಮುಖ್ಯಮಂತ್ರಿಗಳ ಮನೆಗೆ ಧಾವಿಸುತ್ತಾರೆ. ಅಲ್ಲಿ ಅವರು, ಇದು ನನ್ನ ಹಕ್ಕು, ನಿಮ್ಮದಲ್ಲ ಎಂದಾಗ ಇವರಿಂದ ಬೇರೆ ಮಾತೇ ಇಲ್ಲ, ಇವರ ಸ್ವರವೇ ಬಿದ್ದುಹೋಯಿತು. ನಾನು ಎಲ್ಲಿಯವರೆಗೆ ಲೆಕ್ಕಹಾಕಿದ್ದೆ ಎಂದರೆ, ಈ ವಿಚಾರದಲ್ಲಿ ರಾಜೀನಾಮೆ ಕೊಡುತ್ತಾರೆ ಎನ್ನುವಮಟ್ಟಕ್ಕೆ ಲೆಕ್ಕಹಾಕಿದ್ದೆ. ಏಕೆಂದರೆ, ಅವರಲ್ಲಿ ಆ ನಿಷ್ಠೆ, ಪ್ರಾಮಾಣಿಕತೆ ಇದೆ, ಮುಖ್ಯಮಂತ್ರಿಗಳಲ್ಲಿ ನೇರವಾಗಿ, ರಾಜೀನಾಮೆ ಬರೆದುಕೊಟ್ಟು ಬರುತ್ತಾರೆಂದು ನಾನು ಅಂದುಕೊಂಡಿದ್ದೆ, ಏಕೋ ಅವರು, ಆ ಧೈರ್ಯ ಮಾಡಲಿಲ್ಲ. ಅವರು ಏಕೆ ಧೈರ್ಯ ಮಾಡಲಿಲ್ಲವೋ? ಏಕೆಂದರೆ, ಧೈರ್ಯವಾದ ಮಹಿಳೆಯರಲ್ಲಿ, ಬಿ.ಟಿ. ಲಲಿತಾನಾಯಕ್‌ರವರೂ ಒಬ್ಬರು. ಅವರು ಎಂತಹ ಸಂದರ್ಭದಲ್ಲಿಯೂ ಚಳುವಳಿ, ಲಾಕಪ್ ಎಲ್ಲಿಗೆ ಬೇಕಾದರೂ ಬರುವುದಕ್ಕೆ ಸಿದ್ಧ. ಆದರೆ, ಇಲ್ಲಿ ಮುಖ್ಯಮಂತ್ರಿಗಳ ಧ್ವನಿಗೆ ಹೆದರಿ ಹಿಂದೆ ಸರಿದರಲ್ಲ, ಇದು ನನ್ನ ಪ್ರಕಾರ ಕನ್ನಡ ಸಂಸ್ಕೃತಿ ಇಲಾಖೆಗೆ ಅಗೌರವ.ಈ ಮಾತನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಅವರ ದಕ್ಷತೆಯ ಅಭಾವ ಇಲ್ಲಿ ತೋರಿಬಿಟ್ಟಿತು. ನಿಜವಾಗಿಯೂ ಅವರು ನೇರವಾಗಿದ್ದರೆ, ಖಂಡಿತವಾಗಿಯೂ ಆ ನಿರ್ಧಾರ ಆಗುವುದಾದರೆ, ನನ್ನ ರಾಜೀನಾಮೆ ತೆಗೆದುಕೊಳ್ಳಿ ಎಂದು ಹೇಳಬೇಕಾಗಿತ್ತು.ಮಂತ್ರಿ ಪದವಿ ಶಾಶ್ವತವೇ? ಮಂತ್ರಿ ಪದವಿ ಶಾಶ್ವತವಲ್ಲ, ಅದು ಇತಿಹಾಸದಲ್ಲಿ ಉಳಿಯುತ್ತಿತ್ತು. ಒಬ್ಬ ಮಹಿಳೆ, ಕನ್ನಡದ ಅಕಾಡೆಮಿಗಳ ಸದಸ್ಯತ್ವದ ಬಗ್ಗೆ, ಕನ್ನಡ ಸಂಸ್ಕೃತಿ ಇಲಾಖೆಯ ಬಗ್ಗೆ ಒಂದು ಛಲ ಮಾಡಿ, ಮುಖ್ಯಮಂತ್ರಿಗಳಿಗೆ ನೇರವಾಗಿ ರಾಜೀನಾಮೆ ಕೊಟ್ಟು, ಹೊರಗೆ ಬಂದರು ಎನ್ನತಕ್ಕಂಥ ಕೀರ್ತಿ ಉಳಿಯುತ್ತಿತ್ತು. ಈಗ ಅದು ಮುಗಿದುಹೋಯಿತು ಬಿಡಿ. ಈಗ ನೀವು ರಾಜೀನಾಮೆ ಕೊಡಿ ಎಂದು ಹೇಳುವುದಿಲ್ಲ, ಏಕೆಂದರೆ, ಈಗಾಗಲೇ ಅದು ಮುಗಿದಿದೆ. ಇದರ ಬಗ್ಗೆ ನನ್ನಮಾತು ಕೇಳಿ, ರಾಜೀನಾಮೆ ಕೊಡುವುದಕ್ಕೆ ಹೋಗಬೇಡಿ. ನಾನು ತಿರುಗಿ ಅದನ್ನು ಮಾತನಾಡುವುದಕ್ಕೆ ಹೋಗುವುದಿಲ್ಲ ಅಥವಾ ರಾಜೀನಾಮೆ ಕೊಟ್ಟರೆ, ನಿಮ್ಮ ಸ್ಥಾನಕ್ಕೆ ನಿಮ್ಮಂತಹವರು ಬರುತ್ತಾರೆಂದು ನಾನು ಅಂದುಕೊಂಡಿಲ್ಲ, ಈಗ ಏನೂ ಮಾಡುವುದಕ್ಕಾಗುವುದಿಲ್ಲ, ದಯಮಾಡಿ ನೀವು ಇರಿ.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಉಪಾಧ್ಯಕ್ಷರೇ, ನೀವು ಅವರಿಗೆ ಇಷ್ಟು ಟೈಮ್ ಕೊಟ್ಟರೆ ಹೇಗೆ? ಮತ್ತೆ ಯಾವ ಯಾವ ಪಕ್ಷಕ್ಕೆ ಎಷ್ಟು ಟೈಮ್, ಯಾರು ಯಾರಿಗೆ ಎಷ್ಟು ಟೈಮ್ ಎಂದು ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್ : ನನ್ನ ಭಾಷಣ ಮುಗಿದ ಮೇಲೆ ತಾವು ದಯಮಾಡಿ ಹೇಳಿಬಿಡಿ. ಅಕಾಡೆಮಿಗಳಿಗೆ ಹಣವನ್ನು ಭಿಕ್ಷಾ ಪಾತ್ರೆಗೆ ಕೊಟ್ಟಹಾಗೆ ಕೊಡುವುದಕ್ಕಾಗುವುದಿಲ್ಲ. ಅಕಾಡೆಮಿಗಳಿಗೆ ಹೆಚ್ಚಿನ ಹಣ ಕೊಡಬೇಕು. ಅಕಾಡೆಮಿಗಳು ಎಲ್ಲಾ ರೀತಿಯಲ್ಲಾ ಸ್ವತಂತ್ರವಾಗಿ, ಕೆಲಸ ಮಾಡತಕ್ಕಂಥ ವ್ಯವಸ್ಥೆ ಮಾಡಬೇಕಾದರೆ, ಹೆಚ್ಚಿಗೆ ಹಣ ಕೊಡಬೇಕಾಗಿದ್ದು ಕರ್ತವ್ಯವೆಂದು ತಮ್ಮ ಮೂಲಕ ಹೇಳುತ್ತಿದ್ದೇನೆ. ವೃತ್ತಿರಂಗಭೂಮಿ ಬೆಳೆಸುವುದರ ಬಗ್ಗೆ ನನಗನಿಸುತ್ತದೆ, ಯಾವ ಸರ್ಕಾರವೂ ಚಿಂತನೆ ಮಾಡಿಲ್ಲ, ನಾನು ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುತ್ತಿದ್ದೇನೆ. ವೃತ್ತಿ ರಂಗಭೂಮಿ, ಇದನ್ನು ತಾವೂ ನೋಡಿರಬಹುದು. ಹಳೆಯ ಮೈಸೂರಿನಲ್ಲಿ ಸ್ವಲ್ಪ ಹೆಚ್ಚುಕಡಿಮೆ 5-6 ಕಂಪನಿಗಳು ಇವೆ. ಇದರಲ್ಲಿ ಕೊನೆಯ ಕಂಪನಿ, ಗುಬ್ಬಿ ಕಂಪನಿ ಅವಸಾನದಲ್ಲಿ ಮುಳುಗಿದೆ. ಪೀರ್‌ಸಾಹೇಬರ ಕಂಪನಿಯಿಂದ, ಗುಬ್ಬಿ ಕಂಪನಿಯವರೆಗೆ, ಒಂದರ ಹಿಂದೆ ಒಂದು ವರದಾಚಾರ್ಯರ ಕಂಪನಿ, ಚಾಮುಂಡೇಶ್ವರಿ

ಕಂಪನಿ, ಸುಬ್ಬಯ್ಯನಾಯ್ಡು ಕಂಪನಿ ಹೀಗೆ ಒಂದಕ್ಕೊಂದು ಹೇಳಿಕೊಂಡು ಬಂದಾಗ, ಕೊನೆಯ ಕಂಪನಿ, ಹಳೆಯ ಮೈಸೂರಿನಲ್ಲಿ ಬಂದಿದ್ದು, ಗುಬ್ಬಿ ಕಂಪನಿ.

ಉತ್ತರ ಕರ್ನಾಟಕದಲ್ಲಿಯೂ ಗುಡಿಗೇರಿ ಬಸವರಾಜುರವರ 3-4 ಕಂಪನಿಗಳು ಉಳಿದಿವೆ. ನಾನು ಹೇಳುತ್ತೇನೆ, ನಮ್ಮ ಸಂಸ್ಕೃತಿ ಮತ್ತು ಕಲೆಗೆ, ವೃತ್ತಿ ರಂಗಭೂಮಿಯೇ ಬುನಾದಿ. ಅದನ್ನು ಉಳಿಸುವುದಕ್ಕೆ ಪ್ರಯತ್ನ ಮಾಡಬೇಕು. ಕನ್ನಡ ಚಲನಚಿತ್ರಗಳಿಗೆ ವರ್ಷಕ್ಕೆ ಇಷ್ಟು ಎಂದು ಸಹಾಯಧನ ಕೊಡುತ್ತಿದ್ದಾರೆ. ಈ ರಂಗಭೂಮಿಯನ್ನು ಉಳಿಸುವುದಕ್ಕೆ ಏನಾದರೊಂದು ಯೋಜನೆ ಮಾಡಿ, ವರ್ಷಕ್ಕೆ ಒಂದು ನಾಟಕ ಕಂಪನಿಗೆ ಕನಿಷ್ಟ 5 ಲಕ್ಷ ರೂಪಾಯಿಗಳನ್ನು ಕೊಟ್ಟು, ಈ ನಾಟಕ ಕಂಪನಿಗಳ ಪರಂಪರೆ, ಮತ್ತು ವೃತ್ತಿರಂಗ ಭೂಮಿಯ ಉಳಿವಿಗಾಗಿ ದುಡಿಯುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ತಮ್ಮಲ್ಲಿ ಕಳಕಳಿಯ ಮನವಿ. ಮತ್ತು ಈ ವೃತ್ತಿರಂಗಭೂಮಿ ನಟರ ವಿಷಯವಾಗಿ ಹೇಳುವುದಾದರೆ, 10 ವರ್ಷಗಳಿಂದ, ಒಬ್ಬ ವೃತ್ತಿ ರಂಗಭೂಮಿ ನಟರಿಗೂ ಮಾಸಾಶನ ಕೊಟ್ಟಿಲ್ಲ. ವರ್ಷಕ್ಕೆ ಒಂದೋ ಎರಡೋ ಕೊಟ್ಟುಕೊಂಡು ಬರಬೇಕಾಗಿತ್ತು, ಆದರೆ, ಇದುವರೆಗೂ ಅವರಿಗೆ ಕೊಟ್ಟಿಲ್ಲ. ಅವರಲ್ಲಿ ತೆಗೆದುಕೊಳ್ಳುವುದಕ್ಕೆ ಉಳಿದಿರುವವರ ಸಂಖ್ಯೆಯೂ ಕಡಿಮೆ. ಏಕೆಂದರೆ, ಸಾಕಷ್ಟು ಜನರಿಗೆ ವಯಸ್ಸಾಗಿದೆ, ಅನೇಕ ಜನರು ಮರಣ ಹೊಂದಿದ್ದಾರೆ. ಉಳಿದುಕೊಂಡಿರುವವರೆಲ್ಲರಿಗೂ ಒಂದೇಸಾರಿ ಕೊಡತಕ್ಕ ವ್ಯವಸ್ಥೆ ಮಾಡಬೇಕು. ಇದರ ಜೊತೆಗೆ ಹಳ್ಳಿಯಲ್ಲಿ ನಾಟಕಗಳು, ಇದು ಅತಿ ಮುಖ್ಯ. ತಾವು ಹಳ್ಳಿಗಳಲ್ಲಿ ನೋಡಿದ್ದೀರಿ. ಹಳ್ಳಿಯ ನಾಟಕದ ಬಗ್ಗೆ ಪಟೇಲರಿಗೆ ಗೊತ್ತು ಈ ನಾಟಕದ ವೈಭವ, ಈ ನಾಟಕದ ಗೀಳು, ಒಂದು ಲೆಗ್ ಹಾರ್ಮೋನಿಯಂ ಹಳ್ಳಿಗೆ ಬಂತೆಂದರೆ, ಆ ಊರಿನಲ್ಲಿ ಹಬ್ಬ ಇದ್ದಹಾಗೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ನಾಗಮಂಗಲದಲ್ಲಿ ಹೆಚ್ಚಿಗೆ ನಾಟಕ ಆಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಇಲ್ಲಿ ಬಂದು ನಾಗಮಂಗಲ ಎಂದು ಹೇಳುತ್ತೀರಿ, ಅಲ್ಲಿ ಟೈಮ್ ಎಂದು ಹೇಳುತ್ತೀರಿ.

ಶ್ರೀ ಎಲ್.ಆರ್. ಶಿವರಾಮೇಗೌಡ : ನಿಮಗೆ ಸಾಕಷ್ಟು ಟೈಮ್ ಕೊಟ್ಟಿದ್ದಾರೆ, ಅದರೂ ನೀವು ಅದನ್ನು ಏಕೆ ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್ : ಆಯಿತು, ನಾಗಮಂಗಲದಲ್ಲಿ ನಾಟಕ ಆಡುತ್ತಾರೆ. ಮಂಡ್ಯದ ಬೆಣ್ಣೆ ಕಾಳಪ್ಪನ ಸೀನು ಎಂದು ಹತ್ತಾರು ವರ್ಷಗಳಿಂದ ಇತಿಹಾಸವಿದೆ. ಆ ಲೈಟುಗಳು, ಆ ವ್ಯವಸ್ಥೆ ಮಾನ್ಯ ಜೆ.ಹೆಚ್. ಪಟೇಲರಿಗೂ ಗೊತ್ತು, ನನಗೂ ಗೊತ್ತು. ನಾಟಕದ ದೃಶ್ಯ ಇದೆಯಲ್ಲ, ಅದಕ್ಕೆ ಒಂದು ಇತಿಹಾಸವಿದೆ. ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಭಾಗಗಳಲ್ಲಿ ಬೇರೆ ನಾಟಕಗಳು. ಬೈಲಾಟ ಮತ್ತು ಯಕ್ಷಗಾನ. ನಿಜವಾಗಿಯೂ ಯಕ್ಷಗಾನದ ಬಗ್ಗೆ ನನ್ನದು ಎರಡನೇ ಅಭಿಪ್ರಾಯ ಇಲ್ಲ, ನಮ್ಮ ಕುಂಬ್ಳೆಯವರು ಇದ್ದಾರೆ, ಯಕ್ಷಗಾನದ ಬಗ್ಗೆ. ಸಂಪೂರ್ಣವಾಗಿ, ಒಳ್ಳೆಯ ಉತ್ತಮ ಪಾತ್ರಧಾರರು. ಮಾನ್ಯ ವೀರಪ್ಪಮೊಯಿಲಿಯವರ ಪಾತ್ರವನ್ನೂ ನೋಡಿದ್ದೇನೆ. ನಾಟಕಗಳು ವೈವಿಧ್ಯಮಯ ಎನ್ನುವುದಕ್ಕೆ ಇದರಲ್ಲಿ ಎಷ್ಟು ಕಂಪು ಇದೆಯೆಂಬುದಕ್ಕೆ, ನಾಟಕದಲ್ಲಿ ಬರತಕ್ಕಂಥ ಒಂದೆರಡು ಮೂರು ವಿಚಾರಗಳನ್ನು ಹೇಳುತ್ತೇನೆ. ಇದು ಮಾನ್ಯ ಪಟೇಲರಿಗೂ ಗೊತ್ತು, ನನಗೂ ಗೊತ್ತು. ದ್ರೌಪದಿ ವಸ್ತ್ರಾಪಹರಣ ನಾಟಕದ ದೃಶ್ಯದಲ್ಲಿ ಎಷ್ಟು ರಮ್ಯತೆ ಇರುತ್ತದೆನ್ನುವುದಕ್ಕೆ ಹೇಳುತ್ತೇನೆ. ದ್ರೌಪದಿ ಪಾತ್ರ ಮಾಡತಕ್ಕಂಥವರು ಗಂಡಸು. ಹಳ್ಳಿಯಲ್ಲಿ ದ್ರೌಪದಿ ಅಥವಾ ಯಾವುದೇ ನಾಟಕದಲ್ಲಿ ಪಾತ್ರ ಮಾಡತಕ್ಕಂಥವರು ಗಂಡಸರು.

ಹೆಣ್ಣು ಪಾತ್ರವನ್ನೂ ಗಂಡಸರೇ ಮಾಡತಕ್ಕಂತಾದ್ದು. ಇದರಲ್ಲಿ ಮಾನ್ಯ ಜಯರಾಂರವರು ಏನಾದರೂ ಹೆಂಗಸಿನ ಪಾತ್ರ ಮಾಡಿದರೆ ನಮಗೆ ಅಪಾಯ. ಯಾವುದಾದರೊಂದು ನಾಟಕ ಕಂಪನಿಯಲ್ಲಿ ಟಿಕೆಟ್ ಮಾಡಿ, ಈ ಮಂತ್ರಿಗಳಿಂದ ಪಾತ್ರ ಮಾಡಿಸಿದರೆ, ನಾವು ಅಪಾಯಕ್ಕೆ ಸಿಕ್ಕಿಕೊಳ್ಳುತ್ತೇವೆ. ಆದ್ದರಿಂದ ನಾನು ತಮಗೆ ಏನು ಹೇಳುತ್ತೇನೆಂದರೆ, ದ್ರೌಪದಿ ವಸ್ತ್ರಾಪಹರಣ ನಾಟಕದಲ್ಲಿ ದ್ರೌಪದಿ ಪಾತ್ರ ಮಾಡುವವರು ಗಂಡಸು ಮತ್ತು ಸೀರೆ ಎಳೆಯುವವ ದುಶ್ಯಾಸನ, ಅವನೂ ಗಂಡಸೇ. ಕೃಷ್ಣನ ಪಾತ್ರ ಮಾಡುವವರು, ಕೊನೆಯ ಅಭಯ ಅಥವಾ ತಥಾಸ್ತು ಕೊಡುವವರೂ ಗಂಡಸೇ. ಪ್ರತಿದಿನ ನಾಟಕ ನಡೆಯುತ್ತದೆ. ಗಂಡಸರು ದ್ರೌಪತಿ ಪಾತ್ರ ಮಾಡುವವರಿಗೆ 10 ಸೀರೆಗಳನ್ನು ಉಡಿಸುವುದು, ದುಶ್ಯಾಸನ 1-2-3 ಎಂದು ಎಳೆಯುವುದು. 10ನೇ ಸೀರೆ ಬಂದಾಗ ಸರಿಯಾಗಿ ಕೃಷ್ಣ ಪ್ರತ್ಯಕ್ಷನಾಗುವುದು.

ಶ್ರೀ ಜೆ.ಹೆಚ್. ಪಟೇಲ್ : ದ್ರೌಪದಿ ಪಾತ್ರ ಮಾಡುವವನು 10 ಸೀರೆ ಉಟ್ಟುಕೊಂಡು ಹೋಗಬೇಕು. ದುಶ್ಯಾಸನು ಸರಿಯಾಗಿ, ಲಯಬದ್ಧವಾಗಿ ಆ ಮೂರು ಸೀರೆ ಎಳೆಯುವ ಹೊತ್ತಿಗೆ, ಇವನು ಒಂದು ಬೀಡಿ ಸೇದಬೇಕು. ಇವರ ಮೂರು ಬೀಡಿ ಮುಗಿಯುವ ಹೊತ್ತಿಗೆ, ಅವನು 9 ಸೀರೆ ಎಳೆಯಬೇಕು. ದುಶ್ಯಾಸನು 10 ಸೀರೆ ಎಳೆಯುವ ಹೊತ್ತಿಗೆ ಸರಿಯಾಗಿ ಕೃಷ್ಣ ಹೋಗಬೇಕು. ಇದು ಅವರ ಅರೇಂಜ್‌ಮೆಂಟ್ ಇತ್ತು. ಇವನು ಮೂರು ಬೀಡಿಯನ್ನೂ ಸೇದಿದ. ಆದರೆ, ಅವತ್ತು ದ್ರೌಪದಿ ಪಾತ್ರ ಮಾಡಿರುವವನು ಅಕಸ್ಮಾತ್ 9 ಸೀರೆ ಉಟ್ಟುಕೊಂಡು ಹೋಗಿದ್ದ. ಮುಂದೆ ಏನಾಯಾತೆಂಬುದನ್ನು ನೀವೇ ಊಹಿಸಬೇಕು.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದರು. ಆವ 9 ಸೀರೆ ಎಳೆದ ನಂತರ, ದ್ರೌಪದಿ ಪಾತ್ರ ಮಾಡಿದವನ ಚಡ್ಡಿ ಬಂದುಬಿಟ್ಟಿತೇ. 10 ಸೀರೆ ಉಟ್ಟಿರಲಿಲ್ಲ ಅದಕ್ಕಾಗಿ ಚಡ್ಡಿ ಬಂದು ಬಿಟ್ಟಿತು ಎಂದು ಹೇಳುತ್ತಾನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಸಭಾಪತಿಯವರೇ ನಮ್ಮ ಮಾನ್ಯ ಸದಸ್ಯರು ಸ್ವಲ್ಪ ಗಾಂಭೀರ್ಯದಿಂದ ಮಹಿಳೆಯರ ಬಗ್ಗೆ ಮಾತನಾಡಬೇಕು. ನಾನು ಅದರಲ್ಲಿ ಅಪೀಲ್ ಮಾಡಿಕೊಳ್ಳುತ್ತೇನೆ. ತಾವು ಈ ಶಾಸನ ಸಭೆಯಲ್ಲಿ ಲಂಗು ಲಗಾಮು ಇಲ್ಲದೇ ಏನಿ ಬೇಕಾದರೂ ಮಾತನಾಡುತ್ತೇವೆ ಅಂದರೆ ಅದು ಖಂಡಿತವಾಗಿ ತಪ್ಪಾಗುತ್ತದೆ. ನಾವು ಮಹಿಳೆಯರು ಖಂಡಿತವಾಗಿ ಇದನ್ನು ಸಹಿಸುವುದಕ್ಕೆ ಸಾಧ್ಯ ಇಲ್ಲ. ಈ ಮಾತನ್ನು ನಾವು ಹೇಳಲೇಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ತಾವು ಹಾಗೆ ಹೇಳುತ್ತಿದ್ದೀರಿ. ಆದರೆ ನಾನು ನಿನ್ನೆ ನೋಡಿದೆ ಮಾಸ್ಕೋದಲ್ಲಿ ಕೆಳಮನೆಯಲ್ಲಿ ಒಬ್ಬ ಹೆಂಗಸು ಇನ್ನೊಬ್ಬ ಸದಸ್ಯರಿಗೆ ಕಪಾಳಕ್ಕೆ ಹೊಡೆಯುತ್ತಾಳೆ. ತಾವು ಸಹ ಪತ್ರಿಕೆಗಳಲ್ಲಿ ನೋಡಿರಬಹುದು. ನಮ್ಮ ಸಭೆ ಎಷ್ಟು ಆದರ್ಶವಾಗಿದೆ ಅಂದರೆ ನಾವು ಆ ಮಟ್ಟಕ್ಕೆ ಇಳಿದೇ ಇಲ್ಲ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಮಾನ್ಯ ಅಧ್ಯಕ್ಷರೇ, ಭಾರತ ದೇಶ ಮಾಸ್ಕೋ ಆಗುವುದು ಬೇಡ ಅಂತ ನಾನು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾಸ್ಕೋ ದೇಶ ಭಾರತ ಆಗುವುದು ಬೇಡ ಅಂತ ಹೇಳಿದ್ದಾರೆ ಸ್ವೀಕಾರ ಮಾಡೋಣ. ಆದರೆ ಮಾಸ್ಕೋ ದೇಶದ ಬೆಂಬಲ ನಮ್ಮ ಭಾರತ ದೇಶಕ್ಕೆ ಬೇಕು, ರಷ್ಯಾದ ಬೆಂಬಲ ಬೇಕು, ಅವರ ಸಂಸ್ಕೃತಿ ಬೇಡ. ಮತ್ತು ಬೇರೆ ಬೇರೆ ರಾಷ್ಟ್ರಗಳ ಕೈಗಾರಿಕೆಗಳು ಬೇಕು ನಮಗೆ. ಅವರ ವ್ಯಾಪಾರಗಳು ಬೇಕು ನಮಗೆ ಅವರ ಸಂಸ್ಕೃತಿಗಳು ಬೇಡ ನಮಗೆ. ವಿದೇಶಿ ಪೌಡರ್‌ಗಳು ಬೇಕು, ವಿದೇಶಿ ಬಾಚಣಿಗೆಗಳು ಬೇಕು, ವಿದೇಶಿ ವಿಗ್‌ಗಳು ಬೇಕು,

ವಿದೇಶಿ ಚಪ್ಪಲಿಗಳು ಬೇಕು, ಕೊಜೆಂಟ್ರಿಕ್ಸ್ ಬೇಕು ಇದು ಬೇಡ ಅಂದ್ರರೆ ಹೇಗೆ ಇದು?

(ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀಮತಿ ಲೀಲಾದೇವಿ. ಆರ್. ಪ್ರಸಾದ್ : ಮಾನ್ಯ ಅಧ್ಯಕ್ಷರೇ ಮಾನ್ಯ ವಾಟಾಳ್ ನಾಗರಾಜ್‌ಅವರು ನಮ್ಮ ಭಾರತ ದೇಶದ ಸಂಸ್ಕೃತಿಯಲ್ಲಿ ಬಹಳ ಗೌರವವನ್ನು ಹೆಣ್ಣು ಮಕ್ಕಳ ಬಗ್ಗೆ ತೋರಿಸತಕ್ಕಂಥ ಒಬ್ಬ ಮಾನ್ಯ ಸದಸ್ಯರು ಪರದೇಶದಲ್ಲಿ ಯಾವುದಾದರೂ ಒಳ್ಳೆಯ ಸಂಸ್ಕೃತಿ ಇದ್ದರೆ ಅದು ನಮಗೆ ಬೇಕು ಎಂದು ನಾವು ಹೇಳುತ್ತೇವೆ. ನಮ್ಮ ಸಂಸ್ಕೃತಿ ಚೆನ್ನಾಗಿ ಇರುವಾಗ ಬೇರೆ ದೇಶದ ಸಂಸ್ಕೃತಿಯನ್ನು ನಾವು ಅನುಕರಣೆ ಮಾಡತಕ್ಕಂಥಾದ್ದು ಸರಿಯಲ್ಲ ಎನ್ನತಕ್ಕಂಥಾದ್ದು ನನ್ನ ಅಭಿಪ್ರಾಯ.

ಉಪಾಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್, ಅವರೇ ತಾವು ವಿಷಯ ಪ್ರಸ್ತಾಪ ಮಾಡಿ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಉಪಾಧ್ಯಕ್ಷರೇ ಡೆನ್ಮಾರ್ಕ್ ಪ್ರಧಾನ ಮಂತ್ರಿಗಳನ್ನು ವಿಮಾನನಿಲ್ದಾಣದಲ್ಲಿ ಬಿಟ್ಟು ಬರತಕ್ಕಂಥ ಜವಾಬ್ದಾರಿಯನ್ನು ನನಗೆ ಮಾನ್ಯ ಸಭಾನಾಯಕರು ವಹಿಸಿಕೊಟ್ಟಿರುವುದರಿಂದ ನಾನು ತಮ್ಮ ಅನುಮತಿಯನ್ನು ಪಡೆದು ಅವರನ್ನು ಕಳುಹಿಸಿಕೊಡಲು ಹೋಗಿ ಬರುತ್ತೇನೆ.

ಉಪಾಧ್ಯಕ್ಷರು : ನಾಗರಾಜ್‌ರವರೇ ತಾವು ಬಹಳ ಚೆನ್ನಾಗಿ ಮಾತನಾಡುತ್ತೀರಿ. ವಿಷಯದ ಮೇಲೆ ಮಾತನಾಡಿ. ಬೇರೆ ಸದಸ್ಯರು ಮಾತನಾಡಲು ಅಪೇಕ್ಷಪಡುತ್ತಿದ್ದಾರೆ. ಆದ್ದರಿಂದ ಬೇರೆ ವಿಷಯಕ್ಕೆ ಹೋಗದೆ ವಿಷಯಕ್ಕೆ ಸೀಮಿತವಾಗಿ ಮಾತನಾಡಿ.

ಶ್ರೀ ಎಲ್. ಆರ್. ಶಿವರಾಮೇಗೌಡ : ಮಾನ್ಯ ಅಧ್ಯಕ್ಷರೇ ಮಾನ್ಯ ವಾಟಾಳ್ ನಾಗರಾಜ್‌ರವರು ಬಹಳ ಚೆನ್ನಾಗಿ ಬೆಳಕು ಚೆಲ್ಲುತ್ತಿದ್ದಾರೆ. ಅವರಿಗೆ ತಾವು ಎಷ್ಟು ಸಮಯ ಕೊಡುತ್ತೀರೋ ಕೊಡಿ ಬೇಡ ಅಂತ ನಾನು ಹೇಳುವುದಿಲ್ಲ ಆದರೆ ನಮಗೆ ಯಾವಾಗ ಸಮಯ ಕೊಡುತ್ತೀರಿ ಎನ್ನುವುದನ್ನು ಹೇಳಿಬಿಟ್ಟರೆ ಒಳ್ಳೆಯದು. ನಾವು ಹೋಗಿ ಬರುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಈಗ ನಾನು ಪ್ರಮೀಳಾರವರಿಗೆ ಭಯ ಬೀಳುತ್ತಿದ್ದೇನೆ. ನನಗೆ ಅವರ ಬಗ್ಗೆ ಬಹಳ ಗೌರವ ಇದೆ. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ನಾನು ಇನ್ನು ಯಾವುದಾದರೂ ನಾಟಕದ ಕಥೆಗಳು ಹೇಳುವುದಕ್ಕೆ ಹೋದರೆ ಅವರು ನನ್ನ ಮೇಲೆ ಬಿದ್ದು ಬಿಟ್ಟಾರು ಎನ್ನುವ ಭಯ. ಅವರು ನನ್ನ ಬಗ್ಗೆಗೌರವ ಇಟ್ಟುಕೊಂಡಿದ್ದಾರೆ. ಇನ್ನು 2-3 ಕಥೆಗಳು ಇವೆ ಹೇಳಿ ಅಂದರೆ ಹೇಳುತ್ತೇನೆ ಬೇಡ ಅಂದರೆ ಬೇಡ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಉಪಾಧ್ಯಕ್ಷರೇ ಹೇಳಬಹುದಾದುದ್ದನ್ನು ನಾನು ಯಾವತ್ತು ಬೇಡ ಎಂದು ಹೇಳಿಲ್ಲ, ಆದರೆ ನಮ್ಮ ಸದನಕ್ಕೆ ಒಂದು ಘನತೆ ಗೌರವ ಇದೆ ಅದನ್ನು ಉಳಿಸಿಕೊಳ್ಳಬೇಕು ಎಂದು ನಾನು ಹೇಳುತ್ತಿದ್ದೇನೆ. ನನಗೆ ಅವರ ಬಗ್ಗೆ ಅಪಾರವಾದ ಗೌರವ ಇದೆ. ಅವರು ಚಾಮರಾಜನಗರದವರು. ನಾನು ಚಾಮರಾಜ ನಗರದವಳೇ. ನಾವಿಬ್ಬರು ಒಂದು ರೀತಿಯಲ್ಲಿ ಬಂಧುಗಳು. ಆದರೆ ಅವರು ಹೇಳತಕ್ಕಂಥ ವಿಷಯಗಳು ಸ್ವಲ್ಪ ಮಿತಿಮೀರಿದಾಗ ನಾವು ಸ್ವಲ್ಪ ಲಗಾಮು ಹಾಕುವುದು ಅವಶ್ಯಕತೆ ಇದೆ ಅಂತ ನನಗನಿಸುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ ಗಾದೆಗಳು ವೇದಕ್ಕೆ ಸಮಾನ. ಈ ಗಾದೆಗಳು ಕೆಲವು ಕೆಟ್ಟವು ಇವೆ. ಅವು ನಮಗೆ ಕೆಟ್ಟ್ ಗಾದೆಗಳು ಅಂತ ಅನಿಸುತ್ತವೆ. ಈ ಗಾದೆಗಳು ಹಳ್ಳಿಯಲ್ಲಿ ಮಾತನಾಡುವಾಗ ಪ್ರಾಧಾನ್ಯ ಅವು ಸತ್ಯ.

ಅದನ್ನು ಇಲ್ಲಿ ಹೇಳಿದರೆ ಅಸತ್ಯ. ಇದು ನನಗನಿಸುತ್ತದೆ. ಈ ಗಾದೆಗಳು ಹೇಳಬೇಕೇ ಅಥವಾ ಬಿಡಬೇಕೇ ಎನ್ನತಕ್ಕಂಥ ಪ್ರಶ್ನೆ ಬರುತ್ತದೆ. ಅವುಗಳನ್ನು ನಾವು ಗಾದೆ ರೂಪದಲ್ಲಿಯೇ ಸ್ವೀಕಾರ ಮಾಡಬೇಕು. ಆದ್ದರಿಂದ ಅದು ಆಗಬಾರದು ಎಂದು ನನಗನಿಸುತ್ತದೆ. ಹಳ್ಳಿಯ ನಾಟಕಗಳು, ಹಳ್ಳಿಯ ಉಪಾಧ್ಯಾಯರು ಎಂದು ಯಾರು ಇದ್ದಾರೆ ಅವರು 6 ತಿಂಗಳಿಗೆ ಒಂದು ನಾಟಕವನ್ನು ಕಲಿಸುತ್ತಾರೆ 6 ತಿಂಗಳಿಗೆ ಒಂದು ನಾಟಕ. ಪ್ರತಿ ಉಪಾಧ್ಯಾಯರು ಪ್ರತಿ ಪಾತ್ರದಾರನ ಮನೆಯಲ್ಲಿ ಅವರು ಜೀವನ ಮಾಡತಕ್ಕಂಥಾದ್ದು ಆ ವರ್ಗದ ನಾಟಕದ ಉಪಾಧ್ಯಾಯರು ಯಾರು ಇದ್ದಾರೆ ಅವರು ಕರ್ನಾಟಕ ರಾಜ್ಯಾದ್ಯಂತ ಇದ್ದಾರೆ. ಈ ಉಪಾಧ್ಯಾಯರ ಬಗ್ಗೆ ಪ್ರಾಮಾಣಿಕವಾದ ಚಿಂತನೆ ವ್ಯವಸ್ಥೆ ಇರಬೇಕಾದುದು ನಮ್ಮ ಕರ್ತವ್ಯ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಿ ಆ ನಾಟಕದಲ್ಲಿ ಬರತಕ್ಕಂಥ ಕೆಲವು ವಿಚಾರಗಳನ್ನು ಶ್ರೀಮತಿ ಪ್ರಮೀಳಾರವರಿಗೋಸ್ಕರವಾಗಿ ನಾನು ಹೇಳುವುದನ್ನು ಬಿಟ್ಟಿದ್ದೇನೆ. ಅವರು ಹೇಳಿ ಅಂದರೆ ನನಗೇನೂ ಅಭ್ಯಂತರ ಇಲ್ಲ. ಅವರು ಆ ನಾಟಕದ ಮಾತುಗಳನ್ನು ಕೇಳುವ ಸೌಭಾಗ್ಯ ಇಲ್ಲ ಎನ್ನುವುದನ್ನು ಬಹಳ ನೋವಿನಿಂದ ನಾನು ಹೇಳುತ್ತಿದ್ದೇನೆ.

ಶ್ರೀಮತಿ ಬಿ.ಟಿ. ಲಲಿತನಾಯಕ್ : ಮಾನ್ಯ ಉಪಾಧ್ಯಕ್ಷರೇ ನಾಟಕಗಳು ಮತ್ತು ಹಳೆಯ ಸಂಪ್ರದಾಯ ಇವೆಲ್ಲವುಗಳನ್ನು ಕೂಡ ನಾವು ಅರಗಿಸಿಕೊಳ್ಳಬೇಕಾಗುತ್ತದೆ. ಅದು ಅಶ್ಲೀಲ ಅಲ್ಲ ಅದು ಹೇಳಿದ ದ್ರೌಪದಿಯ ವಿಷಯ ಎಂತಹ ಘನತರವಾದ ವಿಷಯ ಅದು. ಕೃಷ್ಣನಂತಹ ವ್ಯಕ್ತಿ ಅವಳಿಗೆ ಸೀರೆಯನ್ನು ಕೊಟ್ಟು ಮಾನ ದಾನ ಮಾಡಿದಂತಹ ವಿಷಯ. ಹಿಂದಿನವುಗಳು ಎಲ್ಲವೂ ಹೊನ್ನಿನಂತಹವು. ಆ ಹೊನ್ನಿನಂತಹ ಮಾತುಗಳನ್ನು ನಾವು ಅರಗಿಸಿಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆ ಅಂದರೆ ಹಳ್ಳಿಯ ನಾಟಕಗಳಿಗೆ ಎಷ್ಟು ಪ್ರಾವಿತ್ರ್ಯತೆ ಇದೆ ಎನ್ನುವುದಕ್ಕೆ ಒಂದು ಮಾತು ಹೇಳುತ್ತೇನೆ. ಒಬ್ಬ ರಾವಣನ ಪಾತ್ರ ಮಾಡಿದ್ದ. ಅವನ ಪಾತ್ರ ಕೊನೆಯ ನಾಲ್ಕನೇ ದೃಶ್ಯದಲ್ಲಿ ಬರತಕ್ಕಂಥಾದ್ದು. ಆ ಊರಿನ ಗೌಡರ ಮಗನೇ ಹಳ್ಳಿಯಲ್ಲಿ ನಾಟಕಗಳು ಆಡುವಾಗ ದೊಡ್ಡ ದೊಡ್ಡ ಪಾತ್ರಗಳೆಲ್ಲಾ ಗೌಡರ ಮಕ್ಕಳಿಗೆ ಕೊಡುವುದು. ಇದು ನಡೆದಿರತಕ್ಕಂಥಾದ್ದು. ಗೌಡರು ಎಂದರೆ ಆ ಊರಿನ ಯಜಮಾನ. ಆ ಪಾತ್ರ ಆ ಊರಿನ ಯಜಮಾನರಿಗೆ ಕೊಡಬೇಕು. ಅವನು ಏನು ಮಾಡಿದ ಕೊನೆಗೆ ಬರುವುದು ಅವನ ದೃಶ್ಯ. ಆ ರಾವಣನ ಪಾತ್ರಕ್ಕೆ ಏನೇನು ಬೇಕು ಆ ಭುಜಕೀರ್ತಿಗಳು ಕಿರೀಟ ಪ್ರತಿಯೊಂದು ಹಾಕಿಬಿಟ್ಟ. ಬೇಸಿಗೆ ಕಾಲ ಸರಿ ಅವನು 10 ಗಂಟೆಗೆ ಶುರು ಮಾಡಿದ 11 ಗಂಟೆ ಆಯಿತು 12 ಗಂಟೆ ಆಯಿತು ಒಂದು ಗಂಟೆ ಆಯಿತು ಸೆಕೆ ಶುರು ಆಯಿತು, ಸ್ವಲ್ಪ ಬೀಡೀಗೀಡಿ ಸೇದಿಕೊಂಡು ಹೊರಗಡೆ ಬಂದು ಸುತ್ತಾಡುತ್ತಿದ್ದ. ಈ ನಾಟಕ ನೋಡುವುದಕ್ಕೆ ಎರಡು ಹುಲ್ಲಿನ ಗಾಡಿಗಳು ಹುಲ್ಲು ಅರ್ಧ ತುಂಬಿತ್ತು ನಾಟಕದ ಕಂಪನಿ ಹೊರಗಡೆ ಗಾಡಿ ನಿಲ್ಲಿಸಿದ್ದರು, ಈ ರಾವಣನ ಪಾತ್ರ ಮಾಡತಕ್ಕಂಥವನಿಗೆ 3 ಗಂಟೆ ಆಗಿತ್ತು, ಸೆಕೆ ಜಾಸ್ತಿ ಆಯಿತು ಇವನು ಏನು ಮಾಡಿದ ರಾವಣ ಒಂದು 5 ನಿಮಿಷ ಗಾಡಿ ಮೇಲೆ ಮಲಗೋಣ ಅಂತ ಮಲಗಿದ.

ಕೊನೆಗೆ ನಾಟಕ ಶುರು ಆಯಿತು, ಆ ಹುಲ್ಲಿನ ಗಾಡಿಯಲ್ಲಿ ಬಂದಿದ್ದವರು ನಾಟಕ ನೋಡುವುದಕ್ಕೆ ಬಂದಿದ್ದರು. ಅವರು ಏನು ಮಾಡಿದರು ನಾಟಕದ ಕೊನೆಯ ದೃಶ್ಯದಲ್ಲಿ ಎದ್ದು ಹೊರಗೆ ಬಂದು ಗಾಡಿಯನ್ನು ಕಟ್ಟಿಕೊಂಡು ಹೊರಟುಬಿಟ್ಟರು. ರಾವಣ ಅಲ್ಲೇ ಮಲಗಿದ್ದಾನೆ ಗಾಡಿಯಲ್ಲಿ ಗಾಡಿ ಕಟ್ಟಿಕೊಂಡು ಊರು ಬಿಟ್ಟು ಹೋಯಿತು, ಬೆಳಿಗ್ಗೆ 5-30 ಗಂಟೆ ಚಳಿ ಆ ಕೆರೆಯ ಹತ್ತಿರ ಹತ್ತಿರ ಹೋಗುವಷ್ಟರಲ್ಲಿ ಬೆಳಕು ಬಂತು ರಾವಣನಿಗೆ ಎಚ್ಚರ ಆಯಿತು ಗಾಬರಿಯಿಂದ ಮೇಲೆದ್ದ ಅವನನ್ನು ಎತ್ತುಗಳು ನೋಡಿ ಕೆರೆಗೆ ಬಿದ್ದವು. ರಾವಣನು ಕೆರೆಗೆ ಬಿದ್ದ ಏನು ಗದೆ

ಎತ್ತಿಕೊಂಡು ಬರುತ್ತಿದ್ದಾನೆ, ಇಲ್ಲಿ ಊರಿನ ಮಗನನ್ನು ಯಾರೋ ಎತ್ತಿಕೊಂಡು ಹೋಗಿಬಿಟ್ಟಿದ್ದಾರೆ ಅಂತ ನಾಟಕ ನಿಲ್ಲಿಸಿದರು ಇವು ಹಳ್ಳಿಯಲ್ಲಿ ನಡೆಯತಕ್ಕಂಥ ಕಥೆಗಳು ಇಂತಹದ್ದು ಅನೇಕ ಇವೆ. ನಾನು ಹೇಳುವುದಿಲ್ಲ ಏಕೆಂದರೆ ಇವು ನಾಟಕದ ಸಂಸ್ಕೃತಿ. ಹಳ್ಳಿಯ ಸಂಸ್ಕೃತಿ ಎಷ್ಟು ಬೆಳೆದಿದೆ ಎನ್ನುವುದಕ್ಕೆ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಇಷ್ಟು ಹೇಳಿ ನಾನು ಮುಂದೆ ಹೋಗುತ್ತೇನೆ. ಮಾನ್ಯ ನಂಜೇಗೌಡರು ಎರಡು ಮೂರು ಕಥೆ ಕೇಳಬೇಕು ಅಂತ ಇದ್ದಾರೆ ಬೇಡ ಏಕೆ ಅದು ಸುಮ್ಮನೆ. ಮಾನ್ಯ ಅಧ್ಯಕ್ಷರೇ ನಾನು ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಲ್ಲಿ ನೇರವಾಗಿ ಮಾತನಾಡುತ್ತೇನೆ ನೀವು ಕವಿಗಳಿಗೆ ಸಾಹಿತಿಗಳ ಆರೋಗ್ಯಕ್ಕೆ ಅಂತ 53 ಸಾವಿರ ರೂಪಾಯಿಗಳನ್ನು ಇಟ್ಟಿದ್ದೀರಲ್ಲ ಇದನ್ನು ಏಕೆ ಇಡಬೇಕು ನೀವು? ಕನಿಷ್ಟ 10 ಲಕ್ಷ ರೂಪಾಯಿಗಳನ್ನು ನಾವು ಕವಿಗಳು, ಸಾಹಿತಿಗಳು ಇಂತಹ ಜನರ ವೈದ್ಯಕೀಯ ಸೌಲಭ್ಯಕ್ಕಾಗಿ ಇಡ ಅಂತ ನಾನು ಹೇಳುತ್ತೇನೆ ತಾವು ಎಷ್ಟಾದರೂ ಇಡಿ. ಆದರೆ 53 ಸಾವಿರ ರೂಪಾಯಿ ಇಟ್ಟಿರುವುದು ಒಳ್ಳೆಯ ಘನತೆ ಅಲ್ಲ, ಗಾಂಭೀರ್ಯ ಅಲ್ಲ ಎನ್ನತಕ್ಕಂಥ ಮಾತನ್ನು ನಾನು ಅತ್ಯಂತ ಕಳಕಳಿಯಿಂದ ಮನವಿ ಮಾಡಿ ಹೇಳುತ್ತಿದ್ದೇನೆ. ಶ್ರೀಮಾನ್ ಕೆ.ವಿ. ಶಂಕರೇಗೌಡರ ಹೆಸರಿನಲ್ಲಿ ಒಂದು ಪ್ರತಿಷ್ಠಾನ ಮಂಡ್ಯದಲ್ಲಿ ಪ್ರತಿ ವರ್ಷ ರಂಗಭೂಮಿ ಕಲಾವಿದರಿಗೆ ಒಂದು ಪ್ರಶಸ್ತಿಯನ್ನು ಕೊಡತಕ್ಕಂಥ ಒಂದು ವ್ಯವಸ್ಥೆ. ತಮಗೆ ಗೊತ್ತಿದೆ ಪ್ರತಿ ವರ್ಷ ನಡೆಯುತ್ತಿದೆ. ಅವರು ಈ ನಾಡಿಗಾಗಿ ಮತ್ತು ವಿದ್ಯಾಇಲಾಖೆಯ ಸಚಿವರಾಗಿ ಅಪಾರವಾದ ಕೆಲಸ ಮಾಡಿದಂತಹವರು, ಅವರ ಪ್ರತಿಷ್ಟಾನಕ್ಕೆ ಕನಿಷ್ಟ ವರ್ಷಕ್ಕೆ 2ಲಕ್ಷ ರೂಪಾಯಿಗಳನ್ನಾದರೂ ತಾವು ಕೊಡಬೇಕು. ಅವರ ಪ್ರತಿಷ್ಠಾನ ಬೆಳವಣಿಗೆ ಆಗಬೇಕು ಎನ್ನತಕ್ಕಂಥ ಮಾತನ್ನು ನಾನು ಹೇಳುತ್ತೇನೆ.

4.50 ಪಿ.ಎಂ

ಅಧ್ಯಕ್ಷರೇ, ಆಡಳಿತ ಭಾಷೆಯಾಗಿದೆ ಎಂದು ನಿಮಗೆ ಪ್ರಾಮಾಣಿಕತೆ ಇದೆಯೋ ಹೇಳಿ, ಪ್ರಾಮಾಣಿಕತೆ ಇದ್ದರೆ ನಾನು ಒಪ್ಪಿಕೊಳ್ಳುತ್ತೇನೆ. ಎಷ್ಟು ಅಧಿಕಾರಿಗಳು ಎಷ್ಟು ಮಂತ್ರಿಗಳು ಸರ್ಕಾರದ ಆದೇಶಗಳು ಕನ್ನಡದಲ್ಲಿ ಬಂದಿವೆ? ಕನ್ನಡದಲ್ಲಿ ಬರುತ್ತಿವೆ, ಕನ್ನಡದಲ್ಲಿ ಬರೆಯುತ್ತೀರಿ? ಹೇಳಿ ನೀವು. ಬಿಚ್ಚುಮನಸ್ಸಿನಿಂದ ಮಾತನಾಡೋಣ. ಸಂಪೂರ್ಣವಾಗಿ ಕನ್ನಡ ಆಡಳಿತ ಭಾಷೆಯಾಗಿಲ್ಲ, ಈ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಡಳಿತ ವರದಿ ಇಂಗ್ಲೀಷಿನಲ್ಲಿದೆ. ಮಿಕ್ಕ ಇಲಾಖೆಯ ಕಥೆ ಬೇರೆ. ಕನ್ನಡ ಸಂಸ್ಕೃತಿ ಇಲಾಖೆ ಆಡಳಿತ ವರದಿ ತಮಗೆ ತೋರಿಸುತ್ತೇನೆ ಅಧ್ಯಕ್ಷರೇ ಮನಸ್ಸಿಗೆ ಎಷ್ಟು ನೋವಾಗುತ್ತದೆಂದರೆ, ಇಂಗ್ಲೀಷಿನಲ್ಲಿ ಇದ್ದರೆ ನನ್ನ ಅಭ್ಯಂತರವೇನಿಲ್ಲ, ಸಂತೋಷ. ಈಗ ನನಗೆ ಬಂದಿರುವ ವರದಿ ಪ್ರಕಾರ ನ್ಯಾಯಾಂಗ ಇಲಾಖೆಯದು ಇಂಗ್ಲೀಷಿನಲ್ಲಿದೆ. ಮಂಗಳೂರು ವಿಶ್ವವಿದ್ಯಾಲಯದ್ದು ಕನ್ನಡದಲ್ಲಿದೆಯೇ? ಹಾಸನ ಜಿಲ್ಲಾಪರಿಷತ್ ಕನ್ನಡದಲ್ಲಿಲ್ಲ, ಸುಮಾರು 10-15 ಜಿಲ್ಲಾಪರಿಷತ್ತುಗಳು, ಸರ್ಕಾರದ ಆಡಳಿತ ಇವೆಲ್ಲ ಇಂಗ್ಲೀಷಿನಲ್ಲಿವೆ. ಇವಕ್ಕೆ ಪರ್ಯಾಯವಾಗಿ ಕನ್ನಡದಲ್ಲಿ ಒಂದಿಲ್ಲ, ತರ್ಜುಮೆಯಿಲ್ಲ, ನಮ್ಮ ಸದನ ಸಮಿತಿಗಳ ವರದಿಗಳು ಸಂಪೂರ್ಣವಾಗಿ ಕನ್ನಡದಲ್ಲಿಲ್ಲ, ಎಲ್ಲಾ ಬರೀ ಇಂಗ್ಲೀಷ್. ಹಾಗಾದರೆ ನೀವು ಹೇಳಿ ಸರ್ಕಾರದ ನೀತಿ ಕನ್ನಡವಲ್ಲ, ಆಡಳಿತ ಭಾಷೆ ಕನ್ನಡವಲ್ಲ, ನಮ್ಮದಲ್ಲವೆಂದು ಸ್ಪಷ್ಟಪಡಿಸಿಬಿಡಿ ಅದರ ಬಗ್ಗೆ ಎರಡನೇಯ ಅಭಿಪ್ರಾಯವಿಲ್ಲ, ನೀವು ಯಾವುದೂ ಹೇಳದೆ ಸಂಪೂರ್ಣವಾಗಿ ಇಲ್ಲಿ ಇಂಗ್ಲೀಷಿನಲ್ಲಿ ಕೊಟ್ಟು ನಾವು ಕನ್ನಡದಲ್ಲಿ ಆಡಳಿತ ನಡೆಸುತ್ತೇವೆನ್ನುವ ಮಾತು ಏನು ಹೇಳುತ್ತೀರಿ ಅದರಿಂದ ನನಗೇನು ಅಷ್ಟು ಸಂತೋಷವಿಲ್ಲ, ಈ ಬಗ್ಗೆ ಅತ್ಯಂತ ಕಳಕಳಿಯಿಂದ ನಾನು ಮನವಿ ಮಾಡುತ್ತಿದ್ದೇನೆ. ಅಧ್ಯಕ್ಷರೇ ಈ ಬಗ್ಗೆ ಸರ್ಕಾರ ತೀವ್ರವಾದ ಚಿಂತನೆ ಮಾಡಬೇಕು ನಿಮ್ಮ ಸರ್ಕಾರ ಕರ್ನಾಟಕದ ಅಭಿವೃದ್ಧಿಗೆ ಕನ್ನಡದ ಬೆಳವಣಿಗೆ ಏನು ಬದ್ಧವಾಗಿದೆಯೆಂದು ಹೇಳುತ್ತಿದೆ ಆ ನೀತಿಯನ್ನು ತಾವು

ಸ್ಪಷ್ಟಪಡಿಸಬೇಕೆಂದು ತಮ್ಮಲ್ಲಿ ಕಳಕಳಿಯಿಂದ ನಾನು ಮನವಿ ಮಾಡುತ್ತಿದ್ದೇನೆ. ಇನ್ನು ಐದೇ ನಿಮಿಷದಲ್ಲಿ ಮಾತು ಮುಗಿಸುತ್ತೇನೆ. ಈ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ - ನನಗನ್ನಿಸುತ್ತದೆ ಪ್ರವಾಸೋದ್ಯಮ ಇಲಾಖೆಯ ಪುನರ್ರಚನೆಯಾಗಬೇಕು "Karnataka Tourist Trade Act"ನ್ನು ಜಾರಿಗೆ ಬರಬೇಕು. ವೈಭೋಗ ತೆರಿಗೆ ತೆಗೆಯಬೇಕು ಮತ್ತು ಪ್ರತ್ಯೇಕ ಬಜೆಟ್ ಇದಕ್ಕಾಗಿ ಒದಗಿಸಬೇಕು ಮತ್ತು ಹೋಟೆಲ್ ಉದ್ಯಮವನ್ನು ಕೈಗಾರಿಕೆಯೆಂದು ಪ್ರವಾಸೋದ್ಯಮದಲ್ಲಿ ಸೇರಿಸಿರುವುದರಿಂದ ಅವರಿಗೆ ವಿದ್ಯುತ್ ದರವನ್ನು ಕೈಗಾರಿಕೆಗಳಿಗೆ ಕೊಡುವ ದರದಲ್ಲೇ ಕೊಡಬೇಕು ಎಂಬುದು ನನ್ನ ಮನವಿ.

ಮೈಸೂರು ದಸರಾ ವಸ್ತುಪ್ರದರ್ಶನ ಕೇಂದ್ರ ಪ್ರೇಕ್ಷಣೀಯ ಸ್ಥಳವಾಗಬೇಕು - ಈ ತರಹ ಪ್ರವಾಸೋದ್ಯಮ ಇಲಾಖೆ ಉತ್ತಮವಾಗಿ ಬೆಳೆಯುವುದಕ್ಕೆ ಪರಿಣಾಮಕಾರಿಯಾದ ಕ್ರಮಗಳನ್ನು ಕೈಗೊಳ್ಳಬೇಕು. ಅಭಿವೃದ್ಧಿ ನಿಗಮದ ಹೋಟೆಲ್‌ಗಳನ್ನು ನೋಡಬೇಕು ಅಧ್ಯಕ್ಷರೇ, ಅವುಗಳಲ್ಲಿ ಯಾವ ಪ್ರವಾಸಿಯೂ ಇಳಿಯುವ ವ್ಯವಸ್ಥೆಯಿಲ್ಲ, ಆದ್ದರಿಂದ ಅಭಿವೃದ್ಧಿ ನಿಗಮ ಮತ್ತು ಪ್ರವಾಸೋದ್ಯಮ ಇಲಾಖೆಯ ಅಧಿಕಾರಿಗಳು ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದಾರೆ ಅವರ ಬಗ್ಗೆ ನನಗೆ ಬಹಳ ಗೌರವವಿದೆ ಆದರೆ ಅವರಿಗೆ ತಕ್ಕ ಸೌಲಭ್ಯ ವ್ಯವಸ್ಥೆ ಸರ್ಕಾರ ಕೊಟ್ಟಿಲ್ಲ. ಈ ನಿಗಮಕ್ಕೆ ವಹಿಸಿರುವ ಹೋಟೆಲ್ ಸ್ಥಳಗಳನ್ನು ಆಧುನೀಕರಣಗೊಳಿಸಲು ಸರ್ಕಾರ ಹೆಚ್ಚಿನ ಹಣ ಒದಗಿಸಬೇಕೆಂಬುದು ನನ್ನ ಪ್ರಾಮಾಣಿಕ ಚಿಂತನೆ. ನಮ್ಮ ವೈಮಾನಿಕ ತರಬೇತಿ ಕೇಂದ್ರ ಇಂಡಿಯಾದಲ್ಲೇ ಒಂದು ಉತ್ತಮ ಕೇಂದ್ರ. ಇದು ಮಂಗಳೂರಿನಲ್ಲಾಗಬೇಕು ಹುಬ್ಬಳ್ಳಿಯಲ್ಲಾಗಬೇಕು ಗುಲ್ಬರ್ಗದಲ್ಲಾಗಬೇಕು ಎಲ್ಲಾ ಕಡೆ ಆಗಬೇಕು ಮತ್ತು ಬೆಂಗಳೂರಿನ ವೈಮಾನಿಕ ಕೇಂದ್ರಕ್ಕೆ ಎಲ್ಲಾ ಸವಲತ್ತುಗಳನ್ನು ಕೊಡಬೇಕು. ಅಲ್ಲಿ ಸುತ್ತ ಗೋಡೆ ಇಲ್ಲ, ಬಾಗಿಲಿಲ್ಲ, ಒಳ್ಳೆಯ ರನ್‌ವೇ ಇಲ್ಲ, ಹೊಸ ವಿಮಾನಗಳಿಲ್ಲ ಈ ಪರಿಸ್ಥಿತಿ ಇದೆ. ಹೊಸ ವಿಮಾನಗಳನ್ನು ಖರೀದಿ ಮಾಡಬೇಕು, ಗೋಡೆ ವ್ಯವಸ್ಥೆ ಬಾಗಿಲುಗಳ ವ್ಯವಸ್ಥೆಯಾಗಬೇಕು. ಕರ್ನಾಟಕದ ಸಮಗ್ರ ಚಿಂತನೆ ಪ್ರಾಚ್ಯವಸ್ತು ಇಲಾಖೆ ಇದರಲ್ಲಿ ಐವತ್ತು ಕಡೆ ಮಾತ್ರ ನಮ್ಮವರು ಕಾಯುವ ವ್ಯವಸ್ಥೆ ಇರಬಹುದು, ಉಳಿದ ಕಡೆ ಅಮೂಲ್ಯವಾದ ಬೆಲೆ ಕಟ್ಟದಿರುವಂತಹ ಸ್ಥಳಗಳನ್ನು ಕಾಯಲಿಕ್ಕೆ ಒಬ್ಬ ಜವಾನ ಸಹ ಇಲ್ಲ ಈ ಪರಿಸ್ಥಿತ ಪ್ರಾಚ್ಯವಸ್ತು ಇಲಾಖೆಗೆ ಬಂದಿದೆ - ಇವೆಲ್ಲವನ್ನೂ ಸಮಗ್ರ ಚಿಂತನೆಮಾಡಿ ವ್ಯವಸ್ಥಿತವಾಗಿ ನಡೆಸಬೇಕಾದದ್ದು ಕರ್ತವ್ಯ. ಪತ್ರಾಗಾರ ಇಲಾಖೆ ವಿಧಾನಸೌಧದ ಕೆಳಗಡೆ ಸಣ್ಣ ಗೋಡೌನ್‌ನಲ್ಲಿದ್ದ ಹಾಗೆ ಇದೆ. ಇಂಗ್ಲೀಷರ ಕಾಲದಲ್ಲಿ ಆಡಳಿತ ನಡೆಸಿದ್ದು, ಟಿಪ್ಪುಸುಲ್ತಾನ ಕಾಲ ಹೈದರಾಲಿ ಕಾಲದ ಎಲ್ಲಾ ಕಾಲದ ಪತ್ರಗಳನ್ನು ಅಲ್ಲಿಟ್ಟಿದ್ದೇವೆ, ಅಮೂಲ್ಯ ವಸ್ತುಗಳಿವೆ, ಅವನ್ನು ನೋಡಿಕೊಳ್ಳುವಂಥ ವ್ಯವಸ್ಥೆ ಇವತ್ತು ನಮ್ಮಲ್ಲಿಲ್ಲ, ಈ ಇಲಾಖೆಗಳನ್ನೆಲ್ಲ ಕಡೆಗಣಿಸಿದ್ದೇವೆ. ನನಗನ್ನಿಸುತ್ತದೆ, ಈ ಇಲಾಖೆಯ ಬೆಳವಣಿಗೆ, ಚಿಂತನೆ ಬಗ್ಗೆ ಒಂದು ಹೊಸ ಆಯಾಮ ನಿರ್ಮಾಣವಾಗಬೇಕೆಂದು ಹೇಳುತ್ತ, ಅಧ್ಯಕ್ಷರೇ ನಾನು ಹೆಚ್ಚು ಕಾಲ ತೆಗೆದುಕೊಂಡೆ ಎಂಬ ವಿಚಾರಕ್ಕಿಂತ ಕೆಲವು ವಿಚಾರಗಳನ್ನು ತಮಗೆ ತಿಳಿಸಲು ಅವಕಾಶ ದೊರಕಿದ್ದಕ್ಕೆ ತಮ್ಮನ್ನು ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಸಮಿತಿಗಳಲ್ಲಿ ನಾವು ಕೊಟ್ಟಿರುವ ವರದಿಗಳನ್ನು ಪ್ರಾಮಾಣಿಕವಾಗಿ ಸರ್ಕಾರ ಕಾರ್ಯಗತಗೊಳಿಸಬೇಕು, ಇಲ್ಲದೇ ಹೋದರೆ ಸಮಿತಿಯ ವರದಿಗಳಿಗೆ ಗೌರವ ಬರುವುದಿಲ್ಲ ಎಂದು ಹೇಳಿ, ಸಮಿತಿಯ ವ್ಯವಸ್ಥೆ ಚಿಂತನೆ ಬಹಳ ಚೆನ್ನಾಗಿದೆ ವ್ಯವಸ್ಥಿತ ಕಾರ್ಯವನ್ನು ಮಾಡುತ್ತದೆ ನಾನು ಈ ಸಂದರ್ಭದಲ್ಲಿ ಹೇಳಿ ಕೊನೆಯದಾಗಿ, ತೋಟಗಾರಿಕೆ ಇಲಾಖೆ ಬೆಳವಣಿಗೆ ಬಗ್ಗೆ ಸಮಗ್ರವಾಗಿ ನಾವ್ಯಾರೂ ಚಿಂತನೆ ಮಾಡಿಲ್ಲ, ತಾವು ನೋಡಬೇಕು, ಕಬ್ಬನ್ ಉದ್ಯಾನವನ - ಅದೆಷ್ಟು ಪ್ರಸಿದ್ಧವಾದದು. ಪ್ರತಿ ಜಿಲ್ಲೆ ತಾಲ್ಲೂಕು ಎಲ್ಲ ಕಡೆ ವ್ಯವಸ್ಥಿತವಾದ ತೋಟಗಾರಿಕೆ ಬೆಳೆಸಲು ಒಂದು ವಿಶಿಷ್ಟ ಯೋಜನೆ ಹಾಕಬೇಕೆಂಬುದು ನನ್ನ ಚಿಂತನೆ ಎಂದು ಹೇಳಿ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಅಧ್ಯಕ್ಷರೇ, ಬಹಳ ಸದಸ್ಯರು ಏಳು ವಿಚಾರಗಳ ಬಗ್ಗೆ ಬಹಳ ಗಂಭೀರವಾಗಿ ಚರ್ಚೆ ಮಾಡಿದ್ದಾರೆ. ಉನ್ನತ ಹಾಗೂ ಪ್ರಾಥಮಿಕ ಶಿಕ್ಷಣ - ಈಗ ಪ್ರಾಥಮಿಕ ಶಿಕ್ಷಣ ಹೇಗಾಗಿದೆ ಎಂದರೆ ಮನೆಯಲ್ಲಿ ಮಕ್ಕಳು ಗಲಾಟೆ ಮಾಡುತ್ತಿದ್ದರೆ ಒಂದು ದೊಡ್ಡಿಗೆ ತೆಗೆದುಕೊಂಡು ಹೋಗಿ ಕೂಡಿ ಹಾಕೋಣ ಅದಕ್ಕೊಂದು ಅಲ್ಲಿಗೆ ಒಬ್ಬ ಉಪಾಧ್ಯಾಯರನ್ನು ನೇಮಿಸಿದ್ದೇವೆ. ಅವರು ಅಲ್ಲಿ ಪಾಠ ಮಾಡಬೇಕು. ಆದರೆ ನಾವು ಇವತ್ತಿನ ಶಿಕ್ಷಣಪದ್ಧತಿ ಬಗ್ಗೆ ಗಂಭೀರವಾಗಿ ಯೋಚನೆ ಮಾಡಬೇಕು, ಎಷ್ಟೊಂದು ಹಣವನ್ನು ನಾವು ಕೊಡುತ್ತೇವೆ ಅದರ ಮೂಲಕ ಶಿಕ್ಷಣದಲ್ಲಿ ಏನೇನು ಬದಲಾವಣೆಯಾಗಿದೆ ಅದರ ಮೌಲ್ಯ ಏನಾದರೂ ಬದಲಾಯಿಸಲು ಸಾಧ್ಯವೇ? ಇದನ್ನು ಅತ್ಯಂತ ಗಂಭೀರವಾಗಿ ಯೋಚನೆ ಮಾಡಬೇಕು. ಹಿರಿಯ ಪ್ರಾಥಮಿಕ ಶಿಕ್ಷಣದಲ್ಲೇ ಉದ್ಯೋಗವನ್ನು ಪರಿಚಯ ಮಾಡುವ ಕಾರ್ಯಕ್ರಮ ಮಾಡಿದರೆ ಭಾರಿ ಅನುಕೂಲವಿದೆ. ಏಕೆಂದರೆ ಇವತ್ತು ನಿರುದ್ಯೋಗಿಗಳನ್ನು ಸೃಷ್ಟಿಮಾಡುವಂತಹ ಶಿಕ್ಷಣ ಪರಿಸ್ಥಿತಿ ರಾಜ್ಯಸರ್ಕಾರದಲ್ಲಿ ಮಾಡುತ್ತಿದ್ದೇವೆ ಅಷ್ಟೆ, ಹಿರಿಯ ಪ್ರಾಥಮಿಕ ಶಿಕ್ಷಣದಲ್ಲಿಯೇ ಉದ್ಯೋಗವನ್ನು ಪರಿಚಯ ಮಾಡುವುದಕ್ಕೆ ಸೃಷ್ಟಿ ಮಾಡಿದರೆ ಒಂದು ಹೊಸ ಬದಲಾವಣೆ ಮಾಡಲು ಸಾಧ್ಯ. ಪ್ರೌಢಶಾಲೆ ನಂತರ ಅವನು ಕಾಲೇಜಿಗೆ ಹೋಗಬಹುದು ಇಲ್ಲ ಉನ್ನತ ಶಿಕ್ಷಣವನ್ನು ವ್ಯಾಸಂಗ ಮಾಡಬಹುದು ಇಲ್ಲಾಂದರೆ ತಾನು ಕಲಿತಿರುವ ಉದ್ಯೋಗ ಮಾಡಿ ಬದುಕುವಂತಹ ಶಿಕ್ಷಣ ನಮಗೆ ಬೇಕು. ಇವತ್ತು ಶಿಕ್ಷಣ ಮೂರು ವಿಚಾರಗಳ ಮೇಲೆ ಪ್ರಾಮುಖ್ಯತೆಯನ್ನು ಹೊಂದಿದೆ. ಒಂದು ಸಂಸ್ಕೃತಿಯ ಸಂಬಂಧ, ಎರಡನೆಯದು ಜ್ಞಾನವನ್ನು ಬೆಳೆಸಿಕೊಳ್ಳುವುದು, ಮೂರನೆಯದು ಉದ್ಯೋಗ ಸೃಷ್ಟಿಮಾಡುವುದು - ಈ ಮೂರರ ಆಧಾರದಮೇಲೆ ಶಿಕ್ಷಣ ಬೆಳೆಯಬೇಕು. ಆದರೆ ಆ ರೀತಿ ಎಲ್ಲಿ ಬೆಳೆಯುತ್ತಿದೆ? ನಾವು 331 ಕೋಟಿ ರೂ.ಗಳನ್ನು ಶಿಕ್ಷಣ ಹಾಗೂ ಕ್ರೀಡೆಗೆ ಕೊಡುತ್ತಿದ್ದೇವೆ. ಈಗ ನಾವು ಉನ್ನತ ಶಿಕ್ಷಣದ ಬಗ್ಗೆ ಯೋಚನೆ ಮಾಡಬೇಕು.

ಯಾರೋ ಒಬ್ಬ ಲಕ್ಷಾಂತರ ದುಡ್ಡು ಕೊಟ್ಟು ಮೆಡಿಕಲ್ ಓದಿರುತ್ತಾನೆ ಆದರೆ ಅವನಿಗೆ ಜನಜೀವನದ ಪರಿಚಯವೇ ಇರುವುದಿಲ್ಲ ಬರೀ ಕ್ಯಾಡ್‌ಬರೀಸ್ ಚಾಕ್ಲೇಟ್ ತಿಂದು ಬೆಳೆದಿರುತ್ತಾರೆ. ಕನಿಷ್ಟ ಒಂದು ತಿಂಗಳು ಗ್ರಾಮೀಣ ಪ್ರದೇಶದಲ್ಲಿ ಬಡತನ ರೇಖೆ ಕೆಳಗಿರುವ ಜನರ ಸೇವೆ ಮಾಡಿದರೆ ಮಾನವೀಯತೆ ಸಂಬಂಧದ ವಿಚಾರ ಬೆಳೆಸಿಕೊಳ್ಳಬಹುದು. ಯಾವಾಗಲೂ ಶಿಕ್ಷಣ ಸಮಾಜದ ಪರವಾಗಿರಬೇಕು. ಇವತ್ತು ಒಬ್ಬ ಡಾಕ್ಟರನ್ನು ಓದಿಸಬೇಕಾದರೆ ನಮಗೆ ಸಮಾಜದಿಂದ ಐದು ಲಕ್ಷ ಖರ್ಚಾಗುತ್ತದೆ. ಅದು ಜನರ ತೆರಿಗೆಯಿಂದ ಹೋಗುತ್ತದೆ. ಒಬ್ಬ ಇಂಜಿನಿಯರನ್ನು ಓದಿಸಬೇಕಾದರೆ ಮೂರೂವರೆ ಲಕ್ಷ ಖರ್ಚಾಗುತ್ತದೆ ಇವತ್ತು ಯಾರ‍್ಯಾರು ನಾವು ಓದಿದ್ದೇವೆ ನಾವೆಲ್ಲ ಸಮಾಜದ ಋಣದ ಮೇಲೆ ಬದುಕಿರುವವರು. ನಮ್ಮ ಸಮಾಜದ ಪರವಾಗಿ ಕೆಲಸ ಮಾಡಬೇಕು, ಹಾಗೆ ಮಾಡಬೇಕಾದರೆ ಶಿಕ್ಷಣ ಸಮಾಜದ ಮಧ್ಯದಲ್ಲಿ ಬೆಳೆಯಬೇಕು. ಕ್ಯಾಡ್‌ಬರಿಸ್ ಚಾಕ್ಲೆಟ್ ತಿಂದು ಬೆಳೆದರೆ ಅವನೇನು ಸಮಾಜದಲ್ಲಿ ಬದಲಾವಣೆ ತರಲು ಸಾಧ್ಯವಿಲ್ಲ, ಆದ್ದರಿಂದ ನಾನು ಹೇಳುವುದು ಬಿ.ಎ. ಎಂ.ಎ ಓದಿದರೆ ಏನು ಪ್ರಯೋಜನ? ಉದ್ಯೋಗವನ್ನು ಹೆಚ್ಚು ಸೃಷ್ಟಿಮಾಡುವಂತಹ ಶಿಕ್ಷಣವನ್ನು ತಾವು ಪರಿಚಯ ಮಾಡಿಕೊಡಬೇಕು ಹಿಂದೆ ಯಾವುದೋ ಒಂದು ಸಭೆಗೆ ಹೋದಾಗ ಯಾರೋ ಒಬ್ಬ ಹೇಳುತ್ತಿದ್ದ, ಒಬ್ಬ ಬಿ.ಎ. ಓದಿವನಿಗೆ ಕೆಲಸ ಎಲ್ಲೂ ಸಿಗಲಿಲ್ಲವಂತೆ, ಕೊನೆಗೆ ಒಂದು ಕಂಪೆನಿಗೆ ಹೋಗಿ ಯಾವುದಾದರೂ ಕೆಲಸ ಇದ್ದರೆ ಕೊಡು ಎಂದು ಕೇಳಿದನಂತೆ ಅವನು ಮುಂದುಗಡೆ ಬಣ್ಣಗಿಣ್ಣ ಬಳಿದು ಓಡಾಡಿಕೊಂಡಿರುವ ಜೋಕರ್ ಕೆಲಸ ಕೊಟ್ಟನಂತೆ. ಸರಿ ಇವನು 6 ತಿಂಗಳವರೆಗೆ ಜೋಕರ್ ಕೆಲಸ ಮಾಡಿಕೊಂಡಿದ್ದ ಸ್ವಲ್ಪ ಪಲ್ಟಿಗಿಲ್ಟಿ ಹೊಡೆಯೋದೆಲ್ಲ ಕಲಿತುಕೊಂಡ ಇದಕ್ಕಿದ್ದಂತೆ ಒಂದು ಸಲ ಹುಲಿಬೋನಿಗೆ ಬಿದ್ದುಬಿಟ್ಟನಂತೆ, ಆಗ ಹುಲಿ ಗುರ್ ಅಂತಂತೆ ಇವನು

ಬಡಿದುಕೊಳ್ಳುವುದಕ್ಕೆ ಶುರುಮಾಡಿದನಂತೆ ಆಗ ಹುಲಿ ಹೇಳಿತಂತೆ, ಏ, ನೀನು ಬಿ.ಎ ಓದಿದ್ದರೆ ನಾನು ಎಂ.ಎ. ಓದಿದ್ದೇನೆ. ಸುಮ್ಮನೆ ನಿಂತುಕೊಳ್ಳಲೇ ಅಂತಂತೆ, ಹುಲಿ ವೇಷ ಹಾಕಿರುವವನು ಎಂ.ಎ ಓದಿದವನು - ಇವನು ಬಿಎ ಓದಿದವನು - ಈ ತರಹ ನಿರುದ್ಯೋಗವನ್ನು ಸೃಷ್ಟಿ ಮಾಡುವಂತಹ ಶಿಕ್ಷಣ, ಬಿ.ಎ, ಎಂ.ಎ, ಓದಿಬಂದು ಊರಿನಲ್ಲಿ ಗದ್ದೆ ಕೆಲಸವನ್ನು ಮಾಡುವ ಹಾಗಿಲ್ಲ ಅವರು ಉದ್ಯೋಗವೂ ಇಲ್ಲ, ಬ್ರಿಟಿಶರ ಕಾಲದ ಗುಲಾಮಗಿರಿ ಪದ್ಧತಿಯಲ್ಲಿ ನಾವು ಕಂಟಿನ್ಯೂ ಮಾಡಿಕೊಂಡು ಹೋಗುತ್ತಿದ್ದೇವೆ ಈ ಸರ್ಕಾರ ಬರಬಹುದು, ಇನ್ನೊಂದು ಸರ್ಕಾರ ಬರಬಹುದು, ಆದ್ದರಿಂದ ಉದ್ಯೋಗೀಕರಣ ಶಿಕ್ಷಣ ನಮಗೆ ಬೇಕು ಅದನ್ನು ಹಿರಿಯ ಪ್ರಾಥಮಿಕ ಶಾಲೆ ಮೂಲಕ ನಾವು ಪಿ.ಯು.ಸಿ.ಗೆ ಹೋಗುವ ಹೊತ್ತಿಗೆ ಒಂದು ಉದ್ಯೋಗದಲ್ಲಿ ಪರಿಣತಿ ಪಡೆದಿರುವಂತಹ ಜ್ಞಾನ ಬೆಳೆಸಿಕೊಂಡರೆ ಶಿಕ್ಷಣದ ಹಣ ಖರ್ಚು ಮಾಡಿದ್ದರಿಂದ ಏನಾದರೂ ಪ್ರಯೋಜನ ಆಗಲು ಸಾಧ್ಯ ಇಲ್ಲದೇ ಇದ್ದರೆ ಏನೂ ಪ್ರಯೋಜನವಿಲ್ಲ.

ಜೊತೆಗೆ ಕಡ್ಡಾಯ ಶಿಕ್ಷಣ ಕಡ್ಡಾಯ ಕ್ರೀಡೆಗಳಿಗೆಂದು ಇನ್ನೂ ಖರ್ಚು ಮಾಡುತ್ತಿದ್ದೇವೆ. ಕಡ್ಡಾಯ ಕ್ರೀಡೆ ಇರಲೇಬೇಕು, ಕ್ರೀಡೆಯಲ್ಲಿ ಭಾಗವಹಿಸದಿರುವ ಮಕ್ಕಳನ್ನು ಯಾವುದೇ ಕಾರಣಕ್ಕೂ ಮುಂದಿನ ಕ್ಲಾಸ್‌ಗೆ ಪಾಸ್ ಮಾಡುವ ಪರಿಸ್ಥಿತಿ ಇರಬಾರದು ಕಡ್ಡಾಯಕ್ರೀಡೆ ಪರಿಚಯ ಮಾಡಿಕೊಡಬೇಕು. ಯಾವಾಗಲೂ ಯುವಶಕ್ತಿ ಬೆಳೆಯಬೇಕಾದರೆ ಶಿಕ್ಷಣ ಎಷ್ಟು ಮುಖ್ಯವೋ ಕ್ರೀಡೆ ಅಷ್ಟೇ ಮುಖ್ಯ. ಸರ್‌ನಾಯಕ್‌ರವರು, ದಯವಿಟ್ಟು ಕ್ರೀಡೆ ಬಗ್ಗೆ ಕ್ರೀಡಾಪ್ರಾಧಿಕಾರ ಮಾಡಿ, ಈ ರಾಜ್ಯದ ಅತ್ಯುತ್ತಮ ಕ್ರೀಡಾಪಟುಗಳ ಒಂದು ಸಮಿತಿ ಮಾಡಿ ಕ್ರೀಡಾರಂಗವನ್ನು ತಾವು ಬೆಳೆಸಬೇಕು. ಕ್ರೀಡಾರಂಗಕ್ಕೆ ಐದು ಸಾವಿರ ವರ್ಷಗಳ ಇತಿಹಾಸ ಇದೆ. ದೇಹ ಯಾವನಿಗೆ ಸುಂದರವಾಗಿತ್ತದೆಯೋ ಮನಸ್ಸೂ ಅವನಿಗೆ ಅಷ್ಟೇ ಸುಂದರವಾಗಿರುತ್ತದೆ. ಈಗ ಸುಮಾರು ಹಾಸ್ಟೆಲ್‌ಗಳನ್ನು ಮಾಡಿ ಪೌಷ್ಠಿಕಾಂಶ ಕೊಡುತ್ತಿದ್ದೀರಿ ಆದರೆ ಯಾವಮಟ್ಟಕ್ಕೆ ಪರ್‌ಫಾರ್ಮೆನ್ಸ್ ಇದೆಯೆಂದು ಯಾವತ್ತೂ ಅವರನ್ನು ತಾವು ಕೇಳಿಲ್ಲ, ರಾಜ್ಯಮಟ್ಟದ, ರಾಷ್ಟ್ರಮಟ್ಟದ ಏಷ್ಯಮಟ್ಟದ ವಿಶ್ವಮಟ್ಟದ ಕ್ರೀಡಾಪಟುಗಳನ್ನು ನಾವು ಸೃಷ್ಟಿಮಾಡಿಲ್ಲ, 90 ಕೋಟಿ ಭಾರತೀಯರು ನಾವು ಕನಿಷ್ಟ ಮೂರನೇ ಸ್ಥಾನದ ಒಂದು ಪದಕವನ್ನೂ ನಾವು ತೆಗೆದುಕೊಂಡಿಲ್ಲ, ಏಕೆಂದರೆ ನಿಜವಾಗಿ ಪ್ರತಿಭೆಯಿರುವವರನ್ನು ನಾವು ಹುಡುಕುತ್ತಿಲ್ಲ, ಇವತ್ತು ಬ್ರೆಜಿಲ್ ಬಡದೇಶ ಕಾಲ್ಚೆಂಡಿನಲ್ಲಿ ಪ್ರಪಂಚದಲ್ಲಿ ಮೊದಲನೇ ಸ್ಥಾನದಲ್ಲಿದೆ. ಕ್ರೀಡೆ ಮೂಲಕ ದೇಶಪ್ರೇಮ ಬೆಳೆಯುತ್ತದೆ ಅದರ ಮೂಲಕ ಮನವೀಯ ಸಂಬಂಧ ಬೆಳೆಯುತ್ತದೆ. ಆ ಕ್ರೀಡೆ ಸೃಷ್ಟಿಮಾಡಿದ ಕುಬರ್ತಿ 1936ರಲ್ಲಿ ಸತ್ತಾಗ ಅವನ ಹೃದಯವನ್ನು ಡಿಸೆಕ್ಟ್ ಮಾಡಿ ಅದನ್ನು ತೆಗೆದುಕೊಂಡು ಹೋಗಿ ಅಥೆನ್ಸ್‌ನಲ್ಲಿ ಹೂಳಿ ಹಾಕಿದ್ದಾರೆ. ಏಕೆಂದರೆ ಇಡೀ ಮಾನವ ಜನಾಂಗದ ಶಾಂತಿಗೋಸ್ಕರ ಜ್ಞಾನಾಭಿವೃದ್ಧಿಗೋಸ್ಕರ ಅಸ್ಪೃಶ್ಯತೆಯ ವಿರುದ್ಧದ ಮಾನವ ಸಮಾನತೆಗಾಗಿ ಮುಂದಿನ ಜನಾಂಗ ಆರೋಗ್ಯಕರವಾಗಿ ಹುಟ್ಟಲಿ ಎಂದು ಕಡ್ಡಾಯ ಶಿಕ್ಷಣ ಕ್ರೀಡೆಗಳನ್ನು ಪರಿಚಯಸುವ ಮೂಲಕ ಕುಬರ್ತಿಯ ಹೃದಯವನ್ನು ಕ್ರೀಡಾಂಗಣದಲ್ಲಿ ಹೂಳಿಹಾಕಿ ಇಡೀ ಪ್ರಪಂಚದ ಯುವಶಕ್ತಿಗೆ ಅದು ಮಾರ್ಗದರ್ಶಕವಾಗಲಿ ಎಂಬ ಭಾವನಾತ್ಮಕ ಸಾಂಸ್ಕೃತಿಕ ಸಂಬಂಧವನ್ನುಂಟು ಮಾಡಿದ್ದಾರೆ. ಅಂಥ ಕ್ರೀಡೆಯನ್ನು ಬೆಳೆಸುವುದರಲ್ಲಿ ನಾವು ಹಿಂದುಳಿದಿದ್ದೇವೆ. ಇವತ್ತು ರಾಜ್ಯಮಟ್ಟದ ರಾಷ್ಟ್ರಮಟ್ಟದ ಆಟಗಾರನಿಗೆ ಏನು ಬೆಂಬಲ ಕೊಟ್ಟಿದ್ದೇವೆ? ಕುಸ್ತಿಕಲೆ ನಾಶವಾಗುತ್ತಿದೆ ಬೆಳಗಾಂ ಬೀದರ್ ಗುಲ್ಬರ್ಗ ಮಂಡ್ಯ ಮೈಸೂರುಗಳಲ್ಲಿ ಎಂಥ ಕುಸ್ತಿಕಲೆ ಇತ್ತು ಆ ಕಲೆ ನಾಶವಾಗುತ್ತಿದೆ ಏಕೆಂದರೆ ಕುಸ್ತಿ ಬಗ್ಗೆ ನಾವು ಯಾವುದೇ ಸಮಿತಿ ಮಾಡಿ ಬೆಂಬಲಿಸುವ ಕೆಲಸ ಮಾಡುತ್ತಿಲ್ಲ, ಉದಾಹರಣೆಗೆ ನಮ್ಮ ಹಳ್ಳಿಯಲ್ಲೇ ಐದು ಗರಡಿ ಇದ್ದವು ಇವತ್ತು ಒಂದೂ ಇಲ್ಲ, ಇವತ್ತು ಎಲ್ಲ ಹಳ್ಳಿಯಲ್ಲಿ ವ್ಯಾಯಾಮ ಶಾಲೆಯಾಗಬೇಕು. ನೀವು ಬೇಕಾದರೆ ಸಮೀಕ್ಷೆ

ಮಾಡಿ ಯುವಕರನ್ನು. ಒಬ್ಬ ಕ್ರೀಡಾಪಟು ಜೊತೆ ಮಾತನಾಡಿ ಇನ್ನೊಬ್ಬ ಕ್ರೀಡೆಗೆ ಸಂಬಂಧ ಇಲ್ಲದಿರುವ ಯುವಕನ ಜೊತೆ ಮಾತನಾಡಿ ಕರೆಕ್ಟಾಗಿ ಅದರ ವಿಷಯ ಗೊತ್ತಾಗುತ್ತದೆ ಆಗ.

ನಾನು ಮೂರು ಹುಡುಗರನ್ನು ಸಮೀಕ್ಷೆ ಮಾಡಿದೆ. ಒಬ್ಬ ನೂರು ರೂ. ಗಾಂಜಾ ಹೊಡೆದು ಮೋಟರ್‌ಬೈಕ್‌ಲ್ಲಿ ಏರಲ್ಲಿ ಹೋಗುತ್ತಿದ್ದೇನೆಂದು ತಿಳಿದುಕೊಂಡು ಗೋಡೆಗೆ ಹೊಡೆದು ಆಸ್ಪತ್ರೆಗೆ ಸೇರಿಕೊಂಡಿದ್ದ. ಇನ್ನೊಬ್ಬ 15 ರೂ. ಗಾಂಜಾ ಹೊಡೆದು ಯಾರೋ ಅಂಗಡಿಯಲ್ಲಿರುವವರ ತಂದಮೇಲೆ ಹಲ್ಲೆ ಮಾಡಿದ್ದ ಇನ್ನೊಬ್ಬ ಹುಡುಗನನ್ನು ಕೇಳಿದೆ ನೀನ್ಯಾಕೆ ಕೆಟ್ಟ ಚಟ ಕಲಿಯಲಿಲ್ಲವೆಂದು, ಅವನು ಹೇಳಿದ ನಾನು ದಿನನಿತ್ಯ ವ್ಯಾಯಾಮ ಮಾಡುತ್ತಿದ್ದೇನೆ ಆಟದಲ್ಲಿ ಭಾಗವಹಿಸಿರುವುದರಿಂದ ಕೆಟ್ಟಚಟಗಳ ಮೇಲೆ ಇಷ್ಟವಿಲ್ಲವೆಂದ. ಅದರಿಂದ ತಾವು ಇದಕ್ಕೆ ಹೆಚ್ಚು ಹಣ ಕೊಡುವುದರ ಜೊತೆಗೆ ಯಾಮಟ್ಟಕ್ಕೆ ಅಭಿವೃದ್ಧಿ ಕಾರ್ಯಕ್ರಮವಾಗುತ್ತದೆ ಅಂತ ತಿಳಿದುಕೊಳ್ಳಬೇಕು. ಈಗ ಕುಸ್ತಿಗೆ ಯಾವುದೇ ಸಮಿತಿ ಇಲ್ಲ, ಮೈಸೂರಿನ ದೊಡ್ಡಕೆರೆ ಮೈದಾನದಲ್ಲಿ ಸುಮಾರಾಗಿ ಕುಸ್ತಿ ನಡೆಯುತ್ತಿತ್ತು. ಅಲ್ಲಿ ನ್ಯಾಯಾಲಯದ ಮೊರೆಹೋಗಿ ಗಲಾಟೆಯಾಗಿ ನಿಂತುಹೋಯಿತು. ಅದರಲ್ಲೂ ಬೆಳಗಾಂ ಬೀದರ್‌ಗೆ ಹೋಗಿಬಿಟ್ಟರೆ ಐದಡಿ ನಾಲ್ಕಡಿ ಆಳದಲ್ಲಿ ಗರಡಿ, ಎಂಥಾ ದೊಡ್ಡ ಗರಡಿಗಳು ಅವು, ಎಂಥಾ ಸುಂದರ ದೇಹಗಳನ್ನು ದಷ್ಟಪುಷ್ಟ ದೇಹಗಳನ್ನು ಸೃಷ್ಟಿ ಮಾಡುವಂತಹ ಕಲೆ ಸಂಸ್ಕೃತಿ ರಂಗವನ್ನು ನೋಡಿದರೆ ಹಿಂದಿನ ವೈಭವವನ್ನು ನೆನೆದುಕೊಂಡರೆ ಮೈಜುಮ್ಮೆನ್ನುತ್ತದೆ. ಈಗ ನಾವು generation to generation weak - ಆಗುತ್ತಿದ್ದೇವೆ. ಅದರಿಂದ ಅತ್ಯಂತ ಸುಂದರ ಕಲೆಗೆ ತಾವು ಬೆಂಬಲ ಕೊಡಬೇಕು ಏಕೆಂದರೆ ನಮ್ಮ ದೇಶ 10 ವರ್ಷಗಳ ಕಾಲ ಪ್ರಪಂಚದಲ್ಲಿ ಕುಸ್ತಿಯಲ್ಲಿ ಮೊದಲನೆಯ ಸ್ಥಾನದಲ್ಲಿತ್ತು. ಗಾಮನ ಕಥೆ ತಾವು ಕೇಳಿರಬಹುದು, ಅವನ ಒಂದು ದಿವಸದ ಊಟ ನೆನೆದುಕೊಂಡರೆ ಮೈ ಜುಮ್ಮೆನ್ನುತ್ತದೆ. ಒಂದು ದಿವಸಕ್ಕೆ 8 ಕೆಜಿ ಮಾಂಸ 2 ಸೇರು ಬಾದಾಮಿ 10 ಲೀಟರ್ ಹಾಲು - ನಮ್ಮಯ್ಯ, ಶಿವನಂಜೇಗೌಡ ಅಂತ ಇದ್ದರು ಅವರ ಎದೆ ಅಗಲ 62 ಇಂಚಿತ್ತು, ಒಂದು ದಿವಸಕ್ಕೆ 4 ಸಾವಿರ ದಂಡೆ ಹೊಡೆಯುತ್ತಿದ್ದರು. 6 ತಲೆಯ ಸೇರ್ವಾ ಮಾಡಿ ಕುಡಿಯುತ್ತಿದ್ದರಂತೆ. ಅವರಣ್ಣ ಒಬ್ಬ ಇದ್ದನಂತೆ ಅವನಿಗಿಂತ ಒಂದೂವರೆ ಅಡಿ ಉದ್ದ ಇದ್ದರು ನೀನೊಬ್ಬನೆ ಮಹಾ ಪೈಲ್ವಾನ್ ಸೇರ್ವಾ ಕುಡಿಯೋನು ನಾನೂ ಕುಡೀತೆನೆ ಅಂತ ಹೇಳಿ, ಅರೆಚಾಚಾ ಅಂತೆ ಕುಡಿದದ್ದು, 28 ಸಾರಿ ಭೇದಿಯಾಯಿತು ಅಂದರೆ 4 ಸಾವಿರ ದಂಡೆ ಹೊಡೆಯುವಂತಹ ಸಾಮರ್ಥ್ಯ ಇತ್ತು. ಆ ಗಾಮನಿಗೂ ಅಷ್ಟೆ.

ಎಲ್ಲಾ ಆಟಗಳಿಗೂ ತಾವು ನೇಮಕ ಮಾಡಬೇಕು. ರಾಜ್ಯ ಮಟ್ಟದ ಪರ್ಫಾರ್ಮೆನ್ಸ್ ಎಷ್ಟರ ಮಟ್ಟಿಗೆ ಇದೆ ರಾಷ್ಟ್ರ ಮಟ್ಟದ ಪರ್ಫಾರ್ಮೆನ್ಸ್ ಯಾವ ಮಟ್ಟಕ್ಕೆ ಬೆಳೆಯುತ್ತಿದೆ ಎಂಬುದನ್ನು ವಿಚಾರ ಮಾಡಬೇಕು. ಅವರಿಗೆ ಟೈಂ ಬೌಂಡ್ ಕಾರ್ಯಕ್ರಮವನ್ನು ಫಿಕ್ಸ್ ಮಾಡಬೇಕು. ಸರಕಾರದ ಮೂಲಕ ಅಷ್ಟೊಂದು ಹಣವನ್ನು ಕೊಡುತ್ತಿದ್ದೇವೆ. ಆ ಹಣದ ಮೂಲಕ ಮಕ್ಕಳು ಕ್ರೀಡಾ ರಂಗದಲ್ಲಿ ಯಾವ ಮಟ್ಟಕ್ಕೆ ರೀಚ್ ಆಗುತ್ತಿದ್ದಾರೆ ಬೆಳೆಯುತ್ತಿದ್ದಾರೆನ್ನುವುದನ್ನು ಅತ್ಯುತ್ತಮವಾಗಿ ನೋಡಿಕೊಳ್ಳಬೇಕು. ತಮ್ಮ ನೇತೃತ್ವದಲ್ಲಿ ಎಲ್ಲಾ ಕಡೆಯ ಕುಸ್ತಿ ಪಟುಗಳನ್ನು ಕರೆದು ಅವರ ಕಷ್ಟ ಸುಖಗಳನ್ನು ತಾವು ಪರಿಚಯ ಮಾಡಿಕೊಂಡು ಅವರಿಗೆ ಸಹಕಾರ ಕೊಡಬೇಕು. ಮೊನ್ನೆ ರಾಜ್ಯಮಟ್ಟದ ಕುಸ್ತಿ ಪ್ರದರ್ಶನ ಪಾಲಹಳ್ಳಿಯಲ್ಲಿ ನಡೆಯಿತು ಅಲ್ಲಿ ನೋಡಬೇಕಾಗಿತ್ತು. ಅಲ್ಲಿ ಮರಳಲ್ಲಿ ಬಿದ್ದು ಒದ್ದಾಡುತ್ತಿದ್ದರು. ಏಕೆಂದರೆ ಆ ಕಲೆಯ ಬಗ್ಗೆ ಗೊತ್ತಿಲ್ಲದೆ ನಾವು ನಾಶ ಮಾಡಿಕೊಂಡಿದ್ದೇವೆ. ಶಾಲಾ ಮಕ್ಕಳಿಗೆ ಕಡ್ಡಾಯ ಕ್ರೀಡೆಯನ್ನು ಶಿಕ್ಷಣದಲ್ಲಿ ಪರಿಚಯ ಮಾಡಿಕೊಡುವುದರ ಮೂಲಕ ಇರುವ ಶಕ್ತಿಯನ್ನು ಮೇಲ್ಮಟ್ಟಕ್ಕೆ ತೆಗೆದುಕೊಂಡು

ಹೋಗಬಹುದೆಂದು ನನ್ನ ಅಭಿಪ್ರಾಯವಾಗಿದೆ. ಇವತ್ತು 1 ಲಕ್ಷ ಜನರು ಟಿ.ಸಿ.ಹೆಚ್. ಮಾಡಿ ಕೊಂಡಿದ್ದಾರೆ.ಅಪ್ಪ, ಟಿಸಿಹೆಚ್ ಮಗ, ಮೊಮ್ಮಗ್ಗ ಟಿಸಿಹೆಚ್ ಮಾಡಿಕೊಂಡಿರುತ್ತಾರೆ. ಅಪ್ಪ ನನ್ನ ವಯಸ್ಸಿನವನಿಗೆ ಕೆಲಸ ಕೊಡಬೇಕೆಂದು ಹೇಳುತ್ತಾನೆ, ಮಗ ನನ್ನ ವಯಸ್ಸಿನವರಿಗೆ ಕೆಲಸ ಕೊಡಬೇಕೆಂದು ಹೇಳುತ್ತಾನೆ ಮೊಮ್ಮಗ್ಗ ನನ್ನ ವಯಸ್ಸಿನವರಿಗೆ ಕೆಲಸ ಕೊಡಬೇಕೆಂದು ಹೇಳಿ ಇಂತಹ ಹೋರಾಟಗಳು ನಡೆಯುತ್ತವೆ. ಖಾಸಗೀಯವರಿಗೆ ಅನುಮತಿ ಕೊಡುತ್ತೀರಿ ಅಲ್ಲದೆ ಸರಕಾರದವರು ಕೂಡ ಟಿಸಿಹೆಚ್ ಕಾಲೇಜುಗಳನ್ನು ನಡೆಸುತ್ತೀರಿ. ನಮಗೆ 3 ಸಾವಿರ ಜನ ಮಾಸ್ತರು ಬೇಕಾದರೆ 30 ಸಾವಿರ ಜನ ಟಿ.ಸಿ.ಹೆಚ್. ಮಾಡಿಕೊಂಡರೆ ಅವರೆಲ್ಲರಿಗೂ ಎಷ್ಟನೇ ಇಸವಿಯವರೆಗೆ ಕೆಲಸ ಕೊಡುತ್ತೀರಿ? ಆದ್ದರಿಂದ ಎಷ್ಟು ಹುದ್ದೆಗಳ ಅವಶ್ಯಕತೆ ಇದೆಯೋ ಅಷ್ಟು ಟಿ.ಸಿ.ಹೆಚ್. ಶಿಕ್ಷಣವನ್ನು ಕೊಡಬೇಕು. ಟಿ.ಸಿ.ಹೆಚ್. ಮಾಡಿಕೊಂಡವರು ಇನ್ನು ಏನೂ ಕೆಲಸ ಮಾಡುವುದಕ್ಕಾಗುವುದಿಲ್ಲ ನಾನು ಮಾಸ್ತರ್ ಆಗಬೇಕು ನಾನು ಮಾಸ್ತರ್ ಆಗಬೇಕು ಎಂದು ಹೇಳುತ್ತಿರುತ್ತಾನೆ. ಜೊತೆಗೆ ಉಪಾಧ್ಯಾಯರಿಗೆ ಪಾಠ ಪ್ರವಚನ ಮಾಡತಕ್ಕಂತಹ ಒಂದು ಪದ್ಧತಿಯನ್ನು ದಯವಿಟ್ಟು ಸರಿಯಾದ ರೀತಿಯಲ್ಲಿ ಹಾಕಿಕೊಡಬೇಕು.

ಇವತ್ತಿನ ಶಾಲಾ ಮಕ್ಕಳಿಗೂ ಉಪಾಧ್ಯಾಯರಿಗೂ ಸಾಮರಸ್ಯ ಸಾಂಸ್ಕೃತಿಕ ಸಂಬಂಧ ಇರಬೇಕು. ನಾನು ಸಂಬಳಕ್ಕೋಸ್ಕರ ಕೆಲಸ ಮಾಡುತ್ತಿದ್ದೇನೆನ್ನುವ ಭಾವನೆ ಅವರಲ್ಲಿ ಇರಬಾರದು. ನಾವೂ ಕೂಡ ಏನೋ ಮಕ್ಕಳನ್ನು ಹುಟ್ಟಿಸಿದ್ದೇವೆ ಶಾಲೆಯಲ್ಲಿ ಕೂತಿದ್ದು ಬರಲಿ ಎಂಬ ಭಾವನೆ ನಮಗೂ ಇರಬಾರದು. ಉಪಾಧ್ಯಾಯರೂ ಆ ಮಕ್ಕಳ ಜೊತೆಯಲ್ಲಿ ಸಾಮರಸ್ಯ ಸಂಬಂಧವಿದ್ದರೆ ಮಾತ್ರ ಶಿಕ್ಷಣ ಸರಿಯಾಗಿ ಆ ಮಕ್ಕಳಿಗೆ ದೊರೆಯುತ್ತದೆ. ಇಂದು ಶಿಕ್ಷಣ ಆ ಮಟ್ಟಕ್ಕೆ ಈಗ ಇಲ್ಲ. ಇಲ್ಲಿ ನವೋದಯ ಶಾಲೆ, ಅಲ್ಲಿ ಸೆಂಟ್ರಲ್ ಸ್ಕೂಲ್, ನಮ್ಮ ಊರಿನಲ್ಲಿ ಒಂದು ತರಹದ ಶಾಲೆ ಇಲ್ಲಿ ಬಾಲ್ಡ್‌ವಿನ್ ಕಾನ್‌ವೆಂಟ್ ಹೀಗೆ 7-8 ರೀತಿಯ ಶಿಕ್ಷಣವಾದರೆ ಮಕ್ಕಳು ಹೇಗೆ ಮುಂದೆ ಬರುತ್ತಾರೆಂಬುದನ್ನು ವಿಚಾರ ಮಾಡಬೇಕು. ರಾಜ್ಯದಲ್ಲಿ ಕನಿಷ್ಟ ಸಮಾನತೆಯ ಶಿಕ್ಷಣ ಇಲ್ಲದಿದ್ದರೆ ಹಳ್ಳಿಯ ಮಕ್ಕಳು ಯಾವ ಮಟ್ಟಕ್ಕೆ ಬರುವ ಪರಿಸ್ಥಿತಿ ಸೃಷ್ಟಿಯಾಗಿದೆ ಎಂಬುದನ್ನು ವಿಚಾರ ಮಾಡಬೇಕು. ಉದಾಹರಣೆಗೆ ಒಂದು ವಿಚಾರವನ್ನು ಹೇಳುತ್ತೇನೆ. ಕಡತಾಳು ಎಂಬ ಗ್ರಾಮದಲ್ಲಿ ಆ ಊರಿನಲ್ಲಿ ಒಬ್ಬ ಹುಡುಗ ಪಿಯುಸಿಗೆ ಸೇರಿಕೊಂಡ. ಕನ್ನಡ ಮೀಡಿಯಂನಲ್ಲಿ ಪಾಸ್ ಮಾಡಿಕೊಂಡಿದ್ದ. ಅಲ್ಲಿನ ಕಾಲೇಜಿನಲ್ಲಿ ಆ ಹುಡುಗನಿಗೆ ಇಂಗ್ಲೀಷ್ ಅರ್ಥವಾಗುತ್ತದೆ ತಾನು ಇಂಗ್ಲೀಷಿನಲ್ಲಿ ಹೇಳುವುದಕ್ಕೆ ಸಾಮರ್ಥ್ಯ ಇಲ್ಲ. ಅವರು ಎಲ್ಲರನ್ನೂ ಪ್ರಶ್ನೆ ಮಾಡಿದರು ಕೊನೆಗೆ ಇವನನ್ನು ಕೇಳಿದರಂತೆ ಆಗ ಇವನು ನಾನು ಹೇಳುತ್ತೇನೆ ಸಾರ್ ಆದರೆ ಕನ್ನಡದಲ್ಲಿ ಹೇಳುತ್ತೇನೆಂದು ಉತ್ತರ ಹೇಳಿದ. ಬಾರಪ್ಪ ಹೇಳು ಅಂದಾಗ ಹೇಳಿದನಂತೆ. ಆಗ ಕೊನೆ ಬೆಂಚಿನಲ್ಲಿ ಇದ್ದವನನ್ನು ಮೊದಲಿನ ಬೆಂಚಿಗೆ ತಂದು ಕೂಡಿಸಿದರಂತೆ. ಈಗ ಅಸಮಾನತಾ ಶಿಕ್ಷಣ ಮಟ್ಟದಲ್ಲಿ ಸಮಾನತೆ ಸೃಷ್ಟಿ ಮಾಡಬೇಕೆಂದು ಯೋಚನೆ ಮಾಡಿದ್ದೇವೆ. ಆದರೆ ಪುನಃ ಅಸ್ಪೃಶ್ಯತೆಯನ್ನು ಸೃಷ್ಟಿ ಮಾಡುತ್ತಿದ್ದೇವೆ. ಆದ್ದರಿಂದ ಶಿಕ್ಷಣದ ಮೌಲ್ಯದ ಬಗ್ಗೆ ಅತ್ಯಂತ ಗಂಭೀರವಾಗಿ ಚಿಂತನೆ ಮಾಡಬೇಕು.

ಶಿಕ್ಷಣದ ಬಗ್ಗೆ ಚಿಂತನೆ ಮಾಡದಿದ್ದರೆ ಬಹಳ ತೊಂದರೆಯಾಗುತ್ತದೆ. ಇನ್ನೊಂದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಕೇಂದ್ರ ಸರ್ಕಾರದ ಓಪನ್ ಯೂನಿವರ್ಸಿಟಿ ಅದು ಆಂಗ್ಲ ಭಾಷೆಯಲ್ಲಿ ಮತ್ತು ರಾಷ್ಟ್ರೀಯ ಭಾಷೆಯಾದ ಹಿಂದಿಯಲ್ಲಿ ನಡೆಯುತ್ತಿದೆ. ಆಂಧ್ರ, ತಮಿಳುನಾಡಿನಲ್ಲಿ ಕೂಡ ಇದು ಇದೆ. ಕನ್ನಡ ಸಂಸ್ಕೃತಿ ಇಲಾಖೆ ಕೂಡ ಇದರ ಬಗ್ಗೆ ಯೋಚನೆ ಮಾಡಬೇಕು. ಆಂಧ್ರ, ತಮಿಳುನಾಡಿನಲ್ಲೆಲ್ಲ ಏನು ಓಪನ್ ಯೂನಿವರ್ಸಿಟಿ ಇದೆ ಅದು ರಾಜ್ಯಮಟ್ಟದ ಪ್ರಾದೇಶಿಕ ಭಾಷೆಯಲ್ಲಿರತಕ್ಕಂತಹ ವ್ಯವಸ್ಥೆ ಇದೆ. ಓಪನ್ ಯೂನಿವರ್ಸಿಟಿಯನ್ನು ಪ್ರಾದೇಶಿಕ ಭಾಷೆಯಲ್ಲಿ ತೆಗೆಯತಕ್ಕಂತಹ

ವ್ಯವಸ್ಥೆ ಮಾಡಿದರೆ ಬಹಳ ಭಾಷೆಯನ್ನು ಬೆಳೆಸತಕ್ಕಂತಹ ಜವಾಬ್ದಾರಿ ಆಗುತ್ತದೆ. ಪ್ರಾದೇಶಿಕ ಭಾಷೆಯಲ್ಲಿ ಶಿಕ್ಷಣ ಚೆನ್ನಾಗಿ ಕಲಿಯುವುದಕ್ಕೆ ಸಾಧ್ಯವಾಗುತ್ತದೆ. ತಾವು ಯಾವುದೇ ಮಗುವನ್ನು ಪರೀಕ್ಷೆ ಮಾಡಬಹುದು. ಇಂಗ್ಲೀಷ್ ಭಾಷೆಯಲ್ಲಿ ಹೆಚ್ಚು ಟೀಚ್ ಮಾಡಿದರೆ : ಕಡಿಮೆ ಅಂಕ ತೆಗೆಯುತ್ತದೆ. ಪ್ರತಿ ನಿತ್ಯ ಮಾತನಾಡತಕ್ಕಂತಹ ಕನ್ನಡ ಭಾಷೆಯಲ್ಲಿ ಟೀಚ್ ಮಾಡಿದರೆ ನೂರಕ್ಕೆ 50ರಷ್ಟು ಅಂಕ ತೆಗೆದುಕೊಳ್ಳುತ್ತದೆ. ಇಂಗ್ಲೀಷಿನಲ್ಲಿ ಹೇಳಿದರೆ ನೂರಕ್ಕೆ 50 ಅಂಕ ತೆಗೆದುಕೊಳ್ಳುತ್ತದೆ. ನಾವು ಭಾಷೆಯ ಮೂಲಕ ಆ ಮಕ್ಕಳನ್ನು ಉತ್ತಮವಾದ ಪರಿಸ್ಥಿತಿಗೆ ತೆಗೆದುಕೊಂಡು ಹೋಗದೆ ಇರತಕ್ಕಂತಹ ಶಿಕ್ಷಣವನ್ನು ಪರಿಚಯ ಮಾಡಿಕೊಡುವುದರ ಮೂಲಕ ನಾವು ತಪ್ಪು ಮಾಡುತ್ತಿದ್ದೇವೆ. ವೈಜ್ಞಾನಿಕವಾಗಿ ಇದನ್ನು ಬದಲಾವಣೆ ಮಾಡತಕ್ಕಂತಹ ಯೋಚನೆ ಮಾಡಬೇಕು. ಪ್ರಾದೇಶಿಕ ಭಾಷೆಗೆ ಹೆಚ್ಚು ಒತ್ತು ಕೊಡತಕ್ಕಂಥ ಶಿಕ್ಷಣವನ್ನು ತಾವು ದಯವಿಟ್ಟು ಮಾಡಬೇಕು. ಸಾಂಸ್ಕೃತಿಕ ಶಿಕ್ಷಣ ಆಗಲಿ. ಈಗಾಗಲೇ ನಮ್ಮ ಎಲ್ಲರ ಮನೆಗಳಲ್ಲೂ ಮಕ್ಕಳು ಅಪ್ಪ, ಅವ್ವ ಎನ್ನುವುದನ್ನು ಬಿಟ್ಟು ಬಿಟ್ಟಿದ್ದಾರೆ. ಮಮ್ಮಿ ಡ್ಯಾಡಿ ಎಂದು ಕರೆಯುತ್ತಾರೆ. ನಾಯಿ ಮರಿ ಕೂಗಿದ ಹಾಗೆ ಎಲ್ಲಾ ಕೂಗುತ್ತವೆ. ಯಾವ ಮನೆಯಲ್ಲಿ ನೋಡಿ ಮಮ್ಮಿ ಡ್ಯಾಡಿ ಎಂದು ಕೂಗುತ್ತಾರೆ. ಅದರಲ್ಲೂ ಡಾಡಿ ಅಂತ ಕರೆಯುತ್ತಾರೆ. ಅಂದರೆ ನಿನಗೇನು ದಾಡಿ ಎಂದು. ತಾತನಿಗೆ ಓಲ್ಡ್ ಮ್ಯಾನ್ ಎಂದು ಕರೆಯುತ್ತಾರೆ. ನನ್ನ ತಂಗಿ ಕೆನಡಾದಲ್ಲಿ ಇದ್ದಾರೆ. ಅವರ ಮಕ್ಕಳಿಗೆ ನನ್ನ ತಂಗಿ ಕನ್ನಡವನ್ನೇ ಕಲಿಸಿಲ್ಲ ಎಲ್ಲಾ ಇಂಗ್ಲೀಷಿನಲ್ಲೇ ಮಾತನಾಡುತ್ತಾರೆ. ಅವರು ಇಲ್ಲಿಗೆ ಬಂದಾಗ ನಮ್ಮ ಅಪ್ಪ ಅಮ್ಮನಿಗೆ ಏನಾದರೂ ಮಾಡಿ ಆ ಮಕ್ಕಳ ಜೊತೆಯಲ್ಲಿ ಬಹಳ ಪ್ರೀತಿಯಿಂದ ಮಾತನಾಡಬೇಕೆಂಬ ಆಸೆ. ನಮ್ಮ ಅಪ್ಪನಿಗೆ ಅಮ್ಮನಿಗೆ ಇಂಗ್ಲೀಷ್ ಬರುವುದಿಲ್ಲ, ನಮಗೆ ಚೂರು ಹರಕಲು ಮುರುಕಲು ಇಂಗ್ಲೀಷ್ ಬರುತ್ತದೆ. ಆ ಮಕ್ಕಳ ಜೊತೆ ನಮ್ಮ ಅಪ್ಪ ಅಮ್ಮ ಮಾತನಾಡುವುದಕ್ಕೆ ಹೋದಾಗ ಎಲ್ಲಾವುದಕ್ಕೂ ಛೀ ಕಳ್ಳಿ ಎಂದು ಎನ್ನುವುದನ್ನು ಬಿಟ್ಟರೆ ಇನ್ನೇನೂ ಹೇಳುತ್ತಿರಲಿಲ್ಲ. ಅದಕ್ಕೆ ಆ ಮಕ್ಕಳು "every time you are calling me ಛೀಕಳ್ಳಿ. what is the meaning of ಛೀಕಳ್ಳಿ?"

ಎಂದು ಶುರು ಮಾಡಿಕೊಂಡು ಬಿಟ್ಟರು.

ಇಂಗ್ಲೀಷ್ ಸರಿಯಾಗಿ ಬರುವುದಿಲ್ಲ ಕನ್ನಡ ಕೂಡ ಸರಿಯಾಗಿ ಬರುವುದಿಲ್ಲ. ಕನಿಷ್ಠ ಅವರ ತಾತ ಅಜ್ಜಿ ಜೊತೆಯಲ್ಲಿ ಮಾತನಾಡುವಷ್ಟು ಆದರೂ ಕನ್ನಡವನ್ನು ಕಲಿಸಬಾರದಾಗಿತ್ತೇ ಎಂದು ನಾನು ಹೇಳಿದೆ. ಯಾವ ಮಟ್ಟಕ್ಕೆ ನಮ್ಮ ಸಂಸ್ಕೃತಿಯ ಭಾಷೆಯನ್ನು ನಾಶ ಮಾಡಿಕೊಂಡಿದ್ದೇವೆ. ನಾವು ಎಲ್ಲಿಯಾದರೂ ಇರಲಿ ನಮ್ಮ ಬದುಕು ನಾವು ಎಲ್ಲಿ ಬದುಕಿದ್ದೆವು ನಮ್ಮ ಜೀವನ ಎಲ್ಲಿ ಕಳೆದಿದ್ದೆವು ನಮ್ಮ ಭಾಷೆ ಪರಿಸರ ಎಷ್ಟರ ಮಟ್ಟಿಗೆ ಇತ್ತು ಎಂಬುದನ್ನು ವಿಚಾರ ಮಾಡಿಕೊಳ್ಳಬೇಕು. ಈ ಮೂಗ ಆದರೆ ತೊಂದರೆ ಇರುವುದಿಲ್ಲ, ಇಂಗ್ಲೇಂಡ್ ಮೂಗ ಇಲ್ಲಿಗೆ ಬಂದರೆ ಕ್ಯಾತನ ಹಳ್ಳಿಯ ಮೂಗ ಅವನ ಜೊತೆಯಲ್ಲಿ ಆರಾಮವಾಗಿ ಮಾತನಾಡಿ ಹೋಗುತ್ತಾನೆ. ಸಮಸ್ಯೆಯೇ ಇರುವುದಿಲ್ಲ, ಭಾಷೆ ಕಲಿತಿರುವವರು ಮಾತ್ರ ಬಹಳ ಕಷ್ಟವಾಗುತ್ತದೆ. ಒಂದು ಸಲ ಅಕ್ಬರ್ ಬೀರಬಲ್ ಏನು ಮಾಡಿದರಂತೆ ಸನ್ನೆ ಮೇಲೆ ಪ್ರಶ್ನೆ ಮಾಡಿದರೆ ಸನ್ನೆ ಮೇಲೆ ಉತ್ತರ ಕೊಡುವವರಿಗೆ ಬಹುಮಾನ ಕೊಡುತ್ತೇವೆಂದು ಹೇಳಿದರು. ಬಹಳ ಜನ ಸನ್ನೆ ಮಾಡಿದರಂತೆ ಯಾರಿಗೂ ಉತ್ತರ ಕೊಡುವುದಕ್ಕಾಗಲಿಲ್ಲ, ಒಬ್ಬ ಕುರಿ ಕಾಯುವವನು ನಿಮ್ಮ ಪ್ರಶ್ನೆಗೆ ನಾನು ಉತ್ತರ ಕೊಡುತ್ತೇನೆಂದು ಮುಂದೆ ಬಂದ. ಬೀರಬಲ್‌ಗೆ ಕನ್‌ಫ್ಯೂಸ್ ಆಯಿತು ಏನೋ ಗೊತ್ತಾಗಲಿಲ್ಲ, ಅವನು ಕೇಳಿದನಂತೆ ಅವನು ಪ್ರಶ್ನೆ ಕೇಳಿದಾಗ ಹೀಗೆ ಅಂದಿರಿ ಎಂದು. ನಿಮ್ಮ ಧರ್ಮದಲ್ಲಿ ಈ ಪ್ರಪಂಚ ಆಳುತ್ತಿರುವವನು ಯಾರು ಅಂದರೆ

ಮೂರು ಅಂದ. ಬ್ರಹ್ಮ ವಿಷ್ಣು ಮಹೇಶ್ವರ ಈ ತ್ರಿಮೂರ್ತಿಗಳು. ಭೂಮಿ ಹೊತ್ತುಕೊಂಡು ನಿಂತಿರುವವರು ಯಾರು ಎಂದು ಕೇಳಿದೆ ಆದಿಶೇಷ ಅಂದ. ಆ ಕುರಿ ಕಾಯುವವನನ್ನು ಸನ್ನೆ ಮಾಡುವುದು ನಿನಗೆ ಹೇಗೆ ಗೊತ್ತಾಯಿತು ಎಂದು ಕೇಳಿದರು. ಆಗ ಅವನು ಏನೂ ಇಲ್ಲ ದೊಡ್ಡದೊಂದು ಹಬ್ಬ ಮುಸಲ್ಮಾನರಿಗೆ ಇತ್ತು ಎಲ್ಲ ಕುರಿಯನ್ನು ಕೇಳಿದರು ನಾನು ಮೂರರ ಮೇಲೆ ಕೊಡುವುದಕ್ಕಾಗುವುದಿಲ್ಲವೆಂದು ಅಂದೆ. ಕೊಡಲಿಲ್ಲ ಅಂದರೆ ಎಲ್ಲ ಹಿಡಿದು ತರಿಸುತ್ತೇನೆಂದು ಅಂದರು. ನಾನು ಕೊಡುತ್ತೇನೆ ಬಾ ಎಂದು ಅಂದೆ. ಅಂದರೆ ಸನ್ನೆ ಮೇಲೆ ಮಾತನಾಡಿದರೆ ಹೇಗೆ ಆಯಿತು ನೋಡಿ.

ಭಾಷೆ ಎಷ್ಟು ನಮ್ಮ ಸಾಂಸ್ಕೃತಿಕ ಸಂಬಂಧ ಎಂಬುದನ್ನು ವಿಚಾರ ಮಾಡಬೇಕು. ಶಿಕ್ಷಣ, ಜೀವನ, ಬದುಕು, ವ್ಯವಹಾರಕ್ಕೋಸ್ಕರ ಭಾಷೆಯನ್ನು ನಾವು ಅತ್ಯಂತ ಗೌರವಯುತವಾದ ಸ್ಥಾನದಲ್ಲಿ ತೆಗೆದುಕೊಂಡು ಹೋಗಲೇಬೇಕಾಗುತ್ತದೆ. ಆದ್ದರಿಂದ ಓಪನ್ ಯೂನಿವರ್ಸಿಟಿಯನ್ನು ದಯವಿಟ್ಟು ಕನ್ನಡ ಪ್ರಾದೇಶಿಕ ಭಾಷೆಯಲ್ಲಿ ಮಾಡತಕ್ಕಂತಹ ಕೆಲಸ ಮಾಡಬೇಕು.

ಉದ್ಯಮವನ್ನು ಸೃಷ್ಟಿ ಮಾಡತಕ್ಕಂತಹ ಶಿಕ್ಷಣಕ್ಕೆ ತಾವು ಹೆಚ್ಚಿನ ಒತ್ತನ್ನು ಕೊಟ್ಟರೆ ಹೆಚ್ಚು ಪ್ರಯೋಜನವಾಗುತ್ತದೆ. ಐ.ಟಿ.ಐ. ಶಿಕ್ಷಣ ವ್ಯವಸ್ಥೆಗೆ 30-35 ಉದ್ಯೋಗವನ್ನು ಸೃಷ್ಟಿ ಮಾಡತಕ್ಕಂತಹ ಶಿಕ್ಷಣಕ್ಕೆ ತಾವು ಹೆಚ್ಚು ಒತ್ತನ್ನು ಕೊಡಬೇಕು. ಅದಕ್ಕೆ ನೀವು ಮೂರೂವರೆ ಕೋಟಿ ರೂಪಾಯಿ ಅನುದಾನ ಕೊಡುವುದಕ್ಕೆ ಖಾಸಗೀ ಐ.ಟಿ.ಐ.ಗಳಿಗೆ ಹೆಚ್ಚಿನ ಒತ್ತನ್ನು ತಾವು ದಯವಿಟ್ಟು ಕೊಡಬೇಕು. ಐ.ಟಿ.ಐ. ನವರು, ಧರಣಿ ಚಳುವಳಿ ಮಾಡಿದರು. ಅದರಲ್ಲಿ ಡ್ಯೂಪ್ಲಿಕೇಟ್ ಇದ್ದರೆ ತೆಗೆದುಹಾಕಿ. ಐ.ಟಿ.ಐ.ನವರಿಗೆ ಮಾತ್ರ ತಾವು ಹೆಚ್ಚು ಒತ್ತನ್ನು ಕೊಟ್ಟರೆ ಸ್ಥಿರೀಯವಾಗಿ ಉದ್ಯೋಗಗಳನ್ನು ಸೃಷ್ಟಿ ಮಾಡತಕ್ಕಂತಹ ಒಂದು ವ್ಯವಸ್ಥೆ ಆಗುತ್ತದೆ. ತಾವು ದಯವಿಟ್ಟು ಯೋಚನೆ ಮಾಡಬೇಕು. ಮಹಿಳೆ ಮತ್ತು ಮಕ್ಕಳ ಕಲ್ಯಾಣ ಯೋಜನೆ. ಎಲ್ಲರಿಗಿಂತ ಶೋಷಿತ ವರ್ಗ ಅಂದರೆ ಮಹಿಳೆಯರದು.

5.20 ಪಿ.ಎಂ

ಎಲ್ಲಾ ಧರ್ಮಗಳಲ್ಲೂ, ಎಲ್ಲಾ ಜಾತಿಗಳಲ್ಲೂ ಮಹಿಳೆ ಶೋಷಿತಳು, ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಅದರಲ್ಲಿ ಬೇರೆ ಮಾತೇ ಇಲ್ಲ. ಅಂಬೇಡ್ಕರ್ ಒಂದು ಮಾತನ್ನು ಹೇಳಿದ್ದರು. ಒಂದು ರಾಜ್ಯ, ಒಂದು ಮನೆ, ಭಾರತೀಯ ಸಂಸ್ಕೃತಿಯಲ್ಲಿ ಉದ್ಧಾರವಾಗಬೇಕಾದರೆ ಪುರುಷರಿಗಿಂತ ಮಹಿಳೆ ವಿದ್ಯಾವಂತಳಾಗಬೇಕು. ಮಹಿಳೆ ವಿದ್ಯಾವಂತಳಾದರೆ ಆ ಇಡೀ ಕುಟುಂಬವನ್ನು ಮೇಲ್ಮಟ್ಟಕ್ಕೆ ತೆಗೆದುಕೊಂಡು ಹೋಗತಕ್ಕಂಥ ಒಂದು ವ್ಯವಸ್ಥೆ ಆಗುತ್ತದೆಯಂತ ಆ ಮನೆ ಮಕ್ಕಳೆಲ್ಲರೂ ಶಿಕ್ಷಣದಲ್ಲಿ ಮುಂದೆ ಬರುತ್ತವೆ. ಆದರೆ ಮಹಿಳೆಯರ ಬಗ್ಗೆ ನಾವು ಏನೇನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ? ಮಹಿಳೆಯರಿಗೆ ಉದ್ಯೋಗವನ್ನು ಸೃಷ್ಟಿಮಾಡತಕ್ಕಂಥ ಒಂದು ವಿಚಾರದಲ್ಲಿ ನಾವು ಹಿಂದೆ ಬಿದ್ದಿದ್ದೇವೆ. ನನ್ನದೇ ಒಂದು ಉದಾಹರಣೆಯನ್ನು ತಮಗೆ ಕೊಡುತ್ತೇನೆ. ನಾವು ಮಹಿಳೆಯರು, ಮಹಿಳೆಯರು ಎಂದು ಹೇಳುತ್ತೇವೆ. ಮಹಿಳೆಯರಿಗೆ ಉಪಕಾರ ಮಾಡದಿದ್ದರೆ ನಮ್ಮ ಸರ್ಕಾರದಿಂದ ತಪ್ಪಾಗುತ್ತದೆ ಎಂದು ಹೇಳಿ ಬರೀ ಮಹಿಳೆಯರ ಸುದ್ದಿ ಮಾತನಾಡಿದರೆ ಏನು ಪ್ರಯೋಜನವಿಲ್ಲ. ಎಲ್ಲದಕ್ಕಿಂತ ಪೌಷ್ಠಿಕಾಂಶ ಇರುವ ಆಹಾರಪದಾರ್ಥವನ್ನು ಉತ್ಪಾದನೆ ಮಾಡತಕ್ಕಂಥದ್ದು ಎಂದರೆ ಅಣಬೆ ಬೇಸಾಯ.ಅಣಬೆ ಬೇಸಾಯಕ್ಕೆ ಈ ರಾಜ್ಯದಲ್ಲಿ ಎರಡು ಲಕ್ಷ ಮಹಿಳೆಯರಿಗೆ ಉದ್ಯೋಗವನ್ನು ಸೃಷ್ಟಿಮಾಡಬಹುದು. ಅದಕ್ಕೆ ಮಾರ್ಕೆಟ್‌ನ್ನು ಇಂಟ್ರಡ್ಯೂಸ್ ಮಾಡಿಕೊಳ್ಳಬೇಕು. ಇವತ್ತಿನ ಎಲ್ಲಾ ಪತ್ರಿಕೆಗಳಲ್ಲಿ ಖಾಸಗೀಯವರು ಅಣಬೆ ಬೇಸಾಯದ

ಬಗ್ಗೆ ತರಬೇತಿ ಕೊಟ್ಟು ಬೆಳೆಸಿ ಅದನ್ನು ನಾವೇ ಕೊಂಡುಕೊಳ್ಳುತ್ತೇವೆ ಎಂದು ಎಲ್ಲಾ ಕಡೆ ಪೇಪರ್‌ನಲ್ಲಿ ಜಾಹೀರಾತನ್ನು ಕೊಟ್ಟರು. ಎರಡು ಲಕ್ಷ ಜನ ಮಹಿಳೆಯರಿಗೆ ಉದ್ಯೋಗವನ್ನು ಸೃಷ್ಟಿ ಮಾಡುವ ಕೆಲಸ, ಅದರ ಬಗ್ಗೆ ದಯವಿಟ್ಟು ಯೋಚನೆ ಮಾಡಬೇಕು.

ಈಗ ಅಂಗನವಾಡಿ ಮೂಲಕ, ಅಂಗನವಾಡಿ ಶಿಕ್ಷಕಿಯರಿಗೆ ಬಹಳ ಕಡಿಮೆ ಸಂಬಳ. ಅದನ್ನು ತಾವೇನೊ ಹೇಳಿದ್ದೀರಿ ಇಲ್ಲಿ, ಸ್ವಲ್ಪ ಜಾಸ್ತಿ ಮಾಡುತ್ತೇವೆ ಎಂದು ತುಂಬ ಸಂತೋಷ. ಅಂಗನವಾಡಿ ಮಹಿಳೆಯರುಗಳಿಗೆ ಕೊಡುವ ಸಂಬಳ ಸಾಲುತ್ತಿಲ್ಲ. ಕನಿಷ್ಟ 750 ರೂಪಾಯಿಗಳನ್ನಾದರೂ ಕೊಡುವ ವ್ಯವಸ್ಥೆ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಅವರಿಗೆ ಎರಡು ಕೆಲಸವನ್ನು ತಾವು ಕೊಟ್ಟಿದ್ದೀರಿ. ಒಂದು ಅರ್ಧ ದಿವಸಗಳ ಕಾಲ ಮಕ್ಕಳನ್ನು ಆಡಿಸುವುದು, ಮಕ್ಕಳನ್ನು ನೋಡಿಕೊಳ್ಳುವುದು, ಅರ್ಧ ದಿವಸವಾದ ನಂತರ ಗರ್ಭಿಣಿ ಸ್ತ್ರೀಯರಿಗೆ ಆಮೇಲೆ ಮಕ್ಕಳ ಬಗ್ಗೆ ಯಾವ ಯಾವ ರೀತಿಯಲ್ಲಿ ಮನೆಗಳಲ್ಲಿ ನೋಡಿಕೊಳ್ಳಬೇಕು ಆಮೇಲೆ ಯಾವ ಯಾವ ರೀತಿ ಪೌಷ್ಠಿಕಾಂಶವನ್ನು ಕೊಡಬೇಕು ಎಂದು ಹೇಳಿ ತರಬೇತಿ ಕೊಡುವ ಕೆಲಸವನ್ನು ಮಾಡುತ್ತಿದ್ದೇವೆ. ಜೊತೆಗೆ ಇನ್ನೊಂದು ಹೇಳಬೇಕೆಂದರೆ ಅಂಗನವಾಡಿ ಮಕ್ಕಳಿಗೆ ವಿದೇಶದಿಂದ ಪೌಷ್ಟಿಕಾಂಶವನ್ನು ಏನು ತಲುಪಿಸುತ್ತಿದ್ದೇವೆ ಅದರ ಬಗ್ಗೆ ಬಹಳ ಜವಾಬ್ದಾರಿಯುತವಾಗಿ ನೋಡಿಕೊಳ್ಳಬೇಕು. ಏಕೆಂದರೆ ಅಂಗನವಾಡಿ ಬಗ್ಗೆ ಮಹಿಳೆಯರನ್ನೇ ಏತಕ್ಕೆ ನೇಮಕ ಮಾಡಿದರು ಎಂದರೆ ಪುರುಷರಿಗೆ ಏನಾದರೂ ಜವಾಬ್ದಾರಿ ಕೊಟ್ಟರೆ ಅಂಗನವಾಡಿ ಕೆಲಸಕ್ಕೆ ಉಪ್ಪಿಟ್ಟನ್ನು ಅವರೇ ತಿಂದುಬಿಡುತ್ತಾರೆ ಎಂದು ಹೇಳಿ ಮಹಿಳೆಯರಿಗೆ ಕೊಟ್ಟಿರುವುದು. ನೀವು ವಿದೇಶದಿಂದ ಕೊಟ್ಟಿರುವ ಆಹಾರಗಳನ್ನು ಮಕ್ಕಳಿಗೆ ತಲುಪುವ ವ್ಯವಸ್ಥೆ ಸರಿಯಾಗಿ ಆಗಬೇಕಾದರೆ ಅದಕ್ಕೊಂದು ಸಮಿತಿ ಮಾಡಿ, ಮಕ್ಕಳಿಗೆ ಸರಿಯಾಗಿ ತಲುಪಿಸುವ ವ್ಯವಸ್ಥೆ ಬಗ್ಗೆ ಗಂಭೀರವಾಗಿ ಈ ಸರ್ಕಾರ ಯೋಚನೆ ಮಾಡಬೇಕೆಂದು ಹೇಳುತ್ತೇನೆ. ಅದಕ್ಕೆ ನಾನು ಹೇಳಿದ್ದುದು ಮಹಿಳೆಯರ ಮೇಲೂ ನಿಗಾ ಇಡಬೇಕು ಎಂದು. ಮಹಿಳೆಯರ ಮೇಲೆ ಒಂದು ಸಮಿತಿ ಮಾಡಿ ಅದನ್ನು ನೋಡಿಕೊಳ್ಳಿ ಎಂದು ಹೇಳುತ್ತಿದ್ದೇನೆ. ಮಹಿಳೆಯರು ತಿನ್ನುವುದಿಲ್ಲವೇ ಎಂದರೆ ಮನೆಯಲ್ಲಿ ನನಗೆ ನನ್ನ ಹೆಂಡತಿ ಬಡಿಸುವುದಕ್ಕೂ ತಾಯಿ ಊಟ ಬಡಿಸುವುದಕ್ಕೂ ಮಕ್ಕಳು ಬಡಿಸುವುದಕ್ಕೆ ವ್ಯತ್ಯಾಸ ಇದೆ. ನಿಮ್ಮ ಮನೆಯಲ್ಲಿ ವ್ಯತ್ಯಾಸವಿಲ್ಲವೇ? ಇದೆ.

ಶ್ರೀ ಎಚ್. ಶಿವಪ್ಪ : ಹೆಂಡತಿ ಬದಲಿಗೆ ತಾಯಿ ಬಡಿಸಿದರೆ ವ್ಯತ್ಯಾಸ ಕಾಣುವುದಿಲ್ಲವೇ? ತಾಯಿ ನಿಮಗೆ ಊಟ ಬಡಿಸುವುದಕ್ಕೂ, ಹೆಂಡತಿ ನಿಮಗೆ ಊಟ ಬಡಿಸುವುದಕ್ಕೂ ವ್ಯತ್ಯಾಸವಿಲ್ಲವೇ?

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ತಾಯಿಯೋ, ಹೆಂಡತಿಯೋ, ಸೊಸೆಯೋ ಅದು ಬೇರೆ ಪ್ರಶ್ನೆ. ಹೆಣ್ಣುಮಗಳು ಅವಳು. ಹೆಣ್ಣುಮಗಳು ಯಾರಾದರೂ ಆಗಲಿ. ಉದಾಹರಣೆಗೆ ನಮ್ಮ ಹಳ್ಳಿಯ ಸಂಸ್ಕೃತಿಯಲ್ಲಿ ರಾತ್ರಿ 11 ಗಂಟೆಯಾಗಲಿ, ಗಂಡ ಬರುವತನಕ ಊಟ ಮಾಡದೆ ಕಾಯ್ದುಕೊಂಡಿರುತ್ತಾರೆ. ನಾವು ಯಾವತ್ತಾದರೂ ಹೆಂಡತಿ ಬರುವವರೆಗೂ ಕಾಯ್ದುಕೊಂಡಿದ್ದೇವೆಯೇ ಇಲ್ಲ, ಕಾಯ್ದುಕೊಂಡಿಲ್ಲ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಮಾನ್ಯ ಅಧ್ಯಕ್ಷರೇ, ಮಹಿನೀಯರು ಒಂದು ಸತ್ಯವನ್ನು ಈ ಸದನದಲ್ಲಿ ಒಪ್ಪಿಕೊಂಡರು ಎನ್ನುವುದು ಬಹಳ ಸಂತೋಷ. ಯಾವುದೇ ಮಹಿಳೆಯಾದರೂ ಕೂಡ ಬಹಳ ಚೆನ್ನಾಗಿ ಎಲ್ಲರಿಗೂ ಊಟ ಬಡಿಸುತ್ತಾಳೆ ಎನ್ನುವ ಸತ್ಯವನ್ನು ಇವತ್ತು ಹೊರಗೆ ಹಾಕಿದ್ದಾರೆ. ತಾಯಿಯೇ ಇರಬಹುದು. ಅಕ್ಕ ಇರಬಹುದು, ತಂಗಿ ಇರಬಹುದು, ಮಡದಿ ಇರಬಹುದು, ಮಹಿಳೆ ಇವತ್ತಿನ ದಿವಸ

ಊಟಕ್ಕೆ ಬಡಿಸುವಾಗ ಚೆನ್ನಾಗಿ ಇವತ್ತು ಉಪಚಾರ ಮಾಡುತ್ತಾಳೆ ಎನ್ನುವ ಸತ್ಯ ಹೊರಗೆ ಬಂತು.

ಶ್ರೀ ಜಿ.ಬಿ. ಶಿವಕುಮಾರ್: ಮಾನ್ಯ ಉಪಾಧ್ಯಕ್ಷರೇ, ವಿಧಾನಪರಿಷತ್ತಿನಲ್ಲಿ ನಮಗೆ ಒಂದು ಅನುಭವವಾಗಿತ್ತು. ಅಲ್ಲಿ ಆರು ಮಂದಿ ಹೆಣ್ಣುಮಕ್ಕಳು ಸದಸ್ಯರಿದ್ದರು. ಅವರು ಒಂದು 15 ದಿವಸಕ್ಕೆ ಒಂದು ಸಾರಿ ಸದನ ನಡೆಯುವಾಗ ಮನೆಯಿಂದ ಅಡಿಗೆ ಮಾಡಿಕೊಂಡು ಬಂದು ಆ ಮಾತೃತ್ವಪ್ರೇಮವನ್ನು ಉಳಿಸಿಕೊಂಡಿದ್ದರು. ನಮ್ಮ ಮಂತ್ರಿಗಳು ಇನ್ನೂ ಒಂದು ದಿವಸ ತಿಂಡಿಯನ್ನೂ ಕೊಡಿಸಿಲ್ವೇ ಇಬ್ಬರು ಇದ್ದುಕೊಂಡು. ಏನು ಅನ್ಯಾಯ ಇದು?

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಶಿವಕುಮಾರ್‌ರವರ ಸಲಹೆಯನ್ನು ನೀವು ತೆಗೆದುಕೊಳ್ಳಬೇಕು. ಅದಕ್ಕೇನಾದರೂ ಉತ್ತರ ಹೇಳಬೇಕು.

ಒಬ್ಬ ಮಾನ್ಯ ಸದಸ್ಯರು : ಮೊದಲು ನೀರು ಕೊಡಲಿ.

ಶ್ರೀ ಎಲ್.ಆರ್. ಶಿವರಾಮೇಗೌಡ : ಅದಕ್ಕೂ ಪರಿಶೀಲಿಸುತ್ತೇನೆ ಎಂದು ಹೇಳಿಬಿಟ್ಟರೆ ಆಗುವುದಿಲ್ಲ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ಈ ಮಂತ್ರಿಗಳು ಊಟಕ್ಕೆ ಆಹ್ವಾನಕೊಡುವ ಸಂದರ್ಭದಲ್ಲಿ ವೆಜಿಟೇರಿಯನ್ ಮಾತ್ರ ಕೊಡುತ್ತಾರೆ. ನಾನ್ ವೆಜಿಟೇರಿಯನ್ ಕೂಡ ಅವರು ಆಹ್ವಾನ ಕೊಡಬೇಕೆಂದು ಹೇಳುತ್ತೇನೆ.

ಶ್ರೀಮತಿ ಬಿ.ಟಿ. ಲಲಿತಾ ನಾಯಕ್ : ಅದನ್ನೂ ಪರಿಶೀಲಿಸುತ್ತೇವೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಮಾನ್ಯ ಅಧ್ಯಕ್ಷರೇ, ನಾನು ಕೊಡುವುದಾದರೆ ವೆಜಿಟೇರಿಯನ್, ಲಲಿತಾ ನಾಯಕ್‌ರವರು ಕೊಡುವುದಾದರೆ ನಾನ್ ವೆಜಿಟೇರಿಯನ್ ಎರಡಕ್ಕೂ ಅವಕಾಶ ಇದೆ.

ಒಬ್ಬ ಮಾನ್ಯ ಸದಸ್ಯರು : ಇಬ್ಬರೂ ಸೇರಿ ಕೊಡಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ನಾನ್ ವೆಜಿಟೇರಿಯನ್ ಎಂದ ತಕ್ಷಣ ನನಗೆ ಒಂದು ಜ್ಞಾಪಕ ಬಂತು. ಮಾಂಸ ತಿನ್ನುವವರೆಲ್ಲಾ ಈ ಮಹಿಳೆಯರು ಒಂದು ಮೀಟಿಂಗ್ ಮಾಡಿದರಂತೆ. ಎಷ್ಟೇ ಮಾಂಸ ಚೆನ್ನಾಗಿ ಮಾಡಿ ನಾವು ಅಡಿಗೆ ಮಾಡಿ ಇಟ್ಟರೆ ಗಂಡಸರು ಒಂದು ಚೂರು ಬಿಡದೆ ತಿಂದುಬಿಡುತ್ತಾರೆ. ಏನು ಮಾಡುವುದು? ಏನು ಮಾಡುವುದು ಎಂದರೆ ನಾವೆಲ್ಲ ಸೇರಿ ಕೋಳಿ ತಲೆ, ಕೋಳಿ ಕಾಲು ತಿಂದರೆ ಕೈಕಾಲು ನಡುಗುತ್ತದೆ ಎಂದು ಹೇಳಿಬಿಡೋಣ ಎಂದು ಮಾಡಿದರು. ಅವತ್ತಿನಿಂದ ಬಿಟ್ಟುಬಿಡುತ್ತಾರೆ ಎಂದು. ಅವತ್ತಿನಿಂದ ಅವೆರಡೂ ಉಳಿದುಕೊಂಡವು. ಇಲ್ಲದಿದ್ದರೆ ಅವನ್ನೂ ತಿಂದುಹಾಕುತ್ತಿದ್ದರು.

ಶ್ರೀಮತಿ ಬಿ.ಟಿ. ಲಲಿತಾ ನಾಯಕ್ : ಇನ್ನು ಪುರೋಹಿತ ಶಾಹಿ ಗುಣ ಬಹಳಷ್ಟಿದೆ ಎಲ್ಲಾ ಕಡೆ ಕೂಡ. ಹಾಗೆಯೇ ಅವರೂ ಒಂದು ಮಾಡಿದರು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಾನ್ಯ ಅಧ್ಯಕ್ಷರೇ, ಬಹಳ ಮುಖ್ಯವಾದ ವಿಷಯ ಏನೆಂದರೆ ಇಡೀ ರಾಜ್ಯದ ಆರ್ಥಿಕ ಪರಿಸ್ಥಿತಿಯ ಮೇಲೆ ಪರಿಣಾಮ ಬೀರತಕ್ಕಂಥದ್ದು ಕೃಷಿ ಈ ಕೃಷಿ ಬಗ್ಗೆ ನಾವು ಅತ್ಯಂತ ಗಂಭೀರವಾಗಿ ಚಿಂತನೆ ಮಾಡಬೇಕು. ಈಗ ಕೃಷಿ ಸಮಿತಿಯಲ್ಲಿ ನಾನೊಬ್ಬ ಸದಸ್ಯನಾಗಿರುವುದರಿಂದ ಬಹಳ ಸಲಹೆಗಳನ್ನು ಕೊಟ್ಟಿದ್ದೇನೆ. ಕೃಷಿಯಲ್ಲಿ ಒಂದು ಮಾರ್ಕೆಟ್ ಪರಿಸ್ಥಿತಿ ಮಾಡುವ ಸಾಮರ್ಥ್ಯ ರಾಜ್ಯ ಸರ್ಕಾರಕ್ಕೆ ಇಲ್ಲ. ಕೃಷಿ ಕ್ಷೇತ್ರದಲ್ಲಿ 243 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಪ್ರಾವಿಷನ್ ಮಾಡಿ ಇದರಲ್ಲಿ ನಾಲ್ಕು ಕ್ಷೇತ್ರಗಳೆಂದರೆ ಒಂದು ಕೃಷಿ,

ಎರಡು ತೋಟಗಾರಿಕೆ, ಮೂರು ಪಶುಸಂಗೋಪನೆ ಮತ್ತು ನಾಲ್ಕನೆಯದು ಮೀನುಗಾರಿಕೆ. ನನ್ನದೊಂದು ಮನವಿಯೇನೆಂದರೆ ಇವತ್ತು ನಾವು ಸರ್ವನಾಶದ ಕಡೆಗೆ ಹೋಗುತ್ತಿದ್ದೇವೆ. ಬಹಳ ಮುಖ್ಯವಾಗಿ ಯೋಚನೆ ಮಾಡಬೇಕಾಗಿದೆ ನಾಲ್ಕು ಇಲಾಖೆಗಳ ಬಗ್ಗೆ ಪಶುಸಂಗೋಪನೆ ಬಗ್ಗೆ ಯೋಚನೆ ಮಾಡಿದಾಗ ಎಲ್ಲಾ ತಳಿಗಳನ್ನು ಹಿಂದಿನ ತಳಿಗಳನ್ನು ನಾಶ ಮಾಡಿಕೊಳ್ಳುತ್ತಿದ್ದೇವೆ. ದಯವಿಟ್ಟು ಹಳ್ಳಿಕಾರ್ ತಳಿ ಅಮೃತಮಹಲ್ ತಳಿಗಳನ್ನು ತಾವು ದಯವಿಟ್ಟು ಪರಿಚಯ ಮಾಡಿಕೊಳ್ಳಲೇಬೇಕು. ಇಲ್ಲದಿದ್ದರೆ ಬಹಳ ಅನಾನುಕೂಲಕರವಾದ ಸೃಷ್ಟಿಯಾಗುತ್ತದೆ. ಇವತ್ತಾಗಲೇ ಒಂದು ಜೊತೆ ಎತ್ತುಗಳು ಇಪ್ಪತ್ತು ಸಾವಿರ, ಇಪ್ಪತ್ತೈದು ಸಾವಿರ, ಮೂವತ್ತು ಸಾವಿರ ಇವತ್ತು ಎಲ್ಲಾ ಸಂತೆಗಳಲ್ಲಿ ಒಂದು ಕಾನೂನು ಇದೆ. ಯಾವುದೇ ಹಸುಗಳನ್ನು, ಎಮ್ಮೆಗಳನ್ನು ದನಗಳನ್ನು ಕೊಯ್ಯಬೇಕಾದರೆ ಒಂದು ಕಾನೂನು ಇದೆ. ಇಷ್ಟು ವರ್ಷದ ಮೇಲ್ಪಟ್ಟಿದ್ದರೆ ಮಾತ್ರ ಅದನ್ನು ಕೊಯ್ಯಬಹುದು ಎಂದು. ಆದರೆ ಆ ಕಾನೂನನ್ನು ಇಂಪ್ಲಿಮೆಂಟ್ ಮಾಡುತ್ತಿಲ್ಲ, ಬಹಳ ಎಳೆ ಎಳೆಯ ಕರುಗಳನ್ನು ಎಳೆಯ ಹಸುಗಳನ್ನು, ಎಳೆ ಎಳೆಯ ಎಮ್ಮೆಗಳನ್ನು ತೆಗೆದುಕೊಂಡು ಹೋಗಿ ಕುಯ್ಯುವ ಒಂದು ಪರಿಸ್ಥಿತಿ ಸೃಷ್ಟಿಯಾಗಿದೆ. ಅದರಿಂದ ದಯವಿಟ್ಟು ಪಶುಸಂಗೋಪನೆ ಮಂತ್ರಿಗಳು ತಾವು ಇದರ ಬಗ್ಗೆ ಒಂದು ಕಾನೂನು ಇದೆ, ಅದನ್ನು ಇಂಪ್ಲಿಮೆಂಟ್ ಮಾಡಬೇಕೆಂದು ತಮ್ಮ ಅವಗಾಹನೆಗೆ ತರುತ್ತೇನೆ. ಹಳ್ಳಿಕಾರ್ ತಳಿ ಮತ್ತು ಅಮೃತಮಹಲ್ ತಳಿಗಳ ಅಭಿವೃದ್ಧಿಗೋಸ್ಕರ ತಾವು ಹೆಚ್ಚು ಕೆಲಸ ಮಾಡಬೇಕು.

ನಂತರ ತೋಟಗಾರಿಕೆ ಇಲಾಖೆಯಲ್ಲಿ ಹನಿ ನೀರಾವರಿ ಪದ್ಧತಿ ಅಳವಡಿಸಿಕೊಳ್ಳಿ. ಈಗಾಗಲೇ ಸುಮಾರು 9 ಲಕ್ಷದಷ್ಟು ಪಂಪ್‌ಸೆಟ್ಟುಗಳಿದ್ದು, ಇವುಗಳಿಗೆ ಸರ್ಕಾರದವರು ಸಬ್ಸಿಡಿ ಕೊಡುತ್ತಿದ್ದಾರೆಂದು ನಾವು ಮಾತನಾಡುತ್ತೇವೆ. ಆದರೆ, ಹನಿ ನೀರಾವರಿ ಪದ್ಧತಿಯನ್ನು ಅಳವಡಿಸಿಕೊಂಡರೆ 9 ಲಕ್ಷ ಪಂಪ್‌ಸೆಟ್ಟುಗಳಿಗೆ ಶೇಕಡ 20ರಷ್ಟು ವಿದ್ಯುತ್ ಸರಬರಾಜು ಸಾಕಾಗುತ್ತದೆ. ಹನಿ ನೀರಾವರಿ ಪದ್ಧತಿಯಿಂದ ಭೂಮಿಯ ಸತ್ವಾಂಶದ ಉಳಿತಾಯ, ರಾಸಾಯನಿಕ ಗೊಬ್ಬರದ ಉಳಿತಾಯ ಹಾಗೂ ವಿದ್ಯುಚ್ಛಕ್ತಿಯ ಉಳಿತಾಯವಾಗುವುದಲ್ಲದೆ, ನಂತರದ ಹತ್ತು ವರ್ಷಗಳಲ್ಲಿ ಬರತಕ್ಕಂಥ ಪ್ಲಾಂಟನ್ನು ಐದು ವರ್ಷಗಳಲ್ಲೇ ಅಭಿವೃದ್ಧಿಗೊಳಿಸಿದಾಗ ರಾಜ್ಯದ ಆರ್ಥಿಕ ಪರಿಸ್ಥಿತಿ ಮೇಲೆ ಉತ್ತಮವಾದ ಪರಿಣಾಮ ಬೀರುತ್ತದೆ. ಇದರಿಂದ ವಿದ್ಯುಚ್ಛಕ್ತಿ ಮತ್ತು ಭೂಮಿಯಲ್ಲಿನ ಸತ್ವಾಂಶ ಎಷ್ಟು ಉಳಿತಾಯವಾಗುತ್ತದೆ ಎಂಬುದನ್ನು ತಾವು ದಯವಿಟ್ಟು ಯೋಚಿಸಬೇಕು. ಅದಕ್ಕೋಸ್ಕರ ಹನಿ ನೀರಾವರಿಗಾಗಿ ಕೇಂದ್ರ ಸರ್ಕಾರ ಹೆಚ್ಚು ಹಣವನ್ನು ಕೊಡಬೇಕು. ಅಲ್ಲದೆ, ಹನಿ ನೀರಾವರಿಗಾಗಿ ಶೇಕಡ ನೂರರಷ್ಟು ಸಬ್ಸಿಡಿ ಕೊಡಬೇಕೆಂದು ನಾವು ವಿಷಯ ಸಮಿತಿಯ ವರದಿಯಲ್ಲಿ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದೇವೆ. ಹನಿ ನೀರಾವರಿಯಿಂದ ಎಲ್ಲಾ ತರಹದ ವ್ಯವಸಾಯ ಮಾಡಬಹುದು. ಕಬ್ಬು ಬೆಳೆಯುವುದರಿಂದ ಹಿಡಿದು ಎಲ್ಲಾ ಬೆಳೆಗಳನ್ನು ಬೆಳೆಯಬಹುದಾಗಿದೆ. ಮಹಾರಾಷ್ಟ್ರದಲ್ಲಿ ಈಗಾಗಲೇ ಹನಿ ನೀರಾವರಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿದ್ದಾರೆ. ಆದುದರಿಂದ, ರಾಜ್ಯದ ಎಲ್ಲಾ ಕಡೆಗಳಲ್ಲೂ ಹನಿ ನೀರಾವರಿ ಯೋಜನೆ ಹಮ್ಮಿಕೊಳ್ಳುವ ರೈತರಿಗೆ ಶೇಕಡಾ ನೂರರಷ್ಟು ಸಬ್ಸಿಡಿ ವ್ಯವಸ್ಥೆ ಕಲ್ಪಿಸಿಕೊಡಬೇಕು. ಈ ಸೌಲಭ್ಯ ಕಲ್ಪಿಸಿಕೊಟ್ಟಲ್ಲಿ ಸರ್ಕಾರಕ್ಕೆ ಅನುಕೂಲವಾಗುವ ವ್ಯವಸ್ಥೆಯಿರುವುದರಿಂದ ಈ ದಿಸೆಯಲ್ಲಿ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತಾ, ಈ ಇಲಾಖೆಯಲ್ಲಿ ತಾವು ನೂರಕ್ಕೆ ಶೇಕಡಾ 25ರಂತೆ ಕಮೀಷನ್ ತೆಗೆದುಕೊಳ್ಳುತ್ತಿದ್ದೀರಿ. ಕೆಲವು ಸಲ ಶೇಕಡ 30ರಿಂದ 35ರಷ್ಟು ಕಮೀಷನ್ ತೆಗೆದುಕೊಳ್ಳುತ್ತೀರಿ. ತೋಟಗಾರಿಕೆ ಇಲಾಖೆಯಲ್ಲಿ 'ಹಾಪ್‌ಕಾಮ್ಸ್' ಎನಿದೆ, ಇದನ್ನು ಇಡೀ ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೂ ವಿಸ್ತರಿಸುವಂಥ ವ್ಯವಸ್ಥೆ ಮಾಡಬೇಕು.

ಇವೊತ್ತು ಹಾಪ್‌ಕಾಮ್ಸ್ ರಾಜ್ಯದಲ್ಲಿ 20 ಭಾಗದಷ್ಟು ಹರಡಿರುವುದರಿಂದ, ಉಳಿದ ಎಂಬತ್ತು ಭಾಗದಷ್ಟು ರಾಜ್ಯಾದ್ಯಾಂತ ಹರಡತಕ್ಕಂಥ ಕೆಲಸ ಮಾಡಬೇಕಲ್ಲದೆ ಉತ್ತಮವಾದ ತೋಟಗಾರಿಕೆಗಳಿಗೆ ಉತ್ತಮವಾದ ಬೀಜಗಳನ್ನು ಕಲ್ಪಿಸಿಕೊಡುವ ವ್ಯವಸ್ಥೆಯೂ ಆಗಬೇಕು. ಇನ್ನು ವಿದ್ಯುಚ್ಛಕ್ತಿ ಕುರಿತು ನಾನು ಸರ್ಕಾರಕ್ಕೆ ಕೊಡುವ ಸಲಹೆಯೇನೆಂದರೆ, ರಾಜ್ಯದಲ್ಲಿರುವ ಎಲ್ಲಾ ಸಕ್ಕರೆ ಕಾರ್ಖಾನೆಗಳ ಮಾಲೀಕರುಗಳ ಸಭೆ ಕರೆದು ಕೋ-ಜನರೇಶನ್ ಮಾಡುವುದರ ಬಗ್ಗೆ ಚರ್ಚಿಸಿ ಕ್ರಮ ಕೈಗೊಳ್ಳಬೇಕು. ಇವೊತ್ತು ಕರ್ನಾಟಕದಲ್ಲಿ 30 ಸಕ್ಕರೆ ಕಾರ್ಖಾನೆಗಳಿದ್ದು, ಕಾರ್ಖಾನೆಗಳಿಗೆ ಕಚ್ಚಾ ಪದಾರ್ಥವಾದ ಕಬ್ಬಿನ ಸಿಪ್ಪೆ ಸಿಗುತ್ತದೆ. ಕೇಂದ್ರ ಸರ್ಕಾರ ಇದಕ್ಕಾಗಿ ಸುಮಾರು 6 ಕೋಟಿ ರೂಪಾಯಿಗಳಷ್ಟು ಸಬ್ಸಿಡಿ ಕೊಡುತ್ತಿದೆ. ರಾಜ್ಯ ಸರ್ಕಾರವು ಸಹ ತನ್ನ ಆಯವ್ಯಯದಲ್ಲಿ ಸುಮಾರು 681 ಕೋಟಿ ರೂಪಾಯಿಗಳನ್ನು ಪ್ರಾವಿಜನ್ ಮಾಡಿಕೊಂಡಿರುವುದರಿಂದ ರಾಜ್ಯ ಸರ್ಕಾರ ಕೆಲವು ಸಂಪನ್ಮೂಲಗಳನ್ನು ಒದಗಿಸಿಕೊಡುವುದರ ಮೂಲಕ ಕೇಂದ್ರ ಸರ್ಕಾರದ ಸಂಪನ್ಮೂಲವನ್ನು ಕ್ರೋಢೀಕರಿಸಿ, ಆ ಸಕ್ಕರೆ ಕಾರ್ಖಾನೆಗಳ ಸಂಪನ್ಮೂಲಗಳ ಮೂಲಕ ವಿದ್ಯುತ್ತನ್ನು ಕೋ-ಜನರೇಟ್ ಮಾಡಿದರೆ ಇವೊತ್ತು 450 ಮೆಗಾವ್ಯಾಟ್‌ಗಳಷ್ಟು ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಅದೇ ರೀತಿ ಕೃಷ್ಣರಾಜಸಾಗರದಲ್ಲೂ ಜಾರಿಗೊಳಿಸಬೇಕು. ತಾವು ಹೊಸ ಹೊಸ ಕಾರ್ಖಾನೆಗಳಿಗೆ ಪರವಾನಗಿ ಕೊಡುತ್ತಿದ್ದೀರಿ. ಅಲ್ಲದೆ, ಇವೊತ್ತು 8-10 ಸಕ್ಕರೆ ಕಾರ್ಖಾನೆಗಳು ಬೇಕೆಂದು ತಾವು ಹೇಳುತ್ತಿದ್ದು, ಹತ್ತು ಸಕ್ಕರೆ ಕಾರ್ಖಾನೆಗಳಿಗೂ ಕಡ್ಡಾಯವಾಗಿ ಕೋ-ಜನರೇಶನ್ ಅನ್ನು ಅಳವಡಿಸಿಕೊಳ್ಳುವುದರ ಮೂಲಕ ಪರವಾನಗಿ ಕೊಡಬೇಕೆಂದು ನಾನು ಸರ್ಕಾರದ ಗಮನಕ್ಕೆ ತರುತ್ತಾ, ಇನ್ನು ಕಾರ್ಮಿಕರ ವಿಚಾರವಾಗಿ ಪ್ರಸ್ತಾಪಿಸುತ್ತೇನೆ. ಕಾರ್ಮಿಕರಲ್ಲಿ ಎರಡು ವರ್ಗ, ಒಂದು ಅಸಂಘಟಿತ ಕಾರ್ಮಿಕರು ಮತ್ತೊಂದು ಸಂಘಟಿತ ಕಾರ್ಮಿಕರು. ತಮ್ಮ ಒಂದು ವಿಚಾರವನ್ನು ಓದಿದಾಗ ಅದರಲ್ಲಿ ಸಂಘಟಿತ ಕಾರ್ಮಿಕರಿಗೆ ಕೆಲವು ಸವಲತ್ತುಗಳನ್ನು, ಅನುಕೂಲಗಳನ್ನು ಕಲ್ಪಿಸಿಕೊಡಲಾಗಿದೆಯೆಂದು ಇದೆ. ಆದರೆ, ಅಸಂಘಟಿತ ಕಾರ್ಮಿಕರಿಗೆ ತಾವು ಯಾವುದೇ ಸವಲತ್ತನ್ನು ಕಲ್ಪಿಸಿಲ್ಲ, ಇವೊತ್ತು ಉದ್ಯೋಗವನ್ನು ಸೃಷ್ಟಿಸತಕ್ಕಂಥ, ಅಸಂಘಟಿತ ಕಾರ್ಮಿಕರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸುವುದಕ್ಕೆ ತಾವು ಒಂದು ಬ್ಯಾಂಕಿಂಗ್ ವ್ಯವಸ್ಥೆಯನ್ನು ಮಾಡಬೇಕು. ಇವೊತ್ತು 20 ಲಕ್ಷ ಉದ್ಯೋಗವನ್ನು ಸೃಷ್ಟಿ ಮಾಡಬಹುದು. ಆದರೆ, ಇವೊತ್ತು ನಾವು ಎಲ್ಲಾ ಸೌಲಭ್ಯ, ಸವಲತ್ತುಗಳನ್ನು ಕೊಡುತ್ತಿದ್ದೇವೆಯೇ? ಅಸಂಘಟಿತ ಕಾರ್ಮಿಕರನ್ನು ಕೇಳುವವರೇ ಇಲ್ಲ. 1944ನೇ ಇಸವಿಯಿಂದ ಇಲ್ಲಿಯವರೆಗೆ ಅಸಂಘಟಿತ ಕಾರ್ಮಿಕರಿಗೆ ಕೂಲಿ ಕೊಟ್ಟಿರುವುದನ್ನು ಲೆಕ್ಕ ಹಾಕುವುದಾದರೆ ಅವರಿಗೆ ಕೊಡುವ ಕೂಲಿಯಲ್ಲಿ ಪ್ರತಿ ವರ್ಷವೂ 20 ಪೈಸೆ, 30 ಪೈಸೆ ಮತ್ತು 35 ಪೈಸೆಯಂತೆ ಜಾಸ್ತಿ ಮಾಡಿದ್ದೇವೆ. ಆದರೆ, ಅವರಿಗೆ ಸಬ್ಸಿಡಿ ರೂಪದಲ್ಲಿ ಅಕ್ಕಿ ಕೊಡುತ್ತಿದ್ದೇವೆ, ಮುಂತಾದವುಗಳನ್ನು ಕೊಡುತ್ತಿದ್ದೇವೆಂದು ಹಾಗೂ ಸಬ್ಸಿಡಿ ಕೊಡುವುದರ ಮೂಲಕ ನಾವು ಬಹಳ ಬದಲಾವಣೆಗಳನ್ನು ಮಾಡುತ್ತಿದ್ದೇವೆಂದು ಹೇಳಬಹುದು. ಅಸಂಘಟಿತ ಕಾರ್ಮಿಕರ ಶ್ರಮಕ್ಕೆ ತಕ್ಕ ಬೆಲೆ ಕೊಡದೆ ಅವರ ಶ್ರಮವನ್ನು ನಾವು ಕಳ್ಳತನ ಮಾಡಿಕೊಂಡು ವರ್ಷದಿಂದ ವರ್ಷಕ್ಕೆ ರೂ. 100, ರೂ. 500 ಮತ್ತು ರೂ. 350ರಂತೆ ಸಬ್ಸಿಡಿ ಕೊಡುತ್ತಿದ್ದೇವೆ, ವಿಷಯ ಅದಲ್ಲ. ಆತನ ಕನಿಷ್ಠ ಶ್ರಮಕ್ಕೆ ಬೆಲೆ ಬೇಕು. ದಿವಸಕ್ಕೆ ರೂ. 60ರಂತೆ ಸಂಬಳ ಪಡೆಯುತ್ತಿದ್ದ ಸರ್ಕಾರಿ ನೌಕರ ಇವೊತ್ತು ತಿಂಗಳಿಗೆ ರೂ. 3000 ದಿಂದ ರೂ. 3200ರವರೆಗೆ ಸಂಬಳ ತೆಗೆದುಕೊಳ್ಳುತ್ತಿದ್ದಾನೆ. ಅಂದರೆ, ದಿವಸಕ್ಕೆ ನೂರು ರೂಪಾಯಿಗಳಂತೆ ಕೂಲಿಯಾಗುತ್ತದೆ. ಆದರೆ,ಅದೇ ಅಸಂಘಟಿತ ಕಾರ್ಮಿಕನಾದ ದಿವಸಕ್ಕೆ ರೂ. 8, ರೂ. 10 ತೆಗೆದುಕೊಳ್ಳುತ್ತಿದ್ದ ಒಬ್ಬ ಕೂಲಿಯವನಿಗೆ ಇವೊತ್ತು ನಾವು ದಿವಸಕ್ಕೆ ರೂ. 25ರಂತೆ ಕೂಲಿ ಕೊಡುತ್ತಿದ್ದೇವೆ. ವೈಜ್ಞಾನಿಕವಾಗಿ ಕೂಲಿ ನೀತಿಯನ್ನು ಜಾರಿಗೊಳಿಸುವಲ್ಲಿ ರಾಜ್ಯ ಸರ್ಕಾರ ಮೊದಲಿನಿಂದಲೂ....

ಡಾ|| ಜೀವರಾಜ್ ಆಳ್ವ : ಅಸಂಘಟಿತ ಕಾರ್ಮಿಕರಾದ ಕೂಲಿ ಕೆಲಸ ಮಾಡುವವರಿಗೆ ವರ್ಷಕ್ಕೆ 20 ಪೈಸೆ, 30 ಪೈಸೆಯಂತೆ ಜಾಸ್ತಿ ಮಾಡಿದ್ದೇವೆಂದು ಏನು ಹೇಳಿದಿರಿ, ಅದು ನನಗೆ ಅರ್ಥವಾಗಲಿಲ್ಲವಾದ್ದರಿಂದ ಸ್ಪಷ್ಟವಾಗಿ ಹೇಳಬೇಕು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ನಾನು ಒಂದು ಉದಾಹರಣೆ ಹೇಳುತ್ತೇನೆ. 1944ನೇ ಇಸವಿಯಿಂದ 1985ರವರೆವಿಗೂ ಒಂದು ಟನ್ ಕಬ್ಬಿಗೆ ವರ್ಷಕ್ಕೆ ರೂ. 6 ರಂತೆ ಜಾಸ್ತಿಯಾಗಿದೆ. ಆದರೆ, ನಮ್ಮ ಗ್ರಾಮೀಣ ಪ್ರದೇಶದ ಅಸಂಘಟಿತ ಕಾರ್ಮಿಕರಾದ ಕೂಲಿ ಕೆಲಸ ಮಾಡುವವರಿಗೆ ವರ್ಷದಿಂದ ವರ್ಷಕ್ಕೆ 20 ಪೈಸೆ, 30 ಪೈಸೆ, ಮತ್ತು 40 ಪೈಸೆಯಂತೆ ಜಾಸ್ತಿಯಾಗಿ ಈಗ ದಿವಸಕ್ಕೆ ರೂ. 25ರಂತೆ ಕೂಲಿ ನಿಗದಿಯಾಗಿದೆ. ಆ ಪ್ರಕಾರ ನಾವು 1944ನೇ ಇಸವಿಯಿಂದ ಇಲ್ಲಿಯವರೆಗೆ ಲೆಕ್ಕ ಹಾಕಿದರೆ ಒಂದು ವರ್ಷಕ್ಕೆ 20 ಪೈಸೆ, 30 ಪೈಸೆಯಂತೆ ಜಾಸ್ತಿಯಾಗಿದೆ. ಅವರ ಶ್ರಮವನ್ನು ನಾವು ಕಳ್ಳತನ ಮಾಡಿದ್ದೇವೆ. ವೈಜ್ಞಾನಿಕವಾಗಿ ಆತ ತನ್ನ ಕಾಲ ಮೇಲೆ ತಾನು ನಿಲ್ಲತಕ್ಕ ಸಾಮರ್ಥ್ಯ ಹಾಳು ಮಾಡಿ 'ನಿನಗೆ ಸೀಮೆಎಣ್ಣೆ ಕೊಡುತ್ತಿದ್ದೇವೆ, ಅಕ್ಕಿ ಕೊಡುತ್ತಿದ್ದೇವೆ' ಎಂದು ಹೇಳುತ್ತಾ ಅವರಿಗೆ ಅಷ್ಟೇ ಮಾಡುತ್ತಿರುವುದು. ಅವರು ನಿಜವಾಗಿ ಬದುಕುವಂಥ ಹಕ್ಕನ್ನು ಮಾತ್ರ ನಾವು ಕಸಿದುಕೊಳ್ಳುತ್ತಿದ್ದೇವೆ. ವೈಜ್ಞಾನಿಕ ಕೂಲಿ ನೀತಿ ಬಗ್ಗೆ ಮಾತನಾಡುತ್ತೇವೆ, ಆದರೆ, ವೈಜ್ಞಾನಿಕ ರೀತಿಯಲ್ಲಿ ಕೂಲಿ ಕೊಟ್ಟಿಲ್ಲ, ಕೈಗಾರಿಕಾ ಕಾರ್ಮಿಕನಿಗೆ ಒಂದು ಕಾನೂನಾದರೆ ಕೃಷಿ ಕಾರ್ಮಿಕರಿಗೆ ಇನ್ನೊಂದು ಕಾನೂನು. ಯಾವುದೇ ಕಾರ್ಮಿಕರನ್ನು ತೆಗೆದುಕೊಳ್ಳಬಹುದು. ನಾನು ಅವೊತ್ತು ನಿಮಗೆ ಹೇಳಿದೆ. ಸಂತೇಪೇಟೆಯಲ್ಲಿ ಕೆಲಸ ಮಾಡುವವರ ಜೀವಕ್ಕೆ ಭದ್ರತೆ ಏನು? ಎಂದು. ಕಲ್ಲಿನ ಕೆಲಸ ಮಾಡುವ ಸಾವಿರಾರು ಜನರು ತಮ್ಮ ಕೈಕಾಲುಗಳನ್ನು ಕಳೆದುಕೊಂಡಿದ್ದರೂ, ಇವೊತ್ತು ಲಕ್ಷಾಂತರ ಮನೆಗಳನ್ನು ಕಟ್ಟಿಕೊಂಡು ನಾವೆಲ್ಲರೂ ಸಂತೋಷವಾಗಿದ್ದೇವೆ. ಆ ಅಸಂಘಟಿತ ಕಾರ್ಮಿಕರ ಬದುಕಿಗೆ, ಭವಿಷ್ಯಕ್ಕೆ ನಾವು ಏನಾದರೂ ಮಾಡಿದ್ದೇವೆಯೇ? ಏನೂ ಮಾಡಿಲ್ಲ. ನನ್ನದೇ ಕ್ಷೇತ್ರದಲ್ಲಿ ನಾನು ಕಣ್ಣಾರೆ ನೋಡಿರುವಂತೆ ಕಲ್ಲು ಕೆಲಸ ಮಾಡುತ್ತಿರುವ ಒಬ್ಬೊಬ್ಬರಿಗೆ ಕೈ ಇಲ್ಲ, ಡೈನಮೈಟ್ ಹಾಕಲು ಹೋಗಿ ತಮ್ಮ ಕೈಕಾಲುಗಳನ್ನು ಕಳೆದುಕೊಂಡಿದ್ದಾರೆ. ಅವರು ಅಷ್ಟೊಂದು ಏಟುಗಳನ್ನು ತಿಂದಿದ್ದರೂ ಸಹ ಆ ಅಸಂಘಟಿತ ಕಾರ್ಮಿಕರ ಬಗ್ಗೆ ಇದರಲ್ಲಿ ಒಂದೇ ಒಂದು ಶಬ್ದವೂ ಇಲ್ಲ. ಆದುದರಿಂದ, ಅವರ ಬಗ್ಗೆ ತಾವು ಕಾರ್ಯಕ್ರಮ ರೂಪಿಸಿಕೊಳ್ಳಬೇಕು. ಇಲ್ಲದಿದ್ದರೆ, ಕಾರ್ಮಿಕ ಇಲಾಖೆಗೆ ಒಬ್ಬ ಮಂತ್ರಿಯಾಗಿ ತಾವು ಇರುತ್ತೀರಿ, ತಮ್ಮ ಇಲಾಖೆಗೆ ಸರ್ಕಾರ 8Ë9 ಕೋಟಿ ರೂಪಾಯಿಗಳಷ್ಟು ದುಡ್ಡು ಕೊಟ್ಟಿದೆ. ಕಾರ್ಮಿಕರ ಸ್ಥಿತಿಗತಿ ಬಗ್ಗೆ ಏನಾದರೂ ಮಾತನಾಡದಿದ್ದರೆ ನೀವು ಬೇಸರಪಟ್ಟುಕೊಳ್ಳುತ್ತೀರಿ, ಸರ್ಕಾರದ ಪರವಾಗಿ ಮಾತನಾಡಿದರೆ ನಮಗೂ ಏನೋ ಮಾಡುತ್ತಾರೆಂದು ಕಾರ್ಮಿಕರು ಆ ಕೆಲಸ ಮಾಡಿಕೊಂಡು ಸಾಯುತ್ತಿರುವ ಸ್ಥಿತಿ.

ಕಾರ್ಮಿಕರ ಬಗ್ಗೆ ಆಲೋಚಿಸಬೇಕಾದರೆ ಸರ್ಕಾರಕ್ಕೆ ಒಂದು ವೈಜ್ಞಾನಿಕವಾದ ಉದ್ದೇಶವಿರಬೇಕು. ಇದರ ಬಗ್ಗೆ ಗಂಭೀರವಾಗಿ ಆಲೋಚನೆ ಮಾಡದಿದ್ದರೆ ಬಹಳ ನಷ್ಟವಾಗುತ್ತದೆಂದು ನಾನು ಅವೊತ್ತೇ ಹೇಳಿದೆ. ಅಲ್ಲದೆ, ಹಳ್ಳಿ-ಪಟ್ಟಣಗಳಲ್ಲಿ ಎಂತಹ ಕೆಟ್ಟದಾಗಿ ಬಡ್ಡಿ ವ್ಯವಹಾರಗಳು ನಡೆಯುತ್ತಿದೆಯೆಂದರೆ, ದಿವಸಕ್ಕೆ ನೂರು ರೂಪಾಯಿಗಳಿಗೆ ಶೇಕಡ 10ರಂತೆ ಅಂದರೆ ರೂ. 10 ಬಡ್ಡಿಯಂತೆ ವ್ಯವಹಾರ ನಡೆಯುತ್ತಿದೆ. ಸಣ್ಣ-ಸಣ್ಣ ಉದ್ಯೋಗ ಮಾಡುವವರು, ಸೌತೇಕಾಯಿ, ಕಲ್ಲಂಗಡಿ, ಕಿತ್ತಲೆ ಹಣ್ಣಿನ ವ್ಯಾಪಾರ ಮಾಡುವುದಕ್ಕಾಗಿ ಶೇಕಡಾ 10ರ ಬಡ್ಡಿ ದರದಲ್ಲಿ ರೂ. 100ನ್ನು ಸಾಲವಾಗಿ ಪಡೆದರೆ ಸಾಲ ಕೊಡುವವರು ಮೊದಲೇ ಹತ್ತು ರೂಪಾಯಿಗಳನ್ನು ತೆಗೆದುಕೊಂಡು ತೊಂಭತ್ತು ರೂಪಾಯಿಗಳನ್ನು ಕೊಡುತ್ತಾರೆ ಆ ಹಣವನ್ನು ವಾಪಸ್ಸು ಮಾಡುವಾಗ ಹತ್ತು ರೂಪಾಯಿಗಳ ಬಡ್ಡಿಯನ್ನು ಸೇರಿಸಿ ಪೂರ್ತಿ ಹಣ ಕೊಡಬೇಕು. ಈ

ಮಟ್ಟದ ಒಂದು ಪರಿಸ್ಥಿತಿ ಇದೆ. ಈ ಪರಿಸ್ಥಿತಿಯನ್ನು ತೊಡೆದುಹಾಕಬೇಕಾಗುತ್ತದೆ. ಈ ಹಿಂದೆ ಬ್ಯಾಂಕುಗಳನ್ನು ರಾಷ್ಟ್ರೀಕೃತಗೊಳಿಸುವ ಸಂದರ್ಭದಲ್ಲಿ ದಿವಂಗತ ಶ್ರೀಮತಿ ಇಂದಿರಾಗಾಂಧಿಯವರು '14 ಬ್ಯಾಂಕುಗಳನ್ನು ರಾಷ್ಟ್ರೀಕರಣಗೊಳಿಸುತ್ತಿರುವ ಉದ್ದೇಶ ಈ ಬ್ಯಾಂಕುಗಳಿಂದ ಸಮಗ್ರ ಗ್ರಾಮೀಣ ಜನತೆಗೆ ಅನುಕೂಲವಾಗಲಿ' ಎಂದು ರಾಜ್ಯ ಸರ್ಕಾರ ಅದಕ್ಕೆ ಒತ್ತು ಕೊಟ್ಟಂತೆ ಕನಿಷ್ಠ ಬಡತನ ರೇಖೆಯಲ್ಲಿರುವವರಿಗಾದರೂ ಸಣ್ಣ ಉದ್ಯೋಗ ಮಾಡುತ್ತೇವೆಂದು ಮುಂದೆ ಬಂದಲ್ಲಿ ಅವರುಗಳಿಗೆ ರೂ. 1,000 ಗಳಷ್ಟು ಧನ ಸಹಾಯ ಕಲ್ಪಿಸಿಕೊಡುವಂಥ ಒಂದು ಕೆಲಸ ಮಾಡಿದರೆ ಅನುಕೂಲವಾಗುತ್ತದೆ, ಇಲ್ಲದಿದ್ದರೆ, ಏನೂ ಪ್ರಯೋಜನವಾಗುವುದಿಲ್ಲ. ಸಂತೇಪೇಟೆಯಲ್ಲಿ ಮೂಟೆಗಳನ್ನು ಹೊರುತ್ತಿರುವವರ ಬೆನ್ನನ್ನು ನೋಡುವುದಕ್ಕಾಗುವುದಿಲ್ಲ, ಅಂತಹ ಕಾರ್ಮಿಕರ ಬಗ್ಗೆ ತಮ್ಮ ಕಾರ್ಯಕ್ರಮವೇನು? ಇಡೀ ರಾಜ್ಯದಲ್ಲಿ 3-4 ಲಕ್ಷದಷ್ಟು ಮೂಟೆ ಹೊರುವವರಿದ್ದಾರೆ. ಈ ಅಸಂಘಟಿತ ಕಾರ್ಮಿಕರ ಬಗ್ಗೆ ಸರ್ಕಾರದ ಕಾರ್ಯಕ್ರಮವೇನು? ಎಂಬುದನ್ನು ತಿಳಿಸಬೇಕು.

ಶ್ರೀ ಡಿ.ಟಿ. ಜಯಕುಮಾರ್ : ಅವರೆಲ್ಲರಿಗೂ ಸರ್ಕಾರದ ವತಿಯಿಂದ ಮನೆಗಳನ್ನು ಕಟ್ಟಿಸಿಕೊಡುತ್ತಿದ್ದೇವೆ. ಅದಕ್ಕೆ ನಮ್ಮ ಸರ್ಕಾರ ಈಗಾಗಲೇ ಬದ್ಧವಾಗಿದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : 100 ಮೂಟೆ ಅನ್‌ಲೋಡ್ ಮಾಡಿದರೆ ಆ 10 ರೂಪಾಯಿ ಆಪತ್ ಧನ ಎಂದು ಕೊಡಿಸಿ ಸಾಕು. ಯಾರು ಅನ್‌ಲೋಡ್ ಮಾಡುತ್ತಾರೆ. ಅವರಿಗೆ ದಿವಸಕ್ಕೆ 300 ಲೋಡ್ ಅನ್‌ಲೋಡ್ ಆದರೆ ಬೆಂಗಳೂರು ಸಂತೇ ಪೇಟೆಯಲ್ಲಿ ಒಂದು ದಿವಸಕ್ಕೆ 3,000 ರೂಪಾಯಿ ಒಂದು ತಿಂಗಳಿಗೆ 90,000 ರೂಪಾಯಿ ವರ್ಷಕ್ಕೆ 10 ಲಕ್ಷ ಆಯಿತು. ತಾನು ನಿವೃತ್ತಿಯಾದಾಗ, 25 ವರ್ಷಗಳ ಕಾಲ ಮೂಟೆ ಹೊತ್ತು ಮನೆಗೆ ಹೋದರೆ ಕೈಗೆ 50,000 ರೂಪಾಯಿ ತೆಗೆದುಕೊಂಡು ಹೋಗುತ್ತಾನೆ. ಅದನ್ನು ಮಾಡಿ. ಅದನ್ನು ಮಾಡಬೇಕು. 100 ಮೂಟೆ ಅನ್‌ಲೋಡ್ ಮಾಡಿದರೆ ಅವನು ಬದುಕಿಗೆ 10 ರೂಪಾಯಿ ಆಪತ್ ಧನ. ಇವತ್ತು ಸರ್ಕಾರದಲ್ಲಿ ನಾವೆಲ್ಲರೂ ನಿವೃತ್ತಿಯಾದವರಿಗೆ ಎಲ್ಲಾರಿಗೂ ನಿವೃತ್ತಿ ವೇತನ ಅಂತ ಕೊಡುತ್ತೇವೆ. ಅವನಿಗೆ ನಿವೃತ್ತಿ ವೇತನ ಇಲ್ಲ, ಆ ಕಲ್ಲು ಹೊಡೆಯುವುದು ಮಾಡಬಹದಾಗಿತ್ತು, ಒಂದು ಲೋಡ್‌ಗೆ 10 ರೂಪಾಯಿಯಂತೆ ಈ ಕಲ್ಲು ಹೊಡೆಯುವಂತಹ ಕಾರ್ಮಿಕರಿಗೆ 10 ರೂಪಾಯಿ ಕೊಡತಕ್ಕಂತಹ ವ್ಯವಸ್ಥೆ ಮಾಡಿದರೆ ಭಾರಿ ಅನುಕೂಲವಾಗುತ್ತದೆ. ತಾವು ದಯವಿಟ್ಟು ಇದನ್ನು ಗುರುತು ಹಾಕಿಕೊಳ್ಳಿ. ಈ ದಿಕ್ಕಿನಲ್ಲಿ ತಾವು ಪ್ರಯತ್ನ ಪಡಬೇಕು. ಆಗುವುದು ಬಿಡುವುದು ಎರಡನೆಯ ಪ್ರಶ್ನೆ. ಸರ್ಕಾರದಲ್ಲಿ ಒಂದು ಕಾರ್ಮಿಕ ಇಲಾಖೆ ಇದ್ದು ನಾನು ಕಾರ್ಮಿಕ ಮಂತ್ರಿಯಾಗಿ ಏನಾದರೂ ಮಾಡಬೇಕೆಂದು ಇದ್ದೇನೆ ಎಂದು ಹೇಳಿದಿರಿ, ದಯವಿಟ್ಟು ಇಂಥ ಕೆಲಸವನ್ನು ಮಾಡಿ. ಇಲ್ಲದೆ ಇದ್ದರೆ ಏನೂ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಬೇಕು. ಇಲ್ಲ ಬೇರೆ ಏನಾದರೂ ಮಾಡುತ್ತೇನೆಂದು ಆದರೂ ಹೇಳಬೇಕು. ಅಸಂಘಟಿತ ಕಾರ್ಮಿಕರ ಬಗ್ಗೆ ತಾವು ಯೋಚನೆ ಮಾಡಿ. ಈ ಕೆಲಸವನ್ನು ಮಾಡಿದರೆ ನಿಜವಾಗಿಯೂ ತಾವು ಮಂತ್ರಿ ಆಗಿದ್ದು ಸಾರ್ಥಕ, ಅವರ ಬದುಕಿಗೆ ಉತ್ತಮವಾದ ಭವಿಷ್ಯವನ್ನು ತಾವು ಸೃಷ್ಟಿ ಮಾಡಿ ಕೊಡಬಹುದು ಎಂದು ಹೇಳುತ್ತಾ, ಮಾನ್ಯ ಅಧ್ಯಕ್ಷರೆ, ಸಮಾಜ ಕಲ್ಯಾಣ ಇಲಾಖೆ ಎಂದು ಹೇಳಿ, ನನ್ನನ್ನು ಆ ಸಮಿತಿ ಸದಸ್ಯನಾಗಿ ಮಾಡಿ ಆ ಸಮಿತಿಯಲ್ಲಿ ಒಂದು ಮೀಟಿಂಗ್ ಕರೆದರು. ಸುಮಾರು 80 ಕೋಟಿ ರೂಪಾಯಿ ಹಿಂದುಳಿದ ವರ್ಗದವರಿಗೆ ಎಂದು ಹೇಳಿ 80 ಕೋಟಿ ರೂಪಾಯಿ ಪ್ರಾವಿಷನ್ ಮಾಡಿಕೊಂಡಿದ್ದರು. ಹಾಸ್ಟೆಲ್‌ಗಳು, ನವೋದಯ ಶಾಲೆಗಳು ಇದರ ಬಗ್ಗೆ ನನಗೆ ಒಂದೇ ಒಂದು ಸಾರಿ ಮೀಟಿಂಗ್‌ಗೆ ಕರೆದರು. ಆ ಸಮಿತಿಗೆ ನಾನೂ ಒಬ್ಬ ಸದಸ್ಯನಾಗಿದ್ದೇನೆ, ಒಂದು ಮೀಟಿಂಗ್ ಆದನಂತರ ಇನ್ನೊಂದು ಮೀಟಿಂಗ್‌ನ್ನು ಇಲ್ಲಿಯವರೆಗೆ ಕರೆದಿಲ್ಲ,

ಆ 80 ಕೋಟಿ ಹಣ ಆ ಮಕ್ಕಳಿಗೆ ಸರಿಯಾಗಿ ತಲುಪುತ್ತಾ ಇದೆಯಾ? ಹಾಸ್ಟೆಲ್‌ಗಳು ಸರಿಯಾಗಿ ನಡೆಯುತ್ತಾ ಇದೆಯಾ? ನಿಜವಾಗಿಯೂ ಅವರಿಗೆ ಉತ್ತಮವಾದ ಪೌಷ್ಠಿಕ ಆಹಾರ ಸಿಗುತ್ತಾ ಇದೆಯಾ? ಇದಕ್ಕೆ ಕ್ಷೇತ್ರವಾರು ಒಂದು ಸಮಿತಿ ಮಾಡಬೇಕು. ಇದರಲ್ಲಿ ಶಾಸಕರ ಜವಾಬ್ದಾರಿ ಏನು, ಏಕೆಂದರೆ ಇಷ್ಟೊಂದು ದುಡ್ಡು ಕೊಟ್ಟು ನಾವು ಹಿಂದುಳಿದ ವರ್ಗದವರಿಗೆ ಈ ಸಮಿತಿ ಶಿಫಾರಸ್ಸು ಮಾಡಿದರೆ 250 ರೂಪಾಯಿ ಕೊಡುತ್ತಿದ್ದುದನ್ನು 450 ರೂಪಾಯಿಗಳು ಕೊಡಬೇಕು, ಇವತ್ತು ಹಣ ಸಾಲುತ್ತಿಲ್ಲ ಎಂದು ಹೇಳಲು ಸಮಾಜ ಕಲ್ಯಾಣ ಇಲಾಖೆಯವರಿಗೂ ಅದರಿಂದ ಒಂದೇ ಒಂದು ಸಾರಿ ಇದುವರೆಗೆ ಮೀಟಿಂಗ್ ಕರೆದಿಲ್ಲ. ದಯವಿಟ್ಟು ನನ್ನದು ಒಂದು ಸಲಹೆ, ಆಯಾಯ ಕ್ಷೇತ್ರದ ಶಾಸಕರನ್ನು ಆ ಸಮಿತಿ ಬಗ್ಗೆ ಆ ಹಾಸ್ಟೆಲ್ ಬಗ್ಗೆ ಕನಿಷ್ಠ ಒಂದು ವರ್ಷದಲ್ಲಿ 2-3 ಮೀಟಿಂಗ್ ಮಾಡಿ ಸ್ಥಳವನ್ನು ಪರಿಶೀಲನೆ ಮಾಡಿ ಸರ್ಕಾರಕ್ಕೆ ವರದಿ ಕೊಡುವುದರ ಮೂಲಕ ಆಗುತ್ತಾ ಇರತಕ್ಕಂತಹ ಅನ್ಯಾಯವನ್ನು ಸರಿಪಡಿಸಬೇಕು. ಜೊತೆಗೆ ಏನಾಗುತ್ತಿದೆ, ಸುಮಾರು ಬೋಗಸ್ ಇದೆ. ಹಿಂದುಳಿದ ವರ್ಗದವರ ಹೆಸರಿನಲ್ಲಿ ಬೋಗಸ್ ಹಾಸ್ಟೆಲ್‌ಗಳನ್ನು ಮಾಡಿ ಖಾಸಗಿಯವರು ಅದನ್ನು ನಡೆಸುತ್ತಿದ್ದಾರೆ. ತಾವು ದಯವಿಟ್ಟು ಅದನ್ನು ಯೋಚನೆ ಮಾಡಬೇಕು. ಇದನ್ನು ಸರಿ ಮಾಡಿ ನಾವು ಬಡ್ಜೆಟ್‌ನಲ್ಲಿ ಏನು ಪ್ರಾವಿಷನ್ ಮಾಡಿಕೊಂಡಿದ್ದೇವೆ, ಎಷ್ಟು ಹಣವನ್ನು ಸರಿಯಾಗಿ ಖರ್ಚು ಮಾಡುತ್ತಿದ್ದೇವೆ ಅಂತ ನೋಡುವುದು ನಮ್ಮೆಲ್ಲರ ಹಾಗೂ ಸರ್ಕಾರದ ಜವಾಬ್ದಾರಿ. ಆ ಹಣ ನಿಜವಾಗಿಯೂ ಅವರಿಗೆ ತಲುಪುತ್ತಿದೆಯೋ? ನಾವು ಯಾವ ಉದ್ದೇಶಕ್ಕೋಸ್ಕರ ಆ ಹಣವನ್ನು ಬಡ್ಜೆಟ್‌ನಲ್ಲಿ ಪ್ರಾವಿಷನ್ ಮಾಡಿಕೊಂಡಿದ್ದೇವೆ, ಆ ಹಣ ಅವರಿಗೆ ತಲುಪಿದೆಯೇ ಎಂದು ದಯವಿಟ್ಟು ಗಂಭೀರವಾಗಿ ಆಲೋಚನೆ ಮಾಡಬೇಕೆಂದು ನಾನು ಹೇಳಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ಸಭಾಧ್ಯಕ್ಷರಿಗೆ ವಂದನೆಗಳನ್ನು ಹೇಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ವಿರೋಧ ಪಕ್ಷದಲ್ಲಿ ಕುಳಿತಿರತಕ್ಕಂತಹವರ ಪೈಕಿ ಬಿ.ಜೆ.ಪಿ.ಯವರು, ಕಾಂಗ್ರೆಸ್‌ನವರು, ಕೆ.ಸಿ.ಪಿ.ಯವರು, ಆ ಮೇಲೆ ಕಡಿಮೆ ಇರತಕ್ಕಂಥ ಜನಸಂಖ್ಯೆ ನಮ್ಮದು. ನಾವು ನಿಮ್ಮ ಗಮನಕ್ಕೆ ಬಂದಿದ್ದೇವೆಯೋ ಅಥವಾ ಇಲ್ಲವೋ ಎನ್ನುವುದು ನಮಗೆ ತಿಳಿಯುತ್ತಿಲ್ಲ. ಇದರ ಬಗ್ಗೆ ಮಾತನಾಡಬೇಕೆಂಬ ಉದ್ದೇಶದಿಂದ ನಾನು ನಿನ್ನೆಯಿಂದ ಕಾಯುತ್ತಿದ್ದೇನೆ. ನೀವು ನಾಳೆ ಮಾತನಾಡುವುದಕ್ಕೆ ಅವಕಾಶ ಕೊಟ್ಟರೂ ನಾವು ಮಾತನಾಡುತ್ತೇವೆ. ಅದು ಬೇರೆ ಪ್ರಶ್ನೆ.

ಶ್ರೀ ಜಿ.ಬಿ. ಶಿವಕುಮಾರ್ : ಅವರು ನಿನ್ನೆ ಮಾತನಾಡಲಿಕ್ಕೆ ಅವಕಾಶ ಕೇಳಿದ್ದರು. ಅಲ್ಲದೆ ನನಗೆ ಮಾತನಾಡಲು ಅವಕಾಶಬೇಕೆಂದು ಬರೆದು ಕೂಡ ಕೊಟ್ಟಿದ್ದರು.

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಶ್ರೀರಾಮರೆಡ್ಡಿಯವರು ಮಾತನಾಡುವುದಕ್ಕೆ, ಪುಟ್ಟಣ್ಣನವರು ಮಾತನಾಡುವುದಕ್ಕೆ, ವಾಟಾಳ್ ನಾಗರಾಜ್‌ರವರು ಮಾತನಾಡುವುದಕ್ಕೆ ನಮ್ಮ ಅಡ್ಡಿ ಆಕ್ಷೇಪ ಇಲ್ಲ. ಅವರು ಮಾತನಾಡುತ್ತಾರೆ, ನಾವು ಕೇಳುತ್ತೇವೆ. ನಮಗೆ ಅವಕಾಶ ಸಿಗದೆ ಇರುವುದರಿಂದ ಇಲ್ಲಿ ಅನ್ಯಾಯವಾಗಿದೆ. ನೀವು ಏಕೆ ಹಾಗೆ ಹೇಳುತ್ತೀರಿ, ನಾವು ಏನು ನಾವು ಆ ಕಡೆ ಹೋಗಿದ್ದೇವೆ ಎಂದು ಬೋರ್ಡ್ ಹಾಕಿಕೊಂಡಿದ್ದೇವೆಯೋ ಏಕೆ ನಮ್ಮನ್ನು ಆ ಕಡೆ ಕಳುಹಿಸುತ್ತೀರಿ ನೀವು? ಅವರು ಒಳ್ಳೆಯ ಕೆಲಸ ಮಾಡಿದ್ದಾರೆ, ಚೆನ್ನಾಗಿ ಮಾಡಿದ್ದಾರೆ ಎಂದು ಹೇಳುತ್ತೇವೆ. ನಿಮಗೆ ಏನು ಮಾಡಲಿಲ್ಲವೇ? ಐದು ವರ್ಷ ತಮಟೆ ಹಿಡಿದುಕೊಂಡು ಬಡಿಯುತ್ತಾ ಕುಳಿತಿದ್ದೇವೆ. ಖರ್ಗೆ ಸಾಹೇಬರು ಮರೆತು ಬಿಟ್ಟಿದ್ದಾರೆ. ಕಾಗೋಡು ತಿಮ್ಮಪ್ಪನವರು ನಾವು ಬಡಿಯತಕ್ಕಂಥದ್ದನ್ನು ನೋಡಿರಬಹುದು. ನಮಗೆ ಏನೂ ಇಲ್ಲ.

ನಾವು ಗೆದ್ದಿರುವುದೇ ಇಂಡಿಪೆಂಡೆಂಟಾಗಿ, ಯಾವುದೇ ಸರ್ಕಾರ ಬಂದರೂ ಒಳ್ಳೆಯ ಕೆಲಸ ಮಾಡಿದರೆ ಜೈ ಎಂದು ಎನ್ನುತ್ತೇವೆ. ಕೆಟ್ಟದ್ದು ಮಾಡಿದ್ದರೆ ಅವರದೂ ಒಂದು ವಿಚಾರ ಹೇಳಬೇಕೆಂದು ಇದ್ದೇನೆ. ಅವರು ಏನು ತಪ್ಪು ಮಾಡಿದ್ದಾರೆ ಎಂದು ಹೇಳುತ್ತೇನೆ.

ಶ್ರೀ ಎಂ. ಶ್ರೀನಿವಾಸ್ : ಒಳ್ಳೆಯ ಕೆಲಸ ಯಾವ ಪಕ್ಷ ಮಾಡಿದೆ ಎಂದು ಹೇಳಬೇಕು.

ಶ್ರೀ ಮಂಜುನಾಥ್ ಸಿ. ಕುನ್ನೂರ್ : ನೀವು ಎಲ್ಲಿ ಜೈ ಅನ್ನುತ್ತೀರೋ ಆ ಸರ್ಕಾರ ಉಳಿಯುವುದಿಲ್ಲ.

ಶ್ರೀ ಡಿ.ಟಿ ಜಯಕುಮಾರ್ : ಉಪಾಧ್ಯಕ್ಷರೆ, ಒಂದು ಸಂಪ್ರದಾಯ ಇತ್ತು. ಏಕೆಂದರೆ ಅಪೋಸಿಷನ್‌ನವರು ಒಬ್ಬರು ಮಾತನಾಡಿದರೆ, ನಂತರ ರೂಲಿಂಗ್ ಪಾರ್ಟಿಯವರು ಒಬ್ಬರು ಮಾತನಾಡಬೇಕು. ಆ ಸಂಪ್ರದಾಯ ಇತ್ತು. ಈಗ ಸಂಪೂರ್ಣವಾಗಿ ಆ ಸಂಪ್ರದಾಯವನ್ನು ಮರೆತಿದ್ದಾರೆ. ಎಲ್ಲಾ ಅಪೋಸಿಷನ್‌ನವರಿಗೇ ಅವಕಾಶ ಕೊಡಬೇಡಿ. ದಯಮಾಡಿ ಈ ಕಡೆ ಒಬ್ಬರಿಗೆ, ಆ ಕಡೆ ಒಬ್ಬರಿಗೆ ಕೊಡಿ.

ಉಪಸಭಾಧ್ಯಕ್ಷರು : ಕೊಡುತ್ತೇವೆ, ನಾಗೇಗೌಡರು ಮಾತನಾಡುತ್ತಾರೆ, ಮತ್ತೊಬ್ಬರು ಮಾತನಾಡುತ್ತಾರೆ.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಉಪಾಧ್ಯಕ್ಷರೆ, ನನಗೆ ಒಂದು ಗಂಟೆ ಕೊಡಬೇಕು. ನಮಗೆ ಕೊನೆಯಲ್ಲಿ 2-2 ನಿಮಿಷ ಕೊಟ್ಟು ಹೇಳಿ ಎಂದರೆ ನಾವು ಹೇಗೆ ಮಾತನಾಡಬೇಕು?

ಉಪಸಭಾಧ್ಯಕ್ಷರು : ಅವಕಾಶ ಕೊಡುತ್ತೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಒಬ್ಬ ಇಂಡಿಪೆಂಡೆಂಟಿಗೆ 64 ನಿಮಿಷ ಕೊಡಬೇಕೆಂದು ತಾವು ತೀರ್ಮಾನ ಮಾಡಿದ್ದೀರಿ. ಈ 64 ನಿಮಿಷದಲ್ಲಿ ನಾವು ಹೇಗೆ ಮಾತನಾಡಬೇಕು?

ಉಪಸಭಾಧ್ಯಕ್ಷರು : ಹೀಗೆ ಮಾತನಾಡಿ ವ್ಯರ್ಥವಾಗಿ ಹಾಳು ಮಾಡುವ ಸಮಯವನ್ನು ಉಪಯೋಗ ಮಾಡಿಕೊಂಡರೆ ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶವಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಎಷ್ಟು ಗಂಟೆಯವರೆಗೆ ಕೂತುಕೊಳ್ಳುವುದಕ್ಕೆ ತೀರ್ಮಾನ ಮಾಡಿದ್ದೀರಿ.

ಉಪಸಭಾಧ್ಯಕ್ಷರು : ಸದನ ಹೇಗೆ ತೀರ್ಮಾನ ತೆಗೆದುಕೊಳ್ಳುತ್ತದೊ ಹಾಗೆ. ನೀವು ಎಷ್ಟು ಹೊತ್ತು ಕೂತುಕೊಳ್ಳಬೇಕೆಂದರೆ, ಹಾಗೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸದನ ಅಲ್ಲ ತೀರ್ಮಾನ ಮಾಡುವುದು, ಬಿಸ್‌ನೆಸ್ ಅಡ್‌ವೈಸರಿ ಕಮಿಟಿಯಲ್ಲಿ ಕೂತಿದ್ದಾಗ ಆರು ಗಂಟೆಗೆ ಮುಗಿಸಬೇಕೆಂದು ಹೇಳಿದ್ದಾರೆ. ಈಗ ಆರು ಗಂಟೆಗೆ ಮುಗಿಸಿ. ನಾವು ಬೆಳಿಗ್ಗೆ 10 ಗಂಟೆಗೆ ಬಂದಿದ್ದೇವೆ. ಇಲ್ಲಿ ಭಾಗವಹಿಸಿದ್ದೇವೆ, ಬಿಸ್‌ನೆಸ್ ಅಡ್‌ವೈಸರಿ ಕಮಿಟಿಯಲ್ಲಿ ನಾವು ತೀರ್ಮಾನ ಮಾಡಿದ್ದು ಆರು ಗಂಟೆಯವರೆಗೆ ಕೊಡಬೇಕೆಂದು. ಅದಕ್ಕೆ ಸಿದ್ಧರಾಗಿ ನಾವು ಬಂದಿದ್ದೇವೆ. ಆರು ಗಂಟೆಯವರೆಗೆ ಕೂತುಕೊಳ್ಳುವುದಕ್ಕೆ ನಾವು ಸಿದ್ಧರಿದ್ದೇವೆ. ದಯವಿಟ್ಟು ಆರು ಗಂಟೆಗೆ ಹೊರಡುವುದಕ್ಕೆ ನಮಗೆ ಅವಕಾಶ ಮಾಡಿಕೊಡಿ. ನಾಳೆ ಆರು ಗಂಟೆ ಅಲ್ಲ, 7 ಗಂಟೆತನಕ ನಾವು ಕೂರುವುದಕ್ಕೆ ಸಿದ್ಧರಿದ್ದೇವೆ. ಆರು ಗಂಟೆ

ಮೇಲೆ ನಾವು ಕೂತುಕೊಳ್ಳುವ ಸ್ಥಿತಿಯಲ್ಲಿ ಇಲ್ಲ. ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಉಪಸಭಾಧ್ಯಕ್ಷರು : ಆರು ಗಂಟೆಗೂ ಮುಗಿಸಬೇಕು, ಲಂಚ್ ಹವರ್‌ಬಿಡಬೇಕು, ಮತ್ತೆ ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಕೊಡಬೇಕು, ಎಲ್ಲ ಪಕ್ಷಗಳವರೂ ಮಾತನಾಡಬೇಕು. ಎಂದರೆ ಹೇಗೆ ಮಾಡುವುದು?

ಶ್ರೀ ಬಿ.ಎಸ್. ಯಡಿಯೂರಪ್ಪ : ಬಿಸ್‌ನೆಸ್ ಅಡ್‌ವೈಸರಿ ಕಮಿಟಿಯಲ್ಲಿ ಲಂಚ್ ಹವರ್ ಬೇಡ ಎಂದು ಹೇಳಿದ್ದೇವೆ. ಉಪಾಧ್ಯಕ್ಷರೆ, ದಯಮಾಡಿ ಒಳಗೆ ಏನು ಚರ್ಚೆ ಆಯಿತು ಅದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆ ಪಡುತ್ತೇನೆ. ಲಂಚ್ ಹವರ್‌ನಲ್ಲಿ ನಾವು ಮನೆಗೆ ಹೋಗುವುದಕ್ಕೆ ಸಿದ್ಧ ಇಲ್ಲ, ಇಲ್ಲಿ ಕೂತು ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತೇವೆಂದು ನಾವು ಒಕ್ಕೊರಲಿನಿಂದ ಹೇಳಿದ್ದೇವೆ. ಬಿಸ್‌ನೆಸ್ ಅಡ್‌ವೈಸರಿ ಕಮಿಟಿಯಲ್ಲಿ ನಾವು ಲಂಚ್ ಹವರ್‌ನಲ್ಲಿ ಕೂತುಕೊಳ್ಳುತ್ತೇವೆ ಎಂದು ಹೇಳಿದ್ದೇವೆ. ಆರು ಗಂಟೆ ತನಕ ನಾವು ಕೂತುಕೊಳ್ಳುವುದಕ್ಕೆ ಸಿದ್ಧರಿದ್ದೇವೆ. ಆ ಮೇಲೆ ತಾವು ಮುಂದುವರೆಸಿದರೆ ಸದನದಲ್ಲಿ ಸದನ ನಡೆಸಬಹುದು, ನಮ್ಮದು ಏನೂ ಅಭ್ಯಂತರವಿಲ್ಲ. ಆದರೆ ಆರು ಗಂಟೆ ಮೇಲೆ ನಮ್ಮ ಪತ್ರಕರ್ತ ಸ್ನೇಹಿತರು ಸಹ ನಾವು ಐದು ನಿಮಿಷ ಮಾತನಾಡಿದರೆ ಅವರಿಗೆ ಐದು ಗಂಟೆಬೇಕಾಗುತ್ತದೆ. ಆ ಸುದ್ದಿ ಪತ್ರಿಕೆಯಲ್ಲಿ ಬರಬೇಕಾಗುತ್ತದೆ. ಎಂದು ಈ ಚುನಾಯಿತ ಪ್ರತಿನಿಧಿಗಳು ತಮ್ಮ ಕ್ಷೇತ್ರದಲ್ಲಿ ಬಂದಂತಹ ತಮ್ಮ ಗೋಳನ್ನು ಜನರ ಬವಣೆಯನ್ನು ಹೇಳಿಕೊಳ್ಳಬೇಕಾಗುತ್ತದೆ. ಇದು ಪತ್ರಿಕೆಯಲ್ಲಿ ಬರದೆ ಇದ್ದರೆ, ನಾವು ಚುನಾಯಿತ ಶಾಸಕರು ಬದುಕಿದ್ದೇವೆಯೋ ಅಥವಾ ಸತ್ತಿದ್ದೇವೆಯೋ ಎಂದು ಹೇಳಿ ಅವರು ಹಗುರವಾಗಿ ಒಂದು ರೀತಿಯಲ್ಲಿ ಮಾತನಾಡುವ ಪರಿಸ್ಥಿತಿ ಬಂದಿದೆ. ಆದ್ದರಿಂದ ದಯಮಾಡಿ ಆರು ಗಂಟೆಗೆ ತಾವು ನಿಲ್ಲಿಸಬೇಕು.

5.50 ಪಿ.ಎಂ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಸನ್ಮಾನ್ಯ ಉಪ ಸಭಾಧ್ಯಕ್ಷರೆ, ಈ ಸಂದರ್ಭದಲ್ಲಿ ಮಾತನಾಡುವುದಕ್ಕೆ ಅನುಮತಿ ಕೊಟ್ಟಂಥ ತಮಗೆ ಪ್ರಥಮವಾಗಿ ಧನ್ಯವಾದಗಳನ್ನು ಅರ್ಪಿಸುತ್ತಾ ಮೊದಲನೆಯದಾಗಿ ನಾನು ಶಿಕ್ಷಣ ಇಲಾಖೆ ಬಗ್ಗೆ ನನ್ನ ಮಾತನ್ನು ಪ್ರಾರಂಭ ಮಾಡುತ್ತಿದ್ದೇನೆ. ಶಿಕ್ಷಣ ಎನ್ನತಕ್ಕಂಥದ್ದು ಯಾವುದೇ ಒಂದು ಸಮಾಜದ ಅತ್ಯಮೂಲ್ಯವಾದಂತಹ ಒಂದು ಆಸ್ತಿ. ಯಾವುದೇ ಒಂದು ಸಮಾಜದಲ್ಲಿ ಶಿಕ್ಷಣ ತನ್ನ ಮೂಲಭೂತವಾದಂತಹ ಅವಶ್ಯಕತೆಯನ್ನು ಪೂರೈಸದೆ ಇದ್ದರೆ ಯಾವುದೇ ಒಂದು ಸಮಾಜದಲ್ಲಿ ಶಿಕ್ಷಣ ವೈಜ್ಞಾನಿಕವಾದಂತಹ ಹಾದಿಯನ್ನು ಹಿಡಿಯದೆ ಅವೈಜ್ಞಾನಿಕವಾದಂತಹ ಹಾದಿಯನ್ನು ಹಿಡಿದರೆ ಇಡೀ ಸಮಾಜ ಅವೈಜ್ಞಾನಿಕವಾದಂಥ ದಾರಿಗೆ ಖಂಡಿತ ಹೋಗುತ್ತದೆ. ಯಾವುದೇ ಒಂದು ಸಮಾಜದ ಅಭಿವೃದ್ಧಿ ಮೂಲಭೂತವಾಗಿ ನಿಂತಿರತಕ್ಕಂಥದ್ದು, ನಿಲ್ಲತಕ್ಕಂಥದ್ದು ಆ ಸಮಾಜದ ಶೈಕ್ಷಣಿಕ ಧೋರಣೆ ಆಧಾರದ ಮೇಲೆ. ಆದರೆ ಇವತ್ತು ನಮ್ಮ ಸಮಾಜದ ಶಿಕ್ಷಣದ ವಿಧಾನ ಯಾವುದಕ್ಕೆ ಒಬ್ಬ ಮನುಷ್ಯನ ಮೆದುಳಿಗೆ ಸರಿ ಸಮಾನವಾದಂತಹ, ಒಬ್ಬ ಮನುಷ್ಯನ ಶರೀರದಲ್ಲಿ ಮೆದುಳು ಸರಿಯಾದ ರೀತಿಯಲ್ಲಿ ಕೆಲಸ ನಿರ್ವಹಿಸದೆ ಹೋದರೆ ಇಡೀ ಆ ಮನುಷ್ಯನ ಎಲ್ಲಾ ಅಂಗಾಂಗಗಳು ಕೂಡ ಸಂಪೂರ್ಣವಾಗಿ ಸತ್ತು ಹೋಗುತ್ತವೆ ಮತ್ತು ಅಂಗಾಗಂಗಳು ಕೆಲಸಕ್ಕೆ ಬಾರದ ಹಾಗೆ ಆಗುತ್ತವೆ. ಆದುದರಿಂದ ಸಮಾಜದಲ್ಲಿ ಕೂಡ ಶಿಕ್ಷಣ ಹಾಗೆ ಎನ್ನತಕ್ಕಂಥಾದ್ದು ಮೆದುಳಿನ ರೀತಿಯಲ್ಲಿ ಕೆಲಸ ಮಾಡತತಕ್ಕಂಥಾದ್ದು. ಆದರೆ ಇವತ್ತು ಸಮಾಜದ ಮೆದುಳು ಆಗಿರತಕ್ಕಂಥ ವಿದ್ಯಾಭ್ಯಾಸಕ್ಕೆ ಬಂದಿರತಕ್ಕಂಥ ದರ ಅದು ಒಂದರ್ಥದಲ್ಲಿ ಅದಕ್ಕೆ

ಪ್ಯಾರಾಲಿಸಿಸ್ ಹೊಡೆದು ಬಿಟ್ಟಿದೆ. ವಿದ್ಯಾಭ್ಯಾಸಕ್ಕೆ ಒಂದು ರೀತಿ ಬ್ರೈನ್ ಪ್ಯಾರಾಲಿಸಿಸ್ ಹೊಡೆದಿದೆ. ಆ ಬ್ರೈನ್ ಪ್ಯಾರಾಲಿಸಿಸ್ ಹೊಡೆದಿರತಕ್ಕಂಥ ಸಂದರ್ಭದಲ್ಲಿ ಇಂಥ ವಿದ್ಯಾಭ್ಯಾಸವನ್ನು ನಾವು ನಮ್ಮ ಮಕ್ಕಳಿಗೆ ಕೊಡುತ್ತಿದ್ದೇವೆ. ಇವತ್ತು ಈ ಮೆದುಳಿಗೆ ಪ್ಯಾರಾಲಿಸಿಸ್ ಹೊಡೆದಿದೆ, ಎಂದರೆ ಆಲೋಚನಾ ಶಕ್ತಿಗೆ ಪ್ಯಾರಾಲಿಸಿಸ್ ಹೊಡೆದಿದೆ.

ಶ್ರೀ ಕೆ. ವಸಂತ ಬಂಗೇರ : ಕಾರ್ಮಿಕ ವಿಚಾರವಾಗಿ ಬಿಟ್ಟು ಶಿಕ್ಷಣ ವಿಚಾರಕ್ಕೆ ಏಕೆ ಬಂದಿರಿ ಎಂದು ಕೇಳುತ್ತಿದ್ದೇವೆ.

ಶ್ರೀ ಜಿ.ವಿ. ಶ್ರೀರಾಂರೆಡ್ಡಿ : ಇದು ಏನು ನನಗೆ ಅರ್ಥವಾಗುತ್ತಿಲ್ಲ, ತೊಂದರೆ ಮಾಡಬೇಕು ಎಂದು ಕೇಳುತ್ತೀದ್ದೀರಿ ಏನು? ಸಮಯ ಹಾಳು ಮಾಡಬೇಕು ಎಂದು ಕೇಳುತ್ತಿದ್ದೀರಿ. ಕಾರ್ಮಿಕರ ಬಗ್ಗೆ ನಾವೊಬ್ಬರೆ ಗುತ್ತಿಗೆ ತೆಗೆದುಕೊಂಡಿಲ್ಲ, ಇಲ್ಲಿ ಇರತಕ್ಕಂಥ ಎಲ್ಲಾ ಸದಸ್ಯರಿಗೂ ಹಕ್ಕಿದೆ ಮಾತನಾಡುವುದಕ್ಕೆ. ಹಾಗೆ ಶಿಕ್ಷಣದ ಬಗ್ಗೆ ಮಾತನಾಡುವುದಕ್ಕೆ ಹಕ್ಕಿದೆ. ಈ ರೀತಿ ಅಸಂಬದ್ಧವಾದ ಮಾತುಗಳನ್ನು ಆಡುವುದು ಸರಿಯಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ಸದಸ್ಯರಿಗೆ ಯಾವ ವಿಷಯದ ಮೇಲೆ ಮಾತನಾಡಬೇಕು ಎನ್ನುವುದು ಅವರ ಹಕ್ಕು. ಬೇರೆಯವರು ಹೇಳಿ ಕೊಡತಕ್ಕಂಥ ಅವಶ್ಯಕತೆ ಇಲ್ಲ. ಕಾರ್ಮಿಕರ ಬಗ್ಗೆ ಮಾತನಾಡಲಿ, ಕೃಷಿ ಕಾರ್ಮಿಕರ ಬಗ್ಗೆ ಮಾತನಾಡಲಿ. ಈಗ ಅವರು ಸಿ.ಪಿ.ಎಂ. ಆದತಕ್ಷಣ ಕೇವಲ ಕಾರ್ಮಿಕರ ಬಗ್ಗೆ ಮಾತನಾಡಬೇಕು ಎಂದು ಇದೆಯೇ? ಇನ್ನೊಂದು ವಿಚಾರವನ್ನು ನಾನು ತಮಗೆ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ ಸಂಬಂಧಪಟ್ಟ ಯಾವುದೇ ವಿಷಯದ ಮೇಲೆ ಮಾತನಾಡತಕ್ಕಂಥ ಸಂದರ್ಭದಲ್ಲಿ ಸಂಬಂಧಪಟ್ಟಂಥ ಮಂತ್ರಿಗಳು ಹಾಜರಿರಬೇಕು. ಪ್ರತಿಯೊಂದು ಸಲ ನಾವು ಕೇಳಿಕೊಳ್ಳುವುದು ಇದೇ ಆಗಿದೆ. ಇದು ಮೊದಲನೆ ಸಾರಿ ಅವರು ಮಂತ್ರಿಗಳಾದ ಮೇಲೆ ಮೂವ್ ಮಾಡುವುದು. ಅವರ ಜೀವನದಲ್ಲಿ ಮಂತ್ರಿಗಳಾದ ಮೇಲೆ ಅವರ ಡಿಮ್ಯಾಂಡ್‌ನ್ನು ಮೂವ್ ಮಾಡುತ್ತಿದ್ದಾರೆ, ಪಾಸ್ ಮಾಡಿಕೊಳ್ಳಬೇಕು ಎಂದು ಹೇಳಿ. ಮೊದಲನೆ ಸಾರಿ ಅವರು ಇಲ್ಲಿ ಕುಳಿತು, ಏನು ನಡೆಯುತ್ತಿದೆ, ಏನು ಹೇಳುತ್ತಾರೆ ಎಂದು ಕೇಳತಕ್ಕಂಥ ಸೌಜನ್ಯ ಕೂಡ ಇಲ್ಲ ಎಂದರೆ ನಾವು ಇನ್ನು ಯಾರಿಗೆ ಹೇಳಬೇಕು? ಹೀಗೆ ಆಗಬಾರದು. ಏನೋ ಅರ್ಜೆಂಟ್ ಕೆಲಸ ಇದೆ ಎಂದರೆ ಪರವಾಗಿಲ್ಲ, ಆದರೆ ಎಲ್ಲರೂ ಹೋಗುತ್ತಾರೆ, ಎಲ್ಲಿ ಎಂದು ಕೇಳಿದರೆ ಕೌನ್ಸಿಲ್‌ನಲ್ಲಿ ಇದ್ದಾರೆ ಎಂದು ಹೇಳುವುದು, ಎಲ್ಲಿ ಹೋಗಿದ್ದಾರೆ ಎಂದರೆ ಡೆಲ್ಲಿ ಎಂದು ಹೇಳುವುದು. ಬಾಂಬೆಗೆ ಹೋಗಿದ್ದಾರೆ ಎಂದು ಹೇಳುವುದು, ಡೆನ್ಮಾರ್ಕ್ ಪ್ರೈಂ ಮಿನಿಸ್ಟರ್ ಬಂದರು ಎಂದು ಹೀಗೆ ಹೇಳಿಕೊಂಡು ಕುಳಿತರೆ ಹೇಗೆ?

ಶ್ರೀ ಜಿ.ವಿ. ಶ್ರೀರಾಂರೆಡ್ಡಿ : ಸನ್ಮಾನ್ಯ ಉಪಾಧ್ಯಕ್ಷರೆ, ಇವತ್ತು ಸಮಾಜದ ಮೆದುಳು ಆಗಿರತಕ್ಕಂಥ ವಿದ್ಯಾಭ್ಯಾಸಕ್ಕೆ ಈ ಸಮಾಜದಲ್ಲಿ ಇವತ್ತು ಗರ ಬಡಿದಿದೆ. ಈ ಮೆದುಳು ಆಲೋಚನೆ ಮಾಡುವುದನ್ನು ನಿಲ್ಲಿಸಿದೆ. ಅಂತಹ ಒಂದು ವಿದ್ಯಾಭ್ಯಾಸವನ್ನು ಇವತ್ತು ನಮ್ಮ ಸಮಾಜದ ಮಕ್ಕಳಿಗೆ, ನಮ್ಮ ದೇಶದ ಮಕ್ಕಳಿಗೆ ಕೊಡುತ್ತಿದ್ದೇನೆ. ಇದರಲ್ಲಿ ಎರಡು ರೀತಿಯಾದಂಥ ವಿದ್ಯಾಭ್ಯಾಸವನ್ನು ಕೊಡುತ್ತಿದ್ದೇವೆ. ಒಂದು ಪ್ರಾಥಮಿಕ ಶಿಕ್ಷಣ. ಇನ್ನೊಂದು ಉನ್ನತ ಶಿಕ್ಷಣ. ಯಾವುದೇ ಒಂದು ಸಮಾಜಕ್ಕೆ ಪ್ರಾಥಮಿಕ ಶಿಕ್ಷಣ ಆ ಸಮಾಜದ ಅಡಿಗಲ್ಲು, ಪ್ರಾಥಮಿಕ ಶಿಕ್ಷಣ ಗೊತ್ತು ಮತ್ತು ಗುರಿ ಹೇಗೆ ಇರುತ್ತದೆ ಎನ್ನುವುದರ ಮೇಲೆ ನಮ್ಮ ಸಮಾಜದ ಗೊತ್ತು ಗುರಿ ಕೂಡ ಆಧಾರವಾಗುತ್ತದೆ. ಆದರೆ ನಮ್ಮ ದೇಶದಲ್ಲಿ ಹಾಗೂ ನಮ್ಮ ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಯಾವುದೇ ರೀತಿಯಾದಂತಹ ಗೊತ್ತು ಗುರಿ ಇಲ್ಲ, ಇದು ಒಂದು ಕಡೆಯಾದರೆ ಇನ್ನೊಂದು ಕಡೆ ಅವ್ಯವಸ್ಥೆ. ಆ ಪ್ರಾಥಮಿಕ ಶಿಕ್ಷಣದ ಅವ್ಯವಸ್ಥೆ

ಹೇಗಿದೆ ಎನ್ನುವುದು ಒಂದು ಪ್ರಶ್ನೆ. ಇದರ ಜೊತೆಗೆ ಸರ್ಕಾರದ ಧೋರಣೆ. ಇದರ ಜೊತೆಗೆ ಅಧಿಕಾರಿಗಳು ಆ ಶಿಕ್ಷಣ ಇಲಾಖೆಯಲ್ಲಿ ಕೆಲಸ ಮಾಡುತ್ತಾ ಇರತಕ್ಕಂಥ ನಡವಳಿಕೆ. ಇದರ ಬಗ್ಗೆ ನಾನು ಒಂದು ವಿಷಯವನ್ನು ಇವತ್ತು ಹೇಳುವುದಾದರೆ ವಿದ್ಯಾಭ್ಯಾಸದ ಪರಿಸ್ಥಿತಿ ಹೇಗಿದೆ ಎಂದರೆ ನಾನು ಅದನ್ನು ಸೂಕ್ಷ್ಮವಾಗಿ ತಮ್ಮ ಮುಂದೆ ಹೇಳುವುದಕ್ಕೆ ಇಷ್ಟಪಡುತ್ತೇನೆ. non committed teachers facing unwieldy students having irrelevant syllabus facing uncertain examinations ಇದು ಒಂದು ಕಡೆಯಾದರೆ ಈ ಇಲಾಖೆಯನ್ನು ನಿರ್ವಹಿಸತಕ್ಕಂಥ ಅಧಿಕಾರಿಗಳ ಪರಿಸ್ಥಿತಿ ಹೇಗಿದೆ ಎಂದರೆ non committed officials working under unwieldy government having irrelevant programme facing uncertain conditions. This is our educational system today. How to overcome it? Do we have any programmes? particularly for primary education. We have no basic idea. This is what we are teaching to our students.

ವಿದ್ಯಾಭ್ಯಾಸ ಹೇಗಿರಬೇಕು? ನಮ್ಮ ದೇಶದ ಮಕ್ಕಳನ್ನು ನಾವು ಹೇಗೆ ತಯಾರು ಮಾಡಬೇಕು? ಏಕೆ? ಅವರು ನಮ್ಮ ಸಮಾಜದ ಆಸ್ತಿ, ನಮ್ಮ ಸಮಾಜದ ಬ್ರೈನ್. ಬ್ರೈನ್ ಒಂದು ಸಲ ಕೆಟ್ಟುಹೋಗಿ ಬಿಟ್ಟರೆ ಅದು ಶಾಶ್ವತವಾಗಿ ಆಲೋಚನೆ ಮಾಡುವುದಕ್ಕೆ ಸಾಧ್ಯವಿಲ್ಲ, ಮತ್ತು ಅವರಿಗೆ ಕೊಡುತ್ತಿರತಕ್ಕಂಥ ಶಿಕ್ಷಣದ ಮೂಲ ಪಾಠಗಳು ಏನು? ನಮ್ಮ ದೇಶದ ಹಲವಾರು ಗಂಡಾಂತರಕಾರಿ ಪರಿಸ್ಥಿತಿಗಳನ್ನು ಎದುರಿಸುತ್ತಿದೆ. ಮತಾಂದರ, ಜಾತೀಯತೆ ದೇಶದ ಸಮಗ್ರತೆ ಪ್ರಶ್ನೆ, ಐಕ್ಯತೆ ಪ್ರಶ್ನೆ, ಇವತ್ತು ಬಹಳ ಅಪಾಯಕಾರಿಯಾದಂತಹ ಪರಿಸ್ಥಿತಿಯಿದೆ. ಅಂತಹ ವಿಷಯಗಳ ಬಗ್ಗೆ ನಮ್ಮ ಮಕ್ಕಳನ್ನು ನಾವು ಹೇಗೆ ತಯಾರು ಮಾಡುತ್ತಿದ್ದೇನೆ. ಎಂತಹ ಶಿಕ್ಷಣವನ್ನು ಅವರಿಗೆ ಕೊಡುತ್ತಿದ್ದೇವೆ ಎಂದರೆ ಈ ದೇಶದ ಸಮಸ್ಯೆಗೂ ಅವರಿಗೂ ಯಾವುದೇ ಸಂಬಂಧ ಇಲ್ಲದೆ ಇರುವಂತಹ ರೀತಿಯಲ್ಲಿ ಕೊಡುತ್ತಿದ್ದೇವೆ. ಕನಿಷ್ಟ ಆ ಮಕ್ಕಳನ್ನು ಈ ದೇಶದ ಬಗ್ಗೆ, ಸಮಾಜದ ಬಗ್ಗೆ ಆಲೋಚನೆ ಮಾಡತಕ್ಕಂಥ ರೀತಿಯಲ್ಲಿ ಕೂಡ ಅವರಿಗೆ ಕೆಲಸ ಕೊಡುತ್ತಾ ಇಲ್ಲ, ಅವರಿಗೆ ಏನು ಹೇಳುತ್ತಿದ್ದೇವೆ, ಇದು ಮೊದಲನೆ ಪಾಠ, ಒಂದನೇ ಕ್ಲಾಸಿನಲ್ಲಿ ಈ ರೀತಿ ಹೇಳಿಕೊಡುತ್ತೇವೆ. "ಇವನು ಈಶ, ಇವನು ಗಣಪ, ಇವನು ಈಶನ ತಂದೆ, ಇವನು ಚಮ್ಮಾರ, ಇವನು ಊರ ಹೊರಗಡೆ ವಾಸ ಮಾಡುತ್ತಾನೆ, ಇವನು 'ಋಷಿ ಇವನು ಯಾವಾಗಲೂ ಜಪ ಮಾಡುತ್ತಿರುತ್ತಾನೆ, ಇವಳು ಕಮಲ, ಇವಳು ಯಾವಾಗಲೂ ತಾಯಿಗೆ ಅಡಿಗೆ ಮನೆಯಲ್ಲಿ ಸಹಾಯ ಮಾಡುತ್ತಿರುತ್ತಾಳೆ."

ಏನು ಇದರ ಅರ್ಥ? ನಾವು ನಮ್ಮ ಮಕ್ಕಳನ್ನು ಎಲ್ಲಿಗೆ ತೆಗೆದುಕೊಂಡು ಹೋಗುತ್ತಿದ್ದೇವೆ. ನಮ್ಮ ಸಮಾಜದಲ್ಲಿ ಇವತ್ತು ಸರ್ಕಾರ ನಡೆಸುವವರು ಆಗಬಹುದು, ಸರ್ಕಾರವನ್ನು ಕೇಳುವವರು ಆಗಬಹುದು, ಈ ದೇಶದಲ್ಲಿ ಇರತಕ್ಕಂಥ ಪ್ರತಿಯೊಬ್ಬರು ನಾವು ನಮ್ಮ ಪ್ರಾಥಮಿಕ ನಿಷ್ಠೆ ಇರಬೇಕಾಗಿರತಕ್ಕಂಥಾದ್ದು ಈ ಸಮಾಜಕ್ಕೆ. ಆದರೆ ಆ ಪ್ರಾಥಮಿಕ ನಿಷ್ಠೆಯ ಕನಿಷ್ಟ ಪಾಠಗಳನ್ನು ಕೂಡ ಆ ವಿದ್ಯಾರ್ಥಿಗಳಲ್ಲಿ ನಾವು ಇವತ್ತು ಹೇಳುತ್ತಾ ಇಲ್ಲ, ಇವತ್ತು ವಿದ್ಯಾಭ್ಯಾಸ ಪಡೆದಿರತಕ್ಕಂಥ ಜನ ಎಲ್ಲಾ ಯಾವ ಸ್ಥಿತಿಯಲ್ಲಿ ಇದ್ದಾರೆ ಎಂದರೆ ನನಗೂ ಈ ಸಮಾಜಕ್ಕೂ ಯಾವುದೇ ಸಂಬಂಧ ಇಲ್ಲ, ನನಗೂ ಈ ದೇಶಕ್ಕೂ ಯಾವುದೇ ಸಂಬಂಧ ಇಲ್ಲ, ಈ ದೇಶ ಏನು ಹಾಳಾಗಿ ಹೋದರೂ ಕೂಡ ನಾನು ಆಲೋಚನೆ ಮಾಡತಕ್ಕಂಥ ಅವಶ್ಯಕತೆ ಇಲ್ಲ, ಈ ಸಮಾಜಕ್ಕೆ ನಾನು ನಿಷ್ಟನಾಗಿ ಇರಬೇಕಾದ್ದು ಇಲ್ಲ ಎನ್ನುವ ಸ್ಥಿತಿಗೆ ಅತೀ ವಿದ್ಯಾವಂತರು ತಲುಪಿದ್ದಾರೆ. ಏಕೆ ಅವರು ಈ ಸ್ಥಿತಿಗೆ ತಲುಪಿದ್ದಾರೆ. ಅದು ಅವರ ತಪ್ಪಲ್ಲ, ನಾವು ಕೊಡುತ್ತಿರತಕ್ಕಂಥ ಶಿಕ್ಷಣದಲ್ಲಿ ಇರತಕ್ಕಂಥ ಮೂಲ

ದೋಷ. ಅವೈಜ್ಞಾನಿಕವಾದಂತಹ ಮನೋಭಾವವನ್ನು ಬೆಳೆಸುತ್ತಿದ್ದೇವೆ. ಮಾಢ್ಯತೆಯನ್ನು ಬೆಳೆಸುತ್ತಿದ್ದೇವೆ. ನಾವು ಸತ್ಯವನ್ನು ಹೇಳುವುದಕ್ಕೆ ಹಿಂಜರಿಯುತ್ತಿದ್ದೇವೆ ಪಾಠದಲ್ಲಿ ಸತ್ಯ ಹೇಳಿದರೆ ಯಾವುದೋ ಒಂದು ಮತಕ್ಕೆ, ಯಾವುದೋ ಒಂದು ಧರ್ಮಕ್ಕೆ ನೋವಾಗುತ್ತದೆ ಎನ್ನುವಂತಹ ರೀತಿಯಲ್ಲಿ ನಾವು ಸತ್ಯವನ್ನು ಹೇಳುತ್ತಿಲ್ಲ.

ನಾವು ಆ ಮಕ್ಕಳಿಗೆ ಹೇಳುತ್ತಿರತಕ್ಕಂಥ ಸಿಲಬಸ್ contents of the lesson, it is totally irrelevant to our social condition ಯಾವುದೇ ಸಂಬಂಧ ಇಲ್ಲ. ಈ ಸಮಾಜದಲ್ಲಿ ಇರತಕ್ಕಂಥ, ಯಾವುದೇ ಸಮಸ್ಯೆಗೆ ಸಂಬಂಧ ಇಲ್ಲದೆ ಇರತಕ್ಕಂಥ ಸಿಲಬಸ್ ಅನ್ನು ನಾವು ಕೊಡುತ್ತಿದ್ದೇವೆ. ನಾನು ಒಂದು ಉದಾಹರಣೆಯನ್ನು ಕೊಟ್ಟರೆ ಅದು ಅಪ್ರಸ್ತುತವಾಗುವುದಿಲ್ಲ ಎಂದು ಭಾವಿಸುತ್ತೇನೆ. ಅಕಸ್ಮಾತ್ ಅದು ಅಪ್ರಸ್ತುತವಾದರೆ ದಯವಿಟ್ಟು ಕ್ಷಮಿಸಬೇಕು ಎಂದು ಹೇಳುತ್ತೇನೆ. 1972ನೇ ಇಸವಿಯಲ್ಲಿ ಕೊಲಂಬೊ ವಿಶ್ವವಿದ್ಯಾನಿಲಯದಲ್ಲಿ ಒಬ್ಬ ಇತಿಹಾಸ ಉಪನ್ಯಾಸಕ ಬುದ್ಧನ ಚರಿತ್ರೆ ಬಗ್ಗೆ ಪಾಠ ಮಾಡುತ್ತಿದ್ದರು. ಅಲ್ಲಿ ಬುದ್ಧ ಹುಟ್ಟಿದ್ದು ಹೇಗೆ ಎಂದು ಒಂದು ಚರಿತ್ರೆ ಇದೆ. ಅದರ ಪ್ರಕಾರ ಪಾಠ ಮಾಡುತ್ತಿದ್ದಾಗ ಆ ಸಂದರ್ಭದಲ್ಲಿ ಏನು ಆ ಪಾಠ ಎಂದರೆ ಬುದ್ಧನ ತಂದೆ ತಾಯಿಗಳಿಗೆ ಬಹಳ ಕಾಲ ಮಕ್ಕಳಿರಲಿಲ್ಲ. ಅವರು ದೇವರನ್ನು ಪ್ರಾರ್ಥನೆ ಮಾಡಿ ಮಾಡಿ ಕೊನೆಗೆ ಒಂದು ದಿವಸ ದೇವರು ಅವರಿಗೆ ರಾತ್ರಿ ಕನಸ್ಸಿನಲ್ಲಿ ಬಂದುಬಿಟ್ಟು ಅವರ ತಾಯಿಯ ಹೊಕ್ಕಳದ ಸುತ್ತಲೂ ಹೆಬ್ಬೆರಳಿನಲ್ಲಿ ಒಂದು ಗೆರೆ ಹಾಕುತ್ತಾನೆ. ಆಗ ಬುದ್ಧ ಹುಟ್ಟುತ್ತಾನೆ ಎಂದು ಹೇಳಿ ಚರಿತ್ರೆಯಲ್ಲಿ ಇದೆ. ಸಡನ್ ಆಗಿ ಒಂದು ಮಗು ಎದ್ದು ಉಪನ್ಯಾಸಕರನ್ನು ಕೇಳುತ್ತದೆ, ಏನು ಮೇಡಮ್ ಮಕ್ಕಳು ಹೀಗೇನಾ ಹುಟ್ಟುವುದು ಎಂದು. ಮೇಸ್ಟರಿಗೆ ಗಾಬರಿ, ನಿಜ ಹೇಳಿದರೆ ಅದು ಔಟ್‌ಆಫ್ ಸಿಬಲಸ್. ಇದೇ ಇರತಕ್ಕಂಥ ಸತ್ಯ ಎಂದು ಹೇಳಿದರೆ ತನ್ನ ಆತ್ಮ ಒಪ್ಪುವುದಿಲ್ಲ ಸತ್ಯ ಎಂದು. ಮಕ್ಕಳು ಹಾಗೆ ಹುಟ್ಟುವುದಿಲ್ಲ. ಅದರಲ್ಲೂ ಅವರು ಪಾಠ ಮಾಡುತ್ತಿದ್ದವರು ಹೆಂಗಸರು ಬೇರೆ, ನಾಚಿಕೆ ಸ್ವಾಭಾವಿಕ ಅವರಿಗೆ, ನೋಡಮ್ಮ ನನಗೆ ಗೊತ್ತಿಲ್ಲ, ನಿಮ್ಮ ತಂದೆ ತಾಯಿಯನ್ನು ಕೇಳು ಹೇಗೆ ಹುಟ್ಟುವುದು ಎಂದು ಅಂದರು. ಆ ಮಗು ಮನೆಗೆ ಹೋಗಿಬಿಟ್ಟು ನೇರವಾಗಿ ತಾಯಿಯನ್ನು ಕೇಳುತ್ತದೆ, ಮಕ್ಕಳು ಹೇಗೆ ಹುಟ್ಟುತ್ತಾರೆ ಎಂದು. ಸಾಮಾನ್ಯವಾಗಿ ಹೆಂಗಸರಿಗೆ ಸಂಕೋಚ ಹೇಳುವುದಕ್ಕಾಗುವುದಿಲ್ಲ. ನಿಮ್ಮ ತಂದೆಯನ್ನು ಕೇಳು ಎಂದು ಹೇಳಿದರು. ಆ ಮಗುವಿನ ತಂದೆ ಸ್ವಲ್ಪ ಬುದ್ಧಿವಂತರು, ವಿದ್ಯಾವಂತರು ಎಂದು ಕಾಣುತ್ತದೆ. ಅವರ ತಂದೆಗೆ ಕೇಳಿದಾಗ ಅವರು ವಾಸ್ತವಾಂಶವನ್ನು ಹೇಳಿದರು. ಹೇಗೆ ಮಕ್ಕಳು ಹುಟ್ಟುತ್ತಾರೆ ಎಂದು. ಆಗ ಮಗು ಹೇಳುತ್ತದೆ, ಅಪ್ಪ ನಾನು ನಾಳೆಯಿಂದ ಆ ಶಾಲೆಗೆ ಹೋಗುವುದಿಲ್ಲ, ಅದಕ್ಕೆ ಅಪ್ಪ ಏಕಮ್ಮ ಎಂದು ಕೇಳಿದರು. ಅದಕ್ಕೆ ಆ ಮಗು ಹೇಳಿತು. ನಮ್ಮ ಪಾಠದಲ್ಲಿ ಎಲ್ಲಾ ಸುಳ್ಳೇ ಹೇಳುತ್ತಾರೆ ಆದುದರಿಂದ ನಾನು ಅಲ್ಲಿಗೆ ಹೋಗುವಂತಹ ಅವಶ್ಯಕತೆ ಇಲ್ಲ ಎಂದು. ಇವತ್ತು ನಮ್ಮ ಪಠ್ಯಪುಸ್ತಕಗಳಲ್ಲಿ ಇರತಕ್ಕಂಥ ಕಂಟೆಂಟ್ ಆಫ್ ದಿ ಸಿಲಬಸ್ ಬಗ್ಗೆ ನಾವು ಆಲೋಚನೆ ಮಾಡಿದರೆ ನಾವು ಎಲ್ಲಿ ನಿಂತಿದ್ದೇವೆ ಎನ್ನತಕ್ಕಂಥಾದ್ದು, ಇವತ್ತು ನಮ್ಮ ಸಮಾಜದಲ್ಲಿ ಇರತಕ್ಕಂಥ ಸಮಸ್ಯೆಗಳಿಗೆ ನಾವು ಕೊಡುತ್ತಿರತಕ್ಕಂಥ ವಿದ್ಯಾಭ್ಯಾಸಕ್ಕೆ ಎಷ್ಟು ನೇರವಾದ ಸಂಬಂಧ ಇದೆ ಎನ್ನುವುದನ್ನು ನಾವು ಖಂಡಿತವಾಗಿ ಆಲೋಚನೆ ಮಾಡಬಹುದು ಇವತ್ತು.

ಉಪಾಧ್ಯಕ್ಷರು : ಶ್ರೀರಾಮ್‌ರೆಡ್ಡಿಯವರೆ, ತಮಗೆ ಮಾತನಾಡುವುದಕ್ಕೆ ಇನ್ನು ಎಷ್ಟು ಹೊತ್ತು ಬೇಕಾಗುತ್ತದೆ.

ಶ್ರೀ ಜಿ.ವಿ. ಶ್ರೀರಾಮ್‌ರೆಡ್ಡಿ : ಇನ್ನು ಸರಿಯಾಗಿ ಶುರು ಮಾಡೇ ಇಲ್ಲ.

ಉಪಾಧ್ಯಕ್ಷರು : ನಾಳೆ ಶುರು ಮಾಡಬಹುದಲ್ಲ.

ಶ್ರೀ ಜಿ.ವಿ. ಶ್ರೀರಾಮ್‌ರೆಡ್ಡಿ : ಅಲ್ಲ ನಮಗೆ ಮಾತ್ರ ಈ ರೀತಿ ರಿಸ್ಟ್ರಿಕ್ಟ್ ಮಾಡುವುದಾದರೆ....

ಉಪಾಧ್ಯಕ್ಷರು : ಈಗ ಸದನವನ್ನು ಮುಂದೂಡಿ ನಾಳೆ ಮತ್ತೆ 10 ಗಂಟೆಗೆ ಸೇರೋಣ.

(ಸದನವು 6.00ಗಂಟೆಗೆ ಮುಂದೂಡಲ್ಪಟ್ಟು ಮತ್ತೆ ಬುಧವಾರ ಬೆಳಿಗ್ಗೆ (13.9.95)10 ಗಂಟೆಗೆ ಸೇರಲು ನಿಶ್ಚಯಿಸಲಾಯಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಬುಧವಾರ ೧೩ನೇ ಸೆಪ್ಟಂಬರ್ ೧೯೯೫ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (**ಶ್ರೀ ರಮೇಶ್ ಕುಮಾರ್**) ಅವರು ಪೀಠವನ್ನು ಅಲಂಕರಿಸಿದ್ದರು.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ಸರ್ಕಾರಿ ಶುಶ್ರೂಷಾ ಮಹಾವಿದ್ಯಾಲಯ.

2460 - ಶ್ರೀ ಆಯನೂರು ಮಂಜುನಾಥ (ಹೊಸನಗರ) : ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿರುವ ಸರ್ಕಾರಿ ಶುಶ್ರೂಷಾ ಮಹಾವಿದ್ಯಾಲಯಗಳ ಸಂಖ್ಯೆ ಎಷ್ಟು?

ಆ) ಈ ಮಹಾವಿದ್ಯಾಲಯಗಳಲ್ಲಿ ಖಾಲಿ ಇರುವ ವಿವಿಧ ಬೋಧಕರ ಹುದ್ದೆಗಳು ಎಷ್ಟು?

ಇ) ಹಲವು ಬೋಧಕ ಹುದ್ದೆಗಳನ್ನು ಅನ್ಯಕರ್ತವ್ಯದ ಆಧಾರದ ಮೇಲೆ ಭರ್ತಿ ಮಾಡಲಾಗಿದೆಯೇ?

ಈ) ಹಾಗಿದ್ದಲ್ಲಿ ಎಷ್ಟು ದಿನಗಳಿಂದ ಎಷ್ಟು ಜನ ಈ ರೀತಿ ಕಾರ್ಯ ನಿರ್ವಹಿಸುತ್ತಿದ್ದಾರೆ?

ಶ್ರೀ ಎ.ಬಿ. ಪಾಟೀಲ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು) :

ಅ) ಒಂದು

1)	ಪ್ರಾಂಶುಪಾಲರು	1
2)	ಪ್ರಾಧ್ಯಾಪಕರು	3
3)	ಸಹಾಯಕ ಪ್ರಾಧ್ಯಾಪಕರು	3
4)	ಉಪನ್ಯಾಸಕರು	4
5)	ಕ್ಲಿನಿಕಲ್ ಇನ್ಸ್‌ಟ್ರಕ್ಟರ್	2
	ಒಟ್ಟು	13

ಆ) ಹೌದು

ಇ) 5 - ಜನ ಉಪನ್ಯಾಸಕರು ಕಳೆದ 2 ವರ್ಷಗಳಿಂದ ಕೆಲಸ ನಿರ್ವಹಿಸುತ್ತಿದ್ದಾರೆ.

ಈ) 2 - ಜನ ಕ್ಲಿನಿಕಲ್‌ಇನ್ಸ್‌ಟ್ರಕ್ಟರ್ ಕಳೆದ ವರ್ಷದಿಂದ ಕೆಲಸ ನಿರ್ವಹಿಸುತ್ತಿದ್ದಾರೆ.
ಒಟ್ಟು 7.

ಶ್ರೀ ಆಯನೂರು ಮಂಜುನಾಥ್ : ಮಾನ್ಯ ಅಧ್ಯಕ್ಷರೆ, ನಾನು ಖಾಲಿ ಇರುವ ಹುದ್ದೆಗಳು ಎಷ್ಟು ಎಂದು ಕೇಳಿದ್ದೇನೆ, 13 ಎಂದು ಹೇಳಿದ್ದಾರೆ. ಅವುಗಳನ್ನು ಭರ್ತಿಮಾಡಲಾಗಿದೆಯೆ ಎಂದು ಕೇಳಿದಾಗ ಭರ್ತಿ ಮಾಡಿದೆ ಎಂಬತಕ್ಕಂಥ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಸರ್ಕಾರದಿಂದಲೆ ಶಿಫಾರಸ್ಸಾದಂಥ ಮತ್ತು ರಾಷ್ಟ್ರಪ್ರಶಸ್ತಿ ಪಡೆದಂಥ, ಬಡ್ತಿಯಲ್ಲೂ ಕೂಡ ಪದೋನ್ನತಿಯನ್ನು ಕೊಡದೆ ಹಾಗೆ ಉಳಿದಂತದ್ದು ಈ ಸರ್ಕಾರದ ಗಮನಕ್ಕೆ ಬಂದಿದೆಯೆ? ಏತಕ್ಕೋಸ್ಕರ ಆ ತರಹ ಆಗಿದೆ? ನರ್ಸಿಂಗ್ ಸ್ಟಾಫ್‌ಗೆ ಬಡ್ತಿಯನ್ನು ಕೊಡುವಾಗ ಏಕೆ ಹಿಂದಿನ ಆರೋಗ್ಯ ಇಲಾಖೆಯ ನಿರ್ದೇಶಕರು ಬರೆದಂಥ ಶಿಫಾರಸ್ಸುಗಳನ್ನು ಗಮನಿಸಿಲ್ಲ ಎನ್ನುವಂಥ ಪ್ರಶ್ನೆಯನ್ನು ತಮ್ಮ ಮುಂದಿಡುತ್ತಿದ್ದೇನೆ.

ಶ್ರೀ ಅಜಯ್‌ಕುಮಾರ್ ಸರ್. ನಾಯಕ್ (ವೈದ್ಯಕೀಯ ಶಿಕ್ಷಣ ಮಂತ್ರಿಗಳ ಪರವಾಗಿ): ಸನ್ಮಾನ್ಯ ಅಧ್ಯಕ್ಷರೆ, ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕಾದರೆ, ಉಪಾನ್ಯಾಸಕರನ್ನು ಭರ್ತಿಮಾಡಬೇಕಾದರೆ ಅಲ್ಲಿ ಈಗಾಗಲೇ ಓ.ಓ.ಡಿ.ಯಲ್ಲಿ ಐದು ಜನ ಕೆಲಸ ಮಾಡುತ್ತಿದ್ದಾರೆ. ಆದರೆ ಅವರಿಗೆ ಭರ್ತಿ ಮಾಡಬೇಕಾದರೆ ನಿರ್ದಿಷ್ಟವಾದ ವಿದ್ಯಾರ್ಹತೆ ಇದ್ದವರು ಇಲ್ಲ. ಅದ್ದರಿಂದ ನೇಮಕಾತಿ ನಿಯಮದಲ್ಲಿ ತಿದ್ದುಪಡಿಯನ್ನು ಮಾಡಿಕೊಂಡು ಮಾಡಬೇಕಾಗುತ್ತದೆ. ಆ ಬಗ್ಗೆ ಶೀಘ್ರದಲ್ಲಿ ತಿದ್ದುಪಡಿಯನ್ನು ತಂದು ಅದನ್ನು ಭರ್ತಿಮಾಡುತ್ತೇವೆ.

ಶ್ರೀ ಆಯನೂರು ಮಂಜುನಾಥ್ : ಆದರೆ ತಮ್ಮ ಇಲಾಖೆಯೆ ಕೊಟ್ಟಂಥ ಕೆಲವು ಸುತ್ತೋಲೆಯ ಮಾರ್ಗಸೂಚಿಗಳಿವೆ ಅದರ ಉಲ್ಲಂಘನೆಯಾಗಿದೆ. ನಾನು ಮಾನ್ಯ ಸಚಿವರ ಗಮನಕ್ಕೆ ತರಬಯಸುವುದೇನೆಂದರೆ, ದಯಮಾಡಿ ಆಗಿರತಕ್ಕಂಥ ಅನ್ಯಾಯಗಳನ್ನು ತಾವು ಸರಿಪಡಿಸಬೇಕೆಂದು ಈ ಸಂದರ್ಭದಲ್ಲಿ ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಅಜಯ್ ಕುಮಾರ್ ಸರ್‌ನಾಯಕ್ : ಆಗಬಹುದು.

ಸುಳ್ಯ ವಿಧಾನ ಸಭಾ ಕ್ಷೇತ್ರದಲ್ಲಿ ಖಾಲಿ ಇರುವ ಅಧ್ಯಾಪಕರುಗಳ ಹುದ್ದೆಗಳು.

2242 - ಶ್ರೀ ಎಸ್. ಅಂಗಾರ್ (ಸುಳ್ಯ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುಳ್ಯ ವಿಧಾನಸಭಾ ಕ್ಷೇತ್ರದಲ್ಲಿರುವ ಪ್ರಾಥಮಿಕ ಶಾಲೆಗಳು, ಪ್ರೌಢಶಾಲೆಗಳು ಮತ್ತು ಪದವಿಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು?

ಆ) ಈ ಶಾಲೆಗಳಲ್ಲಿ ಹಾಗೂ ಪದವಿಪೂರ್ವ ಕಾಲೇಜುಗಳಲ್ಲಿ ಒಟ್ಟು ಎಷ್ಟು ಜನ ಅಧ್ಯಾಪಕರುಗಳಿದ್ದಾರೆ?

ಈ ಶಾಲೆಗಳಲ್ಲಿ ಎಷ್ಟು ಅಧ್ಯಾಪಕರುಗಳು ಇರಬೇಕಾಗಿತ್ತು?

ಇ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಜಿ. ಗೋವಿಂದಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):

ಪ್ರಾಥಮಿಕ		ಪ್ರೌಢ		ಪದವಿಪೂರ್ವ	
ಸರ್ಕಾರಿ	ಖಾಸಗಿ	ಸರ್ಕಾರಿ	ಖಾಸಗಿ	ಸರ್ಕಾರಿ	ಖಾಸಗಿ
131	08	14	02	04	03
404	30	91	18	31	22
489	43	154	19	39	23

ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿನ ಶೇ. 50 ರಷ್ಟು ಖಾಲಿ ಹುದ್ದೆಗಳನ್ನು ಅಕ್ಟೋಬರ್ 95ರೊಳಗೆ ತುಂಬಲು ಸರ್ಕಾರಿ ಆದೇಶದಂತೆ ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ.

ಸರ್ಕಾರಿ ಪ್ರೌಢಶಾಲಾ ಸಹ ಶಿಕ್ಷಕರನ್ನು ತುಂಬುವ ಬಗ್ಗೆ ವೃಂದ ಮತ್ತು ನೇಮಕಾತಿ ನಿಯಮಗಳ ರಚನೆಯು ಸರ್ಕಾರದ ಅಂತಿಮ ಪರಿಶೀಲನೆಯಲ್ಲಿದ್ದು ಈ ನಿಯಮಗಳು ಜಾರಿಗೆ ಬಂದ ಕೂಡಲೇ ಖಾಲಿ ಇರುವ ಹುದ್ದೆಗಳನ್ನು ತುಂಬಲಾಗುವುದು.

ಸರ್ಕಾರಿ ಪದವಿಪೂರ್ವ ಕಾಲೇಜುಗಳ ಉಪಾನ್ಯಾಸಕರ ಹುದ್ದೆಗಳನ್ನು ತುಂಬಲು ಲೋಕಸೇವಾ ಆಯೋಗವು ಉಪನ್ಯಾಸಕರ ಆಯ್ಕೆಯ ಪ್ರಕ್ರಿಯೆ ಪ್ರಾರಂಭಿಸಿದೆ. ಆಯ್ಕೆಯ ಪಟ್ಟಿ ಸ್ವೀಕರಿಸಿದ ಕೂಡಲೇ ಹುದ್ದೆಗಳನ್ನು ತುಂಬಲಾಗುವುದು. ಖಾಸಗಿ ಪದವಿಪೂರ್ವ ಕಾಲೇಜಿನಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳನ್ನು ತುಂಬುವುದು ಆಡಳಿತ ಮಂಡಳಿಯದ್ದೇ ಆಗಿರುತ್ತದೆ.

ಶ್ರೀ ಡಿ.ವಿ. ಸದಾನಂದಗೌಡ (ಶ್ರೀ ಎಸ್. ಅಂಗಾರ ಅವರ ಪರವಾಗಿ) : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಪ್ರಾಥಮಿಕ ಶಿಕ್ಷಕರ ಖಾಲಿ ಹುದ್ದೆಗಳನ್ನು ತುಂಬಲು ನೇಮಕಾತಿ ಪ್ರಕ್ರಿಯೆಯನ್ನು ಪ್ರಾರಂಭಿಸುತ್ತಿದ್ದೇವೆ ಎಂದು ತಿಳಿಸಿದ್ದಾರೆ. ಜೂನಿಯರ್ ಕಾಲೇಜ್‌ಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡುವಂತಹ ಸಂದರ್ಭದಲ್ಲಿ ಪಾರ್ಟ್ ಟೈಮ್ ಅಥವಾ ಸ್ಟಾಫ್ ಗ್ಯಾಪ್ ಲೆಕ್ಚರರ್‌ಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದೇ ಎಂಬ ಬಗ್ಗೆ ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಸ್ನೇಹಿತರು ಪದವಿ ಪೂರ್ವ ಕಾಲೇಜ್‌ಗಳ ಹುದ್ದೆ ಭರ್ತಿಮಾಡುವ ಬಗ್ಗೆ ಮಾತ್ರ ಪ್ರಶ್ನೆ ಕೇಳಿದರು. ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮದ ಬಗ್ಗೆ ತಿಳಿಸಿರುವ ಉತ್ತರವು ಪ್ರಾಯಶಃ ಅವರಿಗೆ ತೃಪ್ತಿಯುಂಟು ಮಾಡಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಹಾಲಿ 864 ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಲು ತೀವ್ರವಾಗಿರತಕ್ಕ ಕಾರ್ಯಕ್ರಮ ವನ್ನು ನಾವು ಹಾಕಿಕೊಂಡಿದ್ದೇವೆ. ಈ ರೀತಿ ಉಪನ್ಯಾಸಕರನ್ನು ನೇಮಕಾತಿ ಮಾಡಿಕೊಳ್ಳುವ ಸಂದರ್ಭದಲ್ಲಿ ಖಾಲಿ ಇರುವ ಹುದ್ದೆಗಳೆಲ್ಲವನ್ನೂ ತುಂಬಲು ಸರ್ಕಾರ ತೀವ್ರವಾದ ಆಸಕ್ತಿ ಹೊಂದಿದೆ, ಮತ್ತು ಅದನ್ನು ಜಾಗ್ರತೆಯಾಗಿ ಮಾಡುತ್ತದೆ.

ಹರಪ್ಪನಹಳ್ಳಿಯ 50 ಹಾಸಿಗೆ ಆಸ್ಪತ್ರೆ ಪ್ರಾರಂಭವಾಗಿರುವ ಬಗ್ಗೆ

2546 - ಶ್ರೀ ಡಿ. ನಾರಾಯಣದಾಸ್ (ಹರಪ್ಪನಹಳ್ಳಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹರಪ್ಪನಹಳ್ಳಿಯ 50 ಹಾಸಿಗೆಗಳ ಸಾರ್ವಜನಿಕ ಆಸ್ಪತ್ರೆ ಯಾವಾಗ ಪ್ರಾರಂಭವಾಯಿತು ?

ಆ) ಈಗಿರುವ ಸಿಬ್ಬಂದಿ ಎಷ್ಟು ?

ಇ) ಈಗಿರುವ ಸಿಬ್ಬಂದಿಗಳು ಬಹಳ ಕಡಿಮೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದರೆ ಈ ವಿಷಯದಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ) :

ಅ) 23-3-88 ಸರ್ಕಾರದ ಆಜ್ಞೆಯಲ್ಲಿ ಮೇಲ್ದರ್ಜೆಗೇರಿಸಲಾಗಿದೆ.

ಆ) ಈಗಿರುವ ಸಿಬ್ಬಂದಿಗಳ ವಿವರ ಕೆಳಗಿನಂತಿದೆ :

		ಮಂಜೂರಾದ ಹುದ್ದೆಗಳ ಸಂಖ್ಯೆ	ಕಾರ್ಯ ನಿರ್ವಹಿಸು ತ್ತಿರುವವರ ಸಂಖ್ಯೆ.	ಖಾಲಿ ಇರುವ ಹುದ್ದೆಗಳ ಸಂಖ್ಯೆ
1.	ಸಹಾಯಕ ಶಸ್ತ್ರ ಚಿಕಿತ್ಸಕರು	2	1	1
2.	ಸಹಾಯಕ ದಂತ ಚಿಕಿತ್ಸಕರು	1	-	1
3.	ಫಾರ್ಮಾಸಿಸ್ಟ್	2	2	
4.	ಕಿರಿಯ ಆರೋಗ್ಯ ಸಹಾಯಕಿ	4	4	
5.	ಶುಶ್ರೂಷಕಿ	1	1	
6.	ಡಿ. ಗುಂಪಿನ ನೌಕರರು	10	5	5
	ಒಟ್ಟು	20	13	7

ಇ) ಬಂದಿದೆ.

ಈ) ಸಿಬ್ಬಂದಿಯನ್ನು ಹೆಚ್ಚಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಶ್ರೀ ಡಿ. ನಾರಾಯಣ ದಾಸ್ : ಮಾನ್ಯ ಅಧ್ಯಕ್ಷರೇ, ನನ್ನ (ಅ) ಪ್ರಶ್ನೆಗೆ ನೀಡಿರುವ ಉತ್ತರದಲ್ಲಿ ಸರ್ಕಾರವು ತಾರೀಖು 23.3.88ರ ಸರ್ಕಾರಿ ಆದೇಶದಲ್ಲಿ ಹರಪನಹಳ್ಳಿಯ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸಲಾಗಿದೆ ಎಂದು ತಿಳಿಸಲಾಗಿದೆ. ಸದರಿ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸಿ ಈಗಾಗಲೇ 7-8 ವರ್ಷಗಳಾಗುತ್ತಾ ಬಂತು. ಹರಪನಹಳ್ಳಿಯಲ್ಲಿ 50 ಹಾಸಿಗೆಗಳ ಆಸ್ಪತ್ರೆಯಾಗಿದ್ದರೂ ಅಲ್ಲಿ ಕೇವಲ ಒಬ್ಬರೇ ವೈದ್ಯರಿದ್ದಾರೆ. ಹೆಸರಿಗೆ ಮಾತ್ರ ಅದು 50 ಹಾಸಿಗೆಗಳ ಆಸ್ಪತ್ರೆಯಾಗಿದೆ. ಸದರಿ ಆಸ್ಪತ್ರೆಯಲ್ಲಿ ಒಬ್ಬರು ವೈದ್ಯರು, ಒಬ್ಬರು ನರ್ಸ್, ಮೂರ್‍ನಾಲ್ಕು ಜನ ಎ.ಎನ್.ಎಂ. ಹೀಗೆ ಒಟ್ಟು ಎಲ್ಲಾ ಸಿಬ್ಬಂದಿ ಸೇರಿ 10 ಜನ ಮಾತ್ರ ಇದ್ದಾರೆ. 50 ಹಾಸಿಗೆಗಳ ಆಸ್ಪತ್ರೆಯ ನಾರ್ಮ್ಸ್ ಪ್ರಕಾರ ಸುಮಾರು ಡೆಪ್ಯುಟಿ ಸರ್ಜನ್ - 1, ಅಸಿಸ್ಟೆಂಟ್ ಸರ್ಜನ್ - 3, ಮಹಿಳಾ ವೈದ್ಯರು - 1, ದಂತ ವೈದ್ಯರು - 1, ಕಣ್ಣಿನ ವೈದ್ಯರು - 1, ಶುಶ್ರೂಷಕಿಯರು - 8, ಎ.ಎನ್.ಎಂ. - 4, ಕಿರಿಯ ಔಷಧಿ ವಿತರಕರು - 2, ಹಿರಿಯ ಔಷಧಿ ವಿತರಕರು - 2, ಲ್ಯಾಬ್ ಟೆಕ್ನಿಷಿಯನ್ಸ್ - 2, ಆಫೀಸ್ ಸೂಪರಿಂಟೆಂಡೆಂಟ್ - 1, ಪ್ರಥಮ ದರ್ಜೆ ಸಹಾಯಕರು - 3, ದ್ವಿತೀಯ ದರ್ಜೆ ಸಹಾಯಕರು - 2, ಹೀಗೆ ಸುಮಾರು 50 ರಿಂದ 60 ಮಂದಿ ಸಿಬ್ಬಂದಿ ಸದರಿ ಆಸ್ಪತ್ರೆಯಲ್ಲಿ ಇರಬೇಕಾಗಿತ್ತು. ಆದರೆ ಇವತ್ತು ಸದರಿ ಆಸ್ಪತ್ರೆಯಲ್ಲಿ ಮಹಿಳಾ ವೈದ್ಯರಿಲ್ಲ, ದಂತ ವೈದ್ಯರಿಲ್ಲ, ಕಣ್ಣಿನ ವೈದ್ಯರಿಲ್ಲ. ಅಲ್ಲಿರುವವರು ಒಬ್ಬರೇ ವೈದ್ಯರು. ಯಾರಾದರೂ ಗರ್ಭಿಣಿ ಹೆಣ್ಣು ಮಕ್ಕಳಿಗೆ ಹೆರಿಗೆ ಯಾಗಬೇಕೆಂದರೆ, ಸದರಿ ಆಸ್ಪತ್ರೆಯಲ್ಲಿ ಮಹಿಳಾ ವೈದ್ಯರಿಲ್ಲ. 35 ಕಿ.ಮೀ. ದೂರದಲ್ಲಿರುವ ದಾವಣಗೆರೆಗೆ ಹೋಗಬೇಕಾಗಿದೆ. ಆ ರೀತಿ ಹೋಗುವಾಗ ಎಷ್ಟೋ ಜನ ಗರ್ಭಿಣಿಯರು ಮಾರ್ಗ ಮಧ್ಯದಲ್ಲೇ

ಸತ್ತು ಹೋಗಿದ್ದಾರೆ. 7-8 ವರ್ಷಗಳಾದರೂ ಕೂಡ ಏಕೆ ಇಲ್ಲಿ ಈ ಹುದ್ದೆಗಳನ್ನು ಮಂಜೂರು ಮಾಡಿಲ್ಲ? ಇದನ್ನು ಯಾವಾಗ ಮಾಡುತ್ತೀರಿ?

ಶ್ರೀ ಎಂ.ಸಿ. ನಾಣಯ್ಯ : (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ನಾರಾಯಣ ದಾಸ್‌ರವರು ಹೇಳಿರತಕ್ಕ ವಿಚಾರ ಸರಿ. ಮೊದಲು ಅದು 25 ಹಾಸಿಗೆಗಳ ಆಸ್ಪತ್ರೆಯಾಗಿತ್ತು. ಆ ನಂತರ ಸದರಿ ಆಸ್ಪತ್ರೆಯನ್ನು 50 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೆ ಏರಿಸಲಾಗಿದೆ. ಆರೋಗ್ಯ ಇಲಾಖೆಯಲ್ಲಿ ಈ ಹಿಂದೆ ನೇಮಕಾತಿ ಮಾಡುವ ಬಗ್ಗೆ ನಿರ್ಬಂಧ ಇತ್ತು. ಈಗ ನಿರ್ಬಂಧವನ್ನು ತೆಗೆದು ಹಾಕಿದ್ದೇವೆ. ಸದರಿ ಆಸ್ಪತ್ರೆಗೆ ಅವಶ್ಯಕವಾಗಿರತಕ್ಕ ಎಲ್ಲಾ ವೈದ್ಯರುಗಳನ್ನು ಹಾಗೂ ಸಿಬ್ಬಂದಿಗಳನ್ನು ನೇಮಕಾತಿ ಮಾಡಿಲಿಕ್ಕೆ ನಾವು ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಡಿ. ನಾರಾಯಣ ದಾಸ್ : ಮಾನ್ಯ ಅಧ್ಯಕ್ಷರೇ, ಬಳ್ಳಾರಿ, ರಾಯಚೂರು, ಗುಲ್ಬರ್ಗಾ ಮತ್ತು ಬಿಜಾಪುರ, ಈನಾಲ್ಕು ಜಿಲ್ಲೆಗಳನ್ನು 'ಎ' ಗ್ರೇಡ್‌ನಲ್ಲಿ ಸೇರಿಸಲಾಗಿದೆ ಎಂದು ತಿಳಿದು ಬಂದಿದೆ. ಆ ಯೋಜನೆಯಡಿಯಲ್ಲಿ ಏನಾದರೂ ಈ ಆಸ್ಪತ್ರೆಯನ್ನು ಇಂಪ್ರೂವ್ ಮಾಡುತ್ತೀರೋ?

ಉತ್ತರ ಕನ್ನಡ ಜಿಲ್ಲೆಗೆ ಸಾಮಾಜಿಕ ಅರಣ್ಯ ಯೋಜನೆ.

2316 - ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಗ ಸಾಮಾಜಿಕ ಅರಣ್ಯ ಯೋಜನೆಗೆ ಇಲ್ಲಿಯವರೆಗೆ ನೀಡಿದ ಹಣವೆಷ್ಟು? (ವರ್ಷವಾರು ವಿವರ ನೀಡುವುದು)

ಆ) ಇಲ್ಲಿಯವರೆಗೆ ಖರ್ಚಾದ ಹಣವೆಷ್ಟು?

ಇ) ಇಲ್ಲಿಯವರೆಗೆ ಆದ ಯೋಜನೆ ಯೋಜನೇತರ ವೆಚ್ಚ ಎಷ್ಟು?

ಈ) ಇಲ್ಲಿಯವರೆಗೆ ಆದ ಯೋಜನೇತರ ವೆಚ್ಚ ಯಾವ ಯಾವುದು?

ಉ) 1995-96ನೇ ಸಾಲಿಗೆ ಬಿಡುಗಡೆಗೊಂಡ ಹಣವೆಷ್ಟು?

ಊ) ಉತ್ತರ ಕನ್ನಡ ಜಿಲ್ಲೆಯಲ್ಲಿ ಕ್ಷೇತ್ರವಾರು ಖರ್ಚು ಮಾಡಿದ ಹಣವೆಷ್ಟು ಹಾಗೂ ಯಾವ ಯಾವ ಬಾಬ್ತಿಗಾಗಿ?

ಶ್ರೀ ಹೆಚ್.ವೈ. ಮೇಟಿ (ಅರಣ್ಯ ಸಚಿವರು) :

ಅ) ಉತ್ತರ ಕನ್ನಡ ಜಿಲ್ಲೆಗೆ ಸಾಮಾಜಿಕ ಅರಣ್ಯ ಯೋಜನೆಗೆ ನೀಡಿದ ಹಣದ ವಿವರ ಈ ಕೆಳಕಂಡಂತಿದೆ.

ರೂ.ಲಕ್ಷಗಳಲ್ಲಿ

ವರ್ಷ	ವಾರ್ಷಿಕ ಅನುದಾನ
1992-93	42.50
1993-94	35.24
1994-95	34.371
1995-96	30.000

ಆ) ಸಾಮಾಜಿಕ ಅರಣ್ಯ ಯೋಜನೆ ಅಡಿಯಲ್ಲಿ ವರ್ಷವಾರು ಖರ್ಚು ಮಾಡಿದ ಹಣದ ವಿವರ ಈ ಕೆಳಗಿನಂತಿದೆ.

ವರ್ಷ	(ರೂ.ಲಕ್ಷಗಳಲ್ಲಿ
1992-93	46.306
1993-94	31.472
1994-95	31.571
1995-96	6.380
ಜುಲೈ 95ರವರೆಗೆ)	

ಇ) ಉತ್ತರ ಕನ್ನಡ ಜಿಲ್ಲೆಯಲ್ಲಿ ಯೋಜನೆ ಮತ್ತು ಯೋಜನೇತರ ವೆಚ್ಚದ ವಿವರಗಳು ಈ ಕೆಳಕಂಡಂತಿವೆ.

ವರ್ಷ	ಯೋಜನೆ	ಯೋಜನೆಗಳು
1992-93	83.715	1737.70 ಲಕ್ಷ
1993-94	978.364	1825.54 ಲಕ್ಷ
1994-95	1140.645	1809.57

ಈ) ಯೋಜನೇತರ ಶೀರ್ಷಿಕೆ ಅಡಿಯಲ್ಲಿ ನೀಡಿದ ಅನುದಾನವನ್ನು ಮುಖ್ಯವಾಗಿ ಸತ್ತ ಮತ್ತು ಬಿದ್ದ ಗಿಡಗಳಿಂದ ದಿಮ್ಮಿ ಹಾಗೂ ಸೌದೆಗಳನ್ನು ತಯಾರಿಸಿ ಅವುಗಳನ್ನು ಸರ್ಕಾರಿ ಡಿಪೋವಿಗೆ ಹಾಗೂ ಜಲಾವು ಡಿಪೋವಿಗೆ ಮಾರಾಟದ ಸಲುವಾಗಿ ಸಾಗಿಸಲು ಖರ್ಚು ಮಾಡಲಾಗಿದೆ. ಅಲ್ಲದೆ, ಬೊಂಬು, ಬೆತ್ತ ಮುಂತಾದ ಅರಣ್ಯ ಸಂಪತ್ತನ್ನು ಕಡಿದು ಸಾಗಿಸಲು ಹಾಗೂ ಸರ್ಕಾರಿ ವಾಹನಗಳಿಗೆ ಅವಶ್ಯವಿರುವ ಇಂಧನ ಪೂರೈಕೆ ದುರಸ್ತಿ ಅರಣ್ಯ ಕಟ್ಟಡಗಳ ಸುಸ್ಥಿತಿಗಾಗಿ ಹಾಗೂ ಇಲಾಖಾ ಇತರ ಕೆಲಸಗಳಿಗಾಗಿ ಖರ್ಚು ಮಾಡಲಾಗಿದೆ. ಇದು ಅಲ್ಲದೆ ಸಿಬ್ಬಂದಿ ವೇತನ ಮತ್ತು ಭತ್ಯೆಗಳನ್ನು ಭರಿಸಲಾಗುತ್ತಿದೆ.

ಉ) 1995-96ನೇ ಸಾಲಿಗೆ ಯೋಜನೆ ಯೋಜನೇತರ ಶೀರ್ಷಿಕೆ ಅಡಿಯಲ್ಲಿ ನಿಗಧಿಪಡಿಸಿದ ಅನುದಾನ, ಬಿಡುಗಡೆಯಾದ ಹಣದ ವಿವರಗಳು ಈ ಕೆಳಕಂಡಂತಿವೆ.

(ರೂ. ಲಕ್ಷಗಳಲ್ಲಿ)

	ವಾರ್ಷಿಕ ಅನುದಾನ	ಬಿಡುಗಡೆ ಆದ ಹಣ (ಸೆಪ್ಟಂಬರ್ 95 ರವರೆಗೆ)
ಯೋಜನೆ	1241.42	614.490
ಯೋಜನೇತರ	1623.35	811.675

ಊ) ಉತ್ತರ ಕನ್ನಡ ಜಿಲ್ಲೆಯ ಅರಣ್ಯ ವಿಭಾಗಗಳಲ್ಲಿ 1995-96ನೇ ಸಾಲಿನ ಜುಲೈ ಅಂತ್ಯದವರೆಗೆ ಯೋಜನೆ ಹಾಗೂ ಯೋಜನೇತರ ಶೀರ್ಷಿಕೆಯಡಿಯಲ್ಲಿ ಖರ್ಚು ಮಾಡಿದ ಹಣದ ವಿವರವು ಈ ಕೆಳಕಂಡಂತಿವೆ.

	ವಿಭಾಗದ ಹೆಸರು	ಖರ್ಚು ಮಾಡಿದ ಹಣ (ರೂ. ಲಕ್ಷಗಳಲ್ಲಿ) ಯೋಜನೆ	ಯೋಜನೇತರ
1)	ಹಳಿಯಾಳ	21.34	68.20
2)	ಯಲ್ಲಾಪುರ	17.32	101.96
3)	ಕಾರವಾರ	14.43	98.67
4)	ಹೊನ್ನಾವರ	18.52	55.51
5)	ಸಿರ್ಸಿ	23.52	58.85
6)	ತಟ್ಟಿಹಳ್ಳ ಅರಣ್ಯ ತರಬೇತಿ ವಿಭಾಗ	1.02	0.53
7)	ಸಾಮಾಜಿಕ ಅರಣ್ಯ ವಿಭಾದ ಕಾರವಾರ	6.574	-
	ಒಟ್ಟು	102.724	383.720

ಯೋಜನೆ ಮತ್ತು ಯೋಜನೇತರ ಶೀರ್ಷಿಕೆಯಡಿಯಲ್ಲಿ ಖರ್ಚು ಮಾಡಿದ ಹಣವು ಹಳೇ ನೆಡುತೋಪುಗಳ ನಿರ್ವಹಣೆ, ಸಸಿಗಳ ನಿರ್ವಹಣೆ, ಹೊಸ ನೆಡುತೋಪು ನಿರ್ಮಾಣ, ವಾಹನ ನಿರ್ವಹಣೆ ಸಿಬ್ಬಂದಿ ವೇತನ ಮತ್ತು ಭತ್ಯ ಇತ್ಯಾದಿ ಬಾಬ್ತುಗಳನ್ನು ಒಳಗೊಂಡಿದೆ.

ಶ್ರೀ ವಿಶ್ವೇಶ್ವರ ಹೆಗ್ಗಡೆ : ಮಾನ್ಯ ಅಧ್ಯಕ್ಷರೇ, ಸದರಿ ಪ್ರಶ್ನೆಗೆ ಉತ್ತರಿಸಬೇಕಾದ ಮಾನ್ಯ ಅರಣ್ಯ ಸಚಿವರು ಇವತ್ತು ಸದನದಲ್ಲಿಲ್ಲ. ಈ ಪ್ರಶ್ನೆಯನ್ನು ಅವರ ಪರವಾಗಿ ಬೇರೆ ಸಚಿವರು ಉತ್ತರಿಸಿದರೆ, ಅವರಿಗೆ ಸ್ಪಷ್ಟೀಕರಣವನ್ನೇನಾದರೂ ಕೇಳಿದರೆ 'ವಿಚಾರಿಸುತ್ತೇನೆ', 'ಪರಿಶೀಲಿಸುತ್ತೇನೆ', 'ಸೂಕ್ತವಾಗಿ ತಿಳಿಸುತ್ತೇನೆ' ಇತ್ಯಾದಿ ಉತ್ತರಗಳನ್ನು ನೀಡುತ್ತಾರೆ. ಮಾನ್ಯ ಅರಣ್ಯ ಸಚಿವರು ಸದನದಲ್ಲಿರುವ ದಿನ ನನಗೆ ಈ ಪ್ರಶ್ನೆಯನ್ನು ಕೇಳಲು ತಾವು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು : ಹಾಗೇ ಆಗಲಿ. ಸದರಿ ಪ್ರಶ್ನೆಯನ್ನು ತಡೆ ಹಿಡಿದಿದ್ದೇನೆ.

ಕೋರಮಂಗಲದಲ್ಲಿ ಕೆಂಪೇಗೌಡ ಒಳಾಂಗಣ ಕ್ರೀಡಾಂಗಣ ಕುರಿತು

2468 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಕೋರಮಂಗಲದಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಿಸುತ್ತಿರುವುದು ನಿಜವಲ್ಲವೇ?

ಆ) ಈ ಕ್ರೀಡಾಂಗಣ ಯಾವಾಗ ಪೂರ್ಣಗೊಳ್ಳುವುದು?

ಇ) ಈ ಒಳಾಂಗಣ ಕ್ರೀಡಾಂಗಣಕ್ಕೆ 'ಕೆಂಪೇಗೌಡ'ರ ಹೆಸರನ್ನು ಇಡಲು ಸರ್ಕಾರ ಉದ್ದೇಶಿಸಿದೆಯೇ?

ಶ್ರೀ ಅಜಯಕುಮಾರ್ ಸರ್ ನಾಯಕ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು) :

ಅ) ಹೌದು

ಆ) 1995ರ ನವೆಂಬರ್ ಮಾಹೆಯ ಅಂತ್ಯದೊಳಗಾಗಿ ಪೂರ್ಣಗೊಳ್ಳುವುದು.

ಇ) ಇಲ್ಲ

ಶ್ರೀ ರಾಮಲಿಂಗಾರೆಡ್ಡಿ : ಮಾನ್ಯ ಅಧ್ಯಕ್ಷರೇ, ನಾನು ಬೆಂಗಳೂರಿನ ಕೋರಮಂಗಲದಲ್ಲಿ ನಿರ್ಮಾಣವಾಗುತ್ತಿರುವ ಒಳಾಂಗಣ ಕ್ರೀಡಾಂಗಣಕ್ಕೆ 'ಕೆಂಪೇಗೌಡ'ರ ಹೆಸರನ್ನು ಇಡಲು ಉದ್ದೇಶಿಸಿದೆಯೇ? ಎಂದು ಪ್ರಶ್ನಿಸಿದ್ದೆ. ಅದಕ್ಕೆ ಸರ್ಕಾರದವರು 'ಇಲ್ಲ' ಎಂದು ಉತ್ತರಿಸಿದ್ದಾರೆ. ಈ ಕ್ರೀಡಾಂಗಣಕ್ಕೆ ಸದರಿ ಹೆಸರೇ ಇಡಲೇಬೇಕೆಂದು ನಾನು ಸನ್ಮಾನ್ಯ ಮಂತ್ರಿಗಳನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಅಜಯಕುಮಾರ್ ಸರ್ ನಾಯಕ್ : ಮಾನ್ಯ ಅಧ್ಯಕ್ಷರೇ, ಒಳಾಂಗಣ ಕ್ರೀಡಾಂಗಣಕ್ಕೆ 'ಕೆಂಪೇಗೌಡ'ರ ಹೆಸರನ್ನು ಇಡಬೇಕೆಂದು ಮಾನ್ಯ ಸದಸ್ಯರು ಏನು ಸಲಹೆ ಕೊಟ್ಟಿದ್ದಾರೆ. ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ರಾಮಲಿಂಗಾರೆಡ್ಡಿ : ಮಾನ್ಯ ಅಧ್ಯಕ್ಷರೇ, ಮೂರು ತಿಂಗಳ ಹಿಂದೆ ನಾನು ಇದೇ ಪ್ರಶ್ನೆಯನ್ನು ಕೇಳಿದ್ದೆ. ಆಗಲೂ ಸಹ ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದ್ದಿರಿ. ಈಗಲೂ ಸಹ ಪರಿಶೀಲನೆ ಮಾಡುತ್ತೇವೆ ಎಂದು ಹೇಳುತ್ತಿದ್ದೀರಿ. ಮೂರು ತಿಂಗಳಾದರೂ ಪರಿಶೀಲನೆಯಲ್ಲೇ ಇದ್ದರೆ ಹೇಗೆ? ಕೆಂಪೇಗೌಡರ ಹೆಸರನ್ನು ಕ್ರೀಡಾಂಗಣಕ್ಕೆ ಇಡುತ್ತೇವೆ ಎಂದು ಸ್ಪಷ್ಟವಾಗಿ ಹೇಳಿ. ಇದರಲ್ಲಿ ನಿಮಗೆ ಏನು ತೊಂದರೆ ಇದೆ.

ಶ್ರೀ ಅಜಯಕುಮಾರ್ ಸರ್ ನಾಯಕ್ : ಮಾನ್ಯ ಅಧ್ಯಕ್ಷರೇ, ರಾಷ್ಟ್ರೀಯ ಕ್ರೀಡೆಗಳ ಸಲುವಾಗಿ ನಾವು ಬಹಳಷ್ಟು ಕ್ರೀಡಾಂಗಣಗಳನ್ನು ನಿರ್ಮಿಸುತ್ತಿದ್ದೇವೆ. ಯಾವ ಯಾವ ಕ್ರೀಡಾಂಗಣಗಳಿಗೆ ಯಾವ ಯಾವ ಹೆಸರುಗಳನ್ನು ಇಡಬೇಕು ಎಂಬ ಬಗ್ಗೆ ನಾವು ಇನ್ನೂ ಯಾವುದೇ ನಿರ್ಧಾರವನ್ನು ತೆಗೆದುಕೊಂಡಿಲ್ಲ. ಕೋರಮಂಗಲದ ಒಳಾಂಗಣ ಕ್ರೀಡಾಂಗಣಕ್ಕೆ ಕೆಂಪೇಗೌಡರ ಹೆಸರನ್ನು ಇಡಬೇಕೆಂದು ಮಾನ್ಯ ಸದಸ್ಯರು ಏನು ಸಲಹೆ ಕೊಟ್ಟಿದ್ದಾರೆ, ಅದನ್ನು ಕ್ರೀಡಾಂಗಣಗಳಿಗೆ ಹೆಸರುಗಳನ್ನು ಇಡುವಾಗ ಗಮನಕ್ಕೆ ತೆಗೆದುಕೊಳ್ಳುತ್ತೇವೆ.

ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಕೆಲವು ಕಡೆ ಕಾಡಾನೆಗಳ ಹಾವಳಿ

2542 - ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ವಿವಿಧ ಭಾಗಗಳಲ್ಲಿ ಕಾಡಾನೆಗಳ ಹಾವಳಿಯಿಂದ ಕೃಷಿ ನಾಶವಾಗಿದ್ದು ಇದರಿಂದಾದ ನಷ್ಟವೆಷ್ಟು?

ಆ) ಈ ಬಗ್ಗೆ ರೈತರಿಗೆ ನೀಡಲಾಗುವ ಪರಿಹಾರದ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ, ಈ ತನಕ ಪಾವತಿಸಿದ ಪರಿಹಾರದ ಮೊತ್ತವೆಷ್ಟು?

ಇ) ಕಾಡಾನೆಗಳ ಹಾವಳಿಯನ್ನು ನಿಲ್ಲಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಹೆಚ್.ವೈ. ಮೇಟಿ (ಅರಣ್ಯ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನಲ್ಲಿ 1992-93ನೇ ಸಾಲಿನಲ್ಲಿ ಕಾಡಾನೆಗಳ ಹಾವಳಿಯಿಂದ ಕೃಷಿ ನಷ್ಟದ ಒಂದು ಪ್ರಕರಣ ದಾಖಲಾಗಿದ್ದು, ನಷ್ಟವಾದ ಕೃಷಿ ಮೌಲ್ಯ ರೂ. 10,000-00 ವೆಂದು ಅಂದಾಜಿಸಲಾಗಿದೆ. 1993-94ರಿಂದ ಯಾವುದೇ ಪ್ರಕರಣವಿರುವುದಿಲ್ಲ.

ಆ) ಕಾಡಾನೆ ಹಾವಳಿಯಿಂದ ಬರುವ ಮನವಿಗಳನ್ನು ಕುರಿತು ವಲಯ ಅರಣ್ಯ ಅಧಿಕಾರಿಯವರು ತನಿಖೆ ನಡೆಸಿ ವರದಿ ನೀಡುವರು. ವರದಿ ಆಧಾರದ ಮೇಲೆ ಹಿರಿಯ ಅಧಿಕಾರಿಗಳು ಪರಿಹಾರ ಮಂಜೂರು ಮಾಡುತ್ತಾರೆ. ಮೇಲಿನ ಪ್ರಕರಣದಲ್ಲಿ ರೂ. 7,000-00 ಪರಿಹಾರ ನೀಡಲಾಗಿದೆ.

ಇ) ಪುತ್ತೂರಿನ ಸುತ್ತಮುತ್ತಲಿನ ಕಾಡುಗಳಿಂದ ಆನೆಗಳ ಹಾವಳಿ ಸೂಚನೆ ಸಿಕ್ಕಿದ ಕೂಡಲೇ ಅವುಗಳನ್ನು ಕಾಡಿಗೋಡಿಸಲು ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳಲಾಗುವುದು.

Sri M.C. Nanaiah : Sir, Kindly withheld this question...

ಶ್ರೀ ಡಿ.ವಿ. ಸದಾನಂದ ಗೌಡ : ಮಾನ್ಯ ಅಧ್ಯಕ್ಷರೆ, ಪ್ರಾಯಶಃ ಕಾಡಾನೆ ಈ ಸದನಕ್ಕೆ ನುಗ್ಗಿದರೆ ಮಾತ್ರ ಏನಾದರೂ ಪರಿಸ್ಥಿತಿ ಸ್ವಲ್ಪ ಸರಿಹೋಗುತ್ತದೆಯೋ ಏನೋ ಗೊತ್ತಿಲ್ಲ.

Sri M.C. NANAIAH : I agree with the sentiments expressed by the Members. I think some of the Ministers held up in party meeting. They are on the way.

ಶ್ರೀ ವೈ. ರಾಮಕೃಷ್ಣ : ಮಾನ್ಯ ಅಧ್ಯಕ್ಷರೇ, ಎಲ್ಲಾ ಪ್ರಶ್ನೆಗಳೂ ಇದೇ ರೀತಿ ಆದರೆ ಹೇಗೆ? ಯಾವತ್ತಾದರೂ ಒಂದು ದಿವಸ ಹೀಗೆ ಆಗಬಹುದು. ಇವತ್ತು ಎಷ್ಟು ಪ್ರಶ್ನೆಗಳು ಈ ರೀತಿ ಆಗಿವೆ ಎಂಬುದನ್ನು ತಾವು ಆಲೋಚನೆ ಮಾಡಬೇಕು. I dont' want to comment upon. They are accountable to this House.

Sri M.C. NANAIAH : It is a lapse. I will assure you this will not happen.

Sri Y. RAMAKRISHNA : Mr. Speaker, Sir, I don't want to comment upon.

Mr. SPEAKER : The Chair has not taken it lightly. I will convey it to the appropriate authorities at the appropriate time. They should have some minimum courtesy to inform the Chair of his inability...

Sri M.C. NANAIAH : I agree with the views expressed by the Chair. I will ensure that it will not happen in future...

ಡಾ|| ಎಂ.ಪಿ. ಕರ್ಕಿ : ಪ್ರತಿ ದಿವಸ ಹೀಗೇ ಆದರೆ ಹೇಗೆ?

ಕಡೂರು ತಾಲ್ಲೂಕಿನಲ್ಲಿ ಮಲೇರಿಯಾ ರೋಗದ ನಿರ್ಮೂಲನೆ

2681 - ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಡೂರು ತಾಲ್ಲೂಕಿನಲ್ಲಿ ಮಲೇರಿಯಾ ರೋಗ ಹರಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಮಲೇರಿಯಾ ರೋಗದ ನಿಯಂತ್ರಣಕ್ಕೆ ಕೈಗೊಂಡಿರುವ ಕ್ರಮಗಳೇನು?

ಇ) 1995-96ನೇ ಸಾಲಿನಲ್ಲಿ ಮಲೇರಿಯ ರೋಗದ ನಿರ್ಮೂಲನಕ್ಕೆ ಆಯವ್ಯಯದಲ್ಲಿ ಎಷ್ಟು ಹಣ ಒದಗಿಸಲಾಗಿದೆ?

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ) :

ಅ) ಸರ್ಕಾರದ ಗಮನಕ್ಕೆ ಬಂದಿದೆ. 1995ನೇ ಸಾಲಿನಲ್ಲಿ ಜುಲೈ ಅಂತ್ಯದವರೆಗೆ ಕಡೂರು ತಾಲ್ಲೂಕಿನಲ್ಲಿ ಒಟ್ಟು 15,802 ಮಲೇರಿಯಾ ಪ್ರಕರಣಗಳು ಪತ್ತೆಯಾಗಿದ್ದು ಇವುಗಳಲ್ಲಿ 15,157 ಪ್ರಕರಣಗಳಿಗೆ ತೀವ್ರ ಚಿಕಿತ್ಸೆ ನೀಡಲಾಗಿದೆ.

ಆ) ಕಡೂರು ತಾಲ್ಲೂಕಿನಲ್ಲಿ ಮಲೇರಿಯಾ ನಿಯಂತ್ರಣಕ್ಕಾಗಿ ಈ ಕೆಳಕಂಡ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

1) ಮಲೇರಿಯ ಹೆಚ್ಚಾಗಿ ಹರಡಿರುವ ಸಮಸ್ಯಾತ್ಮಕ ಹಳ್ಳಿಗಳನ್ನು ಗುರ್ತಿಸಿ ಎಲ್ಲಾ ಜ್ವರಪೀಡಿತರಿಂದ ಪ್ರತಿವಾರ ರಕ್ತಲೇಪನ ಸಂಗ್ರಹಿಸಿ, ಪರೀಕ್ಷಿಸಿ, ಮಲೇರಿಯ ಕಂಡುಬಂದ ಪ್ರಕರಣಗಳಿಗೆ ತುರ್ತಾಗಿ ತೀವ್ರ ಚಿಕಿತ್ಸೆ ನೀಡಲಾಗುತ್ತಿದೆ.

2) ತಾಲ್ಲೂಕಿನಲ್ಲಿ ಎರಡು ವಿಶೇಷ ಸಂಚಾರಿ ತಂಡಗಳನ್ನು ಮಲೇರಿಯಾ ನಿಯಂತ್ರಣ ಕಾರ್ಯಾಚರಣೆಗಾಗಿ ರಚಿಸಲಾಗಿದ್ದು ಮಲೇರಿಯ ಪ್ರಕರಣಗಳಿಗೆ ತುರ್ತು ಚಿಕಿತ್ಸೆ ನೀಡುವ ವ್ಯವಸ್ಥೆ ಮಾಡಲಾಗಿದೆ.

3) ತಾಲ್ಲೂಕಿನ 8 ಪ್ರಾಥಮಿಕ ಆರೋಗ್ಯ ಕೇಂದ್ರಗಳೇ ಅಲ್ಲದ ಕಡೂರಿನಲ್ಲಿಯೂ ಸಹ ಕ್ಷೇತ್ರ ಪ್ರಯೋಗಶಾಲೆಗಳನ್ನು ಸ್ಥಾಪಿಸಲಾಗಿದ್ದು ರಕ್ತ ಲೇಪನಗಳನ್ನು ಶೀಘ್ರವಾಗಿ ಪರೀಕ್ಷಿಸಿ ಫಲಿತಾಂಶ ನೀಡಲು ವ್ಯವಸ್ಥೆಗೊಳಿಸಲಾಗಿದೆ.

4) ಮಲೇರಿಯ ನಿಯಂತ್ರಣಕ್ಕೆ ಬೇಕಾದ ಮಲೇರಿಯ ನಿರೋಧಕ ಗುಳಿಗೆಗಳು, ಪಂಪುಗಳು ಹಾಗೂ ಇತರ ಸಾಮಗ್ರಿಗಳನ್ನು ಚಿಕ್ಕಮಗಳೂರು ಜಿಲ್ಲಾ ಮಲೇರಿಯಾ ಅಧಿಕಾರಿಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಸರಬರಾಜು ಮಾಡಲಾಗಿದೆ.

5) ಕೀಟನಾಶಕ ಸಿಂಪರಣಾ ಕಾರ್ಯಕ್ಕೆ 55 ಮೆಟ್ರಿಕ್ ಟನ್ ಡಿಡಿಟಿ ಪುಡಿಯನ್ನು ಸರಬರಾಜು ಮಾಡಲು ವ್ಯವಸ್ಥೆ ಮಾಡಲಾಗಿದೆ.

6) ಭಾರತ ಸರ್ಕಾರದ ಮಲೇರಿಯಾ ಸಂಶೋಧನಾ ಕೇಂದ್ರದ ಪರಿಣಿತರು ಜೈವಿಕ ಪರಿಸರ ಕ್ರಮಗಳಿಂದ ಮಲೇರಿಯ ನಿಯಂತ್ರಣಕ್ಕಾಗಿ ಅಧ್ಯಯನ ನಡೆಸುತ್ತಿದ್ದಾರೆ.

7) ತಾಲ್ಲೂಕಿನಲ್ಲಿ 54 ಔಷಧ ವಿತರಣಾ ಕೇಂದ್ರಗಳನ್ನು ತಕ್ಷಣದ ಚಿಕಿತ್ಸೆಗಾಗಿ ತೆರೆಯಲಾಗಿದೆ.

ಇ) 1995-96ನೇ ಸಾಲಿನಲ್ಲಿ ಮಲೇರಿಯಾ ನಿಯಂತ್ರಣ ಕಾರ್ಯಕ್ರಮಕ್ಕೆ ಈ ಕೆಳಕಂಡಂತೆ ಹಣ ಒದಗಿಸಲಾಗಿದೆ.

ಕಾರ್ಯಕ್ರಮ	ರಾಜ್ಯ	ಕೇಂದ್ರ	ಒಟ್ಟು
		(ಲಕ್ಷ	ರೂ.ಗಳಲ್ಲಿ)
1. ಮಲೇರಿಯ ನಿಯಂತ್ರಣ ಕಾರ್ಯಕ್ರಮ(ಗ್ರಾಮಾಂತರ) ಯೋಜನೆ	750-00	750-00	1500-00

2.	ಮಲೇರಿಯ ನಿಯಂತ್ರಣ- ಕಾರ್ಯಕ್ರಮ (ಗ್ರಾಮಾಂತರ) ಯೋಜನೇತರ	. 750-00	-	750-00
3.	ನಗರ ಮಲೇರಿಯ ಯೋಜನೆ	100-00	100-00	200-00

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೇ, ಉತ್ತರಗಳು ಬರೀ ಕಾಗದಲ್ಲಿದೆಯೇ ಹೊರತು ಮಲೇರಿಯಾ ರೋಗ ನಿಯಂತ್ರಣ ಮಾಡುವ ಬಗ್ಗೆ ಸರ್ಕಾರ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ ಎಂಬ ಒಂದು ಅಭಿಪ್ರಾಯವನ್ನು ನಾನು ವ್ಯಕ್ತಪಡಿಸಬೇಕಾಗುತ್ತದೆ. ಮುಖ್ಯವಾಗಿ ಎಂಟು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿಯೂ ಕೂಡ ಟೆಕ್ನಿಷಿಯನ್‌ಗಳು ಇಲ್ಲ. ಕಡೂರಿನಲ್ಲಿ ಏನಾದರೂ ರಕ್ತ ಪರೀಕ್ಷೆಯನ್ನು ಮಾಡಿಸಿ, ಅದರ ಫಲಿತಾಂಶವನ್ನು ತಿಳಿದುಕೊಂಡು ಆ ರೋಗಿಗೆ ಶುಶ್ರೂಷೆ ಮಾಡುವುದರಲ್ಲಿ, ಆ ರೋಗ ಉಲ್ಬಣವಾಗಿರುತ್ತದೆ. ಈಗಾಗಲೇ ಕಡೂರು ತಾಲ್ಲೂಕಿನಾದ್ಯಂತ ಈ ರೋಗದ ಹಾವಳಿ ಜಾಸ್ತಿಯಾಗುರುವುದರಿಂದ ಸರ್ಕಾರ ಆದಷ್ಟು ಬೇಗ ಕಡೂರಿನಲ್ಲೇ ಒಂದು ಮಲೇರಿಯಾ ನಿಯಂತ್ರಣ ಕೇಂದ್ರವನ್ನು ಸ್ಥಾಪನೆ ಮಾಡಿ ಸೊಳ್ಳೆಗಳನ್ನು ನಿರ್ಮೂಲನ ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳಬೇಕು. ಇವತ್ತಿನ ದಿವಸ ಮೆಲಾಥಿನ್ ಔಷಧಿಗೆ ಸೊಳ್ಳೆ ಸಾಯುವುದಿಲ್ಲ. ಆ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳನ್ನು ಕೇಳಿದರೆ ಮೆಲಾಥಿನ್‌ನಿಂದ ಸೊಳ್ಳೆ ನಿರ್ಮೂಲನೆ ಸಾಧ್ಯವಿಲ್ಲ, ಅದಕ್ಕೆ ಐತಾನ್ ಎಂಬ ಒಂದು ಬಗೆಯ ಪೌಡರ್ ಅನ್ನು ಉಪಯೋಗಿಸಬಹುದು ಎಂಬ ವಿಚಾರವನ್ನು ಹೇಳುತ್ತಾರೆ. ಆದುದರಿಂದ ಆದಷ್ಟು ಬೇಗನೆ ಮಲೇರಿಯಾ ನಿಯಂತ್ರಣ ಕೇಂದ್ರವನ್ನು ಕಡೂರು ತಾಲ್ಲೂಕಿನಲ್ಲಿ ಸ್ಥಾಪನೆ ಮಾಡುವುದು ಒಳ್ಳೆಯದು ಎಂದು ನಾನು ಅಭಿಪ್ರಾಯ ಪಡುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ಸಚಿವರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳುತ್ತಿರುವುದು ನಿಜ. ಕಳೆದ $1\frac{1}{2} - 2$ ವರ್ಷಗಳಿಂದ ಈ ಮಲೇರಿಯಾ ರೋಗ ಸ್ವಲ್ಪ ಮಟ್ಟಿಗೆ ಎಲ್ಲೆಡೆ ಹರಡುತ್ತಿದೆ. ಮಂಗಳೂರು ಮತ್ತು ಚಿಕ್ಕಮಗಳೂರು ಈ ಭಾಗದಲ್ಲಿ ಈ ರೋಗ ವ್ಯಾಪಕವಾಗಿರತಕ್ಕದ್ದನ್ನು ನಾನು ನೋಡಿದ್ದೇನೆ. ಕಡೂರಿನಲ್ಲಿ ಮಲೇರಿಯಾ ನಿಯಂತ್ರಣ ಕೇಂದ್ರವನ್ನು ಸ್ಥಾಪನೆ ಮಾಡಬೇಕೆಂದು ಮಾನ್ಯ ಸದಸ್ಯರು ಕೋರಿದ್ದಾರೆ. ಅದರ ಬಗ್ಗೆ ಸರ್ಕಾರವು ವಿಶೇಷವಾದ ಪರಿಶೀಲನೆ ಮಾಡುತ್ತದೆ.

ಶಿಕ್ಷಕರ ನೇಮಕಾತಿಯಲ್ಲಿ ಮಹಿಳೆಯರಿಗೆ ಮೀಸಲು

2699 - ಶ್ರೀ ಬಿ.ಬಿ. ಚಿಮ್ಮನ ಕಟ್ಟಿ (ಬಾದಾಮಿ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳ ಆಯ್ಕೆಯಲ್ಲಿ ಶೇಕಡಾ 50 ಭಾಗ ಮಹಿಳೆಯರಿಗೆ ಮೀಸಲಿಡಲಾಗಿದೆಯೇ. ಅದೇ ರೀತಿ ಪ್ರೌಢಶಾಲಾ ಶಿಕ್ಷಕರ ಹುದ್ದೆಗಳಲ್ಲಿ ಕೂಡ ಮಹಿಳೆಯರಿಗಾಗಿ ಮೀಸಲು ನೀತಿ ಅಳವಡಿಸಿಕೊಳ್ಳುವುದರ ಬಗ್ಗೆ ಸರ್ಕಾರದವರು ಪರಿಶೀಲಿಸುವರೇ?

ಶ್ರೀ ಹೆಚ್.ಜಿ. ಗೋವಿಂದಗೌಡ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):

ಅ) ಪ್ರಾಥಮಿಕ - ಹೌದು

ಪ್ರೌಢಶಾಲೆ ಈ ಬಗ್ಗೆ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿಲ್ಲ.

ಶ್ರೀ ಬಿ.ಬಿ. ಚಿಮ್ಮನ ಕಟ್ಟಿ : ಸನ್ಮಾನ್ಯ ಅಧ್ಯಕ್ಷರೆ, ಪೂರ್ವಪ್ರಾಥಮಿಕ ಮತ್ತು ಪ್ರಾಥಮಿಕ ಶಾಲೆಗಳಲ್ಲಿ ತಾವು ಶೇಕಡ 50ರಷ್ಟು ಮೀಸಲಾತಿಯನ್ನು ಶಿಕ್ಷಕರ ನೇಮಕಾತಿಯಲ್ಲಿ ಈಗಾಗಲೇ ಮಹಿಳೆಯರಿಗೆ ಕೊಟ್ಟಿದ್ದೀರಿ. ಈಗ ಇದನ್ನು ಹೈಸ್ಕೂಲ್ ಮಟ್ಟದಲ್ಲೂ ಕೊಡುವುದರಿಂದ ಬಹುಶಃ ಹೆಣ್ಣುಮಕ್ಕಳಿಗೆ ಹೆಚ್ಚಿನ ಪ್ರಾತಿನಿಧ್ಯ ಕೊಟ್ಟ ಈ ಒಂದು ಸರ್ಕಾರ ಅವರಿಗೆ ಮಾನ್ಯತೆಯನ್ನು ಕೊಟ್ಟಂತಾಗುತ್ತದೆ. ಅದರ ಜೊತೆಗೆ ಮಕ್ಕಳ ಮನಸ್ಸನ್ನು ಅರಿತಿರತಕ್ಕಂಥವರು ಮಹಿಳೆಯರೇ ಹೆಚ್ಚು ಶಿಕ್ಷಕರಾದರೆ ಬಹುಶಃ ಶಿಕ್ಷಣ ಯಶಸ್ವಿಯಾಗುತ್ತದೆಂದು ನನ್ನ ಅಭಿಪ್ರಾಯ. ತಾವು ದಯವಿಟ್ಟು ಮಹಿಳೆಯರಿಗೆ ಶೇಕಡ 50ರಷ್ಟು ಮೀಸಲಾತಿ ಈ ವಿಚಾರದಲ್ಲಿ ಮಾಡಲು ಆಗದೆ ಇದ್ದರೂ ಕೊನೆಗೆ ಶೇಕಡ 30ರಷ್ಟಾದರೂ ಮಾಡಿದರೆ ಅವರನ್ನು ಅಕಾಮಡೇಟ್ ಮಾಡಬಹುದು. ಏಕೆಂದರೆ ಬೇರೆ ಇಲಾಖೆಗಳಿಗೆ ಹೆಣ್ಣು ಮಕ್ಕಳು ಹೋಗುವುದಕ್ಕೆ ಸಾಧ್ಯವಿಲ್ಲ. ತಾವು ಶಿಕ್ಷಕರೆ, ತಾವು ಮಹಿಳೆಯರಿಗೆ ಹೆಚ್ಚು ಆದ್ಯತೆಯನ್ನು ಕೊಡತಕ್ಕಂತಹವರು, ತಾವು ಇದರ ಬಗ್ಗೆ ಏನು ಸ್ಪಷ್ಟವಾದ ನಿರ್ಧಾರವನ್ನು ತೆಗೆದುಕೊಳ್ಳುತ್ತೀರಿ?

ಶ್ರೀ ಹೆಚ್.ಜಿ. ಗೋವಿಂದೇಗೌಡ : ಮಾನ್ಯ ಅಧ್ಯಕ್ಷರೆ, ಈ ಪ್ರಾಥಮಿಕ ಶಾಲಾ ಉಪಧ್ಯಾಯರುಗಳನ್ನು ನೇಮಕ ಮಾಡುವುದರಲ್ಲಿ ಶೇಕಡ 50ರಷ್ಟು ಹುದ್ದೆಗಳನ್ನು ಮಹಿಳೆಯರಿಗೋಸ್ಕರವೇ ಮೀಸಲಿಡುವುದು ಇದೆ. ಅದನ್ನು ನಾವು ಈಗಾಗಲೇ ಕಾನೂನು ಪ್ರಕಾರ ಕೈಗೊಂಡಿದ್ದೇವೆ. ಹೈಸ್ಕೂಲ್‌ನಲ್ಲಿ ಈ ವಿಷಯದ ಬಗ್ಗೆ ನಾವು ತೀರ್ಮಾನ ಮಾಡಿಲ್ಲ. ಸಾಮಾನ್ಯವಾಗಿ ಪ್ರಾಥಮಿಕ ಶಾಲೆಯಲ್ಲಿ ಪಾಠ ಕಲಿಯುವ ಮಕ್ಕಳು ಬಹಳ ಚಿಕ್ಕವಯಸ್ಸಿನವರಿರುತ್ತಾರೆ. ಹೆಣ್ಣುಮಕ್ಕಳು ಅಲ್ಲಿ ಹೆಚ್ಚು ಗಮನವನ್ನು ಕೊಟ್ಟು ಆ ಮಕ್ಕಳಿಗೆ ಪಾಠಗಳನ್ನು ಚೆನ್ನಾಗಿ ಹೇಳಿಕೊಡಬಹುದೆನ್ನುವ ದೃಷ್ಟಿಯಿಂದ ಪ್ರಾಥಮಿಕ ಶಾಲೆಗಳ ಶಿಕ್ಷಕರ ನೇಮಕಾತಿಯಲ್ಲಿ ನಾವಾಗಿಯೇ ಶೇಕಡ 50ರಷ್ಟು ಮೀಸಲಾತಿಯನ್ನು ಮಹಿಳೆಯರಿಗೆ ಇಟ್ಟಿರುದ್ದು. ಶೇಕಡಾ 30ರಷ್ಟು ಮೀಸಲಾತಿಯನ್ನು ಇಟ್ಟಿದ್ದರೂ ಕೂಡ ಶೇಕಡಾ 50ರಷ್ಟು ಮೀಸಲಾತಿಯನ್ನು ಮಹಿಳೆಯರಿಗೆ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಹೈಸ್ಕೂಲಿಗಳಲ್ಲಿ ಮಹಿಳೆಯರಿಗೆ ಮೀಸಲಾತಿಯ ಬಗ್ಗೆ ತೀರ್ಮಾನ ಮಾಡಿಲ್ಲ. ಜನರಲ್ ಮೆರಿಟ್‌ನಲ್ಲಿ ಹೆಚ್ಚು ಜನ ಮಹಿಳೆಯರು ಆಯ್ಕೆಯಾಗುವ ಸಾಧ್ಯತೆ ಇದೆ. ಆದರೆ ಹೈಸ್ಕೂಲ್‌ನಲ್ಲಿ ಈ ಬಗ್ಗೆ ಮೀಸಲಾತಿಯನ್ನು ಮಾಡಿಲ್ಲ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಶೇಕಡ 50ರಷ್ಟು ಮೀಸಲಾತಿಯನ್ನು ಮಾಡಿಲ್ಲ ಕೊನೆಯಪಕ್ಷ ಶೇಕಡಾ 30ರಷ್ಟಾದರೂ ಮಾಡುವುದಕ್ಕೆ ದಯವಿಟ್ಟು ಪ್ರಯತ್ನ ಮಾಡಿ.

ಅಧ್ಯಕ್ಷರು : ಆಲೋಚನೆ ಮಾಡಿ ಪರಿಗಣಿಸಿ.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಇದರ ಬಗ್ಗೆ ಪರಿಶೀಲನೆ ಮಾಡುತ್ತೇವೆ.

ದ.ಕನ್ನಡ ಜಿಲ್ಲೆಯಲ್ಲಿರುವ ಪದವಿಪೂರ್ವ ಕಾಲೇಜುಗಳಿಗೆ ಸ್ವಂತ ಕಟ್ಟಡ

2705 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದ.ಕ. ಜಿಲ್ಲೆಯಲ್ಲಿ ಎಷ್ಟು ಪದವಿಪೂರ್ವ ಕಾಲೇಜುಗಳಿವೆ, ಸ್ವಂತ ಕಟ್ಟಡ ಒದಗಿಸಲಾಗಿದೆ (ತಾಲ್ಲೂಕುವಾರು ವಿವರ ಒದಗಿಸುವುದು)

ಆ) ಸ್ವಂತ ಕಟ್ಟಡ ಇಲ್ಲದಿರುವ ಪದವಿಪೂರ್ವ ಕಾಲೇಜುಗಳಾವುವು (ತಾಲ್ಲೂಕುವಾರು ವಿವರ ಒದಗಿಸುವುದು)

ಇ) ಪದವಿ ಪೂರ್ವ ಕಾಲೇಜುಗಳ ಕೊಠಡಿಗಳ ನಿರ್ಮಾಣಕ್ಕೆ ಸರ್ಕಾರದವರು ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):

ಅ) 49-ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಸ್ವಂತ ಕಟ್ಟಡ ಒದಗಿಸಲಾಗಿದೆ.

ವಿವರ

1.	ಕುಂದಾಪುರ ತಾಲ್ಲೂಕು	-	08
2.	ಉಡುಪಿ ತಾಲ್ಲೂಕು	-	12
3.	ಕಾರ್ಕಳ ತಾಲ್ಲೂಕು	-	06
4.	ಬೆಳ್ತಂಗಡಿ ತಾಲ್ಲೂಕು	-	03
5.	ಬಂಟ್ವಾಳ ತಾಲ್ಲೂಕು	-	05
6.	ಪುತ್ತೂರು ತಾಲ್ಲೂಕು	-	04
7.	ಸುಳ್ಯ ತಾಲ್ಲೂಕು	-	04
8.	ಮಂಗಳೂರು ತಾಲ್ಲೂಕು	-	07
	ಒಟ್ಟು		49

ಆ) 1. ಕುಂದಾಪುರ ತಾಲ್ಲೂಕು : 03

(1) ಸರ್ಕಾರಿ ಪದವಿ ಪೂರ್ವ ಕಾಲೇಜು ಹೊಸಂಗಡಿ

(2) ಸರ್ಕಾರಿ ಪದವಿ ಪೂರ್ವ ಕಾಲೇಜು ಕಂಬದಕೋಣೆ

(3) ಸರ್ಕಾರಿ ಪದವಿ ಪೂರ್ವ ಕಾಲೇಜು ಬಿದಕಲ್‌ಕಟ್ಟೆ

2. ಉಡುಪಿ ತಾಲ್ಲೂಕು : 1

(1) ಸರ್ಕಾರಿ ಪದವಿಪೂರ್ವ ಕಾಲೇಜು ಮುದರಂಗಡಿ

3. ಕಾರ್ಕಳ ತಾಲ್ಲೂಕು : 3

(1) ಸರ್ಕಾರಿ ಪದವಿ ಪೂರ್ವ ಕಾಲೇಜು, ಪಳ್ಳಿ

(2) ಸರ್ಕಾರಿ ಪದವಿ ಪೂರ್ವ ಕಾಲೇಜು, ಕುಕ್ಕುಜೆ

(3) ಸರ್ಕಾರಿ ಪದವಿ ಪೂರ್ವ ಕಾಲೇಜು, ಸಾಣೂರು

4. ಬೆಳ್ತಂಗಡಿ ತಾಲ್ಲೂಕು : 2

(1) ಸರ್ಕಾರಿ ಪದವಿ ಪೂರ್ವ ಕಾಲೇಜು, ಬೆಳ್ತಂಗಡಿ

(2) ಸರ್ಕಾರಿ ಪದವಿ ಪೂರ್ವ ಕಾಲೇಜು, ಪುಂಜಾಲಕಟ್ಟೆ

5. ಬಂಟ್ವಾಳ ತಾಲ್ಲೂಕು : 3

(1) ಸರ್ಕಾರಿ ಪದವಿಪೂರ್ವ ಕಾಲೇಜು, ಸಜೀಪಮೂಡ

(2) ಸರ್ಕಾರಿ ಪದವಿಪೂರ್ವ ಕಾಲೇಜು, ವಗ್ಗ

(3) ಸರ್ಕಾರಿ ಪದವಿಪೂರ್ವ ಕಾಲೇಜು, ಮಣಿನಾಲ್ಕೂರು

6. ಪುತ್ತೂರು ತಾಲ್ಲೂಕು : 3

(1) ಸರ್ಕಾರಿ ಪದವಿಪೂರ್ವ ಕಾಲೇಜು, ಸವಣೂರು

(2) ಸರ್ಕಾರಿ ಪದವಿಪೂರ್ವ ಕಾಲೇಜು, ಬೆಳ್ಳಾರೆಕಟ್ಟೆ

(3) ಸರ್ಕಾರಿ ಪದವಿಪೂರ್ವ ಕಾಲೇಜು, ಕುಂಬ್ರಾ

ಇ) ಪ್ರಸ್ತುತ ಪದವಿಪೂರ್ವ ಕಾಲೇಜುಗಳು ಪ್ರೌಢಶಾಲಾ ವಿಭಾಗದ ಹೆಚ್ಚುವರಿ ಕೊಠಡಿಗಳಲ್ಲಿ ನಡೆಯುತ್ತಿವೆ.

1993-94 ಹಾಗೂ 1994-95ನೇ ಸಾಲಿನಲ್ಲಿ ಸದರಿ ಕಾಲೇಜುಗಳ ಪ್ರೌಢಶಾಲೆಗಳಿಗೆ ಸಾಕಷ್ಟು ಕೊಠಡಿಗಳಿಗೆ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯಿತ್ತಿಯಿಂದ ಮಂಜೂರಾತಿ ನೀಡಲಾಗಿದೆ.

1994-95ನೇ ಸಾಲಿನಲ್ಲಿ ಸರ್ಕಾರಿ ಪದವಿಪೂರ್ವ ಕಾಲೇಜು (ಬಾಲಕೀಯರ) ಉಡುಪಿ ಹಾಗೂ ಸರ್ಕಾರಿ ಪದವಿ ಪೂರ್ವ ಕಾಲೇಜು ಫಲಿಮಾರು ಸ್ವತಂತ್ರ ಕಾಲೇಜುಗಳು) ಇಲ್ಲಿಗೆ ತಲಾ 8 ಲಕ್ಷ ರೂ.ಗಳ ಅನುದಾನವನ್ನು ಸ್ವಂತ ಕಟ್ಟಡ ಹೊಂದಲು ಮಂಜೂರಾಗಿದೆ. ಹಾಗೂ 13 ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಹೆಚ್ಚುವರಿ ಕೊಠಡಿಗಳ ನಿರ್ಮಾಣಕ್ಕಾಗಿ ಒಂದು ಕೋಟಿ 61,000ರೂ.ಗಳ ಅಂದಾಜು ವೆಚ್ಚದ ಕಾಮಗಾರಿಗಳಿಗೆ ಮಂಜೂರಾತಿ ನೀಡಲಾಗಿದ್ದು, ಈ ಕಾಮಗಾರಿಗಳು ಪ್ರಗತಿಯ ಹಂತದಲ್ಲಿವೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 49 ಸರ್ಕಾರಿ ಪದರಿಪೂರ್ವ ಕಾಲೇಜುಗಳಿವೆ. ಅದರಲ್ಲಿ 34 ಪದವಿಪೂರ್ವ ಕಾಲೇಜುಗಳಿಗೆ ಸ್ವಂತ ಕಟ್ಟಡವಿದೆ, 15ಪದವಿಪೂರ್ವ ಕಾಲೇಜುಗಳಿಗೆ ಸ್ವಂತಕಟ್ಟಡಗಳಿಲ್ಲವೆಂದು ಉತ್ತರವನ್ನು ಕೊಟ್ಟಿದ್ದಾರೆ. ನನ್ನ ಅನಿಸಿಕೆ ಏನೆಂದರೆ, 34 ಪದವಿಪೂರ್ವ ಕಾಲೇಜುಗಳು ಸ್ವಂತ ಕಟ್ಟಡಗಳನ್ನು ಹೊಂದಿಲ್ಲ. ಆದ್ದರಿಂದ ತಾವು ಕೊಟ್ಟಂತಹ ಉತ್ತರವನ್ನು ಪುನಃ ಮರುಪರಿಶೀಲನೆ ಮಾಡಬೇಕಾಗುತ್ತದೆ. ಬಹುಶಃ ಆ ಪ್ರೌಢಶಾಲೆಗಳಿಗೆ ಕೊಟ್ಟಂಥ ಕಟ್ಟಡಗಳಲ್ಲಿ ಇವತ್ತು ಪದವಿಪೂರ್ವ ಕಾಲೇಜುಗಳು ನಡೆಯುತ್ತಿವೆ. ಮತ್ತು ಪ್ರೌಢಶಿಕ್ಷಣವನ್ನು ಪಡೆಯುವಂತಹ ವಿದ್ಯಾರ್ಥಿಗಳು ಯಾರು ಅನುತ್ತೀರ್ಣರಾಗಿದ್ದಾರೆ ಅವರಿಗೆ ಶಾಲೆಗೆ ಹೋಗುವುದಕ್ಕೆ ಅವಕಾಶ ಸಿಗದೆ ಇರುವಂತಹ ಪರಿಸ್ಥಿತಿ ಇದೆ. ಏಕೆಂದರೆ, ಅಲ್ಲಿ ಶಾಲಾ ಕೊಠಡಿಗಳ ಕೊರತೆ ಇದೆ. ಅಲ್ಲಿ ಎಲ್ಲಾ ಪದವಿಪೂರ್ವ ಕಾಲೇಜುಗಳ ವಿದ್ಯಾರ್ಥಿಗಳೇ ತುಂಬಿಕೊಂಡಿದ್ದಾರೆ. ಆದುದರಿಂದ ತಾವು ಎಲ್ಲಾ ಪದವಿಪೂರ್ವ ಕಾಲೇಜುಗಳಿಗೆ ತಮ್ಮ ಗವಾಕ್ಷಿಗಳ ಮುಖಾಂತರ ಕೊಠಡಿಗಳನ್ನು ಕಟ್ಟಿಸಿಕೊಡುತ್ತೀರೋ ಇಲ್ಲವೋ? ಏಕೆಂದರೆ, ಇಲ್ಲಿ ಒಂದು ಕಡೆ ತಾವು ಉತ್ತರವನ್ನು ಕೊಡುವಾಗ, 1993-94 ಹಾಗೂ 1994-95ನೇ ಸಾಲಿನಲ್ಲಿ ಸದರಿ ಕಾಲೇಜುಗಳ ಪ್ರೌಢಶಾಲೆಗಳಿಗೆ ಸಾಕಷ್ಟು ಕೊಠಡಿಗಳಿಗೆ ದಕ್ಷಿಣ ಕನ್ನಡ ಜಿಲ್ಲಾಪಂಚಾಯಿತ್ತಿಯಿಂದ ಮಂಜೂರಾತಿ ನೀಡಲಾಗಿದೆ ಎಂದು ಹೇಳಿದ್ದೀರಿ. ನಾನು ಹೈಸ್ಕೂಲ್‌ಗಳ ಕೊಠಡಿಗಳನ್ನು ಕೇಳಲಿಲ್ಲ, ನಾನು ಸ್ಪಷ್ಟವಾಗಿ ಪದವಿಪೂರ್ವ ಕಾಲೇಜುಗಳಿಗೆ ಕೊಠಡಿಗಳನ್ನು ಕಟ್ಟಿಸಿಕೊಟ್ಟಿದ್ದೀರಾ ಎಂದು ಕೇಳಿದ್ದೇನೆ. ಎಷ್ಟು ಕಟ್ಟಿಸಿಕೊಡಬೇಕಾಗಿದೆ? ಇವುಗಳ ಬಗ್ಗೆ ಸ್ಪಷ್ಟವಾದ ಉತ್ತರಬೇಕು..

ಶ್ರೀ ಹೆಚ್.ಜಿ. ಗೋವಿಂದೇಗೌಡ : ಮಾನ್ಯ ಅಧ್ಯಕ್ಷರೆ, ಈ ಮಾಹಿತಿ ಕಳುಹಿಸಿಕೊಟ್ಟಿರುವುದರಲ್ಲಿ ಸ್ನೇಹಿತರಿಗೆ ಸ್ವಲ್ಪ ಅನುಮಾನವೇನಾದರೂ ಇದ್ದರೆ, ಈ

ಸಂಯುಕ್ತ ಪದವಿಪೂರ್ವ ಕಾಲೇಜುಗಳಲ್ಲಿ ಹೈಸ್ಕೂಲ್‌ಗಳು ನಡೆಯುತ್ತಿರುತ್ತವೆ, ಜೊತೆಗೆ ಪದವಿಪೂರ್ವ ಕಾಲೇಜುಗಳೂ ಸಹ ನಡೆಯುತ್ತಿರುತ್ತವೆ. ಕೆಲವು ಕಡೆ ಇಂಡಿಪೆಂಡೆಂಟಾಗಿ ಪದವಿಪೂರ್ವ ಕಾಲೇಜುಗಳು ನಡೆಯುತ್ತಿರುವುದು ಇದೆ.

ಕೆಲವು ಕಡೆ ಶಾಲಾ ಕಟ್ಟಡಗಳು ಇವೆ, ಇನ್ನು ಕೆಲವು ಕಡೆ ಶಾಲಾ ಕಟ್ಟಡಗಳಿಲ್ಲ ಎಂದು ಮಾನ್ಯ ಸ್ನೇಹಿತರ ಪ್ರಶ್ನೆಯಾಗಿದೆ. ಈಗಾಗಲೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1.61 ಕೋಟಿ ರೂಪಾಯಿಗಳ ಅಂದಾಜು ವೆಚ್ಚದ ಕಾಮಗಾರಿಗಳಿಗೆ ನಾವು ಮಂಜೂರಾತಿಯನ್ನು ಕೊಟ್ಟಿದ್ದೇವೆ. ಕೆಲಸ ಯಾವ ಹಂತದಲ್ಲಿದೆ ಎಂದು ನನಗೆ ಸರಿಯಾಗಿ ಮಾಹಿತಿ ಇಲ್ಲ. ಆದರೆ 1.61 ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಿದ್ದೇವೆ, ಕಾರ್ಯಕ್ರಮ ಪ್ರಾರಂಭವಾಗಬೇಕು. ಕೆಲವು ಕಡೆ ಏನಾಗಿದೆ ಎಂದರೆ, ಕಟ್ಟಡ ಕಟ್ಟಬೇಕಾದರೆ ಸ್ಥಳದ ಅಭಾವವಿರುವುದರಿಂದ ಬಹುಶಃ ಕೆಲವು ಕಡೆ ತೊಂದರೆ ಇದೆ. ಅಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ರೀತಿಯ ತೊಂದರೆ ಇರುವುದಿಲ್ಲವೆಂದು ತಿಳಿದುಕೊಂಡಿದ್ದೇನೆ. ಒಂದು ಕೋಟಿ ಅರವತ್ತೊಂದು ಲಕ್ಷ ರೂಪಾಯಿಗಳಲ್ಲಿ ಕೆಲಸ ಪ್ರಾರಂಭವಾಗಬೇಕೆಂದು ಆದೇಶವನ್ನು ಕೊಟ್ಟಿದ್ದೇವೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ನಾನು ಮೂಲಭೂತವಾಗಿ ಕೇಳಿರುವ ಪ್ರಶ್ನೆ ಏನೆಂದರೆ, ಹೈಸ್ಕೂಲ್‌ಗಳಿಗೆ ಕೊಠಡಿಗಳನ್ನು ಮಂಜೂರು ಮಾಡುತ್ತೀರಿ, ಏತಕ್ಕೆ ಪದವಿಪೂರ್ವ ಕಾಲೇಜುಗಳಿಗೆ ಕೊಠಡಿಗಳನ್ನು ಮಂಜೂರು ಮಾಡುವುದಿಲ್ಲ? ಏಕೆಂದರೆ, ಹೈಸ್ಕೂಲ್‌ನಲ್ಲಿ ಅನುತ್ತೀರ್ಣರಾದಂಥ ವಿದ್ಯಾರ್ಥಿಗಳಿಗೆ ಶಾಲೆಗೆ ಹೋಗಲು ಕೊಠಡಿಗಳ ಕೊರತೆ ಇದ್ದು ಅವರು ಶಾಲೆಗೆ ಹೋಗಲು ಅವಕಾಶವಿಲ್ಲ. ನಾವು ಪದವಿಪೂರ್ವ ಕಾಲೇಜುಗಳನ್ನು ತೆರೆಯುತ್ತಿದ್ದೇವೆ. ಹೈಸ್ಕೂಲಿಗೆ ಮಕ್ಕಳು ಪುನಃ ಹೋಗದೇ ಇರತಕ್ಕಂತಹ ಪರಿಸ್ಥಿತಿಯಲ್ಲಿ, ಏತಕ್ಕೆ ಈ ಪರಿಸ್ಥಿತಿ ಉದ್ಭವವಾಗಿದೆ ಎಂದರೆ, ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಹೈಸ್ಕೂಲಿನ ವಿದ್ಯಾರ್ಥಿಗಳು ಕುಳಿತುಕೊಳ್ಳುವ ಕೊಠಡಿಯಲ್ಲಿ ಕುಳಿತುಕೊಳ್ಳುವುದರಿಂದ ಇವರಿಗೆ ಕೊಠಡಿಗಳ ಕೊರತೆ ಇದೆ. ಬಹುಶಃ ನಾನು ಮಂತ್ರಿಗಳನ್ನು ವೈಯಕ್ತಿಕವಾಗಿ ಟೀಕೆಯನ್ನು ಮಾಡುತ್ತಿಲ್ಲ ಅಥವಾ ನಿಮ್ಮ ಸರ್ಕಾರದ ವಿರುದ್ಧ ಟೀಕೆಯನ್ನು ಮಾಡುತ್ತಿಲ್ಲ. ನಾನು ಈ ವ್ಯವಸ್ಥೆಯನ್ನು ಟೀಕೆ ಮಾಡುತ್ತಿದ್ದೇನೆ. ತಾವು ಪದವಿಪೂರ್ವ ಕಾಲೇಜುಗಳಿಗೆ ಈವರೆವಿಗೆ ಕೊಠಡಿಗಳನ್ನು ಕೊಡುವಂತಹ ಯಾವುದೇ ಕಾರ್ಯಕ್ರಮಗಳನ್ನು ಹಾಕಿಕೊಂಡಿಲ್ಲ, ಬೇಕಾದರೆ ತಾವು ಮರುಪರಿಶೀಲನೆ ಮಾಡಿ, ಯಾವುದೇ ಜಿಲ್ಲಾಪಂಚಾಯತ್ ಆಗಲಿ, ಯಾವುದೇ ವ್ಯವಸ್ಥೆಗಳನ್ನಾಗಲಿ ಪ್ರತ್ಯೇಕವಾಗಿ ಪದವಿಪೂರ್ವ ಕಾಲೇಜುಗಳಿಗೆ ಕೊಠಡಿಗಳನ್ನು ಈ ವರ್ಷ ಕೊಟ್ಟಿದ್ದೇವೆ, ಇಂತಿಷ್ಟು ಪದವಿಪೂರ್ವ ಕಾಲೇಜುಗಳಿಗೆ ಕೊಠಡಿಯನ್ನು ಕೊಟ್ಟಿದ್ದೇವೆ ಎನ್ನುವ ಯಾವುದೇ ದಾಖಲೆಗಳಿದ್ದರೆ ಹೇಳಿ.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಇದರ ಬಗ್ಗೆ ಅವರಿಗೆ ಹೆಚ್ಚುಕಡಿಮೆ ಸಂತೋಷವಾಗುವಂತಹ ರೀತಿಯಲ್ಲಿ ಮಾಹಿತಿಯನ್ನು ಕೊಟ್ಟಿದ್ದೇನೆಂದು ನಾನು ತಿಳಿಸಿಕೊಂಡಿದ್ದೇನೆ. ಒಂದು ಕೋಟಿ ಅರವತ್ತೊಂದು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಕೆಲಸ ಯಾವ ಹಂತದಲ್ಲಿದೆ ಎನ್ನುವ ಬಗ್ಗೆ ಮಾನ್ಯ ಸ್ನೇಹಿತರಿಗೆ ನಾನು ಮಾಹಿತಿಯನ್ನು ಕಳುಹಿಸಿಕೊಡುತ್ತೇನೆ.

ಸ್ಟಾಪ್‌ಗ್ಯಾಪ್ ಉಪನ್ಯಾಸಕರುಗಳು

2031 Ë ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ವೋಚ್ಚ ನ್ಯಾಯಾಲಯವು ದಿನಾಂಕ : 29-01-92ರ ತೀರ್ಪಿನಲ್ಲಿ ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿನ ಸ್ಟಾಪ್‌ಗ್ಯಾಪ್ ಉಪನ್ಯಾಸಕರುಗಳಿಗೆ

ಖಾಯಂ ಉಪನ್ಯಾಸಕರಿಗೆ ನೀಡುವಷ್ಟೇ ಪೂರ್ಣ ವೇತನವನ್ನು ನೀಡುವಂತೆ ಆದೇಶಿಸಿದ್ದರೂ ಸೆಪ್ಟೆಂಬರ್ 1994ರಿಂದ ಸಂಬಳ ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಕಳೆದ ಒಂದು ವರ್ಷದಿಂದ ಯಾವುದೇ ರೀತಿಯ ವೇತನ ಭತ್ಯೆಗಳನ್ನು ನೀಡದೆ ಇರುವುದರಿಂದ ಸುಮಾರು 350ಮಂದಿ ಸ್ವಾಪ್‌ಗ್ಯಾಪ್ ಉಪನ್ಯಾಸಕರುಗಳ ಕುಟುಂಬಗಳ ಅತ್ಯಂತ ಕಷ್ಟ ಪರಿಸ್ಥಿತಿ ಎದುರಿಸುತ್ತಿರುವುದರಿಂದ ಸರ್ಕಾರ ಕೂಡಲೇ ಪೂರ್ಣ ವೇತನ ಭತ್ಯೆಗಳನ್ನು ಪಾವತಿ ಮಾಡಲು ಕ್ರಮ ತೆಗೆದುಕೊಳ್ಳುವುದೇ?

ಇ) ಸದರಿ ಸ್ವಾಪ್ ಗ್ಯಾಪ್ ಉಪನ್ಯಾಸಕರುಗಳು ಈಗಾಗಲೇ 5-6 ವರ್ಷಗಳಿಂದಲೂ ನಿರಂತರವಾಗಿ ಸೇವೆ ಸಲ್ಲಿಸುತ್ತಿದ್ದು, ಸ್ಥಳೀಯ ಅಭ್ಯರ್ಥಿಗಳು ಕರಾರು ಆಧಾರಿತ ಅಭ್ಯರ್ಥಿಗಳ ಸೇವೆಯನ್ನು ಖಾಯಂಗೊಳಿಸಿರುವಂತೆಯೇ ಇವರುಗಳ ಸೇವೆಯನ್ನು ಅವರುಗಳು ಸೇವೆ ಸಲ್ಲಿಸುತ್ತಿರುವ ಹುದ್ದೆಗಳಲ್ಲಿಯೇ ಮಾನವೀಯ ದೃಷ್ಟಿಯಿಂದ ಸರ್ಕಾರ ಖಾಯಂಗೊಳಿಸುವುದೇ?

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) :

ಅ) ಬಂದಿದೆ.

ಆ) ಸೆಪ್ಟೆಂಬರ್ 1994ರಿಂದ ವೇತನ ಪಾವತಿ ಮಾಡಲು ದಿನಾಂಕ 7-9-95ರಂದು ಸೂಚನೆ ನೀಡಲಾಗಿದೆ.

ಇ) ಸರ್ಕಾರವು ರಾಜ್ಯದ ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿನ ಸ್ವಾಪ್‌ಗ್ಯಾಪ್ ಉಪನ್ಯಾಸಕರುಗಳ ಸಮಸ್ಯೆಯನ್ನು ಎಲ್ಲಾ ದೃಷ್ಟಿಕೋನಗಳಿಂದಲೂ ಪರಿಶೀಲಿಸಿ ವರದಿ ನೀಡಲು ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿದೆ. ಸಮಿತಿಯ ವರದಿಯನ್ನು ಕಾಯಲಾಗಿದೆ.

ಶ್ರೀ ಕುಂಬ್ಳೆ ಸುಂದರರಾವ್ : ಸನ್ಮಾನ್ಯ ಅಧ್ಯಕ್ಷರೆ, ನಾನು ಮೂರು ಪ್ರಶ್ನೆಗಳನ್ನು ಕೇಳಿದ್ದೆ, ಅದರಲ್ಲಿ ಮೊದಲನೆಯ ಪ್ರಶ್ನೆಗೆ ಉತ್ತರ ಸಮರ್ಪಕವಾಗಿ ಬಂದಿದೆ. ಏಕೆಂದರೆ, ಮೊದಲನೆ ಪ್ರಶ್ನೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ದಿನಾಂಕ 29-01-92ರ ತೀರ್ಪಿನಲ್ಲಿ ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿನ ಸ್ವಾಪ್‌ಗ್ಯಾಪ್ ಉಪನ್ಯಾಸಕರುಗಳಿಗೆ ಖಾಯಂ ಉಪನ್ಯಾಸಕರಿಗೆ ನೀಡುವಷ್ಟೇ ಪೂರ್ಣ ವೇತನವನ್ನು ನೀಡುವಂತೆ ಆದೇಶಿಸಿದ್ದರೂ ಸೆಪ್ಟೆಂಬರ್ 1994ರಿಂದ ಸಂಬಳ ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಎಂದು ಕೇಳಿದ್ದೆ. 'ಬಂದಿದೆ' ಎಂದು ಒಪ್ಪಿಕೊಂಡಿದ್ದಾರೆ. ಎರಡನೆಯ ಪ್ರಶ್ನೆಯಲ್ಲಿ, ಕಳೆದ ಒಂದು ವರ್ಷದಿಂದ ಯಾವುದೇ ರೀತಿಯ ವೇತನ ಭತ್ಯೆಗಳನ್ನು ನೀಡದೆ ಇರುವುದರಿಂದ ಸುಮಾರು 350 ಮಂದಿ ಸ್ವಾಪ್‌ಗ್ಯಾಪ್ ಉಪನ್ಯಾಸಕರುಗಳ ಕುಟುಂಬಗಳು ಅತ್ಯಂತ ಕಷ್ಟ ಪರಿಸ್ಥಿತಿ ಎದುರಿಸುತ್ತಿರುವುದರಿಂದ ಸರ್ಕಾರ ಕೂಡಲೇ ಪೂರ್ಣ ವೇತನ ಭತ್ಯಗಳನ್ನು ಪಾವತಿ ಮಾಡಲು ಕ್ರಮ ತೆಗೆದುಕೊಳ್ಳುವುದೇ? ಎಂದು ಕೇಳಿದರೆ, ಅವರಿಗೆ ಸೆಪ್ಟೆಂಬರ್ 1994ರಿಂದ ವೇತನ ಪಾವತಿ ಮಾಡಲು ದಿನಾಂಕ 7-9-95ರಂದು ಸೂಚನೆ ನೀಡಲಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ಈ ಎರಡು ಉತ್ತರಗಳಿಗಾಗಿ ನಾನು ಧನ್ಯವಾದಗಳನ್ನು ಸಮರ್ಪಿಸುತ್ತೇನೆ. ಆದರೆ ಮೂರನೆಯ ಪ್ರಶ್ನೆ ಏನಿದೆ, ಅದರ ಬಗ್ಗೆ ಉತ್ತರದಲ್ಲಿ ಮಾತ್ರ ಸ್ವಲ್ಪ ಗೊಂದಲವಿದೆ. ಮೂರನೆಯ ಪ್ರಶ್ನೆಯಲ್ಲಿ, ಸದರಿ ಸ್ವಾಪ್‌ಗ್ಯಾಪ್ ಉಪನ್ಯಾಸಕರುಗಳು ಈಗಾಗಲೇ 5-6ವರ್ಷಗಳಿಂದಲೂ ನಿರಂತರವಾಗಿ ಸೇವೆ ಸಲ್ಲಿಸುತ್ತಿದ್ದು, ಸ್ಥಳೀಯ ಅಭ್ಯರ್ಥಿಗಳು ಕರಾರು ಆಧಾರಿತ ಅಭ್ಯರ್ಥಿಗಳ ಸೇವೆಯನ್ನು ಖಾಯಂಗೊಳಿಸಿರುವಂತೆಯೇ ಇವರುಗಳ ಸೇವೆಯನ್ನು ಅವರುಗಳು ಸೇವೆ

ಸಲ್ಲಿಸುತ್ತಿರುವ ಹುದ್ದೆಗಳಲ್ಲಿಯೇ ಮಾನವೀಯ ದೃಷ್ಟಿಯಿಂದ ಸರ್ಕಾರ ಖಾಯಂಗೊಳಿಸುವುದೇ? ಎಂದು ಕೇಳಿದರೆ, ಸರ್ಕಾರವು ರಾಜ್ಯದ ಖಾಸಗಿ ಅನುದಾನಿತ ಪ್ರಥಮದರ್ಜೆ ಕಾಲೇಜುಗಳಲ್ಲಿನ ಸ್ಟಾಪ್‌ಗ್ಯಾಪ್ ಉಪನ್ಯಾಸಕರುಗಳ ಸಮಸ್ಯೆಯನ್ನು ಎಲ್ಲಾ ದೃಷ್ಟಿಕೋನಗಳಿಂದಲೂ ಪರಿಶೀಲಿಸಿ ವರದಿ ನೀಡಲು ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿದೆ, ಸಮಿತಿಯ ವರದಿಯನ್ನು ಕಾಯಲಾಗಿದೆ ಎಂದು ಉತ್ತರ ಬಂದಿದೆ. ನಾನು ಕೇಳುತ್ತೇನೆ, ಯಾವುದೇ ಒಂದು ಸಮಿತಿಗೆ ಒಂದು ಅವಧಿ ಎಂದು ಇರುತ್ತದೆ.

ಈ ಸಮಿತಿಯ ಅವಧಿ ಎಷ್ಟು? ಈಗಲೂ ಈ ಸಮಿತಿಯು ವರದಿ ಸಲ್ಲಿಸಿಲ್ಲವೆಂದರೆ ಅರ್ಥ ಏನು? ದಿನಾಂಕ 10-5-95ರಲ್ಲಿ ಸಮಿತಿಯನ್ನು ರಚಿಸಿದ್ದರು ಎಂದು ವಿವರಣೆ ಬಂದಿದೆ. ಇದು ಹೌದು ಎನ್ನುವುದಾದರೆ ಇಷ್ಟು ದೀರ್ಘಕಾಲ ಏಕೆ? ಸ್ಟಾಪ್‌ಗ್ಯಾಪ್ ಉಪನ್ಯಾಸಕರ ಬಗ್ಗೆ ಸರ್ಕಾರಕ್ಕೆ ಮಲತಾಯಿಯ ಧೋರಣೆ ಇದೆಯೇ? ಒಂದು ಕಣ್ಣಿಗೆ ಬೆಣ್ಣೆ ಇನ್ನೊಂದು ಕಣ್ಣಿಗೆ ಸುಣ್ಣ ಎನ್ನುವ ನ್ಯಾಯವನ್ನು ಸರ್ಕಾರ ಈ ಬಗ್ಗೆ ಅನುಸರಿಸುತ್ತಿದೆ ಏನೋ ಎಂದು ನನಗೆ ಅನುಮಾನ ಬರುತ್ತಿದೆ. ಸರ್ವೋಚ್ಚ ನ್ಯಾಯಾಲಯ ಸ್ಟಾಪ್‌ಗ್ಯಾಪ್ ಉಪನ್ಯಾಸಕರನ್ನು ಖಾಯಂಗೊಳಿಸಬೇಕೆಂದು ಹೇಳಿರುವಾಗ, ಅದಕ್ಕೆ ಯಾವುದೇ ರೀತಿಯ ಮೌಲ್ಯವನ್ನು ಕಲ್ಪಿಸದೆ, ಈ ರೀತಿ ಸಮಿತಿಯ ರಚನೆಯ ಮಾತನ್ನು ಹೇಳುತ್ತಾ ವಿಷಯವನ್ನು ಮುಂದೂಡುತ್ತಿರುವುದು ಸರ್ವೋಚ್ಚ ನ್ಯಾಯಾಲಯದ ನಿಂದನೆ ಆಗುವುದಿಲ್ಲವೇ? ಇದರಿಂದ ಎಲ್ಲಾದರೂ ಇನ್ನೊಂದು ವಾಸುದೇವನ್ ಪ್ರಕರಣ ಸೃಷ್ಟಿಯಾದಿತೇನೋ ಎನ್ನುವ ಭಯ ನನಗೆ ತೋರುತ್ತಿದೆ, ಸರ್ಕಾರಕ್ಕೆ ಅಂತಹ ಭಯವಿಲ್ಲವೇ? ಆದುದರಿಂದ ನನ್ನ ಪ್ರಾರ್ಥನೆ ಇಷ್ಟೆ ಇದೆ, ಆದಷ್ಟು ಶೀಘ್ರ ಇಂತಹ ಸಮಯದಲ್ಲಿ ಅಥವಾ ಇಷ್ಟು ಸಮಯದಲ್ಲಿ ಇವರನ್ನು ಖಾಯಂಗೊಳಿಸುವಂತಹ ಆಜ್ಞೆ ಹೊರಡಿಸುತ್ತೇನೆ ಎಂದು ಸರ್ಕಾರ ಹೇಳಿದರೆ, ಆ ಸಮಸ್ಯೆ ಪರಿಹಾರವಾಗುತ್ತದೆ. ಅರೆಕಾಲಿಕ ಉಪನ್ಯಾಸಕರು ಯಾರಿದ್ದಾರೆ, ಅವರಿಗೆ ಜೀವನದಲ್ಲಿ, ಉದ್ಯೋಗದಲ್ಲಿ ಏನು ಭದ್ರತೆ, ಭರವಸೆಯನ್ನು ನೀವು ಒದಗಿಸಿಕೊಟ್ಟಿದ್ದೀರಿ, ಅದನ್ನು ಇವರಿಗೆ ಕೊಟ್ಟ ಹಾಗೆ ಆಗುತ್ತದೆ, ಶಿಕ್ಷಣ ಕ್ಷೇತ್ರದ ಒಂದು ಹಂತದ ಗೊಂದಲ ನಿವಾರಣೆಯಾಗುತ್ತದೆ.

Mr. SPEAKER : No Answers, Next Question - Mallikarjuna Kharge.

10.30 ಎ.ಎಂ

ಶ್ರೀ ಕುಂಬ್ಳೆ ಸುಂದರ್‌ರಾವ್ : ಅಧ್ಯಕ್ಷರೇ ನನ್ನ ಉತ್ತರ.

ಅಧ್ಯಕ್ಷರು : ಪ್ರಶ್ನೋತ್ತರ ವೇಳೆಗೆ ಒಂದು ಗಂಟೆ ಇರುತ್ತದೆ. ಹದಿನೈದು ಪ್ರಶ್ನೆಗಳು ಇರುತ್ತವೆ. ಒಂದು ಪ್ರಶ್ನೆಗೆ ನಾಲ್ಕು ನಿಮಿಷ ಇರುತ್ತದೆ. ನೀವ ಜಾಸ್ತಿ ಸಮಯ ತೆಗೆದುಕೊಂಡರೆ ನಾನು ಸಭೆ ನಡೆಸುವುದಕ್ಕಾಗುವುದಿಲ್ಲ.

Sri Y. RAMAKRISHNA : Sir,.... I am not questioning the ruling.

Mr. SPEAKER : I am sorry. Chair is capable of asserting its right.

ಗುರುಮಿಟ್ಕಲ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು

2537 - ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಟ್ಕಲ್) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ನೀಡ ಬೇಕಾಗಿರುವ ಸವಲತ್ತುಗಳೇನು (ಪೀಠೋಪಕರಣ ಹಾಗೂ ಪಾಠೋಪಕರಣ) :

ಆ) ಗುರುಮಿಟ್ಕಲ್ ಸರ್ಕಾರಿ ಪ್ರಥಮ ದರ್ಜೆ ಕಲಾ ಮತ್ತು ವಿಜ್ಞಾನ ಕಾಲೇಜಿನಿಂದ ಈ ಸವಲತ್ತುಗಳನ್ನು ನೀಡಬೇಕೆಂಬುದಾಗಿ ಸರ್ಕಾರಕ್ಕೆ ಮನವಿ ಏನಾದರೂ ಬಂದಿದೆಯೇ?

ಇ) ಬಂದಿದ್ದರೆ ಸರ್ಕಾರ ಆ ಬಗ್ಗೆ ತೆಗೆದುಕೊಂಡ ಕ್ರಮಗಳೇನು?

ಈ) ಗುರುಮಿಟ್ಕಲ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಖಾಲಿ ಇರುವ ಬೋಧಕ, ಬೋಧಕೇತರ ಹುದ್ದೆಗಳೆಷ್ಟು? ಅವುಗಳನ್ನು ಭರ್ತಿ ಮಾಡುವಲ್ಲಿ ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) :

ಅ) ತರಗತಿ ಡೆಸ್ಕುಗಳು, ಕುರ್ಚಿಗಳು, ಟೇಬಲ್ಲುಗಳು ಪ್ರಯೋಗಾಲಯದ ಉಪಕರಣಗಳು, ಗ್ರಂಥಾಲಯದ ವ್ಯವಸ್ಥೆ ಇತ್ಯಾದಿ.

ಆ) ಬಂದಿದೆ.

ಇ) 1994-95ನೇ ಸಾಲಿನಲ್ಲಿ ಪೀಠೋಪಕರಣಗಳಾದ 05 - ಸ್ಟೀಲ್ ಅಲ್ಮೆರಾಗಳು, 05-ಸ್ಟೀಲ್ ಬುಕ್ ಕೇಸುಗಳು, 22 - ಕುರ್ಚಿಗಳು, ಹತ್ತು ಟೇಬಲ್‌ಗಳು ಇವುಗಳನ್ನು 1993-94ನೇ ಸಾಲಿನಲ್ಲಿ 50 ಡೆಸ್ಕ್‌ಗಳನ್ನು ಸರಬರಾಜು ಮಾಡಲಾಗಿದೆ.

ಅಲ್ಲದೇ 1994-95ನೇ ಸಾಲಿನಲ್ಲಿ ಪುಸ್ತಕದ ಬಾಬ್ತು ರೂ. 25,000 ವನ್ನು ಬಿಡುಗಡೆ ಮಾಡಲಾಗಿದೆ. ಕಾಲೇಜಿನಲ್ಲಿ ವಿಜ್ಞಾನ ವಿಭಾಗ ಇರುವುದಿಲ್ಲವಾದ್ದರಿಂದ ಪ್ರಯೋಗಾಲಯ ಅನುದಾನವನ್ನು ಒದಗಿಸಿಲ್ಲ.

ಈ) 1) ಬೋಧಕರ ಹುದ್ದೆ - 07

2) ಬೋಧಕೇತರ ಹುದ್ದೆ - 05

ಖಾಲಿ ಇರುವ ಬೋಧಕರ ಹುದ್ದೆಗಳನ್ನು ತುಂಬಲು ಲೋಕಸೇವಾ ಆಯೋಗದ ಮುಖಾಂತರ ಈಗಾಗಲೇ ಕ್ರಮ ತೆಗೆದುಕೊಳ್ಳಲಾಗಿದೆ.

ಆರ್ಥಿಕ ಮಿತವ್ಯಯದ ಆದೇಶವನ್ನು ಸಡಿಲಿಸಿದ ನಂತರ ಬೋಧಕೇತರ ಹುದ್ದೆಗಳನ್ನು ತುಂಬಲು ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ ಉತ್ತರವನ್ನು ಕೊಟ್ಟಿದ್ದಾರೆ. ಎ.ಬಿ.ಸಿಗೆ ಏನು ಹೇಳಿದ್ದೀರಿ ಎಂದರೆ ಸ್ಟೀಲ್ ಅಲಮೇರಾ ಕೊಟ್ಟಿದ್ದೇವೆ, ಫರ್ನಿಚರ್ ಕೊಟ್ಟಿದ್ದೇವೆ, ಅದು ಸರಿ. ಆದರೆ ಲೈಬ್ರರಿ ಇಲ್ಲ. ಎರಡನೆಯದು ನೀವು ಇಷ್ಟೆಲ್ಲಾ ಕೊಟ್ಟರೂ ಟೀಚರ್ಸ್ ಇಲ್ಲ. ಏಳು ಲೆಕ್ಚರರ್ಸ್ ಪೈಕಿ ಕೇವಲ ಒಬ್ಬರು ಪ್ರಿನ್ಸಿಪಾಲ್ ಬಿಟ್ಟರೆ ಉಳಿದವರು ಯಾರೂ ಕೂಡ ಅಲ್ಲಿ ಇಲ್ಲ. ತಾವು ಏನು ಹೇಳಿದ್ದೀರಿ ಎಂದರೆ ಕೆ.ಪಿ.ಎಸ್.ಸಿ. ರಿಕ್ರೂಟ್‌ಮೆಂಟ್ ಮಾಡಿದಮೇಲೆ ನಾವು ಕಳುಹಿಸಿಕೊಡುತ್ತೇವೆ ಎಂದು ಹೇಳುತ್ತಿದ್ದೀರಿ. ಅಂದರೆ ಅಲ್ಲಿಯವರೆಗೆ ಅಲ್ಲಿಯ ವಿದ್ಯಾರ್ಥಿಗಳು ಏನು ಮಾಡಬೇಕು. ಅವರು ದಿನೇ ದಿನೇ ಸ್ಟ್ರೈಕ್, ರಾಸ್ತಾ ರೋಕೋ ಬಸ್ ರೋಕೋ ಮಾಡುತ್ತಿದ್ದಾರೆ. ಟೆಲಿಗ್ರಾಂ ಮೇಲೆ ಟೆಲಿಗ್ರಾಮ್ ಕೊಡುತ್ತಿದ್ದಾರೆ. ಅವನ್ನು ನಾನು ನಿಮಗೂ ಕೂಡ ತೋರಿಸಿದೆ. ನಾವು ಎಷ್ಟು ಸಲ ಹೇಳುವುದು. Atleast some arrangement you should do.. ಇಲ್ಲದಿದ್ದರೆ ಆ ಹುಡುಗರು ಬೀದಿಗೆ ಬಂದು ಎಲ್ಲರಿಗೆ ಕಲ್ಲು ಹೊಡೆದುಕೊಂಡು ಅಡ್ಡಾಡುತ್ತಾರೆ. ಅಂಗಡಿಗಳನ್ನು ಕ್ಲೋಸ್ ಮಾಡುವುದು, ರೈಲುಗಳನ್ನು ನಿಲ್ಲಿಸುವುದು, ಬಸ್‌ಗಳನ್ನು ನಿಲ್ಲಿಸುವುದು ಮಾಡುತ್ತಾರೆ. ನಾಳೆ ಏನಾಗುತ್ತದೆ ಎಂದರೆ, ನಾವು ಎಷ್ಟೇ ಒಳ್ಳೆಯ ಕೆಲಸ ಮಾಡಿದರೂ ಕೂಡ ಇಂತಹ ಘಟನೆಗಳಿಂದ ಸರ್ಕಾರ ಇಮೇಜ್ ಹೋಗುತ್ತದೆ ಮತ್ತು ಆ ಭಾಗದಲ್ಲಿ

ಕೆಲಸ ಮಾಡತಕ್ಕಂಥ ಶಾಸಕರಿಗೆ ತೊಂದರೆಯಾಗುತ್ತದೆ. ಅವರು ಏನು ಹೇಳುತ್ತಾರೆಂದರೆ ನಿಮ್ಮ ಕೈಯಲ್ಲಿ ಟೀಚರ್ಸ್ ಕೊಡುವುದಕ್ಕೆ ಆಗಲಿಲ್ಲವೆಂದರೆ ಕಾಲೇಜ್ ಕ್ಲೋಸ್ ಮಾಡಿ ಎಂದು ಹೇಳುತ್ತಾರೆ..

ಶ್ರೀ ಡಿ. ಮಂಜುನಾಥ್ : ಮಾನ್ಯ ಅಧ್ಯಕ್ಷರೆ, ಈಗ ಎಲ್ಲಾ ಅರೇಂಜ್‌ಮೆಂಟ್ಸ್ ಮಾಡಿದ್ದೇವೆ. ಪಾರ್ಟ್ ಟೈಮ್ ಲೆಕ್ಚರರ್ಸ್ ಕೆಲಸ ಮಾಡುತ್ತಿದ್ದಾರೆ. ಲೈಬ್ರರಿಯ ವ್ಯವಸ್ಥೆ ಸಾಕಷ್ಟಿಲ್ಲವೆಂದು ಹೇಳಿದ್ದಾರೆ. ಆ ಲೈಬ್ರರಿಯ ವ್ಯವಸ್ಥೆಯನ್ನು ಕೂಡ ಮಾಡುತ್ತೇವೆ. ಲೆಕ್ಚರರ್ಸ್ ಬಗ್ಗೆ ಹೇಳಿದ್ದಾರೆ. ಎಲ್ಲಾ ಕಡೆ ಪರಿಸ್ಥಿತಿ ಇದೇ ರೀತಿ ಇದೆ. ಏಕೆಂದರೆ ರಿಕ್ರೂಟ್‌ಮೆಂಟ್ ಪ್ರತಿವರ್ಷ ಮಾಡಿಕೊಂಡು ಬಂದಿದ್ದರೆ ಈ ರೀತಿ ಆಗುತ್ತಿರಲಿಲ್ಲ. ಈಗ ಪಿ.ಎಸ್.ಸಿ. ಲಿಸ್ಟ್ ರೆಡಿಯಾಗಿದೆ. ನಾನು ಈಗಾಗಲೇ ಈ ಸದನದಲ್ಲಿ ಮತ್ತು ಆ ಸದನದಲ್ಲಿ ಹೇಳಿದ್ದೇನೆ. ಬಹುತೇಕ ಇನ್ನು ಕೆಲವಾರು ದಿವಸಗಳಲ್ಲಿ ನಾವು ಎಲ್ಲಾ ಕಡೆಗೆ ಗ್ರಾಮಾಂತರ ಪ್ರದೇಶದ ಕಾಲೇಜುಗಳಿಗೆ ಲೆಕ್ಚರರ್ಸ್ ಹಾಕುವುದಕ್ಕೆ ಪ್ರಯತ್ನ ಮಾಡುತ್ತೇವೆ. ಈಗಾಗಲೇ ಅಲ್ಲಿ ಪಾರ್ಟ್ ಲೆಕ್ಚರರ್ಸ್ ಕೆಲಸ ಮಾಡುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನನಗೆ ಸ್ಪಷ್ಟವಾಗಿ ಹೇಳಿ ಒಂದು ತಿಂಗಳಲ್ಲಿ ಅಥವಾ ಹದಿನೈದು ದಿವಸದಲ್ಲಿ, ಇಲ್ಲಾ ಅಂದರೆ ಇಷ್ಟು ದಿವಸದಲ್ಲಿ ಲೆಕ್ಚರರ್ಸ್ ಕಳಿಸುತ್ತೇವೆಂದು ಹೇಳಿ. ಇನ್ನು ಎರಡನೇಯದಾಗಿ ಪಾರ್ಟ್ ಟೈಮ್ ಆಗಿ ಲೆಕ್ಚರರ್ಸ್ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿದ್ದಾರೆ. ಆ ಪಾರ್ಟ್ ಟೈಮ್ ಲೆಕ್ಚರರ್ಸ್ ಯಾರ್‍ಯಾರು ಎನ್ನತಕ್ಕಂಥದ್ದನ್ನು ನನಗೆ ಹೇಳಿದರೆ ಸಮಾಧಾನವಾಗುತ್ತದೆ. ಹಾಗೂ ನಾನು ಅವರಿಗೆ ಹೇಳಬಹುದು. ನೋಡಪ್ಪಾ ನಿಮ್ಮಲ್ಲಿ ಐದು ಲೆಕ್ಚರರ್ಸ್ ಪಾರ್ಟ್ ಟೈಮ್ ಇದ್ದಾರೆ, ಹಿಸ್ಟ್ರಿಸೋ ಕನ್ನಡಾನೇ ಎಂದು ನಾನು ಅವರಿಗೆ ಹೇಳುತ್ತೇನೆ. ಆ ಐದು ಪಾರ್ಟ್ ಟೈಮ್ ಲೆಕ್ಚರರ್ಸ್ ಹೆಸರುಗಳು ಏನು ಮತ್ತು ಎಷ್ಟು ದಿವಸದಲ್ಲಿ ಕೆ.ಪಿ.ಎಸ್.ಸಿ.ಯಿಂದ ಲೆಕ್ಚರರ್ಸ್‌ನ್ನು ಅಪಾಯಿಂಟ್ ಮಾಡಿ ಅಲ್ಲಿಗೆ ಕಳುಹಿಸುತ್ತೀರಿ ?

ಶ್ರೀ ಡಿ. ಮಂಜುನಾಥ್ : ಪಾರ್ಟ್ ಟೈಮ್ ಲೆಕ್ಚರರ್ಸ್ ಎಷ್ಟು ಜನ ಕೆಲಸ ಮಾಡುತ್ತಿದ್ದಾರೆ ಎನ್ನುವುದರ ಮಾಹಿತಿ ನನ್ನ ಹತ್ತಿರ ಇಲ್ಲ. ಅದನ್ನು ತರಿಸಿ ನಾನು ಅವರಿಗೆ ಕಳುಹಿಸಿಕೊಡುತ್ತೇನೆ. ಆಮೇಲೆ ಪಿ.ಎಸ್.ಸಿ. ಬಗ್ಗೆ ಹೇಳಿದ್ದೇನೆ. ಈಗಾಗಲೇ ಲಿಸ್ಟ್ ರೆಡಿಯಾಗಿದೆ. ವೆರಿಫಿಕೇಷನ್ ಆಗಬೇಕೆಂದು ಅವರು ಕುಳಿತಿದ್ದಾರೆ. ಬಹುತೇಕ ಇನ್ನು ಕೆಲವಾರು ದಿವಸಗಳಲ್ಲಿ ಆ ಕೆಲಸ ಆಗಬಹುದು.

ಅಧ್ಯಕ್ಷರು : ನಾನು ಸರ್ಕಾರಕ್ಕೆ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಕೆಲವಾರು ದಿವಸದಲ್ಲಿ ಕಳುಹಿಸುತ್ತೇವೆ, ಲಿಸ್ಟ್ ರೆಡಿಯಾಗಿದೆ ಎಂದು ಹೇಳುತ್ತಾ ಹೋದರೆ ಹೇಗೆ?.... There is a specific objective as to why the hon.Member has sent the question. You should put your machinery into action. You must give a specific reply.

ಶ್ರೀ ಡಿ. ಮಂಜುನಾಥ : ಅದನ್ನು ಅರ್ಜೆಂಟಾಗಿ ಮಾಡುವುದಕ್ಕೆ ನಾನು ನಿನ್ನೆಯ ದಿವಸವೇ ಹೇಳಿದ್ದೇನೆ.

ಅಧ್ಯಕ್ಷರು : ನೀವು ಆ ರೀತಿ ಮಾಡುವುದಾದರೆ ಪ್ರಶ್ನೋತ್ತರ ವೇಳೆ ಏಕಿರಬೇಕು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ನಮಗೆ ಬೇಜಾರು ಏಕೆ ಆಗುತ್ತದೆ ಎಂದರೆ, ನಾವು ಇಲ್ಲಿ ನೇರವಾಗಿ ಪ್ರಶ್ನೆ ಹಾಕುವುದಿಲ್ಲ. ಏಕೆಂದರೆ

ಪ್ರಶ್ನೆ ನೇರವಾಗಿ ಹಾಕಿದರೆ ಸೇಮ್ ಉತ್ತರ ಬರುತ್ತದೆ. ನಾವು ಮೊದಲು ಪತ್ರ ಬರೆಯುತ್ತೇವೆ, ಡೈರೆಕ್ಟರ್‌ಗೆ ಕೇಳುತ್ತೇವೆ ಆ ಮೇಲೆ ಕಾರ್ಯದರ್ಶಿಯವರಿಗೆ ಕೇಳುತ್ತೇವೆ, ಆ ಮೇಲೆ ಮಂತ್ರಿಗಳಿಗೆ ಬರೆದಾದ ಮೇಲೆ ಕೊನೆಗೆ ಇಲ್ಲಿ ಬರುತ್ತದೆ. ಇಷ್ಟು ಎಫರ್ಟ್ಸ್ ಮಾಡಿದರೂ ಕೂಡ ಒಬ್ಬರು ಲೆಕ್ಚರರ್ಸ್ ಸಿಗುವುದಿಲ್ಲ ಎಂದರೆ ಹೇಗೆ. ನಮ್ಮಂಥವರ ಪರಿಸ್ಥಿತಿ ಹೀಗಾದರೆ ಇನ್ನು ಅನೇಕ ಶಾಸಕರು ಹೊಸದಾಗಿ ಬಂದಿದ್ದಾರೆ ಅವರ ಗತಿ ಏನು?

ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಕಾಡಾನೆಗಳ ಹಾವಳಿ

2448 - ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಗುಂಡ್ಲುಪೇಟೆ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗುಂಡ್ಲುಪೇಟೆ ತಾಲ್ಲೂಕಿನ ಅರಣ್ಯ ಪ್ರದೇಶದ ಅಂಚಿನಲ್ಲಿರುವ ಗ್ರಾಮಗಳೆಷ್ಟು?

ಆ) ಈ ಗ್ರಾಮಗಳ ರೈತರ ಜಮೀನಿಗೆ ಕಾಡಾನೆಗಳ ಹಾವಳಿಗಳಿಂದ ಬೆಳೆ ನಾಶವಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) 1994-95ನೇ ಸಾಲಿನಲ್ಲಿ ಕಾಡಾನೆಗಳಿಂದ ನಷ್ಟಕ್ಕೊಳಗಾದ ರೈತರಿಗೆ ನೀಡಲಾಗಿರುವ ಪರಿಹಾರಧನವೆಷ್ಟು?

ಈ) ತಾಲ್ಲೂಕಿನಲ್ಲಿರುವ ಅರಣ್ಯ ಪ್ರದೇಶದ ವಿಸ್ತೀರ್ಣವೆಷ್ಟು? ಇದರಲ್ಲಿ ಹುಲಿ ಯೋಜನೆಗೆ ಒಳಪಟ್ಟಿರುವ ಅರಣ್ಯ ಪ್ರದೇಶವೆಷ್ಟು?

ಉ) ಕಾಡಾನೆಗಳ ಹಾವಳಿಯನ್ನು ತಡೆಗಟ್ಟಲು ಕಂದಕವನ್ನು ನಿರ್ಮಿಸಲು ಸರ್ಕಾರದವರು ಉದ್ದೇಶಿಸಿದ್ದಾರೆಯೇ?

ಊ) ಹಾಗಿದ್ದಲ್ಲಿ, ಇಲ್ಲಿಯವರೆಗೆ ನಿರ್ಮಿಸಿರುವ ಕಂದಕದ ಉದ್ದವೆಷ್ಟು, ಮತ್ತು ನಿರ್ಮಿಸಬೇಕಾಗಿರುವ ಕಂದಕದ ಉದ್ದವೆಷ್ಟು?

ಶ್ರೀ ಹೆಚ್.ವೈ. ಮೇಟಿ (ಅರಣ್ಯ ಸಚಿವರು) :

ಅ) 121

ಆ) ಹೌದು

ಇ) ರೂ. 3,41,945.00 ಗಳನ್ನು ಕಾಡಾನೆಯಿಂದ ನಷ್ಟಕ್ಕೆ ಒಳಗಾದ ರೈತರಿಗೆ ಪರಿಹಾರಧನವಾಗಿ ನೀಡಲಾಗಿದೆ.

ಈ) ಒಟ್ಟು ಅರಣ್ಯದ ವಿಸ್ತೀರ್ಣ 901ಚ.ಕಿ.ಮೀ., ಹುಲಿಯೋಜನೆ ವ್ಯಾಪ್ತಿಗೊಳಪಡುವ ಒಟ್ಟು ವಿಸ್ತೀರ್ಣ 480 ಚ.ಕಿ.ಮೀ.

ಉ) ಹೌದು

ಊ) ಈವರೆವಿಗೆ ಹುಲಿಯೋಜನೆ ಪ್ರದೇಶದಲ್ಲಿ 15 ಕಿ.ಮೀ. ನಷ್ಟು ಆನೆ ತಡೆ ಕಂದಕಗಳನ್ನು ನಿರ್ಮಿಸಲಾಗಿದೆ. ಸುಮಾರು 210ಕಿ.ಮೀ. ಆನೆ ನಿರೋಧಕ ಕಂದಕಗಳನ್ನು ಹೊಸದಾಗಿ ನಿರ್ಮಿಸಬೇಕಾಗಿರುತ್ತದೆ.

ಪುತ್ತೂರು ತಾಲ್ಲೂಕಿನ ವಿವಿಧ ಭಾಗಗಳಲ್ಲಿ ಕಾಡಾನೆಗಳ ಹಾವಳಿ

2542 - ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ವಿವಿಧ ಭಾಗಗಳಲ್ಲಿ ಕಾಡಾನೆಗಳ ಹಾವಳಿಯಿಂದ ಕೃಷಿ ನಾಶವಾಗಿದ್ದು ಇದರಿಂದಾದ ನಷ್ಟವೆಷ್ಟು?

ಆ) ಈ ಬಗ್ಗೆ ರೈತರಿಗೆ ನೀಡಲಾಗುವ ಪರಿಹಾರದ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ, ಈ ತನಕ ಪಾವತಿಸಿದ ಪರಿಹಾರದ ಮೊತ್ತವೆಷ್ಟು?

ಇ) ಕಾಡಾನೆಗಳ ಹಾವಳಿಯನ್ನು ನಿಲ್ಲಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಹೆಚ್.ವೈ. ಮೇಟಿ (ಅರಣ್ಯ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನಲ್ಲಿ 1992-93ನೇ ಸಾಲಿನಲ್ಲಿ ಕಾಡಾನೆಗಳ ಹಾವಳಿಯಿಂದ ಕೃಷಿ ನಷ್ಟದ ಒಂದು ಪ್ರಕರಣ ದಾಖಲಾಗಿದ್ದು, ನಷ್ಟವಾದ ಕೃಷಿ ಮೌಲ್ಯ ರೂ. 10,000-00 ವೆಂದು ಅಂದಾಜಿಸಲಾಗಿದೆ. 1993-94 ರಿಂದ ಯಾವುದೇ ಪ್ರಕರಣವಿರುವುದಿಲ್ಲ.

ಆ) ಕಾಡಾನೆ ಹಾವಳಿಯಿಂದ ಬರುವ ಮನವಿಗಳನ್ನು ಕುರಿತು ವಲಯ ಅರಣ್ಯ ಅಧಿಕಾರಿಯವರು ತನಿಖೆ ನಡೆಸಿ ವರದಿ ನೀಡುವರು. ವರದಿ ಆಧಾರದ ಮೇಲೆ ಹಿರಿಯ ಅಧಿಕಾರಿಗಳು ಪರಿಹಾರ ಮಂಜೂರು ಮಾಡುತ್ತಾರೆ. ಮೇಲಿನ ಪ್ರಕರಣದಲ್ಲಿ ರೂ. 7,000-00 ಪರಿಹಾರ ನೀಡಲಾಗಿದೆ.

ಇ) ಪುತ್ತೂರಿನ ಸುತ್ತಮುತ್ತಲಿನ ಕಾಡಾನೆಗಳಿಂದ ಆನೆಗಳ ಹಾವಳಿ ಸೂಚನೆ ಸಿಕ್ಕಿದ ಕೂಡಲೇ ಅವುಗಳನ್ನು ಕಾಡಿಗೋಡಿಸಲು ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳಲಾಗುವುದು.

ಅಧ್ಯಕ್ಷರು : ಸದಾನಂದಗೌಡರದೂ ಕೂಡ ಇದೇ ಪ್ರಶ್ನೆ ಇದೆ. ತಾವು ದಯಮಾಡಿ ಉತ್ತರ ಕೊಡಿ.

ಶ್ರೀ ಡಿ.ವಿ. ಸದಾನಂದಗೌಡರು : ಉತ್ತರದಲ್ಲಿ 1993-94ನೇ ಇಸವಿಯಿಂದ ಯಾವುದೇ ಪ್ರಕರಣ ವರದಿಯಾಗಿಲ್ಲ ಎಂದು ಹೇಳಿದ್ದಾರೆ. ಇದು ನನಗೆ ತುಂಬಾ ಆಶ್ಚರ್ಯ ಕಾಣುತ್ತಿದೆ. ಏಕೆಂದರೆ ಶಿರ್ಲಾಡಿ ಹಾಗೂ ಸೆಲ್ಯಾಡಿ ಗ್ರಾಮದಲ್ಲಿ ಈ ವರ್ಷ ಆರು ಅಧಿಕೃತ ಪ್ರಕರಣಗಳು ದಾಖಲಾತಿಯಾಗಿದೆ. ನಾನು ಕೂಡ ಆ ಸ್ಥಳಗಳಿಗೆ ಭೇಟಿ ನೀಡಿ ಅಲ್ಲಿ ತೆಂಗು ಮತ್ತು ಕಂಗುಗಳಿಗಾದ ಹಾನಿಯನ್ನು ಪರಿಶೀಲಿಸಿದ್ದೇನೆ. ಇನ್ನೂ ಕೂಡ ಇದು ಸರ್ಕಾರದ ಗಮನಕ್ಕೆ ಬಂದಿಲ್ಲವೇ? ಒಂದು ವೇಳೆ ಬಂದಿದ್ದಲ್ಲಿ ಇನ್ನು ಮುಂದೆ ಅದನ್ನು ತಡೆಗಟ್ಟಲಿಕ್ಕೆ ಸರ್ಕಾರ ಏನು ಕ್ರಮಗಳನ್ನು ತೆಗೆದುಕೊಳ್ಳುತ್ತದೆ. ಕಂದಕಗಳನ್ನು ರಚನೆ ಮಾಡುವುದಕ್ಕೆ ಅಥವಾ ಬೇರೆ ಯಾವುದಾದರೂ ವ್ಯವಸ್ಥೆ ಮಾಡಲು ಸರ್ಕಾರ ತಯಾರಿದೆಯೇ? ಮೂರನೆಯದಾಗಿ ಪರಿಹಾರಧನವನ್ನು ಇನ್ನು ಮುಂದಾದರು ತಕ್ಷಣ ಒದಗಿಸಲಿಕ್ಕೆ ಏನಾದರೂ ಪ್ರಯತ್ನ ಮಾಡಲಾಗಿದೆಯೆ?

ಶ್ರೀ ಹೆಚ್.ವೈ. ಮೇಟಿ : ಈ ವರ್ಷ ಆನೆಯಿಂದ ತೊಂದರೆಯಾಗಿರುವುದು ಇದುವರೆಗೆ ನಮ್ಮ ನಜರಿಗೆ ಬಂದಿಲ್ಲ. ಆದರೆ ಅವರು ಹೇಳಿದ ಪ್ರಕಾರ ಕೂಲಂಕಷವಾಗಿ ಪರಿಶೀಲಿಸಿ ಪರಿಹಾರವನ್ನು ಕೊಡಲು ಪ್ರತ್ನಿಸುತ್ತೇನೆ. ಮತ್ತು ಈ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆನೆ ಕಂದಕ ನಿರ್ಮಿಸುವ ಯೋಜನೆ ನಮ್ಮ ಸರ್ಕಾರದಲ್ಲಿ ಇಲ್ಲ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಒದಗಿಸಿರುವಂಥ ಉತ್ತರದಲ್ಲಿ ನನ್ನ ಕ್ಷೇತ್ರದಲ್ಲಿ 210 ಕಿ.ಮೀ. ಅರಣ್ಯ ಅಂಚಿನ ಪ್ರದೇಶ ಇದೆ ಎಂದು ಹೇಳಿದ್ದಾರೆ. ಕೇವಲ 15 ಕಿ.ಮೀ. ಮಾತ್ರ ಕಂದಕವನ್ನು ನಿರ್ಮಿಸಲಾಗಿದೆ ಎಂದು ಹೇಳಿದ್ದರೆ. ಈಗಾಗಲೇ ನಮ್ಮ ಕ್ಷೇತ್ರದಲ್ಲಿ ಅರಣ್ಯ ಅಂಚಿನಲ್ಲಿ ಇರತಕ್ಕಂಥ 60-70 ಹಳ್ಳಿಗಳಲ್ಲಿ ಅಲ್ಪಸ್ವಲ್ಪ ಬೆಳೆಯಾಗಿದೆ. ಆ ಬೆಳೆಯಾಗಿರತಕ್ಕಂಥ ರಾಗಿ ಮುಂತಾದ ಬೆಳೆಗಳಿಗೆ ಆನೆಗಳ ಹಿಂಡು ಹಿಂಡೇ ಧಾಳಿ ಮಾಡಿ ಫಸಲನ್ನು ನಷ್ಟಮಾಡುತ್ತಿದೆ. ಅವರಿಗಾದ ನಷ್ಟಕ್ಕೆ ಕೊಡತಕ್ಕಂಥ ಪರಿಹಾರ ಬಹಳ ಅತ್ಯಲ್ಪವಾಗಿದೆ. ಆದುದರಿಂದ ರೈತರಿಗೆ ಆ ಪರಿಹಾರಧನಕ್ಕಿಂತ ಅವರಿಗೆ ಆ

ಕಂದಕಗಳ ನಿರ್ಮಾಣ ಹಾಗೂ ಅವುಗಳಿಂದ ಆನೆಗಳ ಹಾವಳಿಯನ್ನು ತಡೆಗಟ್ಟುವುದು ಅವಶ್ಯಕವಾಗಿದೆ ಎಂದು ಅವರ ಮೊದಲ ವೇದಿಕೆಯಾಗಿದೆ. ಈಗಾಗಲೇ ನನ್ನ ಕ್ಷೇತ್ರದಲ್ಲಿ ಒಂದು ಆನೆ ಒಂದು 21 ವರ್ಷಗಳ ಒಬ್ಬ ಹುಡುಗನನ್ನು.....

ಅಧ್ಯಕ್ಷರು : ನೀವು ಜಾಸ್ತಿ ಹೊತ್ತು ಮಾತನಾಡಿದರೆ ಮುಂದಿನ ಪ್ರಶ್ನೆಗೆ ಹೋಗುತ್ತೇನೆ. ಉಪ ಪ್ರಶ್ನೆಯನ್ನು ಕೇಳಿದರೆ ಮಾತ್ರ ಉತ್ತರ ಸಿಗುತ್ತದೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ತಾತ್ಕಾಲಿಕವಾಗಿ ಈ ಕ್ರಂಚ್‌ಗಳನ್ನು ಮಾಡುವವರೆಗೆ ಪಟಾಕಿಗಳನ್ನು ಸರಬರಾಜು ಮಾಡಿ, ವಾಚರ್‌ಗಳನ್ನು ನೇಮಕ ಮಾಡಿ ಈ ಆನೆಗಳನ್ನು ತಡೆಗಟ್ಟುವುದಕ್ಕೆ ಸರ್ಕಾರ ಏನಾದರೂ ಕ್ರಮ ಕೈಗೊಂಡಿದೆಯೇ ಎಂದು ಕೇಳುತ್ತೇನೆ.

ಶ್ರೀ ಹೆಚ್.ವೈ. ಮೇಟಿ : ಗುಂಡ್ಲುಪೇಟೆ ಕ್ಷೇತ್ರದಲ್ಲಿ 15 ಕಿ.ಮೀ. ಕಂದಕವನ್ನು ತೆಗೆದಿದ್ದೇವೆ. ಆದರೆ ನಾವು ಉತ್ತರದಲ್ಲಿ ಕೊಟ್ಟಿದ್ದೇವೆ ಇಡೀ ಬಂಡಿಪುರದಲ್ಲಿ 210 ಕಿ.ಮೀ. ಆನೆ ನಿರೋಧಕ ಕಂದಕಗಳನ್ನು ತೆಗೆಯುವಂಥ ಯೋಚನೆ ಇದೆ. ಆದರೆ ಬಂಡಿಪುರ ಕ್ಷೇತ್ರದಲ್ಲಿ ಕೇವಲ 60 ಕಿ.ಮೀ. ಮಾತ್ರ ಕಂದಕ ತೆಗೆಯುವುದು ಬಾಕಿ ಉಳಿದಿದೆ. ಈಗ 5 ಕಿ.ಮೀ. ತೆಗೆಸುವ ಸಲುವಾಗಿ ನಾವು ಯೋಜನೆಯನ್ನು ಹಾಕಿಕೊಂಡಿದ್ದೇವೆ. ಈಗ ಕೆಲಸವನ್ನು ಪ್ರಾರಂಭ ಮಾಡಿದ್ದೇವೆ. ಉಳಿದದ್ದನ್ನು ಕೇಂದ್ರ ಸರ್ಕಾರದಿಂದ ಆನೆ ಯೋಜನೆಯಿಂದ ಹಣ ಬಂದ ನಂತರ ಹಂತ ಹಂತವಾಗಿ ಕೆಲಸ ಮಾಡುತ್ತೇವೆ. ಮತ್ತು ಈಗಾಗಲೇ ಆನೆಗಳನ್ನು ಓಡಿಸುವ ಸಲುವಾಗಿ ನಾವು ಕೆಲವು ವಾಚರ್‌ಗಳನ್ನು ನೇಮಕ ಮಾಡುವುದಕ್ಕೋಸ್ಕರ ಗ್ರಾಮೀಣ ಜನರನ್ನು ಕಾಂಟ್ರ್ಯಾಕ್ಟ್ ಹಾಗೂ ದಿನಗೂಲಿ ಆಧಾರದ ಮೇಲೆ ತೆಗೆದುಕೊಂಡು ಅವರಿಗೆ ಪಟಾಕಿ ಹಾಗೂ ಮದ್ದು ಗುಂಡುಗಳನ್ನು ಕೊಟ್ಟು ಆನೆಗಳನ್ನು ಓಡಿಸುವ ವ್ಯವಸ್ಥೆ ಮಾಡುತ್ತಿದ್ದೇವೆ. ಇನ್ನು ಮುಂದೆಯೂ ಸಹ ಹೆಚ್ಚಿನ ರೀತಿಯಲ್ಲಿ ನಾವು ಮಾಡುತ್ತೇವೆ.

ಶ್ರೀ ಡಿ.ವಿ. ಸದಾನಂದಗೌಡ : ಪುತ್ತೂರು ತಾಲ್ಲೂಕಿನಲ್ಲಿಯೂ ಕೂಡ ಕಂದಕಗಳನ್ನು ತೋಡುವುದರ ಮೂಲಕ ಒಂದು ಪರಮನೆಂಟಾಗಿ ಯಾವುದೇ ರೀತಿಯ ಕಾಡು ಆನೆಗಳ ಬರದ ರೀತಿಯಲ್ಲಿ ಏನಾದಾರೂ ಪ್ರಯತ್ನ ಮಾಡಲಾಗಿದೆಯೇ? ಒಂದು ವೇಳೆ ಸರ್ಕಾರದ ಗಮನದಲ್ಲಿ ಇಲ್ಲದಿದ್ದರೆ ಆ ರೀತಿಯ ಯೋಜನೆಯನ್ನು ಸರ್ಕಾರದವರು ಹಮ್ಮಿಕೊಳ್ಳುವರೇ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ವೈ. ಮೇಟಿ : ಈ ಯೋಜನೆ ಹಮ್ಮಿಕೊಳ್ಳಲು ಪ್ರಯತ್ನ ಪಟ್ಟು ಕಾಡಾನೆಯಿಂದ ಹಾನಿಯಾಗದಂತೆ ನೋಡಿಕೊಳ್ಳುತ್ತೇವೆ.

ಅಧ್ಯಕ್ಷರು : ಅಮರೇಗೌಡ ಪಾಟೀಲ್‌ರವರೆ, ಸರ್ಕಾರದವರು ನಿಮ್ಮ ಪ್ರಶ್ನೆಗೆ ಉತ್ತರ ಒದಗಿಸುವುದಕ್ಕೆ ಒಂದು ವಾರ ಸಮಯ ಕೇಳಿದ್ದಾರೆ. ಉತ್ತರ ಬಂದ ಮೇಲೆ ಒದಗಿಸಿಕೊಡಲಾಗುವುದು.

ಸರ್ಕಾರಿ ಆರೋಗ್ಯ ಕೇಂದ್ರಗಳ ವಿವರ ಹಾಗೂ ಸಿಬ್ಬಂದಿ ಮತ್ತು ಔಷಧಿಗಳ ವಿವರ ಕುರಿತು

2635 - ಶ್ರೀ ಸಿ.ಎಂ. ಉದಾಸಿ (ಹಾನಗಲ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾನಗಲ್ ತಾಲ್ಲೂಕಿನಲ್ಲಿ ಮಂಜೂರಾದ ಸರ್ಕಾರಿ ಆರೋಗ್ಯ ಕೇಂದ್ರಗಳ ಸಂಖ್ಯೆ ಎಷ್ಟು?

ಆ) ಈ ಕೇಂದ್ರಗಳಲ್ಲಿ, ಮಂಜೂರಾದ ಹುದ್ದೆಗಳ ಸಂಖ್ಯೆಗಳು ಎಷ್ಟು? ಹಾಗೂ ಈ ಕೇಂದ್ರಗಳಲ್ಲಿ ಮಂಜೂರಾದ ಎಲ್ಲಾ ಹುದ್ದೆಗಳು ತುಂಬಲಾಗಿದೆಯೇ?

ಇ) ಈ ಕೇಂದ್ರಗಳಲ್ಲಿ ಔಷಧಿಗಳಿಗಾಗಿ ನಿಗಧಿ ಪಡಿಸಿದ ಹಣಕಾಸಿನ ಮೌಲ್ಯವೆಷ್ಟು? ಹಾಗೂ ನಿಗಧಿಪಡಿಸಿದ ಮೌಲ್ಯದಷ್ಟು ಹಣವನ್ನು ಔಷಧಿಗಳಿಗಾಗಿ ಬಿಡುಗಡೆ ಮಾಡಲಾಗಿದೆಯೇ?

ಡಾ॥ ಎಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವರು) :

ಅ)	ಪ್ರಾಥಮಿಕ ಆರೋಗ್ಯ ಕೇಂದ್ರಗಳು	8
ಆ)	ಮಂಜೂರಾದ ಹುದ್ದೆಗಳು	126
	ತುಂಬಲಾದ ಹುದ್ದೆಗಳ ಸಂಖ್ಯೆ	112
	ಖಾಲಿ ಇರುವ ಹುದ್ದೆಗಳು	14

ಇ) 1994-95ನೇ ಸಾಲಿನಲ್ಲಿ ಸರ್ಕಾರಿ ಔಷಧಿ ಮಳಿಗೆಯಿಂದ, ಈ ಕೇಂದ್ರಗಳಿಗೆ, ಔಷಧಿ ಸರಬರಾಜು ಮಾಡಾಲು ನಿಗಧಿಪಡಿಸಿದ ಅನುದಾನ ರೂ. 2,40,000-00. ಈ ಹಣವನ್ನು ಪೂರ್ತಿಯಾಗಿ ಬಿಡುಗಡೆ ಮಾಡಲಾಗಿದೆ.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಅಧ್ಯಕ್ಷರೇ, ಹಾನಗಲ್ ತಾಲ್ಲೂಕಿನಲ್ಲಿ ಖಾಲಿ ಇರುವ ಸ್ಥಳಗಳು ಕೇವಲ 8 ಎಂದು ಘೋಷಣೆಯಾಗಿ ಇವರಲ್ಲಿ 14 ಎಂದು ಕೊಟ್ಟಿದ್ದಾರೆ. ಆದರೆ ಈ 14ರಲ್ಲಿ 6 ವೈದ್ಯಾಧಿಕಾರಿಗಳ ಸ್ಥಳ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎನ್ನುವುದನ್ನು ನಾನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಹಾಗೂ 8 ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ 2.5 ಲಕ್ಷ ಜನಸಂಖ್ಯೆ ಇರುವಂಥ ಒಂದು ತಾಲ್ಲೂಕಿಗೆ ತಲಾವಾರು ಒಬ್ಬ ಮನುಷ್ಯನಿಗೆ ಒಂದು ರೂಪಾಯಿ ಒಂದು ವರ್ಷಕ್ಕೆ ಔಷಧವನ್ನು ಸರಬರಾಜು ಮಾಡುವುದಕ್ಕೆ ಆಗದಂಥ ಒಂದು ಪರಿಸ್ಥಿತಿ ಆಗುತ್ತದೆ. ಆದ ಪ್ರಯುಕ್ತ ಇದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಂಡು ಜನಸಂಖ್ಯೆ ಎಲ್ಲಿ ಹೆಚ್ಚಿದೆಯೋ ಅದನ್ನು ಗಮನದಲ್ಲಿಟ್ಟುಕೊಂಡು ಪ್ರತಿಯೊಂದು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಒಂದು ಲಕ್ಷಕ್ಕಿಂತ ಹೆಚ್ಚು ಔಷಧಿಗಳನ್ನು ಸರಬರಾಜು ಮಾಡುವ ಯೋಜನೆ ಸರ್ಕಾರದ ಗಮನದಲ್ಲಿಯೇ ಎಂದು ಕೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ (ಆರೋಗ್ಯ ಸಚಿವರ ಪರವಾಗಿ) : ಮಾನ್ಯ ಸಭಾಧ್ಯಕ್ಷರೇ, ಖಾಲಿ ಇರತಕ್ಕಂಥ ಹುದ್ದೆಗಳನ್ನು ತುಂಬಲಿಕ್ಕೆ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ಈಗ ಆರ್ಥಿಕ ನಿರ್ಬಂಧವನ್ನು ಸಡಿಲ ಮಾಡಿದ್ದಾರೆ. ಈ ವರ್ಷ ಇದರ ಬಗ್ಗೆ ಕ್ರಮವನ್ನು ಕೈಗೊಳ್ಳುತ್ತಿದ್ದೇವೆ. ಮಾನ್ಯ ಸದಸ್ಯರು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಕೊಡಬೇಕಾಗಿರತಕ್ಕಂಥ ಹೆಚ್ಚಿಗೆ ಹಣದ ಬಗ್ಗೆ ಕೇಳಿದ್ದಾರೆ. ಈಗ ಪ್ರತಿಯೊಂದು ಆರೋಗ್ಯ ಕೇಂದ್ರಗಳಿಗೆ 15 ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಆದರೆ ನೀವು ಕೇಳುತ್ತಿರುವುದು ಪ್ರತಿಯೊಂದು ಆರೋಗ್ಯ ಕೇಂದ್ರಗಳಿಗೆ ಒಂದು ಲಕ್ಷ ರೂಪಾಯಿಗಳು. ಇಷ್ಟು ಹಣವನ್ನು ಕೊಡುವುದಕ್ಕೆ ಸರ್ಕಾರಕ್ಕೆ ಖಂಡಿತ ಸಾಧ್ಯವಿಲ್ಲ. ಏಕೆಂದರೆ ಸಂಪನ್ಮೂಲಗಳ ಕೊರತೆ ಇದೆ. ಆದರೂ ಕೂಡ ಸ್ವಲ್ಪ ಮಟ್ಟಿಗೆ ಹೆಚ್ಚಿಸಲಿಕ್ಕೆ ಸರ್ಕಾರ ಇದರ ಬಗ್ಗೆ ಪರಿಶೀಲನೆಯನ್ನು ಮಾಡುತ್ತದೆಯೆಂದು ಹೇಳುತ್ತೇನೆ.

ಸಾಮಾಜಿಕ ಅರಣ್ಯ ಯೋಜನೆ

2316 - ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಉತ್ತರ ಕನ್ನಡ ಜಿಲ್ಲೆಗೆ ಸಾಮಾಜಿಕ ಅರಣ್ಯ ಯೋಜನೆಗೆ ಇಲ್ಲಿಯವರೆಗೆ ನೀಡಿದ ಹಣವೆಷ್ಟು? (ವರ್ಷವಾರು ವಿವರ ನೀಡುವುದು)

ಆ) ಇಲ್ಲಿಯವರೆಗೆ ಖರ್ಚಾದ ಹಣವೆಷ್ಟು?

ಇ) ಇಲ್ಲಿಯವರೆಗೆ ಆದ ಯೋಜನೆ : ಯೋಜನೇತರ ವೆಚ್ಚ ಎಷ್ಟು?

ಈ) ಇಲ್ಲಿಯವರೆಗೆ ಆದ ಯೋಜನೇತರ ವೆಚ್ಚ ಯಾವು ಯಾವುದು?

ಉ) 1995-96ನೇ ಸಾಲಿಗೆ ಬಿಡುಗಡೆಯಾದ ಹಣವೆಷ್ಟು?

ಊ) ಉತ್ತರ ಕನ್ನಡ ಜಿಲ್ಲೆಯಲ್ಲಿ ಕ್ಷೇತ್ರವಾರು ಖರ್ಚು ಮಾಡಿದ ಹಣವೆಷ್ಟು ಹಾಗೂ ಯಾವ ಯಾವ ಬಾಬ್ತಿಗಾಗಿ?

ಶ್ರೀ ಹೆಚ್.ವೈ. ಮೇಟಿ (ಅರಣ್ಯ ಸಚಿವರು) :

ಅ) ಉತ್ತರ ಕನ್ನಡ ಜಿಲ್ಲೆಗೆ ಸಾಮಾಜಿಕ ಅರಣ್ಯ ಯೋಜನೆಗೆ ನೀಡಿದ ಹಣದ ವಿವರ ಈ ಕೆಳಕಂಡಂತಿದೆ.

ವರ್ಷ	ರೂ. ಲಕ್ಷಗಳಲ್ಲಿ ವಾರ್ಷಿಕ ಅನುದಾನ
1992-93	42.50
1993-94	35.24
1994-95	34.371
1995-96	30.000

ಆ) ಸಾಮಾಜಿಕ ಅರಣ್ಯ ಯೋಜನೆ ಅಡಿಯಲ್ಲಿ ವರ್ಷವಾರು ಖರ್ಚು ಮಾಡಿದ ಹಣದ ವಿವರ ಈ ಕೆಳಗಿನಂತಿದೆ.

ವರ್ಷ	(ರೂ. ಲಕ್ಷಗಳಲ್ಲಿ)
1992-93	46.306
1993-94	31.472
1994-95	31.571
1995-96	6.380

ಜುಲೈ 95ರವರೆಗೆ)

ಇ) ಉತ್ತರ ಕನ್ನಡ ಜಿಲ್ಲೆಯಲ್ಲಿ ಯೋಜನೆ ಮತ್ತು ಯೋಜನೇತರ ವೆಚ್ಚದ ವಿವರಗಳು ಈ ಕೆಳಕಂಡಂತಿವೆ.

ವರ್ಷ	ಯೋಜನೆ	ಯೋಜನೆಗಳು
1992-93	83.715	1737.70 ಲಕ್ಷ
1993-94	978.364	1825.54 ಲಕ್ಷ
1994-95	1140.645	1809.57 ಲಕ್ಷ

ಈ) ಯೋಜನೇತರ ಶೀರ್ಷಿಕೆ ಅಡಿಯಲ್ಲಿ ನೀಡಿದ ಅನುದಾನವನ್ನು ಮುಖ್ಯವಾಗಿ ಸತ್ತ ಮತ್ತು ಬಿದ್ದ ಗಿಡಗಳಿಂದ ದಿಮ್ಮಿ ಹಾಗೂ ಸೌದೆಗಳನ್ನು ತಯಾರಿಸಿ ಅವುಗಳನ್ನು

ಸರ್ಕಾರಿ ಡಿಪೋವಿಗೆ ಹಾಗೂ ಜಲಾವು ಡಿಪೋವಿಗೆ ಮಾರಾಟದ ಸಲುವಾಗಿ ಸಾಗಿಸಲು ಖರ್ಚು ಮಾಡಲಾಗಿದೆ. ಅಲ್ಲದೆ, ಬೊಂಬು, ಬೆತ್ತ ಮುಂತಾದ ಅರಣ್ಯ ಸಂಪತ್ತನ್ನು ಕಡಿದು ಸಾಗಿಸಲು ಹಾಗೂ ಸರ್ಕಾರಿ ವಾಹನಗಳಿಗೆ ಅವಶ್ಯವಿರುವ ಇಂಧನ ಪೂರೈಕೆ, ದುರಸ್ತಿ, ಅರಣ್ಯ ಕಟ್ಟಡಗಳ ಸುಸ್ಥಿತಿಗಾಗಿ ಹಾಗೂ ಇಲಾಖಾ ಇತರ ಕೆಲಸಗಳಿಗಾಗಿ ಖರ್ಚು ಮಾಡಲಾಗಿದೆ. ಇದು ಅಲ್ಲದೆ ಸಿಬ್ಬಂದಿ ವೇತನ ಮತ್ತು ಭತ್ಯೆಗಳನ್ನು ಭರಿಸಲಾಗುತ್ತಿದೆ.

ಉ) 1995-96ನೇ ಸಾಲಿಗೆ ಯೋಜನೆ : ಯೋಜನೇತರ ಶೀರ್ಷಿಕೆ ಅಡಿಯಲ್ಲಿ ನಿಗದಿ ಪಡಿಸಿದ ಅನುದಾನ, ಬಿಡುಗಡೆಯಾದ ಹಣದ ವಿವರಗಳು ಈ ಕೆಳಕಂಡಂತಿದೆ.

(ರೂ. ಲಕ್ಷಗಳಲ್ಲಿ)

ವಾರ್ಷಿಕ ಅನುದಾನ		ಬಿಡುಗಡೆ ಆದ ಹಣ (ಸೆಪ್ಟೆಂಬರ್ 95 ರವರೆಗೆ)
ಯೋಜನೆ	1241.42	614.490
ಯೋಜನೇತರ	1623.35	811.675

ಊ) ಉತ್ತರ ಕನ್ನಡ ಜಿಲ್ಲೆಯ ಅರಣ್ಯ ವಿಭಾಗಗಳಲ್ಲಿ 1995-96ನೇ ಸಾಲಿನ ಜುಲೈ ಅಂತ್ಯದವರೆಗೆ ಯೋಜನೆ ಹಾಗೂ ಯೋಜನೇತರ ಶೀರ್ಷಿಕೆಯಡಿಯಲ್ಲಿ ಖರ್ಚು ಮಾಡಿದ ಹಣದ ವಿವರವು ಈ ಕೆಳಕಂಡಂತಿವೆ.

	ವಿಭಾಗದ ಹೆಸರು	ಖರ್ಚು ಮಾಡಿದ ಹಣ ಯೋಜನೆ	(ರೂ. ಲಕ್ಷಗಳಲ್ಲಿ) ಯೋಜನೇತರ
1)	ಹಳಿಯಾಳ	21.34	68.20
2)	ಯಲ್ಲಾಪುರ	17.32	101.96
3)	ಕಾರವಾರ	14.43	98.67
4)	ಹೊನ್ನಾವರ	18.52	55.51
5)	ಸಿರ್ಸಿ	23.52	58.85
6)	ತಟ್ಟಿಹಳ್ಳ ಅರಣ್ಯ ತರಬೇತಿ ವಿಭಾಗ	1.02	0.53
7)	ಸಾಮಾಜಿಕ ಅರಣ್ಯ ವಿಭಾಗ ಕಾರವಾರ	0.574	-
	ಒಟ್ಟು	102.724	383.720

ಯೋಜನೆ ಮತ್ತು ಯೋಜನೇತರ ಶೀರ್ಷಿಕೆಯಡಿಯಲ್ಲಿ ಖರ್ಚು ಮಾಡಿದ ಹಣವು ಹಳೇ ನೆಡುತೋಪುಗಳ ನಿರ್ವಹಣೆ, ಸಸಿಗಳ ನಿರ್ವಹಣೆ, ಹೊಸ ನೆಡುತೋಪು ನಿರ್ಮಾಣ, ವಾಹನ ನಿರ್ವಹಣೆ, ಸಿಬ್ಬಂದಿ ವೇತನ ಮತ್ತು ಭತ್ಯ ಇತ್ಯಾದಿ ಬಾಬ್ತುಗಳನ್ನು ಒಳಗೊಂಡಿದೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಮಾನ್ಯ ಅಧ್ಯಕ್ಷರೇ, ಸಾಮಾಜಿಕ ಅರಣ್ಯ ಯೋಜನೆಯಲ್ಲಿ ಈ ವರ್ಷ ಒಟ್ಟು 30 ಲಕ್ಷ ರೂಪಾಯಿಗಳನ್ನು ಅನುದಾನವನ್ನಾಗಿ ಬಿಡುಗಡೆ ಮಾಡಲಾಗಿದೆ. ಆದರೆ ಇದುವರೆಗೂ ಖರ್ಚಾಗಿರುವಂಥ ಹಣ ಕೇವಲ 6 ಲಕ್ಷ ರೂಪಾಯಿಗಳು. ಅಂದರೆ ಜೂನ್, ಜುಲೈ, ಆಗಸ್ಟ್‌ನಲ್ಲಿ ಹೊಂಡ ತೆಗೆಯುವುದು, ಸಸಿ ನೆಡುವುದು ಈ ರೀತಿಯ ಎಲ್ಲಾ ಕಾರ್ಯಕ್ರಮಗಳು ಆಗಬೇಕಾಗಿತ್ತು. ಆದರೆ ಕೇವಲ 6 ಲಕ್ಷ ರೂಪಾಯಿಗಳು ಮಾತ್ರ ಖರ್ಚು ಆಗಿರುವುದನ್ನು ನೋಡಿದರೆ ಸಾಮಾಜಿಕ ಅರಣ್ಯ ಯೋಜನೆಯಲ್ಲಿ ಸಸಿ ನೆಡಿಸುವುದಕ್ಕಿಂತ ಹೆಚ್ಚಾಗಿ ಬೇರೆ ಬೇರೆ ಕೆಲಸ ಕಾರ್ಯಗಳಿಗೆ ಹೆಚ್ಚು ಹಣ ಖರ್ಚಾಗುತ್ತಿದೆಯೇನೋ ಎನ್ನುವ ಅನುಮಾನ ಇದೆ. ಇದಕ್ಕೆ ಸೂಕ್ತವಾದ ಒಂದು ಸ್ಪಷ್ಟೀಕರಣ ಬೇಕು. ಇದರೊಳಗೆ ಮತ್ತೆ ಸಾಮಾಜಿಕ ಅರಣ್ಯ ಯೋಜನೆಯನ್ನು ಬೆಳೆಸುವುದಕ್ಕೆ ಗ್ರಾಮ ಸಮಿತಿಗಳನ್ನು ಮಾಡಿದ್ದೀರಲ್ಲ, ಆ ಗ್ರಾಮ ಸಮಿತಿಗಳಿಗೆ ಈ ಲೆಕ್ಕಪತ್ರವನ್ನು ಕೊಡುವುದಕ್ಕೆ ನೀವು ಮುಂದಾಗುತ್ತೀರಾ ಎನ್ನುವಂಥ ಮಾಹಿತಿಯನ್ನು ನಮಗೆ ಕೊಡಬೇಕು.

ಶ್ರೀ ಹೆಚ್.ವೈ. ಮೇಟಿ : ಮಾನ್ಯ ಅಧ್ಯಕ್ಷರೇ, ಸಾಮಾಜಿಕ ಅರಣ್ಯ ಯೋಜನೆಯಲ್ಲಿ ಈಗಾಗಲೇ ಉಳಿದಿರುವ ಹಣವನ್ನು ಮುಂದಿನ ದಿನಗಳಲ್ಲಿ ಖರ್ಚು ಮಾಡಲಾಗದು. ಈ ಸಾಮಾಜಿಕ ಅರಣ್ಯ ಯೋಜನೆಯಲ್ಲಿ ನೌಕರರ ಪಗಾರಕ್ಕೆ ಮತ್ತು ಇತರೇ ವ್ಯವಸ್ಥೆಗಳಿಗೆ ಹೆಚ್ಚು ಖರ್ಚಾಗುತ್ತಿದೆ. ಇನ್ನು ಇವರನ್ನು ವಿವಿಧ ಯೋಜನೆಗಳಲ್ಲಿ ನಮ್ಮ ಪಶ್ಚಿಮ ಘಟ್ಟ ಯೋಜನೆಗೆ ಮತ್ತು ಜವಾರರ್ ಯೋಜನೆಯಲ್ಲಿ ಬಳಸಿಕೊಂಡು ಯೋಜನೆಯ ಕಾರ್ಯವನ್ನು ಮಾಡುತ್ತಿದ್ದೇವೆ. ಇದರ ಲೆಕ್ಕವನ್ನು ಅರಣ್ಯ ಸಮಿತಿಗೆ ನಾವು ತಿಳಿಸುವ ಸಲುವಾಗಿ ಮುಂದಿನ ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಮಾನ್ಯ ಅಧ್ಯಕ್ಷರೇ, ಸಾಮಾಜಿಕ ಅರಣ್ಯ ಯೋಜನೆಯೊಳಗೆ ಗ್ರಾಮ ಸಮಿತಿಯನ್ನು ಇನ್‌ವಾಲ್ವ್ ಮಾಡಿಸಿ ಅರಣ್ಯಗಳನ್ನು ಬೆಳೆಸಬೇಕಾಗಿತ್ತೋ ಅದರ ಬದಲಿಗೆ ಸಾಮಾಜಿಕ ಅರಣ್ಯ ಯೋಜನೆಯಲ್ಲಿ ಬಂದಂಥ ಹಣವನ್ನು ಯೋಜನೇತರ ವೆಚ್ಚಕ್ಕಾಗಿ ಬಳಸುತ್ತಿದ್ದಾರೆ. ಆದ್ದರಿಂದ ಈ ಬಗ್ಗೆ ಇವೊತ್ತೇ ಒಂದು ಆದೇಶವನ್ನು ಹೊರಡಿಸಿ ಸಾಮಾಜಿಕ ಅರಣ್ಯ ಯೋಜನೆಯಲ್ಲಿ ಗ್ರಾಮ ಸಮಿತಿಯನ್ನು ಸೇರಿಸಿಕೊಂಡು ಅರಣ್ಯ ಅಭಿವೃದ್ಧಿ ಪಡಿಸಬೇಕು ಮತ್ತು ಈ ಹಣವನ್ನು ಇದಕ್ಕಾಗಿಯೇ ಖರ್ಚು ಮಾಡಬೇಕೆಂದು ಒಂದು ಸ್ಪಷ್ಟ ಆದೇಶವನ್ನು ಹೊರಡಿಸುತ್ತೀರೋ?

ಶ್ರೀ ಹೆಚ್.ವೈ. ಮೇಟಿ : ಸಾಮಾಜಿಕ ಅರಣ್ಯ ಯೋಜನೆಯಲ್ಲಿ ಪಶ್ಚಿಮ ಘಟ್ಟ ಯೋಜನೆಯಲ್ಲಿ ಈಗಾಗಲೇ ಗ್ರಾಮ ಅರಣ್ಯ ಸಮಿತಿಯನ್ನು ರಚಿಸಲಾಗಿದೆ. ಇದರಲ್ಲಿ ಎಲ್ಲಾ ಕಾರ್ಯಕ್ರಮಗಳನ್ನು ಅಳವಡಿಸಿ ಮುಂದಿನ ಕ್ರಮವನ್ನು ಹಾಕಿಕೊಳ್ಳುತ್ತೇವೆ.

ಡಾ|| ಯು. ಚಿತ್ತರಂಜನ್ : ಮಾನ್ಯ ಅಧ್ಯಕ್ಷರೇ, ಇದಕ್ಕೆ ಪೂರಕವಾಗಿ ನಮಗೆ ಸಿಕ್ಕಿದ ಮಾಹಿತಿಯ ಪ್ರಕಾರ ಗ್ರಾಮ ಅರಣ್ಯ ಸಮಿತಿಯನ್ನು ನಿಮ್ಮ ಇಲಾಖೆಗೆ ತೀರ ಕಡೆಗಣಿಸಿದೆ. ಅದು ಹೇಗೆಂದರೆ, ಯಾವ ಯಾವ ಸಸಿಗಳನ್ನು ಬೆಳೆಸಬೇಕು ಎಂದು ಗ್ರಾಮ ಅರಣ್ಯ ಸಮಿತಿ ಶಿಫಾರಸ್ಸನ್ನು ಮಾಡಿದರೆ ಅಧಿಕಾರಿಗಳು ಅದರ ಬಗ್ಗೆ ಲಕ್ಷ್ಯವನ್ನೇ ಕೊಡುತ್ತಿಲ್ಲ. ದಯವಿಟ್ಟು ಮಾನ್ಯ ಸಚಿವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ, ಗ್ರಾಮ ಅರಣ್ಯ ಸಮಿತಿಯನ್ನು ರಚನೆ ಮಾಡಿದ ಮೇಲೆ ಅಧಿಕಾರಿಗಳು ಅದರೊಟ್ಟಿಗೆ ಸಮಾಲೋಚನೆ ಮಾಡುವ ಬಗ್ಗೆ ತಾವು ನಿರ್ದಿಷ್ಟವಾದ ಆದೇಶವನ್ನು ಕೊಡುತ್ತೀರೋ?

ಶ್ರೀ ಹೆಚ್.ವೈ. ಮೇಟಿ : ಮಾನ್ಯ ಅಧ್ಯಕ್ಷರೇ, ಗ್ರಾಮ ಅರಣ್ಯ ಸಮಿತಿಯವರು ಏನು ಕಾರ್ಯಕ್ರಮಗಳನ್ನು ಹಾಕುತ್ತಾರೆ ಅದನ್ನು ಅನುಷ್ಠಾನಗೊಳಿಸಲು ನಾನು ಅಧಿಕಾರಿಗಳಿಗೆ ಸ್ಪಷ್ಟವಾದ ಸೂಚನೆಯನ್ನು ಕೊಡುತ್ತೇನೆ.

ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ

2325 - ಡಾ|| ಎಂ.ಪಿ. ಕರ್ಕಿ (ಕುಮಟಾ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿಯಲ್ಲಿ ಸೇರಿಸಲ್ಪಟ್ಟ ಎಲ್ಲಾ ವಿಧಾನ ಸಭಾ ಕ್ಷೇತ್ರಗಳು ತಾಲ್ಲೂಕುಗಳು ಮಲೆನಾಡಿನಲ್ಲಿವೆಯೇ?

ಆ) ಮಲೆನಾಡಿನಲ್ಲಿ ಇರುವ ಪ್ರದೇಶಗಳ ತಾಲ್ಲೂಕುಗಳಿಗೆ ಈಗಿನ ನಿರ್ಣಯದಂತೆ ಕ್ಷೇತ್ರವಾರು ಅನುದಾನ ನೀಡಿದರೆ ಅನ್ಯಾಯವಾಗುವುದಿಲ್ಲವೇ?

ಇ) ಹಾಗಿದ್ದಲ್ಲಿ, ಇದನ್ನು ಸರಿಪಡಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಹೆಚ್.ಜಿ. ಗೋವಿಂದಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಹಾಗೂ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಸಚಿವರು) :

ಅ) ಇದೆ

ಆ) ಇಲ್ಲಾ

ಇ) ಉದ್ಭವಿಸುವುದಿಲ್ಲಾ

ಡಾ|| ಎಂ.ಪಿ. ಕರ್ಕಿ : ಮಾನ್ಯ ಅಧ್ಯಕ್ಷರೇ, 'ಮಲೆ' ಎಂದರೆ ಅರಣ್ಯ ಅಥವಾ ಗುಡ್ಡಗಾಡು ಮಲೆನಾಡು ಅಭಿವೃದ್ಧಿ ಮಂಡಳಿಯಲ್ಲಿ ಸಿಟಿ ಕಾರ್ಪೊರೇಶನ್‌ಗಳು, ಬಯಲು ಸೀಮೆಯ ಪ್ರದೇಶಗಳು ಮತ್ತು ಸಮುದ್ರ ಕಿನಾರಗಳು ಸೇರಿವೆ. ಅಂದರೆ ಇವುಗಳು ಪರ್ವತ ಪ್ರದೇಶಗಳಿಗೆ ಸೇರಿದೆ ಎಂದು ತಾವು ಜಸ್ಟಿಫೈಯನ್ನು ಮಾಡಿಕೊಡುತ್ತೀರ? ಇದು ಮೊದಲನೆಯ ಪ್ರಶ್ನೆ. ಎರಡನೆಯದಾಗಿ ಈ ರೀತಿ ರಾಜಕೀಯ ಪ್ರೇರಿತವಾದ ನಿರ್ಣಯ ಪ್ರಕಾರ ಪ್ರದೇಶಗಳು ಸೇರುತ್ತಿರುವುದರಿಂದ ನಿಜವಾದ ಮಲೆನಾಡಿನ ಜನರಿಗೆ ಹಾನಿಯಾಗಿದೆಯೇ ಎಂದು ಕೇಳಿದರೆ ಇವರು ಇಲ್ಲ ಎಂದು ಹೇಳುತ್ತಾರೆ. ಈಗ ಕಾರ್ಪೊರೇಷನ್‌ಗಳು, ಸಮುದ್ರ ಹತ್ತಿರದಲ್ಲಿರತಕ್ಕಂಥ ಬಯಲು ಸೀಮೆಗಳು ಇವೂ ಕೂಡ ಮಲೆನಾಡು ಹೇಗಾಗುತ್ತದೆ? ಇದನ್ನು ಜಸ್ಟಿಫೈ ಮಾಡಿಕೊಡುತ್ತೀರ? ನಾನು ಕೇಳಿದ ಎರಡನೆಯ ಪ್ರಶ್ನೆಗೆ ಉತ್ತರ ಕೊಡುತ್ತಾ, ಮಲೆನಾಡಿನ ಪ್ರದೇಶದಲ್ಲಿ ತಾಲ್ಲೂಕಿನ ಹಿನ್ನಲೆಯಲ್ಲಿ ಕ್ಷೇತ್ರವಾರು ಅನುದಾನ ನೀಡಿದರೆ ಅನ್ಯಾಯವಾಗುವುದಿಲ್ಲವೇ ಎಂದು ಕೇಳತಕ್ಕಂಥದ್ದಕ್ಕೆ, ಕ್ಷೇತ್ರವಾರು ಕೊಡಬೇಕು ಎಂದು ನಿರ್ಣಯ ಮಾಡಿದ್ದಾರೆ. ಮಲೆನಾಡಿನ ಪ್ರದೇಶದಲ್ಲಿ ಜನ ಸಾಂದ್ರತೆ ಕಡಿಮೆ. ಅದಕ್ಕಾಗಿ ಎರಡು-ಮೂರು ತಾಲ್ಲೂಕುಗಳು ಸೇರಿ ಒಂದು ಕ್ಷೇತ್ರವಾಗುತ್ತದೆ. ಅಂದರೆ ಮೂರು ತಾಲ್ಲೂಕುಗಳಿಗೆ ಮಲೆನಾಡಿನ ಪ್ರದೇಶದಲ್ಲಿ ಅನುದಾನ ಕೊಡುವಷ್ಟು ಉಳಿದ ಪ್ರದೇಶದಲ್ಲಿ ಅಂದರೆ ಪಕ್ಕದ ಪ್ರದೇಶದಲ್ಲಿ ಹಾಗೂ ಬಯಲು ಸೀಮೆ ಪ್ರದೇಶಗಳಿಗೆ ಯಾವುದು ಇನ್‌ಕ್ಲೂಡ್ ಆಗಲಿಕ್ಕೆ ಸಾಧ್ಯವಿಲ್ಲವೋ ಅಂಥ ಪ್ರದೇಶಗಳಿಗೆ ಕೊಡುತ್ತಿದ್ದೀರಿ, ಇದರಿಂದ ಅನ್ಯಾಯವಾಗುವುದಿಲ್ಲವೇ ಎಂದು ಕೇಳಿದರೆ ಉತ್ತರದಲ್ಲಿ ಇಲ್ಲವೆಂದು ಕೊಟ್ಟಿದ್ದಾರೆ. ಈ ಉತ್ತರ ಸರಿಯಾಗಿದೆಯೇ?

ಶ್ರೀ ಹೆಚ್.ಜಿ. ಗೋವಿಂದೇಗೌಡ : ಮಾನ್ಯ ಅಧ್ಯಕ್ಷರೇ, ನಾನು ಸಹ 125 - 130 ಇಂಚು ಮಳೆ ಬೀಳತಕ್ಕಂಥ ಪ್ರದೇಶದಿಂದ ಬರತಕ್ಕಂಥವನು. ಮಾನ್ಯ ಸದಸ್ಯರು ಕೂಡ ಅಂಥ ಪ್ರದೇಶದಿಂದ ಬರತಕ್ಕವರೇ, ಇವೊತ್ತು ಇದರ ಬಗ್ಗೆ ತೀರ್ಮಾನ ಮಾಡಿದ್ದಾರೆ. ಯಾವ ಯಾವ ಪ್ರದೇಶಗಳು ಮಲೆನಾಡು ಅಬಿವೃದ್ಧಿ ಮಂಡಳಿಯ ವ್ಯಾಪ್ತಿಗೆ ಬರಬೇಕು ಎಂದು ಹೇಳಿ ತೀರ್ಮಾನ ಮಾಡಿದ್ದಾರೆ. ಇದರ ಬಗ್ಗೆ ನಾವು ಕುಳಿತುಕೊಂಡು ಯೋಚನೆ ಮಾಡಬೇಕಾಗುತ್ತದೆ ಎಂದು ನನಗನ್ನಿಸುತ್ತದೆ. ಈಗ ಮಳೆ

ಕಡಿಮೆ ಬೀಳತಕ್ಕಂಥ ಕೆಲವು ಬಯಲು ಸೀಮೆಯ ಪ್ರದೇಶಗಳೂ ಕೂಡ ಸೇರಿವೆ. ಮಲೆನಾಡು ಅಭಿವೃದ್ಧಿ ಮಂಡಳಿ ಎಂದರೆ ಅದು ಮಲೆನಾಡಿಗೆ ಸೀಮಿತವಾಗಿರತಕ್ಕದ್ದು ಎಂಬುದರಲ್ಲಿ ಎರಡನೆ ಪ್ರಶ್ನೆಯಿಲ್ಲ, ಆದುದರಿಂದ ಇದರ ಬಗ್ಗೆ ಪರಿಶೀಲನೆಯನ್ನು ಮಾಡಿ ಆಲೋಚನೆ ಮಾಡೋಣ ಎಂದು ನಾನು ಹೇಳುತ್ತೇನೆ.

ಡಾ॥ ಎಂ.ಪಿ. ಕರ್ಕಿ : ಈಗಾಗಲೇ ಕೊಟ್ಟಿರುವ ಉತ್ತರದಲ್ಲಿ You are justyfying it. ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿಯಲ್ಲಿ ಸೇರಿಸಲ್ಪಟ್ಟ ಎಲ್ಲಾ ವಿಧಾನಸಭಾ ಕ್ಷೇತ್ರಗಳು ತಾಲ್ಲೂಕುಗಳು ಮಲೆನಾಡಿನಲ್ಲಿವೆಯೇ ಎಂದು ಕೇಳಿದರೆ ಇದೆ ಎಂದು ಹೇಳಿದ್ದಾರೆ. That is not a correct answer. ಅದನ್ನು ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದ್ದರೆ ಸರಿಯಾಗಿರುತ್ತಿತ್ತು. ಇದರಲ್ಲಿ ಅನ್ಯಾಯ ಆಗಿಲ್ಲವೇ ಎಂದು ಕೇಳಿದರೆ 'ಇಲ್ಲ' ಎಂದು ಉತ್ತರ ಕೊಟ್ಟಿದ್ದೀರಿ. ಆಗಿರುವ ಅನ್ಯಾಯವನ್ನು ಸರಿಪಡಿಸಲಿಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ಎಂದರೆ ಉದ್ಭವಿಸುವುದಿಲ್ಲ ಎಂದು ಹೇಳಿದ್ದೀರಿ. ಆದ್ದರಿಂದ ತಾವು ತಮ್ಮ ಉತ್ತರವನ್ನು ಸರಿಪಡಿಸಿಕೊಳ್ಳುತ್ತೀರಿ ಎಂದು ನಾನು ಭಾವಿಸಿಕೊಳ್ಳುತ್ತೇನೆ, ಹಾಗೆ ಭಾವಿಸಿಕೊಳ್ಳಬಹುದೇ?

ಶ್ರೀ ಹೆಚ್.ಜಿ. ಗೋವಿಂದೇಗೌಡ : ಮಾನ್ಯ ಅಧ್ಯಕ್ಷರೇ, ಕಾನೂನಿನ ರೀತಿಯಲ್ಲಿ ಕ್ಷೇತ್ರವಾರು ಹಣ ಹಂಚುತ್ತಿದ್ದೇವೆ. ಇದರಲ್ಲಿ ಅನ್ಯಾಯವಾಗಿಲ್ಲ ಎಂದು ಹೇಳಿ ಕೊಟ್ಟಿದ್ದಾರೆ. ಅವರು ಕೊಟ್ಟಿರುವ ಉತ್ತರದಲ್ಲಿ ತಪ್ಪು ಏನೂ ಆಗಿಲ್ಲ. ಆದರೆ ಮಾನವೀಯತೆಯ ದೃಷ್ಟಿಯಿಂದ ಮಲೆನಾಡು ಬಯಲು ಸೀಮೆ ಎಂದು ವಿಂಗಡಣೆ ಮಾಡತಕ್ಕಂಥದ್ದರಲ್ಲಿ ವ್ಯತ್ಯಾಸವಾಗಿದೆ ಎಂಬುದನ್ನು ನಾನು ಒಪ್ಪಿಕೊಂಡಿದ್ದೇನೆ. ಈಗ ಅವರು ಕೊಟ್ಟಿರತಕ್ಕಂಥದ್ದರಲ್ಲಿ ಕ್ಷೇತ್ರವಾರು ಹಂಚಿದ್ದಾರೆ ಮತ್ತು ಇದು ನ್ಯಾಯವಾಗಿಯೂ ಇದೆ.

ಡಾ॥ ಎಂ.ಪಿ. ಕರ್ಕಿ : ಮಾನ್ಯ ಅಧ್ಯಕ್ಷರೇ, ನಾನು ಕೇಳಿರತಕ್ಕಂಥ ಪ್ರಶ್ನೆ, ಮಲೆನಾಡಿನಲ್ಲಿ ಜನಸಾಂದ್ರತೆ ಕಡಿಮೆ. ಹಾಗಾಗಿ ಒಂದು ಕ್ಷೇತ್ರದಲ್ಲಿ 3 ತಾಲ್ಲೂಕುಗಳು ಬರುತ್ತವೆ. ನೀವು ತಾಲ್ಲೂಕುವಾರು ಹಂಚಿಕೆ ಮಾಡದೇ ಕ್ಷೇತ್ರವಾರು ಹಂಚಿಕೆ ಮಾಡಿದರೆ ಈಗ ಬಯಲು ಸೀಮೆಯಲ್ಲಿ ಜನಸಾಂದ್ರತೆ ಜಾಸ್ತಿ. ಇದು ಈಗ ಸೇರಿರತಕ್ಕಂಥಾದ್ದು. ಅಂಥವರಿಗೆ ಕೊಡತಕ್ಕಂಥದ್ದು ಒಂದು ತಾಲ್ಲೂಕಿಗೆ ಕೊಡತಕ್ಕಂಥದ್ದನ್ನು ನೀವು ಮೂರು ತಾಲ್ಲೂಕುಗಳಿಗೆ ಕೊಡುತ್ತಿದ್ದಿರಿ. ಇದು ಅಲ್ಲದೇ ಅನ್ಯಾಯಾವಾಗಿಲ್ಲ ಎಂದು ಜಸ್ಟಿಫೈ ಬೇರೆ ಮಾಡುತ್ತೀರಿ.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಮಾನ್ಯ ಸ್ನೇಹಿತರು ನನ್ನ ಅನಿಸಿಕೆಗಳನ್ನು ಒಪ್ಪಿಕೊಳ್ಳುತ್ತಾರೆ ಎಂದು ನಾನು ಆ ರೀತಿಯ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೇನೆ. ಇದನ್ನು ಜನ ಸಾಂದ್ರತೆಯ ಮೇಲೆ ಕೊಡುತ್ತಿಲ್ಲ. ಕ್ಷೇತ್ರವಾರು ಏನಿದೆ ಆ ಪ್ರಕಾರ ಹಂಚಿದ್ದಾರೆ. ಇಲ್ಲಿ ಜನ ಸಂಖ್ಯೆಯ ಪ್ರಶ್ನೆ ಉದ್ಭವಿಸುವುದಿಲ್ಲ. ಕ್ಷೇತ್ರಾವಾರು ಹಂಚುವುದರಿಂದ ಪ್ರತಿ ಕ್ಷೇತ್ರದಲ್ಲಿ ಇಷ್ಟು ಕೊಟ್ಟಿದ್ದಾರೆ. ಮಾನ್ಯ ಸ್ನೇಹಿತರು ತಾಲ್ಲೂಕು ವೈಸ್ ಕೊಟ್ಟರೆ ಮಲೆನಾಡು ಪ್ರದೇಶದಲ್ಲಿ ಬಹಳ ಅನುಕೂಲವಾಗುವುದಿಲ್ಲವೇ ಎಂದು ಕೇಳುತ್ತಿದ್ದಾರೆ. ಅದನ್ನು ಪರಿಶೀಲಿಸಲಾಗುವುದು.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೇ, ಕ್ಷೇತ್ರವಾರು ಕೊಡಬೇಕು, ಇಲ್ಲದೇ ಹೋದರೆ ನಮ್ಮ ಬಯಲುನಾಡಿಗೆಲ್ಲ ಬಹಳ ತೊಂದರೆಯಾಗುತ್ತದೆ. ನಮಗೆ ಸವಲತ್ತುಗಳು ಬಹಳ ಕಡಿಮೆ ಇದೆ.

ಶ್ರೀ ಕೆ. ಜಯರಾಮ್ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ನಮ್ಮ ಮಲೆನಾಡಿನ ಬಗ್ಗೆ ಈಗಾಗಲೇ ನಮ್ಮ ಕರ್ಕಿಯವರು ಮತ್ತು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಈ ಬಗ್ಗೆ ವ್ಯಾಪಕವಾಗಿ ಚರ್ಚೆಯಾಗಿದೆ. ನಮ್ಮ ಮಂಗಳೂರು ತಾಲ್ಲೂಕಿನಲ್ಲಿ ಒಂದು

ತಾಲ್ಲೂಕಿನಲ್ಲಿ ನಾಲ್ಕು ವಿಧಾನ ಸಭಾ ಕ್ಷೇತ್ರಗಳು ಬರುತ್ತವೆ. ಆದ್ದರಿಂದ ನಾವೆಲ್ಲಾ ಸೇರಿಕೊಂಡು ಕ್ಷೇತ್ರವಾರು ಕೊಡಬೇಕೆಂದು ನಿರ್ಧಾರ ಮಾಡಿದ್ದೇವೆ. ಇದನ್ನೇ ಮುಂದುವರಿಸಿಕೊಂಡು ಹೋಗಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಡಾ॥ ಎಂ.ಪಿ. ಕರ್ಕಿ : ಮಾನ್ಯ ಅಧ್ಯಕ್ಷರೇ, ಇದಕ್ಕೆ ಪರಿಶೀಲಿಸುತ್ತೇವೆ ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಇದನ್ನು ಪರಿಶೀಲಿಸುತ್ತಾರೆಯೇ ಎನ್ನುವ ಬಗ್ಗೆ ನನಗೆ ಖಚಿತವಾದ ಉತ್ತರ ಬೇಕು.

Mr. SPEAKER : It is a valid suggestion.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಮಾನ್ಯ ಅಧ್ಯಕ್ಷರೇ, ನಿಮ್ಮ ಅನಿಸಿಕೆ ನನಗೆ ಅರ್ಥವಾಗುತ್ತದೆ. ಇದನ್ನು ಪರಿಶೀಲನೆ ಮಾಡಬೇಕು ಎಂದರೆ ಇದರಲ್ಲಿ ಸ್ವಲ್ಪ ವ್ಯತ್ಯಾಸಗಳಾಗಿದೆ ಎನ್ನುವುದಕ್ಕೋಸ್ಕರವೇ ಪರಿಶೀಲನೆ ಮಾಡುತ್ತೇನೆ ಎಂದು ಹೇಳಿರುವುದು, ಇಲ್ಲದಿದ್ದರೆ ಪರಿಶೀಲನೆ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಿದ್ದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿರುವ ಕಿರಿಯ ಕಾಲೇಜುಗಳು

2229 - ಶ್ರೀ ಬಿ. ಚಂದ್ರಣ್ಣ (ದೇವನಹಳ್ಳಿ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಎಷ್ಟು ಶಾಲೆ, ಕಿರಿಯ ಕಾಲೇಜು ಇವೆ (ತಾಲ್ಲೂಕುವಾರು ವಿವರ ನೀಡುವುದು).

ಆ) ಮೇಲ್ಕಂಡ ಕಿರಿಯ ಕಾಲೇಜುಗಳಲ್ಲಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಎಷ್ಟು?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):

ಅ)

	ಸರ್ಕಾರಿ	ಖಾಸಗಿ
ಪ್ರಾಥಮಿಕ ಶಾಲೆಗಳು	2172	125
ಪ್ರೌಢಶಾಲೆಗಳು	58	160
ಕಿರಿಯ ಕಾಲೇಜುಗಳು	24	12

(ತಾಲ್ಲೂಕುವಾರು ವಿವರದ ಪಟ್ಟಿ ಲಗತ್ತಿಸಿದೆ)

ಆ)

	ಬೋಧಕ	ಬೋಧಕೇತರ
ಸರ್ಕಾರಿ ಪದವಿ ಪೂರ್ವ ಕಾಲೇಜುಗಳು	249	50
ಖಾಸಗಿ ಪದವಿ ಪೂರ್ವ ಕಾಲೇಜುಗಳು	67	32

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿರುವ ಶಾಲೆ, ಕಾಲೇಜುಗಳ ತಾಲ್ಲೂಕುವಾರು ವಿವರದ ಪಟ್ಟಿ

	ತಾಲ್ಲೂಕು	ಸರ್ಕಾರಿ ಪ್ರಾಥಮಿಕ	ಖಾಸಗಿ ಪ್ರಾಥಮಿಕ	ಸರ್ಕಾರಿ ಪ್ರೌಢ ಶಾಲೆ	ಖಾಸಗಿ ಪ್ರೌಢ ಶಾಲೆ	ಸರ್ಕಾರಿ ಕಿರಿಯ ಕಾಲೇಜು	ಖಾಸಗಿ ಕಿರಿಯ ಕಾಲೇಜು
1.	ಚನ್ನಪಟ್ಟಣ	222	13	08	19	3	2
2.	ರಾಮನಗರ	237	13	07	22	3	2

3.	ಕನಕಪುರ	374	31	11	20	2	1
4.	ಮಾಗಡಿ	342	07	06	33	3	3
5.	ನೆಲಮಂಗಲ	254	07	05	21	3	3
6.	ದೊಡ್ಡಬಳ್ಳಾಪುರ	320	26	07	19	3	1
7.	ದೇವನಹಳ್ಳಿ	180	13	06	15	3	-
8.	ಹೊಸಕೋಟೆ	243	15	09	11	4	-
	ಒಟ್ಟು	2172	125	58	160	24	12

ಶ್ರೀ ಬಿ. ಚಂದ್ರಣ್ಣ : ಮಾನ್ಯ ಅಧ್ಯಕ್ಷರೇ, ಉತ್ತರವನ್ನೇನೋ ಬಹಳ ಚೆನ್ನಾಗಿ ಕೊಟ್ಟಿದ್ದಾರೆ. ಆದರೆ ದೇವನಹಳ್ಳಿ ತಾಲ್ಲೂಕು ಮತ್ತು ವಿಜಯಪುರ ತಾಲ್ಲೂಕು ಇವೆರಡೂ ನಮಗೆ ಕ್ಷೇತ್ರದಲ್ಲಿ ಬರುವುದರಿಂದ ಅಲ್ಲಿ ಬೋಧಕೇತರ ಸಿಬ್ಬಂಧಿ ಬಹಳ ಕಡಿಮೆ ಇದ್ದಾರೆ. ಅದರ ಬಗ್ಗೆ ಸ್ಪಷ್ಟವಾದ ಚಿತ್ರವನ್ನು ಮಾನ್ಯ ಸಚಿವರು ನೀಡಬೇಕು.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಮಾನ್ಯ ಅಧ್ಯಕ್ಷರೇ, ಉಪಾಧ್ಯಾಯರುಗಳ ಮತ್ತು ಉಪನ್ಯಾಸಕರ ಕೊರತೆ ಇರುವುದು ನಮಗೆ ಅನುಭವವಾಗಿದೆ. ಮಾನ್ಯ ಸದಸ್ಯರು ಹೇಳತಕ್ಕಂಥದ್ದರಲ್ಲಿ ನ್ಯಾಯವಿದೆ. ಈಗ ಪ್ರಾಥಮಿಕ ಶಾಲೆಗಳಲ್ಲಿ ಹೆಚ್ಚು ಜನ ಉಪಾಧ್ಯಾಯರುಗಳನ್ನು ನೇಮಕ ಮಾಡಿಕೊಳ್ಳುತ್ತೇವೆ. ಪ್ರೌಢ ಶಾಲೆಗಳಿಗೂ ಕೂಡ 2000 ಉಪಾಧ್ಯಾಯರುಗಳನ್ನು ನೇಮಕ ಮಾಡಿಕೊಂಡ ಕೂಡಲೇ ವ್ಯವಸ್ಥೆ ಮಾಡುತ್ತೇವೆ. ಅದೇ ರೀತಿ ಜೂನಿಯರ್ ಕಾಲೇಜುಗಳಿಗೆ 864 ಉಪನ್ಯಾಸಕರನ್ನು ನೇಮಕ ಮಾಡಿಕೊಂಡು ಸಾಧ್ಯವಾದಷ್ಟು ಬೇಗ ನೇಮಕ ಮಾಡಬೇಕು ಎನ್ನುವ ಅಭಿಪ್ರಾಯವಿದೆ ಮಾಡುತ್ತೇವೆ. ದಯವಿಟ್ಟು ಸ್ವಲ್ಪ ದಿವಸಗಳ ಕಾಲ ಸಮಾಧಾನದಿಂದ ಇರಬೇಕು.

ಅಧ್ಯಕ್ಷರು : ಈಗ ಕುಂಬ್ಳೆ ಸುಂದರರಾಯರ ಉಪ ಪ್ರಶ್ನೆಗೆ ಉತ್ತರ ಕೊಡಿ ಸ್ವಲ್ಪ ಸಮಯ ಇದೆ.

ಶ್ರೀ ಡಿ. ಮಂಜುನಾಥ್ (ಪ್ರಶ್ನೆ ಸಂಖ್ಯೆ 2031 ಮುಂದುವರೆದುದು) : ಈಗ ಅವರು ಕೇಳಿರುವುದು ಏನೆಂದರೆ ಕೋರ್ಟಿ ನಿಂದನೆಯಾಗುತ್ತದೆ ಎಂದಿದ್ದಾರೆ. ಈಗ ಏನಾಗಿದೆ ಎಂದರೆ ಸ್ಟಾಪ್‌ಗ್ಯಾಪ್ ಉಪಾನ್ಯಾಸಕರ ಬಗ್ಗೆ ದಿನಾಂಕ 29-01-92ರಲ್ಲಿ ಸುಪ್ರೀಂ ಕೋರ್ಟ್‌ನವರು ಒಂದು ಜಡ್ಜ್‌ಮೆಂಟ್ ಕೊಟ್ಟಿದ್ದಾರೆ. ಆ ಜಡ್ಜ್‌ಮೆಂಟ್‌ನಲ್ಲಿ ಯಾರು ಮೂರು ವರ್ಷ ಸೇವೆಯನ್ನು ಮುಕ್ತಾಯ ಮಾಡಿದ್ದಾರೆ ಅವರನ್ನು ಖಾಯಂ ಮಾಡಬೇಕು ಎಂದು ಹೇಳಿದ್ದಾರೆ. ಅದನ್ನು ಮಾಡಿದ್ದೇವೆ. ಈಗಿರುವ ಪ್ರಶ್ನೆ ಏನೆಂದರೆ ಇನ್ನೂ ಕೆಲವರು ಅವರಲ್ಲಿ ಉಳಿದ್ದಾರೆ. ಅವರುಗಳನ್ನು 29-01-902ಕ್ಕೂ ಹಿಂದೆ ನೇಮಕವಾದವರಿಗೆ 3 ವರ್ಷ ಆಗದೇ ಇರುವುದರಿಂದ ಅವರಿಗೆ ಕೋರ್ಟ್‌ನಲ್ಲಿ ರಿಲೀಫ್ ಸಿಕ್ಕಿಲ್ಲ, ಅವರ ಪ್ರಶ್ನೆ ನಮ್ಮ ಮುಂದೆ ಇದೆ. ಅವರನ್ನು ಖಾಯಂ ಮಾಡಬೇಕು ಎನ್ನುವ ಉದ್ದೇಶದಿಂದ ಪ್ರಯತ್ನ ನಡೆದಿದೆ.

ಈ ಸಮಿತಿಯ ವರದಿ ಬರುವುದಕ್ಕೆ ಇಷ್ಟು ತಡ ಏತಕ್ಕಾಯಿತೆಂದು ಒಂದು ಪ್ರಶ್ನೆಯನ್ನು ತಾವು ಕೇಳಿದಿರಿ. ಕಾರಣ ಇಷ್ಟೆ. ಅವರು ಅಸೋಸಿಯೇಷನ್ ಎಂದು ಮಾಡಿಕೊಂಡಿದ್ದಾರೆ. ಒಬ್ಬರು 400 ಜನ ಇದ್ದಾರೆಂದು ಹೇಳುತ್ತಿದ್ದಾರೆ. ಒಬ್ಬರು 305 ಜನ ಇದ್ದಾರೆಂದು ಹೇಳುತ್ತಾರೆ. ತಾವು ಕೊಟ್ಟಿರತಕ್ಕದ್ದು 350 ಜನ ಇದ್ದಾರೆಂದು. ಈ ರೀತಿ ಸಂಖ್ಯೆಗಳು ಏರುಪೇರಾಗಿರುವುದರಿಂದ ನಾವು ಒಬ್ಬ ಅಧಿಕಾರಿಯನ್ನು ಇದಕ್ಕಾಗಿಯೇ ಎಲ್ಲಾ ಕಾಲೇಜುಗಳಿಗೂ ಕಳುಹಿಸಿ ನಿಖರವಾದ ಅಂಕಿಸಂಖ್ಯೆಯನ್ನು ತರಿಸುವುದಕ್ಕಾಗಿ ತಡವಾಗಿದೆ. ಬಹುತೇಕ ಈ ತಿಂಗಳೊಳಗಾಗಿ ಸಮಿತಿಯ ವರದಿ

ಬರುತ್ತದೆ, ಅದನ್ನು ಕ್ಯಾಬಿನೆಟ್ ಮುಂದಿಟ್ಟು ಅವರಿಗೆ ಸಹಾಯ ಮಾಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ಕುಂಬ್ಳೆ ಸುಂದರರಾವ್ : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಒಂದು ನಿರ್ಧಿಷ್ಟ ಅವಧಿಯನ್ನು ಮಾನ್ಯ ಮಂತ್ರಿಗಳು ಹೇಳುವುದಕ್ಕೆ ಸಾಧ್ಯವೆ ಎಂದು ತಮ್ಮ ಮೂಲಕ ಕೇಳಬಯಸುತ್ತೇನೆ.

ಶ್ರೀ ಡಿ. ಮಂಜುನಾಥ್ : ಅಂದರೆ ಈ ತಿಂಗಳ 30ನೇ ತಾರೀಖಿನೊಳಗಾಗಿ ಅವರು ವರದಿಯನ್ನು ಕೊಡುವಂತೆ ಹೇಳುತ್ತೇನೆ, ಆ ವರದಿ ಬಂದನಂತರ ಅದನ್ನು ಕ್ಯಾಬಿನೆಟ್ ಮುಂದೆ ತರುತ್ತೇನೆ

ಶ್ರೀ ವೈ. ರಾಮಕೃಷ್ಣ ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಆಗಿರುವುದು 29-1-92ರಲ್ಲಿ ಅಂದರೆ ಸುಮಾರು 3-4 ವರ್ಷ ಆಯಿತು. ಇಷ್ಟೊಂದು ತಡವಾಗುವುದಕ್ಕೆ ಕಾರಣವೇನು?

ಎರಡನೆಯದಾಗಿ, ತಾವು ಒಂದು ಸಮಿತಿಯನ್ನು ಮಾಡಿರುವುದಾಗಿ ಹೇಳಿದಿರಿ. ಆ ಸಮಿತಿಯಲ್ಲಿ ಸದಸ್ಯರು ಯಾರ‍್ಯಾರಿದ್ದಾರೆ. ಎಷ್ಟು ದಿನದಲ್ಲಿ ವರದಿ ಕೊಡಬೇಕೆಂದು ಹೇಳಿದ್ದೀರಿ?

ಮೂರನೆಯದಾಗಿ, ಈ ಸಮಿತಿಯನ್ನು ರಚನೆ ಮಾಡುವಾಗ ಇತ್ತೀಚೆಗೆ ಹರಿಜನರಿಗೆ 23 ಪರ್ಸೆಂಟ್ ಎಂದು ಮಾಡಿದ್ದೀರಿ ಅದನ್ನು ಪ್ರತ್ಯೇಕವಾಗಿ ಪರಿಗಣಿಸಿ ಲಿಸ್ಟ್ ಕಳುಹಿಸಬೇಕೆಂದು ತಾವು ಸೂಚನೆ ಕೊಟ್ಟಿದ್ದೀರಾ?

ಶ್ರೀ ಡಿ. ಮಂಜುನಾಥ್ : ಮೀಸಲಾತಿಯನ್ನು ಪರಿಗಣಿಸಬೇಕೆಂಬ ಉದ್ದೇಶ ಇದೆ. ಅದಕ್ಕೋಸ್ಕರವೇ ಸಮಿತಿ ಮಾಡಿರುವುದು. ಈಗ ಸ್ಟಾಫ್ ಗ್ಯಾಪ್ ಲೆಕ್ಚರರ್ಸ್‌ನ್ನು ಏನು ನೇಮಕಾತಿ ಮಾಡಿದೆ. ಅದರಲ್ಲಿ ಮೀಸಲಾತಿಯನ್ನು ಅನುಸರಿಸಿಲ್ಲ ಎಂಬುದು ನನ್ನ ಗಮನಕ್ಕೆ ಬಂದ ಮೇಲೆ ಅದನ್ನು ಈ ಸಮಿತಿ ಪರಿಶೀಲಿಸಬೇಕೆಂದು ನಾನು ಹೇಳಿದ್ದೇನೆ. ಈ ತಿಂಗಳ 30 ರೊಳಗೆ ವರದಿ ಕೊಡಬೇಕೆಂದು ಹೇಳಿದ್ದೇನೆ, 30 ರೊಳಗೆ ವರದಿ ಬರುತ್ತದೆ,ಅನಂತರ ನಾವು ತೀರ್ಮಾನ ತೆಗೆದುಕೊಳ್ಳುತ್ತೇವೆ.

ಶ್ರೀ ಡಿ.ವಿ. ಸದಾನಂದ ಗೌಡ : ಮಾನ್ಯ ಅಧ್ಯಕ್ಷರೆ, ಇವರನ್ನು ಖಾಯಂಗೊಳಿಸುವುದರಿಂದ ಸರ್ಕಾರಕ್ಕೆ ಯಾವುದೇ ಹೆಚ್ಚಿನ ಆರ್ಥಿಕ ಹೊರೆ ಬೀಳುವುದಿಲ್ಲವೆಂದು ಹೇಳಿರುವ ಕಾರಣ ಇವರನ್ನು ಈಗಲೇ ಏತಕ್ಕೆ ಖಾಯಂಗೊಳಿಸಬಾರದು?

ಇನ್ನು ಎರಡನೆಯದಾಗಿ ಕರ್ನಾಟಕ ಹೈಕೋರ್ಟಿನವರು ಆದೇಶ ನೀಡಿ ಇವರನ್ನು ಖಾಯಂ ಮಾಡಬೇಕೆಂದು ತಿಳಿಸಿದರೂ ಕೂಡ ಇದುವರೆಗೂ ಆ ಆದೇಶವನ್ನು ಇಲ್ಲಿಯವರೆಗೆ ಏತಕ್ಕೆ ಜಾರಿ ಮಾಡಿಲ್ಲ? ಇದುವರೆಗೆ 4 ಕಂಟೆಂಪ್ಟ್. ಆಫ್ ಕೋರ್ಟ್ ಪ್ರೊಸೀಡಿಂಗ್ಸ್ ಈ ಸರ್ಕಾರದ ಮೇಲೆ ಆದರೂ ಕೂಡ ಸರ್ಕಾರ ಇನ್ನೂ ಏತಕ್ಕೆ ಎಚ್ಚರ ವಹಿಸಿಲ್ಲ, ಈಗಾಗಲೇ 4 ಜನರನ್ನು ಖಾಯಂ ಮಾಡಿದ್ದೀರಿ. ಉಳಿದವರನ್ನು ಏತಕ್ಕೆ ಮಾಡಲಿಲ್ಲ, ಅವರದ್ದೂ ಕೂಡ ಕಂಟೆಂಪ್ಟ್ ಆಫ್ ಕೋರ್ಟ್ ಪ್ರೊಸೀಡಿಂಗ್ಸ್ ಆದ ಮೇಲೆಯೇ ಖಾಯಂ ಮಾಡೋಣವೆಂದು ಏನಾದರೂ ಸರ್ಕಾರದ ಉದ್ದೇಶ ಇದೆಯೇ?

ಅಧ್ಯಕ್ಷರು : ಈ ತಿಂಗಳ ಕೊನೆಯೊಳಗೆ ಮಾಡುತ್ತೇವೆಂದು ಮಾನ್ಯ ಮಂತ್ರಿಗಳು ಉತ್ತರ ಕೊಟ್ಟರು. ತಮ್ಮ ಪ್ರಶ್ನೆಗೆ ಈಮೊದಲೇ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಬಹುಶಃ ತಾವು ಕೇಳಿಸಿಕೊಳ್ಳಲಿಲ್ಲ ಎನಿಸುತ್ತದೆ. ಮಾನ್ಯ ವೈ ರಾಮಕೃಷ್ಣರವರು ಕೇಳಿದಾಗ ಈ ತಿಂಗಳೊಳಗೆ ಮಾಡುತ್ತೇನೆಂದು ಹೇಳಿದರು.

ಶ್ರೀ ಡಿ.ವಿ. ಸದಾನಂದ ಗೌಡ : ಕಂಟೆಮ್ಪ್ಟ್ ಆಫ್ ಕೋರ್ಟ್ ಪ್ರೋಸೀಡಿಂಗ್ಸ್ ಆದ ಮೇಲೆ ಆ 4 ಜನರ್ನು ಇವರು ಖಾಯಂ ಮಾಡಿದರು, ಆಗಲೇ ಉಳಿದವರನ್ನೂ ಏತಕ್ಕೆ ಖಾಯಂ ಮಾಡಲಿಲ್ಲ?

ಅಧ್ಯಕ್ಷರು : ಉಳಿದವರನ್ನೂ ಕೂಡ ಈ ತಿಂಗಳ ಕೊನೆಯೊಳಗೆ ಖಾಯಂ ಮಾಡುತ್ತೇನೆಂದು ಅವರು ಹೇಳಿದರು.

ಶ್ರೀ ಎನ್. ಯೋಗೀಶ್ ಭಟ್ : ಕೋರ್ಟ್‌ಗೆ ಹೋಗಿ ಆ ಮೂಲಕ ನಮ್ಮ ಸಮಸ್ಯೆಗಳನ್ನು ಪರಿಹರಿಸುಕೊಳ್ಳುವಂಥ ಪರಿಸ್ಥಿತಿಯನ್ನು ದಯವಿಟ್ಟು ಸರ್ಕಾರ ನಿರ್ಮಾಣ ಮಾಡಬಾರದೆಂದು ನನ್ನ ವಿನಂತಿ. ನಾವು ಕೋರ್ಟಿಗೆ ಹೋದರೆ ಮಾತ್ರ ಈ ಸಮಸ್ಯೆ ಪರಿಹಾರವಾಗುತ್ತದೆಂಬ ಭಾವನೆ ಅಧಿಕಾರಿಗಳಲ್ಲಿ, ಶಿಕ್ಷಣ ವರ್ಗದಲ್ಲಿದೆ. ಆದ್ದರಿಂದ ಇನ್ನು ಮುಂದೆ ಇಂಥ ಪರಿಸ್ಥಿತಿಯನ್ನು ನಿರ್ಮಾಣ ಮಾಡಬೇಡಿ ಎಂದು ಮಾತ್ರ ನಾನು ವಿನಂತಿ ಮಾಡಿ ಕೊಳ್ಳುತ್ತೇನೆ.

ಶ್ರೀ ಡಿ. ಮಂಜುನಾಥ್ : ಅಂಥ ಪರಿಸ್ಥಿತಿಯನ್ನು ನಾವು ಕ್ರಿಯೇಟ್ ಮಾಡಿಲ್ಲ.

ಅಧ್ಯಕ್ಷರು : ಮಾನ್ಯ ಸದಸ್ಯರ ಭಾವನೆಯನ್ನು ತಾವು ಅರ್ಥಮಾಡಿಕೊಳ್ಳಬೇಕು. ನಾರ್ಮಲ್ ಕೋರ್ಸ್‌ನಲ್ಲಿ ಈ ಸರ್ಕಾರೀ ಆಡಳಿತ ಯಂತ್ರದಲ್ಲಿ ನಮಗೆ ನ್ಯಾಯ ಸಿಕ್ಕುವುದಿಲ್ಲ, ಕೋರ್ಟಿಗೆ ಹೋದರೇ ನಮದೆ ನ್ಯಾಯ ಸಿಕ್ಕುವುದು ಎನ್ನತಕ್ಕ ಭಾವನೆ ಉಂಟುಮಾಡುವುದು ಒಳ್ಳೆಯದಲ್ಲ ಎಂದು ಅವರು ಹೇಳುತ್ತಿರುವುದು. ಈ ಸೆಂಟಿಮೆಂಟನ್ನು ತಾವು ಫಾಲೋ ಮಾಡಬೇಕು.

ಶ್ರೀ ಡಿ. ಮಂಜುನಾಥ್ : ತಾ 29-1-92ಕ್ಕೆ ಯಾರು 3 ವರ್ಷಕಾಲ ಕೆಲಸ ಮಾಡಿದ್ದರು ಅವರನ್ನು ಸುಪ್ರೀಂ ಕೋರ್ಟ್ ಆದೇಶದಂತೆ ಖಾಯಂ ಮಾಡಿದ್ದೇವೆ. ಇನ್ನುಳಿದವರನ್ನು ಕೆಲಸದಿಂದ ತೆಗೆದುಹಾಕಬೇಕೆಂದು ಸುಪ್ರೀಂ ಕೋರ್ಟ್‌ನವರು ಹೇಳಿದ್ದಾರೆ. ಈಗ ಅವರು ಕೋರ್ಟಿಗೆ ಹೋಗಿದ್ದಾರೆ. ನಮ್ಮನ್ನೂ ಖಾಯಂ ಮಾಡಿ ಎಂದು ಅವರು ಕೋರ್ಟಿಗೆ ಹೋಗಿದ್ದಾರೆ. ನಾವು ಏನೂ ಕೋರ್ಟಿಗೆ ಹೋಗಿಲ್ಲ.

ಅಧ್ಯಕ್ಷರು : ಮಾನ್ಯ ಸದಸ್ಯರು ಈ ವಿಚಾರಕ್ಕೆ ಸಂಬಂಧಪಟ್ಟಂತೆ ಹೇಳಲಿಲ್ಲ. ಸಾಮಾನ್ಯವಾಗಿ ಯಾವುದೇ ವರ್ಗದ ಜನರಿಗೆ ನ್ಯಾಯ ಸಿಕ್ಕತಕ್ಕದ್ದು ನಿಧಾನವಾದಾಗ ಕೋರ್ಟಿಗೆ ಹೋದರೆ ಮಾತ್ರ ನಮಗೆ ನ್ಯಾಯ ಸಿಕ್ಕುತ್ತದೆಂಬ ವಾತಾವರಣವನ್ನು ಸೃಷ್ಟಿಮಾಡುವುದು ಸರ್ಕಾರಕ್ಕೆ ಗೌರವ ತರುವುದಿಲ್ಲ ಎಂಬ ಭಾವನೆಯನ್ನು ಅವರು ವ್ಯಕ್ತಮಾಡಿದ್ದಾರೆ.

ಶ್ರೀ ಡಿ. ಮಂಜುನಾಥ್ : ಖಂಡಿತ ಆ ರೀತಿಯ ವಾತಾವರಣವನ್ನು ಸೃಷ್ಟಿಮಾಡುವುದಿಲ್ಲ. ಆದರೆ ಇಲ್ಲಿ ಅವರೇ ಕೋರ್ಟಿಗೆ ಹೋಗಿದ್ದಾರೆ.

ಡಾ|| ಎಂ.ಪಿ. ಕರ್ಕಿ : ಇಂಥಾದ್ದೇ ಪ್ರಕರಣಗಳಲ್ಲಿ ಸರ್ಕಾರ ಒಂದುಸಾರಿ ತೀರ್ಪನ್ನು ಕೊಟ್ಟಮೇಲೆ ಆದೇ ರೀತಿಯ ಬೇರೆ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದರೂ ಕೂಡ ಆದು ಆಗುವುದಿಲ್ಲ, ಆಗ ಅವರು ಕೋರ್ಟಿಗೆ ಹೋಗಿಯೇ ಮಾಡಿಕೊಂಡು ಬರಬೇಕಾಗುತ್ತದೆ. ಉದಾಹರಣೆಗೆ ಹೇಳುವುದಾದರೆ. ಬಿ.ಪಿ.ಎಡ್.ಆದಂಥ ಪಿ.ಇ.ಟೀಚರ್ಸ್ ಪ್ರತಿಯೊಬ್ಬರೂ ಕೂಡ ಕೋರ್ಟಿಗೆ ಹೋಗಿ ನಿರ್ಣಯವನ್ನು ತಂದು ಖಾಯಂಗೊಳಿಸಿಕೊಳ್ಳಬೇಕಾಗುತ್ತದೆ. ಇಂಥ ಪ್ರಕರಣಗಳು ಆಗ ಬಾರದೆಂದು ನನ್ನ ವಿನಂತಿ.

ಅಧ್ಯಕ್ಷರು : ಅಂದರೆ ಸಿಮಿಲರ್ ಪ್ರಿಸಿಡೆಂಟ್ಸ್ ಇದ್ದರೂ ಕೂಡ ಅಂಥಾದ್ದರಲ್ಲಿ ಸರ್ಕಾರ ತೀರ್ಮಾನ ಕೈಗೊಳ್ಳುವುದಿಲ್ಲ, ಮತ್ತೆ ಆ ವ್ಯಕ್ತಿಗಳು ಕೋರ್ಟಿಗೆ ಹೋಗಿ

ಆದೇಶವನ್ನು ತಂದು ತಮ್ಮ ಕೆಲಸಮಾಡಿಕೊಳ್ಳಬೇಕಾಗಿದೆ ಎಂದು ಹೇಳುತ್ತಿದ್ದೀರಿ. ಸರ್ಕಾರ ಇಂಥಾದ್ದಕ್ಕೆ ಅವಕಾಶ ಕೊಡದ ರೀತಿಯಲ್ಲಿ ನೋಡಿಕೊಳ್ಳಬೇಕು.

ಅಧ್ಯಕ್ಷರು : ಮಾನ್ಯ ಸದಸ್ಯರು ಹಾಜರಿರಲಿಲ್ಲ ಆದ್ದರಿಂದ ಪ್ರಶ್ನೋತ್ತರ ವೇಳೆ ಮುಗಿಯಿತೆಂದು ಮಾನ್ಯ ಗೋವಿಂದೇಗೌಡರು ಹೋಗಿ ಬಿಟ್ಟರೆಂದು ಕಾಣೆಸುತ್ತದೆ.

ಒಬ್ಬ ಮಾನ್ಯ ಸದಸ್ಯರು : ಅಧ್ಯಕ್ಷರೆ, ನಿಯಮ 191ರ ಅಡಿಯಲ್ಲಿ ನಾನು ತಮಗೆ ಒಂದು ನೋಟೀಸನ್ನು ಕಳುಹಿಸಿಕೊಟ್ಟಿದ್ದೆ.

ಅಧ್ಯಕ್ಷರು : ತಾವು ಕಳುಹಿಸಿದ್ದಿರಿ, ಅದನ್ನು ಸಂಬಂಧಪಟ್ಟವರಿಗೆ ಕಳುಹಿಸಿಕೊಟ್ಟಿದ್ದೇನೆ. ಅದು ನನ್ನ ಗಮನದಲ್ಲಿದೆ. ಇಲ್ಲಿ ಒಂದು ಸಣ್ಣಲೋಪ ಆಗಿದೆ. ಪ್ರಶ್ನೋತ್ತರ ವೇಳೆ ಮುಗಿದುಹೋಯಿತೆಂದು ತಿಳಿದು ಮಾನ್ಯ ಮಂತ್ರಿಗಳು ಹೊರಟುಹೋದರು. ಆಗ ಮಾನ್ಯ ಸದಸ್ಯರು ಸದನದಲ್ಲಿರಲಿಲ್ಲ. ನಾನು ಅದನ್ನು ತಡೆಹಿಡಿದ್ದರೂ ಕೂಡ ಮತ್ತೊಮ್ಮೆ ತಮಗೆ ಉತ್ತರ ಕೊಡಿಸುತ್ತೇನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ತಾ : 13-9-95ರಂದು ಲಿಖಿತ ಮೂಲಕ ಉತ್ತರಿಸುವ 21ನೇ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಿದ್ದೇನೆ.

ಹುಬ್ಬಳ್ಳಿ ಧಾರವಾಡದಲ್ಲಿರುವ ಕ್ರೀಡಾಂಗಣಗಳು.

1084 - ಶ್ರೀ ಅಶೋಕ್ ಕಾಟ್‌ವೆ (ಹುಬ್ಬಳ್ಳಿನಗರ) : ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ಧಾರವಾಡ ಮಹಾನಗರದಲ್ಲಿ ಇರತಕ್ಕಂತಹ ಒಟ್ಟು ಕ್ರೀಡಾಂಗಣಗಳೆಷ್ಟು? ಅವುಗಳು ಇರುವ ಸ್ಥಳಗಳಾವುವು?

ಆ) 1994-95ರಲ್ಲಿ ಎಷ್ಟು ಕ್ರೀಡಾಂಗಣಗಳನ್ನು ಅಭಿವೃದ್ಧಿಗೊಳಿಸಲಾಯಿತು?

ಇ) 1995-96ರಲ್ಲಿ ಮಹಾನಗರದಲ್ಲಿ ಹೊಸದಾಗಿ ಕ್ರೀಡಾಂಗಣಗಳನ್ನು ನಿರ್ಮಿಸುವ ಕಾರ್ಯಕ್ರಮ ಸರ್ಕಾರದ ಮುಂದಿದೆಯೇ?

ಶ್ರೀ ಅಜಯ ಕುಮಾರ್ ಸರ್ ನಾಯಕ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು) :

ಅ) ಹುಬ್ಬಳ್ಳಿ ಧಾರವಾಡ ಮಹಾನಗರದಲ್ಲಿ 7 ಕ್ರೀಡಾಂಗಣಗಳು ಇರುವುವು. ಹುಬ್ಬಳ್ಳಿಯಲ್ಲಿ 2 ಕ್ರೀಡಾಂಗಣಗಳು (ನಗರ ಸಭೆಯ ನೆಹರು ಕ್ರೀಡಾಂಗಣ. ಮತ್ತು ರೈಲ್ವೆ ಇಲಾಖೆಯ ರೈಲ್ವೆ ಗ್ರೌಂಡ್) ಮತ್ತು ಧಾರವಾಡದಲ್ಲಿ 5 ಕ್ರೀಡಾಂಗಣ (ಯುವ ಜನ ಸೇವಾ ಮತ್ತು ಕ್ರೀಡಾ ಇಲಾಖೆಯ ಆರ್.ಎನ್. ಶೆಟ್ಟಿ ಕ್ರೀಡಾಂಗಣ ಮಲ್ಲಸಜ್ಜನ ವ್ಯಾಯಾಮಾ ಶಾಲೆ ಮಿನಿ ಕ್ರೀಡಾಂಗಣ ಖಾಸಗಿಯವರದು, ಪೋಲೀಸ್ ಇಲಾಖೆಯ ಪೋಲೀಸ್ ಕ್ರೀಡಾಂಗಣ, ಕರ್ನಾಟಕ ವಿಶ್ವವಿದ್ಯಾಲಯದ ಕ್ರೀಡಾಂಗಣ ಮತ್ತು ಕೃಷಿ ವಿಶ್ವವಿದ್ಯಾಲಯ ಕ್ರೀಡಾಂಗಣ)

ಆ) ಇಲ್ಲ

ಇ) ಇಲ್ಲ

ರಾಜ್ಯದಲ್ಲಿ ಏಡ್ಸ್ ಕಾಯಿಲೆ ತಡೆಗಟ್ಟುವಿಕೆ.

2709 - ಶ್ರೀ ಅಶೋಕ ಕಾಟವೆ (ಹುಬ್ಬಳ್ಳಿ ನಗರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಏಡ್ಸ್ ಕಾಯಿಲೆ ತಡೆಗಟ್ಟಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಆ) ಈ ಮಾರಣಾಂತಿಕ ಭಯಂಕರ ರೋಗವಾದ "ಏಡ್ಸ್" ಕಾಯಿಲೆಗೆ ಬಲಿಯಾದವರ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರಗಳನ್ನು ಕೊಡುವುದು).

ಇ) ಏಡ್ಸ್ ರೋಗ ತಡೆಗಟ್ಟಲು ಎಷ್ಟು ಹಣ ಕಾಯ್ದಿರಿಸಿದೆ. ಈಗಾಗಲೇ ಸರ್ಕಾರದ ಎಷ್ಟು ಹಣ ಖರ್ಚು ಮಾಡಿದೆ. ಏಡ್ಸ್ ಕಾಯಿಲೆಯ ತಡೆಗಟ್ಟುವಿಕೆ ಕುರಿತು ವಿವರಣೆ ಕೊಡುವುದು?

ಶ್ರೀ ಎಂ.ಸಿ. ನಾಣಯ್ಯ (ವಾರ್ತಾ ಮತ್ತು ಪ್ರಚಾರ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ. :

ಅ) ಏಡ್ಸ್ ರೋಗ ಹರಡಲು ಮುಖ್ಯವಾಗಿ ಲೈಂಗಿಕ ನಡವಳಿಗಳ ಮೇಲೆ ಅವಲಂಬಿಸಿದೆ. ಅಪರಿಚಿತರೊಂದಿಗೆ ಹಾಗೂ ಬಹು ಸಂಗಾತಿಗಳೊಂದಿಗೆ ಲೈಂಗಿಕ ಸಂಪರ್ಕ ಹೊಂದುವುದರಿಂದ ಹಾಗೂ ಸೋಂಕು ತಗುಲಿರುವ ರಕ್ತ ಬಳಸುವುದರಿಂದ ಈ ರೋಗ ಹರಡುವ ಹೆಚ್ಚಿನ ಸಾಧ್ಯತೆ ಇರುವುದರಿಂದ ಈ ರೋಗ ಹರಡುವುದನ್ನು ನಿಯಂತ್ರಿಸಲು ಕೆಳಗೆ ಕಾಣಿಸಿರುವ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಏಡ್ಸ್ ಹರಡುತ್ತಿರುವ ಮಟ್ಟವನ್ನು ತಿಳಿಯಲು ಮೂರು ಏಡ್ಸ್ ಸರ್ವೆಲೆನ್ಸ್ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಏಡ್ಸ್ ರೋಗ ಶಂಕಿತ ವ್ಯಕ್ತಿಯ ಪರೀಕ್ಷೆ ಒಳಪಡಿಸುವ ವ್ಯವಸ್ಥೆ ಕಲ್ಪಿಸಲಾಗಿದೆ.
2. 9 ವಿಭಾಗೀಯ ರಕ್ತ ತಪಾಸಣೆ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ವಿಭಾಗೀಯ ತಪಾಸಣೆ ಕೇಂದ್ರಗಳಿಗೆ ರಾಜ್ಯದಲ್ಲಿರುವ ಸರ್ಕಾರಿ ಹಾಗೂ ಖಾಸಗಿ ರಕ್ತ ನಿಧಿ ಕೇಂದ್ರಗಳನ್ನು ಪರೀಕ್ಷೆ ಸಲುವಾಗಿ ಜೋಡಣೆ ಮಾಡಲಾಗಿದೆ. ರಾಜ್ಯದಲ್ಲಿರುವ ಜಿಲ್ಲಾ ಮಟ್ಟದ ಆಸ್ಪತ್ರೆಗಳ ರಕ್ತ ನಿಧಿ ಕೇಂದ್ರಗಳನ್ನು ಹಂತ ಹಂತವಾಗಿ ಆಧುನೀಕರಿಸಿ, ಬಲವರ್ಧನೆ ಮಾಡಲಾಗುತ್ತಿದೆ. ತುರ್ತು ಪರಿಸ್ಥಿತಿಯಲ್ಲಿ ರಕ್ತವನ್ನು ಬಳಸುವಾಗ ಏಡ್ಸ್ ಸೋಂಕು ಮುಕ್ತವೆಂದು ದೃಢೀಕರಿಸಿ ಬಳಸಲು ಎಲ್ಲಾ ಆಸ್ಪತ್ರೆಗಳಿಗೆ ಮಾರ್ಗದರ್ಶನ ನೀಡಲಾಗುತ್ತಿದೆ. ಜಿಲ್ಲಾ ಮಟ್ಟದ ಆಸ್ಪತ್ರೆಗಳಲ್ಲಿಯ ರಕ್ತ ನಿಧಿ ಕೇಂದ್ರಗಳಿಗೆ ಹೆಚ್.ಐ.ವಿ. ರ್‍ಯಾಪಿಡ್ ಟೆಸ್ಟ್ ಸಲಕರಣೆಗಳನ್ನು ಒದಗಿಸಲಾಗುತ್ತಿದೆ.
3. ರಾಜ್ಯದಲ್ಲಿರುವ ಜಿಲ್ಲಾ ಮಟ್ಟದ ಆಸ್ಪತ್ರೆಗಳಿಗೆ ಹಾಗೂ ಉಪ ಜಿಲ್ಲಾ ಮಟ್ಟದ ಆಸ್ಪತ್ರೆಗಳಿಗೆ ಸೇರಿದ ಲೈಂಗಿಕ ರೋಗ ಚಿಕಿತ್ಸಾಲಯಗಳ ಸೇವೆಯನ್ನು ಬಲಪಡಿಸಲಾಗುತ್ತಿದೆ. ಅಲ್ಲದೆ ಲೈಂಗಿಂಕ ಚಿಕಿತ್ಸಾಲಯಗಳಿಗೆ ಬರುವ ರೋಗಿಗಳಿಗೆ ಚಿಕಿತ್ಸೆ ಕೊಡುವುದಲ್ಲದೆ, ಆರೋಗ್ಯ ಶಿಕ್ಷಣ ಮತ್ತು ಸುರಕ್ಷಿತ ಲೈಂಗಿಂಕತೆ ಬಗ್ಗೆ ತಿಳುವಳಿಕೆ ನೀಡಲಾಗುತ್ತಿದೆ.
4. ಜನಸಾಮಾನ್ಯರಿಗೆ ಏಡ್ಸ್ ರೋಗ ಹರಡುವ ಬಗ್ಗೆ ಹಾಗೂ ನಿಯಂತ್ರಣದ ಬಗ್ಗೆ ಅರಿವು ಮೂಡಿಸಲು ಸಮೂಹ ಮಾಧ್ಯಮ ಶಿಕ್ಷಣ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ. ಈ ದಿಶೆಯಲ್ಲಿ ಮುದ್ರಿಸಿದ ಸಾಮಗ್ರಿಗಳನ್ನು ಒದಗಿಸಿ

ಆರೋಗ್ಯ ಶಿಕ್ಷಣ ಕಾರ್ಯಕ್ರಮವನ್ನು ಹಮ್ಮಿಕ್ಕೊಳ್ಳಲಾಗಿದೆ. ಹಾಗೂ ದೂರದರ್ಶನ ಮತ್ತು ಆಕಾಶವಾಣಿ ಮೂಲಕ ಆಗಾಗ್ಗೆ ಈ ಬಗ್ಗೆ ಪ್ರಚಾರ ಮಾಡಲಾಗುತ್ತಿದೆ.

ಆ) ಏಡ್ಸ್ ಮಾರಕ ರೋಗಕ್ಕೆ ಈವರೆವಿಗೆ ಬಲಿಯಾದವರ ಸಂಖ್ಯೆ : 39.

(ಇದರಲ್ಲಿ 4 ಮಂದಿ ವಿದೇಶಿಯರು 3 ಮಂದಿ ಇತರೆ ರಾಜ್ಯದವರು, ಹಾಗೂ 32 ಮಂದಿ ಕರ್ನಾಟಕ ರಾಜ್ಯಕ್ಕೆ ಸೇರಿದವರಾಗಿದ್ದಾರೆ).

ಜಿಲ್ಲಾವಾರು ವಿವರಗಳ ಸಂಖ್ಯೆ :

1)	ಬೆಂಗಳೂರು ನಗರ ಜಿಲ್ಲೆ	-	5
2)	ಬೆಂಗಳೂರು ಗ್ರಾಮಾಂತರ	-	1
3)	ಶಿವಮೊಗ್ಗ ಜಿಲ್ಲೆ	-	1
4)	ಮೈಸೂರು	-	1
5)	ಮಂಡ್ಯ ಜಿಲ್ಲೆ	-	1
6)	ದಕ್ಷಿಣ ಕನ್ನಡ	-	9
7)	ಚಿಕ್ಕಮಗಳೂರು	-	2
8)	ಧಾರವಾಡ	-	2
9)	ಉತ್ತರ ಕನ್ನಡ ಜಿಲ್ಲೆ	-	2
10)	ಗುಲ್ಬರ್ಗಾ	-	3
11)	ರಾಯಚೂರು	-	3
12)	ಬೀದರ್	-	1
13)	ಚಿತ್ರದುರ್ಗ	-	1

ಇ) 1995-96ನೇ ವಾರ್ಷಿಕ ಸಾಲಿಗೆ ರೂ. 350.00 ಲಕ್ಷ ಹಣವನ್ನು ಕಾಯ್ದಿರಿಸಿದೆ. ಇದರಲ್ಲಿ ಆಗಸ್ಟ್ 1995ರ ಅಂತ್ಯದವರೆಗೆ ರೂ. 5.65 ಲಕ್ಷಗಳನ್ನು ಖರ್ಚು ಮಾಡಲಾಗಿದೆ. ಹಾಗೂ ರೂ. 39.00 ಲಕ್ಷ ಹಣ ಮಂಜೂರು ಮಾಡಿದ್ದು, ಖರ್ಚು ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಏಡ್ಸ್ ಮಾರಕ ರೋಗವನ್ನು ತಡೆಗಟ್ಟಲು ರಾಷ್ಟ್ರೀಯ ಏಡ್ಸ್ ಮಾರ್ಗಸೂಚಿಯಂತೆ ಏಡ್ಸ್ ನಿಯಂತ್ರಣ ಕಾರ್ಯಕ್ರಮ ಅನುಷ್ಠಾನ ಗೊಳಿಸಲಾಗಿದೆ. ಈ ಕೇಂದ್ರ ಪುರಸ್ಕೃತ ಯೋಜನೆಯಾದ ರಾಷ್ಟ್ರೀಯ ಏಡ್ಸ್ ನಿಯಂತ್ರಣ ಕಾರ್ಯಕ್ರಮವನ್ನು ಶೇಕಡ 100ರ ಧನ ಸಹಾಯದಿಂದ ಏಡ್ಸ್ ಕಾಯಿಲೆಯ ತಡೆಗಟ್ಟುವಿಕೆ ಕುರಿತು ಈ ಕೆಳಕಂಡ ಕಾರ್ಯ ಚಟುವಟಿಕೆಯನ್ನು ಒಳಗೊಂಡಿದೆ.

1. ರಾಜ್ಯ ಮಟ್ಟದಲ್ಲಿ ಏಡ್ಸ್ ಕೋಶವನ್ನು ಸ್ಥಾಪಿಸಲಾಗಿದೆ.
2. ಮೂರು ಏಡ್ಸ್ ಸರ್ವೆಲೆನ್ಸ್ ಕೇಂದ್ರಗಳನ್ನು ಸ್ಥಾಪಿಸಲಾಗಿದೆ
3. ಎಂಟು ಸೆಂಟಿನಲ್ ಸರ್ವೆಲೆನ್ಸ್ ಸೈಟ್‌ಗಳನ್ನು ಗುರುತಿಸಲಾಗಿದೆ
4. ಒಂಭತ್ತು ವಿಭಾಗೀಯ ರಕ್ತ ತಪಾಸಣೆ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಈ ಕೇಂದ್ರಗಳಿಗೆ ಎಲ್ಲಾ ರಕ್ತ ನಿಧಿ ಕೇಂದ್ರಗಳ ರಕ್ತ ಸುರಕ್ಷತೆಗಾಗಿ ಜೋಡಣೆ ಮಾಡಲಾಗಿದೆ.

5. ಏಡ್ಸ್ ನಿಯಂತ್ರಣದ ಬಗ್ಗೆ ವೈದ್ಯರುಗಳಿಗೆ ಹಾಗೂ ವೈದ್ಯೇತರ ಸಿಬ್ಬಂದಿಗೆ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕ್ಕೊಳ್ಳಲಾಗಿದೆ.
6. ಜಿಲ್ಲಾ ಮಟ್ಟದ ಉಪ ಜಿಲ್ಲಾ ಮಟ್ಟದ ಆಸ್ಪತ್ರೆಗಳಲ್ಲಿಯ ರಕ್ತ ನಿಧಿ ಕೇಂದ್ರಗಳನ್ನು ಹಾಗೂ ಎಸ್.ಟಿ.ಡಿ. ಕೇಂದ್ರಗಳನ್ನು ಆಧುನೀಕರಿಸಿ ಬಲವರ್ಧಕ ಗೊಳಿಸಲಾಗುತ್ತಿದೆ.
7. ಜನಸಾಮಾನ್ಯರಲ್ಲಿ ಏಡ್ಸ್ ರೋಗದ ಬಗ್ಗೆ ಅರಿವು ಮೂಡಿಸಲು ಸಮೂಹ ಮಾಧ್ಯಮ ಚಟುವಟಿಕೆಗಳನ್ನು ಹಮ್ಮಿಕ್ಕೊಳ್ಳಲಾಗಿದೆ, ಹಾಗೂ ಸ್ವಯಂಸೇವಾ ಸಂಸ್ಥೆಗಳ ಸೇವೆಯ ಸಹಕಾರವನ್ನೂ ಸಹ ಪಡೆದುಕೊಳ್ಳಲಾಗುತ್ತಿದೆ.

ಲ್ಯಾಮಿಂಗ್‌ಟನ್ ಶಾಲೆಯಲ್ಲಿ ವಿದ್ಯಾರ್ಥಿಗಳಿಂದ ದೇಣಿಗೆ ವಸೂಲಿ.

2636 - ಶ್ರೀ ಅಶೋಕ ಕಾಟವೆ. (ಹುಬ್ಬಳ್ಳಿ ನಗರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ-ಧಾರವಾಡ ಮಹಾ ನಗರಸಭೆಯ ಅಧೀನದ ಹುಬ್ಬಳ್ಳಿಯ ಲ್ಯಾಮಿಂಗ್‌ಟನ್ ಗಂಡು ಹಾಗೂ ಹೆಣ್ಣುಮಕ್ಕಳ ಶಾಲೆಯಲ್ಲಿ ಕಳೆದೆರಡು ವರ್ಷದಿಂದ ವಿದ್ಯಾರ್ಥಿಗಳ ಪ್ರವೇಶ ಕಾಲಕ್ಕೆ ವಿದ್ಯಾರ್ಥಿಗಳಿಂದ ದೇಣಿಗೆ ವಸೂಲು ಮಾಡ್ತಾಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಬಗ್ಗೆ ಸರ್ಕಾರದ ಕ್ರಮವೇನು, ದೇಣಿಗೆ ವಸೂಲಿ ಮಾಡಿದ್ದರೆ ಶಾಲೆಗಳಿಗೆ ಸಂದಾಯವಾದ ಹಣವೆಷ್ಟು, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್.ಜಿ. ಗೋವಿಂದ ಗೌಡ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು).

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಕೊಡಗಿನಲ್ಲಿ ಸ್ವಂತ ಉಪಯೋಗಕ್ಕೆ ಮರವನ್ನು ಸಾಗಿಸಲು ಅನುಮತಿ.

2539 - ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ (ಸೋಮವಾರ ಪೇಟೆ) : ಮಾನ್ಯ ಅರಣ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.?

ಅ) ಕೊಡಗಿನಲ್ಲಿ ಸ್ವಂತ ಉಪಯೋಗಕ್ಕೆ ನೂರು ಘನ ಅಡಿ ಮರದ ಅನುಮತಿಯನ್ನು ಕೊಟ್ಟಿರುವುದನ್ನು ಮೂನ್ನೂರು ಘನ ಅಡಿಗೆ ಏರಿಸಬೇಕೆಂದು ಕೊಡಗು ಜನತೆಯ ಬೇಡಿಕೆ ಸರ್ಕಾರದ ಮುಂದಿದೆಯೇ?

ಆ) ಕೊಡಗಿನ ಜನರು ಮೈಸೂರು ಬೆಂಗಳೂರುಗಳಲ್ಲಿ ಮನೆ ಕಟ್ಟಬೇಕಾದರೆ ಈ ಮರವನ್ನು ಸಾಗಿಸಲು ಅನುಮತಿಯ ಬೇಡಿಕೆ ಸರ್ಕಾರದ ಮುಂದಿದೆಯೇ? ಹಾಗಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್.ವೈ. ಮೇಟಿ (ಅರಣ್ಯ ಸಚಿವರು) :

ಅ) ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯ್ದೆ 1976ರ ನಿಯಮ, 8(6)ರ ಪ್ರಕಾರ ಕೊಡಗಿನಲ್ಲಿಯೂ 100 ಘನ ಅಡಿ ಮರ ಹಾಗೂ 5 ಟನ್ ಸೌದೆಯನ್ನು ಸ್ವಂತ ಉಪಯೋಗಕ್ಕೆ ಉಪಯೋಗಿಸಿಕೊಳ್ಳಲು ಅವಕಾಶವಿದೆ. 300 ಘನ ಅಡಿಗಳವರೆಗೆ ಮರವನ್ನು ಸ್ವಂತ ಉಪಯೋಗಕ್ಕೆ ಜಿಲ್ಲಾಧಿಕಾರಿಗಳು ಸ್ಪಷ್ಟ ಅಭಿಪ್ರಾಯ ಹಾಗೂ ವಿಶೇಷ ಅನುಮತಿ ನೀಡಿದಲ್ಲಿ ಮಾತ್ರ ಕೊಡಲು ಅವಕಾಶವಿದ್ದು ಈ ಕಡಿದ ಮರವನ್ನು ಜಿಲ್ಲೆಯೊಳಗೆ ಮಾತ್ರ ಉಪಯೋಗಿಸಿಕೊಳ್ಳಲು ಅವಕಾಶವಿರುತ್ತದೆ.

ಆ) 1910ರ ರೆವಿನ್ಯೂ ಸೆಟ್ಲಮೆಂಟ್ ಆಫ್ ಕೂರ್ಗ್ ಕಾಯ್ದೆಯ (10)ನೇ ಕಲಂ ಪ್ರಕಾರ ಸ್ವಂತ ಜಮೀನುಗಳಲ್ಲಿನ ಮರಗಳನ್ನು ಸ್ವಂತಕ್ಕಾಗಿ ಸಂಬಂಧಪಟ್ಟ

ಜಿಲ್ಲೆಗಳಲ್ಲಿ ಮಾತ್ರ ಉಪಯೋಗಿಸಲು ಅವಕಾಶವಿದೆ. ಅವುಗಳನ್ನು ಮೈಸೂರು ಬೆಂಗಳೂರಿಗೆ ಮತ್ತು ಇತರ ಜಿಲ್ಲೆಗಳಿಗೆ ಸಾಗಿಸಲು ಅನುಮತಿ ನೀಡಲು ಬರುವುದಿಲ್ಲ.

ಜಲಕ್ರೀಡೆಯ ಕ್ರೀಡಾಪಟುಗಳ ಕುರಿತು.

2540 - ಶ್ರೀ ಎಂ.ಪಿ. ಅಪ್ಪಚ್ಚುರಂಜನ್ (ಸೋಮವಾರಪೇಟೆ) : ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಲಕ್ರೀಡೆಗಾಗಿ ಕ್ರೀಡಾಪಟುಗಳು ಮತ್ತು ತರಬೇತುದಾರರಾಗಿ ಸುಮಾರು ಎಪ್ಪತ್ತು ಜನರು ಕೊಲಂಬಿಯಾಕ್ಕೆ ಹೋಗಿರುವ ವಿಷಯ ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಇವರ ಖರ್ಚು ವೆಚ್ಚವನ್ನು ಸರ್ಕಾರ ಭರಿಸುತ್ತದೆಯೇ, ಎಷ್ಟು ಮತ್ತು ಹೇಗೆ ಒದಗಿಸಲಾಗುತ್ತದೆ?

ಇ) "ಏಷಿಯನ್ ಸ್ವಿಮಿಂಗ್ ಫೆಡರೇಷನ್ ಆಫ್ ಇಂಡಿಯಾ" ಇದರ ವೆಚ್ಚವನ್ನು ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಭರಿಸುತ್ತದೆಯೇ?

ಶ್ರೀ ಅಜಯ ಕುಮಾರ್ ಸರ್‌ನಾಯಕ್ (ಯುವ ಜನ ಸೇವಾ ಹಾಗೂ ಕ್ರೀಡಾ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ

ಇ) ಇಲ್ಲ.

ಪ್ರೌಢ ಶಿಕ್ಷಣ ಮಂಡಲಿಯಲ್ಲಿ ಸಿಬ್ಬಂದಿ ಕೊರತೆ.

2399 - ಶ್ರೀ ಬಸನಗೌಡ ಪಾಟೀಲ್ (ವಿಜಾಪುರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ). ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯಲ್ಲಿ ಸಿಬ್ಬಂದಿ ಕೊರತೆಯಿಂದಾಗಿ ಅಲ್ಲಿನ ಕೆಲಸ ಕಾರ್ಯಗಳು ತೀವ್ರ ವಿಳಂಬವಾಗಿ, ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಲ್ಲಿ, ಈ ಸಮಸ್ಯೆಯ ಪರಿಹಾರಕ್ಕಾಗಿ ಸರ್ಕಾರ ಕೈಗೊಳ್ಳುವ ಕ್ರಮಗಳೇನು?

ಶ್ರೀ ಹೆಚ್.ಜಿ. ಗೋವಿಂದ ಗೌಡ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ವಿಜಾಪುರ ನಗರದಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಾಣ.

2409 - ಶ್ರೀ ಬಸನಗೌಡ ಪಾಟೀಲ್ (ವಿಜಾಪುರ) : ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ನಗರದಲ್ಲಿ ನಿರ್ಮಿಸಬೇಕಾಗಿರುವ ಒಳಾಂಗಣ ಕ್ರೀಡಾಂಗಣ ನಿರ್ಮಾಣ ಸರ್ಕಾರದ ಪರಿಶೀಲನೆಯಲ್ಲಿಯೇ?

ಆ) ಇದ್ದಲ್ಲಿ ಎಂದಿನಿಂದ ಈ ನಿರ್ಮಾಣ ಕಾರ್ಯ ಪ್ರಾರಂಭಿಸಲಾಗುವುದು?

ಇ) ಮತ್ತು ಎಂದು ಈ ನಿರ್ಮಾಣ ಕಾರ್ಯ ಪೂರ್ಣಗೊಳ್ಳುವುದು?

ಶ್ರೀ ಅಜಯ ಕುಮಾರ್ ಸರ್ ನಾಯಕ್ (ಯುವಜನ ಸೇವಾ ಮತ್ತು ಕ್ರೀಡಾ ಸಚಿವರು) :

ಅ) ಹೌದು

ಆ) ಸರ್ಕಾರದಿಂದ ಆಡಳಿತಾತ್ಮಕ ಅನಮೋದನೆ ದೊರೆತು ಹಣ ಹಂಚಿಕೆಯಾದ ನಂತರ ಪ್ರಾರಂಭಿಸಲಾಗುವುದು.

ಇ) ನಿರ್ಮಾಣ ಕಾರ್ಯ ಪ್ರಾರಂಭವಾಗದೇ ಇರುವ ಕಾರಣ ನಿರ್ಮಾಣ ಕಾರ್ಯ ಪೂರ್ಣವಾಗುವ ಅವಧಿಯನ್ನು ಸೂಚಿಸುವುದು ಕಷ್ಟವಾಗುತ್ತದೆ.

ಪ್ರಥಮ ದರ್ಜೆ ಮಹಾವಿದ್ಯಾಲಯಗಳು.

2538 - ಶ್ರೀ ಬಸನಗೌಡ ಪಾಟೀಲ್ (ವಿಜಾಪುರ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ ಬರುವ ಪ್ರಥಮ ದರ್ಜೆ ಮಹಾವಿದ್ಯಾಲಯಗಳಿಗೆ ಸಿಬ್ಬಂದಿ ವರ್ಗಕ್ಕೆ ಈ ವರೆಗೆ ಕೊಡಬೇಕಾದ ತುಟ್ಟಿ ಭತ್ಯೆ ಬಾಕಿ ಎಷ್ಟು?

ಆ) ಅದನ್ನು ಯಾವಾಗ ಕೊಡಲಾಗುವುದು ರಾಜ್ಯದ ಉಳಿದ ಭಾಗದಲ್ಲಿ ಕೊಟ್ಟರೂ ಸದರಿ ವಿಶ್ವವಿದ್ಯಾಲಯಕ್ಕೆಯೇ ಕೊಡದೆ ಇರುವುದರ ಉದ್ದೇಶವೇನು?

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) :

ಅ) ರೂ. 5.04 ಕೋಟಿ

ಆ) ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆ. (ವಿಶ್ವವಿದ್ಯಾನಿಲಯಕ್ಕಲ್ಲ, ಸಂಬಂಧಪಟ್ಟ ಪ್ರಾಧಿಕಾರಗಳಿಗೆ)

ವಿಜಾಪುರ ನಗರದಲ್ಲಿ ಆಯುರ್ವೇದ ಆಸ್ಪತ್ರೆ ನಿರ್ಮಾಣ.

2410 - ಶ್ರೀ ಬಸನಗೌಡ ಪಾಟೀಲ್ (ವಿಜಾಪುರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ನಗರದಲ್ಲಿರುವ ಆಯುರ್ವೇದ ಆಸ್ಪತ್ರೆಯಲ್ಲಿ ನಿರ್ಮಿಸಲಾಗುತ್ತಿರುವ ಕಟ್ಟಡವನ್ನು ಅರ್ಧಕ್ಕೆ ನಿಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಲ್ಲಿ ಅರ್ಧಕ್ಕೆ ನಿಲ್ಲಿಸಲು ಕಾರಣಗಳೇನು?

ಇ) ಕಟ್ಟಡವನ್ನು ಶೀಘ್ರವಾಗಿ ಮುಗಿಸಿ ರೋಗಿಗಳಿಗೆ ಅನುಕೂಲ ಮಾಡಿಕೊಡುವ ವಿಚಾರ ಸರ್ಕಾರಕ್ಕಿದೆಯೇ?

ಡಾ|| ಎಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು:

ಅ) ಹೌದು.

ಆ) ಲೋಕೋಪಯೋಗಿ ಇಲಾಖೆಯ ವತಿಯಿಂದ ಕೈಗೆತ್ತಿಕೊಳ್ಳಲಾಗಿದ್ದ ಕಟ್ಟಡದ ಕಾರ್ಯವನ್ನು ಟೆಂಡರ್ ಮೂಲಕ ನಿರ್ವಹಿಸಲು ಉದ್ದೇಶಿಸಲಾಗಿದೆ ಮತ್ತು ಅಗತ್ಯ ಕ್ರಮ ಕೈಗೊಳ್ಳಲಾಗಿದೆ.

ಇ) ಕಟ್ಟಡವನ್ನು ಶೀಘ್ರವಾಗಿ ಮುಗಿಸುವ ಉದ್ದೇಶದಿಂದ ಕಟ್ಟಡದ ನಿರ್ಮಾಣ ಕಾರ್ಯವನ್ನು ಲೋಕೋಪಯೋಗಿ ಇಲಾಖೆಯಿಂದ ಹಿಂದಕ್ಕೆ ಪಡೆದು ಟೆಂಡರ್ ಮೂಲಕ ನಿರ್ಮಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಮಾಗಡಿ ತಾಲ್ಲೂಕಿನ ಸಾವನದುರ್ಗ ಅರಣ್ಯದಲ್ಲಿ ಗಿರಿಧಾಮ ನಿರ್ಮಾಣ

2366 - ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ತಾಲ್ಲೂಕಿನ, ಸಾವನದುರ್ಗ ಅರಣ್ಯವು ಇಡೀ ರಾಜ್ಯದಲ್ಲಿಯೇ ಗಮನ ಸೆಳೆಯುವ ಅರಣ್ಯವಾಗಿದ್ದು ಈ ಅರಣ್ಯದಲ್ಲಿ ಗಿರಿಧಾಮವನ್ನು ಸ್ಥಾಪಿಸಲಾಗಿದೆಯೇ?

ಆ) ಪ್ರತಿದಿನ ರಾಜ್ಯದ ಹಲವೆಡೆಗಳಿಂದ ಪ್ರವಾಸಿಗರು ಬರುತ್ತಿರುವುದರಿಂದ ಇಲ್ಲಿ ಒಂದು ಬೃಹತ್ ಪ್ರವಾಸಿ ಕೇಂದ್ರವನ್ನು ಸ್ಥಾಪಿಸಲು ಸರ್ಕಾರ ಮುಂದಾಗುವುದೇ?

ಇ) ಈ ಬೃಹತ್ ಅರಣ್ಯ ಪ್ರದೇಶದಲ್ಲಿ ಆಗಾಗ್ಗೆ ಬೆಲೆಬಾಳುವ ಮರಗಳ ಸಾಗಣೆಕೆಯನ್ನು ತಪ್ಪಿಸಲು ಹಾಗೂ ಕಾಡಮೃಗಗಳ ರಕ್ಷಣೆ ಕೊಡಲು ಅರಣ್ಯದ ಸುತ್ತಲೂ ತಂತಿ ಬೇಲಿಯನ್ನು ನಿರ್ಮಿಸಲು ತಗಲುವ ವೆಚ್ಚ ಎಷ್ಟೆಂದು ಅಂದಾಜಿಸಲಾಗಿದೆಯೇ ಹಾಗೂ ತಂತಿ ಬೇಲಿ ಹಾಕಿಸಲು ಸರ್ಕಾರ ಶೀಘ್ರ ಕ್ರಮ ಕೈಗೊಳ್ಳುವುದೇ?

ಶ್ರೀ ಹೆಚ್.ವೈ. ಮೇಟಿ (ಅರಣ್ಯ ಸಚಿವರು) :

ಅ) ಹೌದು.

ಆ) ಹೌದು. ಪ್ರವಾಸಿಗರ ಆಕರ್ಷಣೆ ಮತ್ತು ಅನುಕೂಲಕ್ಕೆ ಜಿಂಕೆ ವನ ಮೊಸಳೆ ಹೊಂಡ ನವಿಲು ಆವರಣ, ಪ್ಯಾರಾಗೋಲ ಮತ್ತು ಒಂದು ಕಾಟೇಜನ್ನು ನಿರ್ಮಿಸಲಾಗಿದೆ.

ಇ) ಸಾವನದುರ್ಗ ಅರಣ್ಯ ಪ್ರದೇಶವು ಒಟ್ಟು 6780 ಎಕರೆ ವಿಸ್ತೀರ್ಣವುಳ್ಳದಾಗಿದ್ದು, 1995-96ನೇ ಸಾಲಿಗೆ ಕೆಂಪೇಗೌಡ ವನಧಾಮ ಪ್ರದೇಶದಲ್ಲಿ ಅಭಿವೃದ್ಧಿ ಕಾರ್ಯ ಕೈಗೊಳ್ಳಲು 3.65 ಲಕ್ಷ ರೂ.ಗಳನ್ನು ಒದಗಿಸಲಾಗಿದೆ. ಹಾಗೂ ಸುಮಾರು 138 ಲಕ್ಷ ರೂ.ಗಳ ಕ್ರಿಯಾ ಯೋಜನೆ ತಯಾರಿಸಿದ್ದು, ಹಂತ ಹಂತವಾಗಿ ಅಭಿವೃದ್ಧಿಪಡಿಸಲು ಯೋಜಿಸಲಾಗಿದೆ. ಅರಣ್ಯ ಪ್ರದೇಶದ ರಕ್ಷಣೆಗೆ ಅವಶ್ಯಕವಾದ ತಂತಿ ಬೇಲಿ ನಿರ್ಮಾಣ ಕಾರ್ಯವನ್ನು ಸಹ ಈ ಯೋಜನೆಯಲ್ಲಿ ಅಳವಡಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಮಾಗಡಿ ಟೌನಿನ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವ ಬಗ್ಗೆ.

2370 - ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ಟೌನಿನ ಜನರಲ್ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲಾಗಿದೆಯೇ?

ಆ) ಜನರಲ್ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಿದರೆ ಇರಬೇಕಾದ ಸೌಲಭ್ಯ ಮತ್ತು ಸೌಲಭ್ಯಗಳಾವುವು?

ಇ) ಈಗ ಮಾಗಡಿ ಪಟ್ಟಣದ ಆಸ್ಪತ್ರೆಗೆ ಈ ಎಲ್ಲಾ ಸೌಲಭ್ಯಗಳನ್ನು ಪೂರೈಸಲಾಗಿದೆಯೇ?

ಈ) ಮೇಲ್ದರ್ಜೆಗೇರಿಸದಿದ್ದರೆ ಮಾಗಡಿ ಟೌನ್ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲು ಶೀಘ್ರ ಕ್ರಮ ಕೈಗೊಳ್ಳಲಾಗುವುದೇ?

ಡಾ॥ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಮಾಗಡಿ ಟೌನಿನಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸರ್ಕಾರದ ಆದೇಶ ಸಂಖ್ಯೆ : ಆಕುಕ 480 ಸಿಜಿಎಂ 80, ದಿನಾಂಕ : 27-3-81ರ ಆದೇಶದಲ್ಲಿ 30 ಹಾಸಿಗೆಗಳ ಸಾರ್ವಜನಿಕ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸಲಾಯಿತು.

ಆ) 30 ಹಾಸಿಗೆಗಳ ಸಾರ್ವಜನಿಕ ಆಸ್ಪತ್ರೆ ಕಟ್ಟಡ ಪೂರ್ಣಗೊಂಡಿದ್ದು, ಈ ಆಸ್ಪತ್ರೆಗೆ ಹೆಚ್ಚುವರಿ ಮಂಜೂರಾತಿಗಾಗಿ ಪ್ರಸ್ತಾವನೆ ಸಲ್ಲಿಸಿದೆ.

30 ಹಾಸಿಗೆಗಳ ಸಾರ್ವಜನಿಕ ಆಸ್ಪತ್ರೆಗೆ ಬೇಕಾಗುವ ಸೌಲಭ್ಯಗಳು ಈ ಕೆಳಗಿನಂತಿವೆ:

37 ವಿವಿಧ ಹುದ್ದೆಗಳು (ವಿವರ ಪಟ್ಟಿಯಲ್ಲಿ ಸಲ್ಲಿಸಿದೆ)

ಔಷಧಕ್ಕಾಗಿ	ರೂ. 1,00,000-00
ಹಾಸಿಗೆ ಮತ್ತು ಬಟ್ಟೆ	ರೂ. 20,000-00
ಆಹಾರ	ರೂ. 30,000-00
ಕಛೇರಿ ವೆಚ್ಚ	ರೂ. 10,000-00
ಸಲಕರಣೆ ಮತ್ತು ಸಾಮಗ್ರಿ ದಂತಚಿಕಿತ್ಸಾ ಘಟಕ, ಕ್ಷ-ಕಿರಣ, ಯಂತ್ರ	

ಇ) 30 ಹಾಸಿಗೆಗಳ ಕಟ್ಟಡದ ಕೆಲಸ ಪೂರ್ಣಗೊಂಡಿದೆ.

ಈ) ಉದ್ಭವಿಸುವುದಿಲ್ಲ.

ಸಿಬ್ಬಂದಿ ಮಾದರಿಯ ವಿವರ

30 ಹಾಸಿಗೆಗಳ ಸಾರ್ವಜನಿಕ ಆಸ್ಪತ್ರೆ ನಾರ್ಮ್ಸ್ ಪ್ರಕಾರ ಬೇಕಾಗುವ ಹುದ್ದೆಗಳ ವಿವರ

ಕ್ರಮ ಸಂಖ್ಯೆ	ಹುದ್ದೆಗಳ ಸಂಖ್ಯೆ	30 ಹಾಸಿಗೆಗಳ ಸ.ಆ. ಕೇಂದ್ರ: ಸಾರ್ವಜನಿಕ ಆಸ್ಪತ್ರೆ
1.	ಸಹಾಯಕ ಶಸ್ತ್ರಚಿಕಿತ್ಸಕರು	-
2.	ಸಹಾಯಕ ದಂತ ಶಸ್ತ್ರಚಿಕಿತ್ಸಕರು	3
3.	ಕ್ಷ-ಕಿರಣ ತಂತ್ರಜ್ಞ	1
4.	ಕ್ಷ-ಕಿರಣ ಸಹಾಯಕ	1
5.	ಕಿರಿಯ ಪ್ರಯೋಗಶಾಲಾ ತಂತ್ರಜ್ಞ	1
6.	ಪ್ರಯೋಗಶಾಲಾ ಸಹಾಯಕ	1
7.	'ಡಿ' ವರ್ಗದ ನೌಕರರು	4
8.	ಅಡುಗೆಯವರು	1
9.	ಅಗಸರು	1
10.	ಸಹಾಯಕರು (3 ಹಾಸಿಗೆಗಳ ಒಂದರಂತೆ)	10
11.	ಫಾರ್ಮಸಿಸ್ಟ್	2
12.	ಕಿರಿಯ ಮಹಿಳಾ ಆರೋಗ್ಯ ಸಹಾಯಕಿ	2
13.	ಸ್ಟಾಫ್ನರ್ಸ್	3

14.	ಕಛೇರಿ ಅಧೀಕ್ಷಕರು	1
15.	ಪ್ರಥಮ ದರ್ಜೆ ಸಹಾಯಕ	1
16.	ದ್ವಿತೀಯ ದರ್ಜೆ ಸಹಾಯಕ	3
17.	ಬೆರಳಚ್ಚುಗಾರರು ಹಾಗೂ ಸಹಾಯಕರು	1
	ಒಟ್ಟು	37

ಬೆಂಗಳೂರು ನಗರದಲ್ಲಿರುವ ಸರ್ಕಾರಿ ಆಸ್ಪತ್ರೆಗಳು

2608 - ಶ್ರೀ ಜಿ. ಬಸವಣ್ಣಪ್ಪ (ಹೊಳೆಹೊನ್ನೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿರುವ ಸರ್ಕಾರಿ ಆಸ್ಪತ್ರೆಗಳೆಷ್ಟು ಮತ್ತು ಅವುಗಳಾವುವು?

ಆ) ಈ ಆಸ್ಪತ್ರೆಗಳಲ್ಲಿ ಇರುವ ಸೌಲಭ್ಯಗಳಾವುವು?

ಇ) ಈ ಆಸ್ಪತ್ರೆಗಳಲ್ಲಿ ಪ್ರತಿ ದಿವಸವು ಚಿಕಿತ್ಸೆ ಪಡೆಯುವ ರೋಗಿಗಳ ಸಂಖ್ಯೆ ಎಷ್ಟು? (ಹೊರ ಮತ್ತು ಒಳರೋಗಿಗಳ ಪ್ರತಿಯೊಂದು ಆಸ್ಪತ್ರೆಗಳ ವಿವರ)

ಈ) ಈ ಆಸ್ಪತ್ರೆಗಳಲ್ಲಿ ಇರುವ ಸಿಬ್ಬಂದಿಯ ಸಂಖ್ಯೆ ಎಷ್ಟು? (ವೈದ್ಯ ಮತ್ತು ವೈದ್ಯೇತರರು)

ಡಾ॥ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಬೆಂಗಳೂರು ನಗರದಲ್ಲಿ ಬೋಧಕ ಆಸ್ಪತ್ರೆಗಳನ್ನು ಹೊರತುಪಡಿಸಿ ಏಳು (7) ಆಸ್ಪತ್ರೆಗಳು ಮತ್ತು 27 ಪ್ರಾಥಮಿಕ ಆರೋಗ್ಯ ಘಟಕಗಳು ಇವೆ. ವಿವರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.

ಆ) ವಿವರಗಳನ್ನು ಅನುಬಂಧ-2ರಲ್ಲಿ ಕೊಡಲಾಗಿದೆ.

ಇ) ವಿವರಗಳನ್ನು ಅನುಬಂಧದಲ್ಲಿ ಮಂಡಿಸಲಾಗಿದೆ.

ಈ) ವಿವರಗಳನ್ನು ಅನುಬಂಧದಲ್ಲಿ ಮಂಡಿಸಲಾಗಿದೆ.

ತಖ್ತೆ ಪಟ್ಟಿ

ಕ್ರಮ ಸಂಖ್ಯೆ	ಪ್ರಾಥಮಿಕ ಆರೋಗ್ಯ ಘಟಕಗಳು	ಹೋರರೋಗಿಗಳ ವಿವರ ಜುಲೈ 95ರ ತಿಂಗಳ
1)	ಪೋಲೀಸ್ ಕಾಲೋನಿ ಚಿಕಿತ್ಸಾಲಯ, ಮೈಸೂರು ರಸ್ತೆ	26
2)	ಪೋಲೀಸ್ ಕಾಲೋನಿ ಚಿಕಿತ್ಸಾಲಯ, ಮಾಗಡಿ ರಸ್ತೆ	25
3)	ಅರಳೇಪೇಟೆ	12
4)	ಎಸ್.ಹೆಚ್.ಪಿ. (ಎಂ) ಬಳೇಪೇಟೆ	9
5)	ಎಸ್.ಹೆಚ್.ಪಿ. (ಎಫ್) ಬಳೇಪೇಟೆ	15

6)	ಚಾಮರಾಜಪೇಟೆ	39
7)	ಬಳೇಪೇಟೆ	11
8)	ಗವೀಪುರ ಗುಟ್ಟಹಳ್ಳಿ	20
9)	ಜಯನಗರ	11
10)	ಮಾವಳ್ಳಿ	31
11)	ಗಾಣಿಗರಪೇಟೆ	6
12)	ಕಲಾಸಿಪಾಳ್ಯ	17
13)	ಮಲ್ಲೇಶ್ವರ	6
14)	ಶೇಷಾದ್ರಿಪುರ	15
15)	ರಾಜಾಜಿನಗರ	12
16)	ಫ್ರೇಜರ್‌ಟೌನ್	9
17)	ನಾಡಲ್ ಶಾಲೆ	7
18)	ವಿ.ವಿ.ಪುರ	6
19)	ಸೊಣ್ಣೇನಹಳ್ಳಿ (ವಿವೇಕನಗರ)	31
20)	ಕೆ.ಜಿ.ಎಫ್. ಚಿಕಿತ್ಸಾಲಯ	58
21)	ಅಲಸೂರು	13
22)	ಬಸವನಗುಡಿ	24
23)	ರಾಜಭವನ	15
24)	ವೇಲು ಮೊದಲಿಯಾರ್	42
25)	ಶಾಸಕರ ಭವನ	40
26)	ವಿಧಾನ ಸೌಧ	35
27)	ಬಹುಮಹಡಿಗಳ ಕಟ್ಟಡ	30

ಬೆಂಗಳೂರು ನಗರದಲ್ಲಿರುವ ಆಸ್ಪತ್ರೆಗಳ ವಿವರ (ಬೋಧಕ ಆಸ್ಪತ್ರೆಗಳನ್ನು ಹೊರತುಪಡಿಸಿ)

ಕ್ರಮ ಸಂಖ್ಯೆ	ಆಸ್ಪತ್ರೆಗಳ ಹೆಸರು	ಪ್ರತಿದಿವಸ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳ ವಿವರ	
		ಹೊರರೋಗಿಗಳು	ಒಳರೋಗಿಗಳು
1.	ಕೆ.ಸಿ. ಜನರಲ್ ಆಸ್ಪತ್ರೆ, ಮಲ್ಲೇಶ್ವರ, ಬೆಂಗಳೂರು	710	410
2.	ಹೆಚ್.ಎಸ್.ಐ.ಎಸ್. ಹೆಂಗಸರ ಮತ್ತು ಮಕ್ಕಳ ಆಸ್ಪತ್ರೆ, ಬೆಂಗಳೂರು.	60	53
3.	ಸಾಂಕ್ರಾಮಿಕ ರೋಗಗಳ ಆಸ್ಪತ್ರೆ ಬೆಂಗಳೂರು.	50	40
4.	ಸಾರ್ವಜನಿಕ ಆಸ್ಪತ್ರೆ, ಜಯನಗರ	650	300
5.	ಕುಷ್ಠರೋಗ ಆಸ್ಪತ್ರೆ, ಮಾಗಡಿ ರಸ್ತೆ ಬೆಂಗಳೂರು	150	185
6.	ಕ್ಷಯರೋಗ ಆಸ್ಪತ್ರೆ, ಹಳೇ ಮದ್ರಾಸುರಸ್ತೆ ಬೆಂಗಳೂರು	13	211
7.	ಲೇಡಿ ವಿಲ್ಲಿಂಗ್ಡನ್ ಟಿ.ಬಿ. ಆಸ್ಪತ್ರೆ, ಬೆಂಗಳೂರು	100	ಇಲ್ಲ

ಅನುಬಂಧ 2

ಆಸ್ಪತ್ರೆಯಲ್ಲಿರುವ ಸೌಲಭ್ಯಗಳು

ಆಸ್ಪತ್ರೆಗೆ ಬರುವ ಎಲ್ಲಾ ರೋಗಿಗಳಿಗೂ ಸೇವಾ ಸೌಲಭ್ಯಗಳನ್ನು ಒದಗಿಸಲಾಗುತ್ತದೆ. ದೊಡ್ಡ ಆಸ್ಪತ್ರೆಗಳಾದ

1) ಕೆ.ಸಿ ಸಾರ್ವಜನಿಕ ಆಸ್ಪತ್ರೆ, ಮಲ್ಲೇಶ್ವರಂ, ಬೆಂಗಳೂರು
2) ಸಾರ್ವಜನಿಕ ಆಸ್ಪತ್ರೆ, ಜಯನಗರ, ಬೆಂಗಳೂರು.

ಈ ಆಸ್ಪತ್ರೆಗಳಲ್ಲಿ ಈ ಕೆಳಗಿನ ಸೌಲಭ್ಯಗಳು ರೋಗಿಗಳಿಗೆ ಲಭ್ಯವಿರುತ್ತದೆ.

1. ವೈದ್ಯಕೀಯ ವಿಭಾಗ (ಮೆಡಿಸನ್)
2. ಶಸ್ತ್ರ ಚಿಕಿತ್ಸೆ
3. ಪ್ರಸೂತಿ ಮತ್ತು ಸ್ತ್ರೀರೋಗ ಚಿಕಿತ್ಸೆ
4. ಮಕ್ಕಳ ಚಿಕಿತ್ಸೆ
5. ನೇತ್ರ ಚಿಕಿತ್ಸೆ
6. ಅಸ್ಥಿ ಚಿಕಿತ್ಸೆ

7. ಫಿರಿಯೋತೆರಪಿ ಚಿಕಿತ್ಸೆ
8. ಕಿವಿ, ಮೂಗು ಮತ್ತು ಗಂಟಲು ಚಿಕಿತ್ಸೆ
9. ಚರ್ಮ ಮತ್ತು ಗುಹ್ಯರೋಗಗಳ ಚಿಕಿತ್ಸೆ
10. ಕ್ಷ-ಕಿರಣ ವಿಭಾಗ
11. ಮಾನಸಿಕ ವಿಭಾಗ (ಕೆ.ಸಿ. ಸಾರ್ವಜನಿಕ ಆಸ್ಪತ್ರೆ, ಬೆಂಗಳೂರು ಮಾತ್ರ).
12. ರೋಗವಿಧಾನ ಶಾಸ್ತ್ರ ವಿಭಾಗ (ಪೆಥಾಲಜಿ ವಿಭಾಗ)
13. ಅಣುಜೀವಿ ಶಸ್ತ್ರ ವಿಭಾಗ (ಮೈಕ್ರೋಬಯಾಲಜಿ ವಿಭಾಗ)
14. ಜೀವರಸಾಯನ ಶಾಸ್ತ್ರ ವಿಭಾಗ (ಬಯೋಕೆಮಿಸ್ಟ್ರಿ)
15. ಏಡ್ಸ್ ವಿಭಾಗ ಪ್ರಯೋಗಶಾಲೆ
16. ದಂತ ಚಿಕಿತ್ಸೆ ವಿಭಾಗ
ಪ್ರಯೋಗಶಾಲೆ
17. ಎಂಡೋಸ್ಕೋಪಿ - ಸಾರ್ವಜನಿಕ ಆಸ್ಪತ್ರೆ, ಜಯನಗರ
18. ಇ.ಸಿ.ಜಿ.
19. ರೋಗಿ ವಾಹನ (ಆಂಬುಲೆನ್ಸ್)

3) ಹೆಚ್.ಎಸ್.ಐ.ಎಸ್. ಘೋಷ ಆಸ್ಪತ್ರೆ, ಬೆಂಗಳೂರು ಹೆರಿಗೆ ಆಸ್ಪತ್ರೆಯಾಗಿದ್ದು, ಹೆಂಗಸರಿಗೆ ಮತ್ತು ಮಕ್ಕಳಿಗೆ ಮಾತ್ರ ಚಿಕಿತ್ಸೆ ಒದಗಿಸಲು ಸೌಲಭ್ಯಗಳು ಇರುತ್ತದೆ.
4) ಕ್ಷಯರೋಗ ಆಸ್ಪತ್ರೆ, ಹಳೇಮದ್ರಾಸ್ ರಸ್ತೆ ಬೆಂಗಳೂರು
5) ಮತ್ತು ಲೇಡಿ ವಿಲ್ಲಿಂಗ್ಡನ್ ಕ್ಷಯರೋಗ ಸಂಸ್ಥೆ, ಇಲ್ಲಿ ಕ್ಷಯ ರೋಗಕ್ಕೆ ಸಂಬಂಧಪಟ್ಟಂತೆ ಚಿಕಿತ್ಸಾ ವಿಧಾನಗಳ ಸೌಲಭ್ಯವಿರುತ್ತದೆ.
6) ಕುಷ್ಠರೋಗ ಆಸ್ಪತ್ರೆ, ಮಾಗಡಿ ರಸ್ತೆ ಬೆಂಗಳೂರು
ಇಲ್ಲಿ ಕುಷ್ಠರೋಗಿಗಳಿಗೆ ಮತ್ತು ಚಿಕಿತ್ಸೆ ಒದಗಿಸಲು ಸೌಲಭ್ಯಗಳಿರುತ್ತದೆ.
7) ಸಾಂಕ್ರಾಮಿಕ ರೋಗ ಆಸ್ಪತ್ರೆ, ಬೆಂಗಳೂರು ಇಲ್ಲಿ ಅಂಟುಜಾಡ್ಯಗಳಂತಹ ಸಾಂಕ್ರಾಮಿಕ ರೋಗಿಗಳಿಗೆ ಚಿಕಿತ್ಸಾ ಸೌಲಭ್ಯ ಒದಗಿಸಲು ಮೀಸಲಾಗಿರುತ್ತದೆ.
8) ತುರ್ತು ಮತ್ತು ಆಕಸ್ಮಿಕ ವಿಭಾಗಗಳು ಆಸ್ಪತ್ರೆಗಳಲ್ಲಿ ದಿನವಿಡೀ ಕೆಲಸ ನಿರ್ವಹಿಸುತ್ತಿರುತ್ತವೆ.

ಆಸ್ಪತ್ರೆಗಳಲ್ಲಿ ಇರುವ ಸಿಬ್ಬಂದಿ

ಕ್ರಮ ಸಂಖ್ಯೆ	ಆಸ್ಪತ್ರೆ ಹೆಸರು	ವೈದ್ಯರು		ವೈದ್ಯರಲ್ಲದವರು	
		ಮಂಜೂರು	ಕೆಲಸ ಮಾಡುತ್ತಿರುವುದು	ಮಂಜೂರು	ಕೆಲಸ ಮಾಡುತ್ತಿರುವುದು
1.	ಕೆ.ಸಿ. ಜನರಲ್ ಆಸ್ಪತ್ರೆ	32	29	295	285
2.	ಹೆಚ್ಎಸ್ಐಎಸ್. ಆಸ್ಪತ್ರೆ	10	10	62	60

3.	ಸಾಂಕ್ರಾಮಿಕ ರೋಗಿಗಳ ಆಸ್ಪತ್ರೆ	4	4	59	56
4.	ಸಾರ್ವಜನಿಕ ಆಸ್ಪತ್ರೆ, ಜಯನಗರ	26	23	258	209
5.	ಕುಷ್ಠರೋಗ ಆಸ್ಪತ್ರೆ	7	3	83	71
6.	ಕ್ಷಯರೋಗ ಆಸ್ಪತ್ರೆ	6	6	25	11
7.	ಲೇಡಿ ವಿಲ್ಲಿಂಗ್ಡನ್ ಟಿ.ಬಿ. ಆಸ್ಪತ್ರೆ	10	8	77	66
8.	ಪೋಲೀಸ್ ಕಾಲೋನಿ ಚಿಕಿತ್ಸಾಲಯ, ಮೈಸೂರುರಸ್ತೆ	1	1	7	6
9.	ಪೋಲೀಸ್ ಕಾಲೋನಿ ಚಿಕಿತ್ಸಾಲಯ ಮಾಗಡಿ ರಸ್ತೆ	1	1	4	4
10.	ಪ್ರಾ.ಆ.ಘ. ಅರಳೇಪೇಟೆ	2	2	5	5
11.	ಎಹೆಚ್‌ಪಿ (ಎಂ) ಬಳೇಪೇಟೆ	1	1	6	6
12.	ಎಹೆಚ್‌ಪಿ (ಎಫ್) ಬಳೇಪೇಟೆ	1	1	4	4
13.	ಪ್ರಾಆಘ, ಚಾಮರಾಜಪೇಟೆ	2	2	4	4
14.	ಪ್ರಾಆಘ, ಬಳೇಪೇಟೆ	1	1	4	4
15.	ಪ್ರಾಆಘ ಗವಿಪುರಂ ಗುಟ್ಟಹಳ್ಳಿ	1	1	3	3
16.	ಪ್ರಾಆಘ. ಜಯನಗರ	2	2	4	4
17.	ಪ್ರಾಆಘ, ಮಾವಳ್ಳಿ	2	2	5	5
18.	ಪ್ರಾಆಘ, ಗಾಣಿಗರಪೇಟೆ	2	2	5	5
19.	ಪ್ರಾಆಘ, ಕಲಾಸಿಪಾಳ್ಯ	2	2	4	4
20.	ಪ್ರಾಆಘ, ಮಲ್ಲೇಶ್ವರಂ	2	2	5	5
21.	ಪ್ರಾಆಘ, ಶೇಷಾದ್ರಿಪುರಂ	2	2	4	4
22.	ಪ್ರಾಆಘ, ರಾಜಾಜಿನಗರ	2	2	4	3
23.	ಪ್ರಾಆಘ, ಫ್ರೇಜರ್‌ಟೌನ್	2	2	7	7
24.	ಪ್ರಾಆಘ, ಸಾದತ್ಕೊಲೆ	3	3	12	10
25.	ಪ್ರಾಆಘ, ವಿ.ವಿ. ಪುರ	2	2	8	8
26.	ಪ್ರಾಆಘ, ಸೊಣ್ಣೇನಹಳ್ಳಿ (ವಿವೇಕನಗರ)	2	2	4	4
27.	ಪ್ರಾಆಘ, ಕರ್ನಾಟಕ ಸಚಿವಾಲಯ ಆಸ್ಪತ್ರೆ	2	2	7	6
28.	ಪ್ರಾಆಘ, ಅಲಸೂರು	2	2	7	7
29.	ಪ್ರಾಆಘ, ಬಸವನಗುಡಿ	1	1	4	4

30.	ರಾಜಭವನ	1	1	-	-
31.	ಪ್ರಾಆಫ್, ವೇಲುಮೊದಲಿಯಾರ್	2	1	9	9
32.	ಪ್ರಾಆಫ್, ಶಾಸಕರ ಭವನ	2	2	8	8
33.	ವಿಧಾನ ಸೌಧ	1	1	-	-
34.	ಬಹುಮಹಡಿಗಳ ಕಟ್ಟಡ	1	1	-	-

ಜಿಲ್ಲಾ ಪಂಚಾಯಿತಿಯಿಂದ ವಿದ್ಯಾಸಂಸ್ಥೆಗಳಿಗೆ ಮಂಜೂರಾತಿ

2474 - ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲಾ ಪಂಚಾಯತ್ ಅಧಿಕಾರವಿದ್ದಾಗ ಯಾವ ಜಿಲ್ಲೆಯವರು ಖಾಸಗಿ ವಿದ್ಯಾ ಸಂಸ್ಥೆಗಳಿಗೆ ಯಾವ ವರ್ಷದಲ್ಲಿ ಎಷ್ಟು ಪ್ರಾಥಮಿಕ ಶಾಲೆಗಳು ಮತ್ತು ಪ್ರೌಢ ಶಾಲೆಗಳನ್ನು ತೆರೆಯಲು ಅನುಮತಿ ನೀಡಿದೆ (ಜಿಲ್ಲಾವಾರು ಮಾಹಿತಿ ಒದಗಿಸುವುದು)

ಆ) ಈ ಶಾಲೆಗಳಿಗೆ ಜಿಲ್ಲಾ ಪರಿಷತ್ತವರು ಮಂಜೂರಾತಿ ನೀಡುವಾಗ ಶಾಶ್ವತ ಅನುದಾನ ರಹಿತ ಎಂಬ ಷರತ್ತು ವಿಧಿಸಿಲ್ಲ

ಇ) ಹಾಗಿದ್ದಲ್ಲಿ 7 ವರ್ಷ ಕಳೆದಿರುವ ಮತ್ತು ಸರ್ಕಾರದ ಅನುದಾನ ಸಂಹಿತೆಯ ಷರತ್ತುಗಳನ್ನು ಪೂರೈಸಿರುವ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಅನುದಾನಕ್ಕೆ ಒಳಪಡಿಸಲು ಸರ್ಕಾರದವರು ಪರಿಶೀಲಿಸುವರೇ?

ಈ) ಹಾಗಿದ್ದಲ್ಲಿ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಹೆಚ್.ಜಿ. ಗೋವಿಂದಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):

ಅ) ಪ್ರಾಥಮಿಕ - 563

ಪ್ರೌಢಶಾಲೆಗಳು - 212

(ಜಿಲ್ಲಾವಾರು ಮಾಹಿತಿ ಪಟ್ಟಿ ಲಗತ್ತಿಸಿದೆ)

ಆ) ಮಂಗಳೂರು ಜಿಲ್ಲೆಯಲ್ಲಿ 4 ಶಾಲೆಗಳಿಗೂ ಮತ್ತು ಚಿತ್ರದುರ್ಗ ಜಿಲ್ಲೆಯಲ್ಲಿ 231 ಶಾಲೆಗಳಿಗೆ ಖಾಯಂ ಶಾಶ್ವತ ಅನುದಾನ ರಹಿತ ಎಂಬ ಷರತ್ತು ವಿಧಿಸಿದ್ದಾರೆ.

ಇ) 1987-88ರ ಪೂರ್ವದಲ್ಲಿ ಅನುದಾನ ಸಹಿತವಾಗಿ ಮಂಜೂರಾಗಿರುವಂತಹ ಶಾಲೆಗಳನ್ನು ನಿಯಮಗಳ ಪ್ರಕಾರ ಎಲ್ಲಾ ಷರತ್ತುಗಳನ್ನು ಪೂರೈಸಿದ್ದಲ್ಲಿ ಮತ್ತು ನಿಗಧಿತ ಅನುದಾನ ರಹಿತ ಅವಧಿಯನ್ನು ಪೂರೈಸಿದ್ದಲ್ಲಿ ಹಾಗೂ ಜಿಲ್ಲಾ ಪಂಚಾಯತ್ನ ಆಯವ್ಯಯದಲ್ಲಿ ಹಣಕಾಸಿನ ಅವಕಾಶವಿದ್ದಲ್ಲಿ ಅನುದಾನಕ್ಕೆ ಒಳಪಡಿಸು ಕ್ರಮ ಕೈಗೊಳ್ಳಲಾಗುತ್ತಿದೆ.

ಈ) 1987-88ರಿಂದ ಪ್ರಾರಂಭಿಸಿರುವ ಎಲ್ಲಾ ಶಾಲೆಗಳು ಸರ್ಕಾರದ ನೀತಿಯ ಪ್ರಕಾರ ಶಾಶ್ವತ ಅನುದಾನ ರಹಿತವಾಗಿರುತ್ತದೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 2474 - ಜಿಲ್ಲಾಪರಿಷತ್ತಿಂದ ಮಂಜೂರಾದ ಪ್ರೌಢಶಾಲೆಗಳ ಮತ್ತು ಪ್ರಾಥಮಿಕ ಶಾಲೆಗಳ ಜಿಲ್ಲಾವಾರು ಹಾಗೂ ವರ್ಷವಾರು ವಿವರದ ಪಟ್ಟಿ

ಕ್ರ. ಸಂ.	ಜಿಲ್ಲೆಯ ಹೆಸರು	ರಾಜ್ಯದಲ್ಲಿ ಜಿಲ್ಲಾಪರಿಷತ್ತಿಂದ ಮಂಜೂರಾದ ಪ್ರಾಥಮಿಕ:ಪ್ರೌಢಶಾಲೆಗಳ ವರ್ಷವಾರು ವಿವರ										ಒಟ್ಟು ಜಿಲ್ಲಾಪರಿಷತ್ ನಿಂದ ಮಂಜೂರಾದ ಪ್ರಾಥ. ಪ್ರೌಢ. ಶಾಲೆಗಳು	
		1987-88		1988-89		1989-90		1990-91		1991-92		ಪ್ರಾಥಮಿಕ ಶಾಲೆಗಳು	ಪ್ರೌಢ
		ಪ್ರಾಥ ಮಿಕ	ಪ್ರೌಢ	ಪ್ರಾಥ ಮಿಕ	ಪ್ರೌಢ	ಪ್ರಾಥ ಮಿಕ	ಪ್ರೌಢ	ಪ್ರಾಥ ಮಿಕ	ಪ್ರೌಢ	ಪ್ರಾಥ ಮಿಕ	ಪ್ರೌಢ	ಪ್ರಾಥಮಿಕ	ಪ್ರೌಢ
1.	ಬೆಂಗಳೂರು ಗ್ರಾಮಾಂತರ ಉತ್ತರ	-	-	-	-	-	-	-	-	-	-	-	-
2.	ಬೆಂಗಳೂರು ದಕ್ಷಿಣ,	-	-	-	-	-	-	-	-	-	-	-	-
3.	ಬೆಂಗಳೂರು ಗ್ರಾಮಾಂತರ	-	-	-	14	17	11	-	07	-	-	17	32
4.	ತುಮಕೂರು	-	-	4	-	6	-	-	-	-	-	10	-
5.	ಚಿತ್ರದುರ್ಗ	-											
6.	ಕೋಲಾರ	10	01	20	-	13	-	10	-	-	-	53	01
7.	ಶಿವಮೊಗ್ಗ	-	-	10	-	09	-	-	-	-	-	19	-
8.	ಮೈಸೂರು	02	-	-	02	-	-	-	-	-	-	02	02
9.	ಮಂಡ್ಯ	-	-	-	-	-	-	-	-	-	-	-	-
10.	ಮಂಗಳೂರು	04	01	05	05	05	05	05	-	-	-	19	11
11.	ಹಾಸನ	-	-	-	09	-	19	-	-	-	-	-	28
12.	ಚಿಕ್ಕಮಗಳೂರು	02	01	-	-	-	-	-	-	-	-	02	01
13.	ಕೊಡಗು	-	-	-	01	-	-	-	-	-	-	-	01
14.	ಬೆಳಗಾಂ	-	04	23	04	53	-	29	-	-	-	105	08
15.	ಧಾರವಾಡ	-	-	-	-	24	43	-	-	-	33	24	76

16.	ಕಾರವಾರ (ಉತ್ತರ ಕನ್ನಡ)	-	01	-	-	-	-	-	-	-	-	-	01
17.	ಗುಲ್ಬರ್ಗಾ	-	-	-	-	-	-	-	-	-	-	-	-
18.	ರಾಯಚೂರು	10	-	12	-	19	-	-	-	-	-	41	-
19.	ಬಳ್ಳಾರಿ	01	-	-	-	06	-	-	-	-	-	-	07
20.	ಬೀದರ್	01	-	03	18	02	-	-	-	-	-	06	18
21.	ಬಿಜಾಪುರ	-	-	08	26	10	-	16	-	-	-	34	26
	ಒಟ್ಟು	29	09	111	79	273	84	150	7	-	33	563	212

New Govt. High Schools in the State

2475 - Sri B.B. Chimmankatti (Badami) : Will the minister for primary & secondary Education be pleased to State?

a) *whether it is a fact that the Govt. has issued orders on 17.10.1994 to open New Govt. High Schools in few places of State?*

b) *If so, places in which these schools are started during the last academic year. (List to be given)*

c) *What are the reasons for not sanctioning of new Govt. High Schools during this year?*

Sri H.G. Govinda Gowda (Minister for primary and secondary Education):

a) Yes.

b) 1. Govt. High School, Mastharamarali Bailahongal Tq. Belgaum District

2. -do- Konkare, Shahapur Tq. Gulbarga District.

3. -do- Mijaru, Karkala Taluk, Dakshina Kannada Dist.

4. -do- H. Bhasapura, Davangere Tq., Chitradurga Dist.

5. -do- Ramanamudra, Yadgir Tq., Gulbarga Dist.

6. -do- Naganuru, Davanagere Tq., Chitradurga Dist.

7. -do- Puttaka, Yadgir Taluk, Gulbarga Dist.

8. -do- Nayinadu, Bantwal Tq., Dakshina Kannada Dist.

9. -do- Balligeri, Athani Tq., Belgaum Dist.

10. -do- Hallgeri, Koppal Tq., Raichur Dist.

c) In view of the sanction of more Govt. High Schools during the last year, Govt. has decided to strengthen these schools instead of starting new High Schools this year. On the basis of School Mapping, action will be taken to start New Govt. High Schools during next year.

ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆ ಭರ್ತಿ

2543 - ಶ್ರೀ ಚಂದ್ರಶೇಖರ ಸದಾಶಿವ ನಾಯಕ್ (ಗೋಕಾಕ್) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೋಕಾಕ್ ತಾಲ್ಲೂಕಿನಲ್ಲಿ ಖಾಲಿ ಇರುವ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು ಎಷ್ಟು?

ಆ) ಮಕ್ಕಳ ಹಾಜರಾತಿಗೆ ಅನುಗುಣವಾಗಿ ತುಂಬಬೇಕಾದ ಶಿಕ್ಷಕರ ಹುದ್ದೆಗಳೆಷ್ಟು?

ಇ) ಹಾಗಿದ್ದಲ್ಲಿ, ಅವುಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಈ) ಭರ್ತಿ ಮಾಡಲು ಅನುಸರಿಸುವ ಪದ್ಧತಿ ಯಾವುದು?

ಉ) ಸದರಿ ಭರ್ತಿ ಮಾಡುವಾಗ ಸ್ತ್ರೀಯರಿಗೆ ನಿಗಧಿಪಡಿಸುವ ಸ್ಥಾನಗಳ ಪ್ರಮಾಣವೇನು?

ಶ್ರೀ ಹೆಚ್.ಜಿ. ಗೋವಿಂದ ಗೌಡ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):

ಅ) 17.

ಆ) ಮಕ್ಕಳ ಹಾಜರಾತಿ ಮತ್ತು ಶಿಕ್ಷಕರ ಅನುಪಾತ 1:50 ರನ್ವಯ 17 ಶಿಕ್ಷಕರ ಹುದ್ದೆಗಳನ್ನು ತುಂಬಬೇಕಾಗಿದೆ.

ಇ) 1995ರ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಯಲ್ಲಿ ತುಂಬಲಾಗುವುದು.

ಈ) ಹಾಲಿ ಇರುವ ಹುದ್ದೆಗಳ ಪೈಕಿ ಶೈಕಡಾ 50ರಷ್ಟನ್ನು ವಿಶೇಷ ನೇಮಕಾತಿ (29 ವರ್ಷಗಳ ಮೇಲ್ಪಟ್ಟವರಿಂದ) ಮತ್ತು ಉಳಿದ ಶೇಕಡ 50ರಷ್ಟನ್ನು ಸಾಮಾನ್ಯ ನೇಮಕಾತಿ (18 ವರ್ಷಗಳಿಂದ ಗರಿಷ್ಟ ವಯೋಮಿತಿಯೊಳಗಿನವರಿಂದ) ಮೂಲಕ ತುಂಬಲಾಗುವುದು.

ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ ಪ್ರಾಧಿಕಾರವಾದ ಜಿಲ್ಲಾ ಉಪ ನಿರ್ದೇಶಕರುಗಳು ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಗಳಲ್ಲಿ ನೋಂದಾಯಿಸಲ್ಪಟ್ಟ ಅರ್ಹ ವಿದ್ಯಾರ್ಥಿಗಳ ಪಟ್ಟಿ ಪಡೆದು ವಯೋಮಿತಿ ಹಾಗೂ ಹಾಲಿ ಜಾರಿಯಲ್ಲಿರುವ ಮೀಸಲಾತಿ ಮತ್ತು ಅರ್ಹತೆಯ ಆಧಾರದ ಮೇಲೆ ಅರ್ಹ ಅಭ್ಯರ್ಥಿಗಳನ್ನು ನೇಮಕ ಮಾಡಲಿರುವರು.

ಉ) ಒಟ್ಟು ಖಾಲಿ ಹುದ್ದೆಗಳ ಶೇಕಡ 50ರಷ್ಟು ಹುದ್ದೆಗಳನ್ನು ಮಹಿಳಾ ಅಭ್ಯರ್ಥಿಗಳಿಂದ ತುಂಬಲಾಗುವುದು.

ಖಾನಾಪುರ ತಾಲ್ಲೂಕಿನಲ್ಲಿ ನಕಲಿ ವರ್ಗಾವಣೆ ಕುರಿತು

2544 - ಶ್ರೀ ಚಂದ್ರಶೇಖರ್ ಸದಾಶಿವ ನಾಯಕ್ (ಗೋಕಾಕ್) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯ ಖಾನಪೂರ ಮತ್ತು ಹುಕ್ಕೇರಿ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯಕ್ಕೆ ಬಂದ ನಕಲಿ ವರ್ಗಾವಣೆ ಆದೇಶ ಜಾರಿಗೆ ಬಂದಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇಯ

ಆ) ಬಂದಿದ್ದರೆ ನಕಲಿ ಆದೇಶದ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೆಷ್ಟು?

ಇ) ಆ ದೇಶದ ರಚನೆ ಮತ್ತು ಜಾರಿಯ ಕುರಿತು ಅದರಲ್ಲಿ ಸಿಲುಕಿಕೊಂಡ ಸರ್ಕಾರಿ ನೌಕರರೆಷ್ಟು?

ಈ) ನಕಲಿ ವರ್ಗಾವಣೆ ಆದೇಶದಲ್ಲಿ ಸಿಲುಕಿಕೊಂಡ ಎಷ್ಟು ಜನರ (ನೌಕರರ) ವಿರುದ್ಧ ಸರ್ಕಾರ ಕ್ರಮಕೈಗೊಂಡಿದೆ?

ಉ) ನಕಲಿ ಜಾಲದ ಬಗ್ಗೆ ಉನ್ನತ ಅಧಿಕಾರಿಗಳ ಸಮಿತಿ ರಕ್ಷಣೆಗೆ ಸರ್ಕಾಗ ಏನಾದರೂ ಯೋಚನೆ ಮಾಡಿದೆಯೇ?

ಶ್ರೀ ಹೆಚ್.ಜಿ. ಗೋವಿಂದಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) ಬಂದಿದೆ.

ಆ) ನಕಲಿ ಆದೇಶ ರದ್ದು ಪಡಿಸಿದೆ. ನಕಲಿ ಆದೇಶದ ಸೌಲಭ್ಯವನ್ನು ಪಡೆದುಕೊಳ್ಳಲು ಪ್ರಯತ್ನಿಸಿದ ಇಬ್ಬರು ದ್ವಿತೀಯ ದರ್ಜೆ ಸಹಾಯಕರುಗಳನ್ನು ಅಮಾನತ್ತಿನಲ್ಲಿಟ್ಟು ಇಲಾಖಾ ವಿಚಾರಣೆ ನಡೆಸಲಾಗುತ್ತಿದೆ.

ಇ) ಮೂರು ದ್ವಿತೀಯ ದರ್ಜೆ ಸಹಾಯಕರುಗಳು

ಈ) ಇಬ್ಬರು ದ್ವಿತೀಯ ದರ್ಜೆ ಸಹಾಯಕರುಗಳನ್ನು ಅಮಾನತ್ತಿನಲ್ಲಿಟ್ಟು ಇಲಾಖಾ ವಿಚಾರಣೆ ನಡೆಸಲಾಗುತ್ತಿದೆ.

ಉ) ಸದ್ಯಕ್ಕೆ ಅಂತಹ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಯಲ್ಲಿ ಕ್ಷಯ ರೋಗಿಗಳ ಬಗ್ಗೆ

2545 - ಶ್ರೀ ಎಂ. ಚಂದ್ರಪ್ಪ (ಭರಮಸಾಗರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಯಲ್ಲಿ ಕ್ಷಯ ರೋಗಿಗಳಿಗೆ ಸರಿಯಾದ ವಾರ್ಡ್ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಬೇರೆ ಕ್ಷಯದ ಆಸ್ಪತ್ರೆಯನ್ನು ಕಟ್ಟಿಸುವ ಯೋಜನೆ ಸರ್ಕಾರದವರ ಮುಂದಿದೆಯೇ?

ಇ) ಹಾಗಿದ್ದಲ್ಲಿ 1995-96ನೇ ಸಾಲಿಗೆ ಆಸ್ಪತ್ರೆ ಕಟ್ಟಲು ಎಷ್ಟು ಹಣವನ್ನು ಕಾದಿರಿಸಲಾಗಿದೆ?

ಡಾ|| ಎಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಯಲ್ಲಿ 32 ಕ್ಷಯ ರೋಗಿಗಳ ಹಾಸಿಗೆಗಳ ವಾರ್ಡ್ ಇರುತ್ತವೆ.

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.

ಕಡೂರು ತಾಲ್ಲೂಕಿನ ಆಯುರ್ವೇದಿಕ್ ಆಸ್ಪತ್ರೆಗಳಲ್ಲಿ ವೈದ್ಯರುಗಳ ಕೊರತೆ

2677 - ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಡೂರು ತಾಲ್ಲೂಕಿನ ಆಯುರ್ವೇದಿಕ್ ಆಸ್ಪತ್ರೆಗಳಲ್ಲಿ ವೈದ್ಯರುಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಕಡೂರು ತಾಲ್ಲೂಕಿನಲ್ಲಿರುವ ಆಯುರ್ವೇದಿಕ್ ಆಸ್ಪತ್ರೆಗಳೆಷ್ಟು? ಹಾಗೂ ಎಷ್ಟು ಆಸ್ಪತ್ರೆಗಳಲ್ಲಿ ವೈದ್ಯರಿದ್ದಾರೆ?

ಇ) ಇಲ್ಲಿಯವರೆಗೆ ವೈದ್ಯರುಗಳನ್ನು ನೇಮಕ ಮಾಡದಿರಲು ಕಾರಣಗಳೇನು?

ಈ) ಒಂದು ಆಯುರ್ವೇದಿಕ್, ಆಸ್ಪತ್ರೆಗೆ ಒಂದು ವರ್ಷಕ್ಕೆ ಎಷ್ಟು ಔಷಧಿಗಳನ್ನು ಸರ್ಕಾರದವರು ಸರಬರಾಜು ಮಾಡುತ್ತಿದ್ದಾರೆ?

ಡಾ|| ಎಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಆ) ತಾಲ್ಲೂಕು ಕೇಂದ್ರವಾದ ಕಡೂರು ಪಟ್ಟಣದಲ್ಲಿ ಹಾಗೂ ಯರದಗೆರೆ ಗ್ರಾಮದಲ್ಲಿ ತಲಾ ಒಂದೊಂದು ಆಸ್ಪತ್ರೆಗಳಿವೆ. ಇವುಗಳಲ್ಲಿ ಒಂದು ಆಸ್ಪತ್ರೆಯಲ್ಲಿ

ವೈದ್ಯರಿದ್ದಾರೆ. ಈ ತಾಲ್ಲೂಕಿನ ಗ್ರಾಮಾಂತರ ಪ್ರದೇಶದಲ್ಲಿ 15 ಆಯುರ್ವೇದ ಔಷಧಾಲಯಗಳಿದ್ದು ಅವುಗಳಲ್ಲಿ 7ರಲ್ಲಿ ವೈದ್ಯರುಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಇ) ಇಲಾಖೆಯಲ್ಲಿ ಒಟ್ಟು 182 ವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇದ್ದು ಕರ್ನಾಟಕ ಲೋಕ ಸೇವಾ ಆಯೋಗದ ಮೂಲಕ ಈ ಹುದ್ದೆಗಳನ್ನು ಭರ್ತಿ ಮಾಡಲು ಸೂಕ್ತ ಕ್ರಮ ಕೈಗೊಳ್ಳಲಾಗಿದೆ. ಕರ್ನಾಟಕ ಲೋಕಸೇವಾ ಆಯೋಗದಿಂದ ಆಯ್ಕೆ ಪಟ್ಟಿ ಬಂದ ನಂತರ ಈ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

ಈ) 1) 6 ಹಾಸಿಗೆಗಳ ಆಸ್ಪತ್ರೆಗೆ ರೂ. 30,000.00

2) 10 ಹಾಸಿಗೆಗಳ ಆಸ್ಪತ್ರೆಗೆ ರೂ. 50,000.00

3) ಪ್ರತಿ ಚಿಕಿತ್ಸಾಲಯಕ್ಕೆ ರೂ. 18,000.00

(ರೂ. 12,000.00 ದಿಂದ 18,000.00 ರೂ. ಗಳಿಗೆ ಇತ್ತೀಚೆಗೆ ಹೆಚ್ಚಿಸಲಾಗಿದೆ)

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆ ಕುರಿತು

2711 - ಶ್ರೀ ಆರ್. ಕೃಷ್ಣಪ್ಪ (ಜಯಮಹಲ್) : ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1994-95ನೇ ಆರ್ಥಿಕ ವರ್ಷದಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಗೆ ನೀಡಿದ ಅನುದಾನವೆಷ್ಟು?

ಆ) 1994-95ನೇ ಸಾಲಿನಲ್ಲಿ ಪ್ರಾಥಮಿಕ ಮಾಧ್ಯಮಿಕ ಮತ್ತು ಪ್ರೌಢ ಶಾಲೆಗಳಿಂದ ನೋಂದಾವಣೆ ಆದ ಸ್ಕೌಟ್ಸ್ ಗೈಡ್ಸ್‌ಗಳ ಸಂಖ್ಯೆ ಎಷ್ಟು?

ಇ) 1995-96ನೇ ಸಾಲಿನಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಗೆ ಒದಗಿಸಲಾದ ಅನುದಾನವೆಷ್ಟು?

ಈ) 1995-96ನೇ ಸಾಲಿನಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಾಗಿ ನೊಂದಾವಣೆಯಾದವರ ಸಂಖ್ಯೆ ಎಷ್ಟು?

ಉ) ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳಲ್ಲಿ ಭಾಗವಹಿಸುವ ಸಂಸ್ಥೆಗಳಿಗೆ ಸರ್ಕಾರ ಪ್ರೋತ್ಸಾಹಕರ ಉತ್ತೇಜನಗಳೇನಾದರೂ ನೀಡುತ್ತಿದೆಯೋ?

ಊ) ಸ್ಕೌಟ್ಸ್ ಮತ್ತು ಗೈಡ್ಸ್‌ಗಳಾಗಿ ಸೇರಿಕೊಳ್ಳಲು ಪ್ರಾಥಮಿಕ ಮಾಧ್ಯಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಕಡ್ಡಾಯ ಮಾಡುವ ಪ್ರಸ್ತಾವನೆಗಳೇನಾದರೂ ಇದೆಯೇ?

ಶ್ರೀ ಅಜಯಕುಮಾರ್ ಸರ್ ನಾಯಕ್ (ಯುವಜನ ಸೇವಾ ಮತ್ತು ಕ್ರೀಡಾ ಸಚಿವರು) :

ಅ) ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಗೆ 1994-95ನೇ ಸರ್ಕಾರದ ವತಿಯಿಂದ ಒಟ್ಟು ರೂ. 41,20,000-00 ಅನುದಾನವನ್ನು ನೀಡಲಾಗಿರುತ್ತದೆ.

ಆ) 1994-95ನೇ ಸಾಲಿನಲ್ಲಿ ಪ್ರಾಥಮಿಕ ಮಾಧ್ಯಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಓದುತ್ತಿರುವ ಒಟ್ಟು 1,41,128 ವಿದ್ಯಾರ್ಥಿ ವಿದ್ಯಾರ್ಥಿನಿಯರು ಸ್ಕೌಟ್ಸ್ ಮತ್ತು ಗೈಡ್ಸ್‌ಗಳಾಗಿ ನೊಂದಾಯಿಸಿರುತ್ತಾರೆ.

ಇ) 1995-96ನೇ ಸಾಲಿನಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಗೆ ಇಲಾಖಾ ಆಯವ್ಯಯದಲ್ಲಿ ಒಟ್ಟು ರೂ. 47,50,000-00 ಗಳನ್ನು ಒದಗಿಸಲಾಗಿರುತ್ತದೆ.

ಈ) 1995-96ನೇ ಸಾಲಿನಲ್ಲಿ ದಿನಾಂಕ 10-9-1995ರವರೆಗೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ಗೆ ಒಟ್ಟು 30,175 ವಿದ್ಯಾರ್ಥಿಗಳನ್ನು ನೊಂದಾಯಿಸಲಾಗಿರುತ್ತದೆ.

ಉ) ಇಲ್ಲ

ಊ) ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯಿದೆಗೆ ತಿದ್ದುಪಡಿ

2710 - ಶ್ರೀ ಆರ್. ಕೃಷ್ಣಪ್ಪ (ಜಯಮಹಲ್) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯ್ದೆ ಪ್ರಕಾರ ಮರಕಡಿಯಲು ಅನುಮತಿ ಪಡೆದುಕೊಳ್ಳುವುದು ಕಡ್ಡಾಯವಲ್ಲವೇ?

ಆ) ಹಾಗಿದ್ದಲ್ಲಿ ಕರ್ನಾಟಕ ವಿದ್ಯುತ್ ಮಂಡಳಿಯವರು ಯಾವುದೇ ಮುನ್ಸೂಚನೆ ಇಲ್ಲದೇ ದೊಡ್ಡ ಮರಗಳನ್ನು ವಿದ್ಯುತ್ ಲೈನಿಗೆ ಅಡ್ಡ ಮಾಡುವ ನೆಪದಲ್ಲಿ ಕಡಿದು ಹಾಕುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಇದನ್ನು ತಪ್ಪಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಈ) ಈ ಮರ ಕಡಿಯಲು ಬರತಕ್ಕ ಅರ್ಜಿಗಳನ್ನು ನಿಗದಿತ ಕಾಲದಲ್ಲಿ ವಿಲೇವಾರಿ ಮಾಡದಿದ್ದಲ್ಲಿ ಅನುಮತಿ ನೀಡಲಾಗಿದೆ ಎಂದು ಸೂಚಿಸುವ ಬಗ್ಗೆ ಈ ಕಾಯಿದೆಗೆ ತಿದ್ದುಪಡಿ ತರಲು ಸರ್ಕಾರ ಉದ್ದೇಶಿಸಿದೆಯೇ?

ಶ್ರೀ ಹೆಚ್.ವೈ. ಮೇಟಿ (ಅರಣ್ಯ ಸಚಿವರು) :

ಅ) ಹೌದು

ಆ) ಕರ್ನಾಟಕ ವಿದ್ಯುತ್ ಮಂಡಳಿ ವಿಶೇಷ ಕಾಯಿದೆಯನ್ವಯ ಮರಗಳ ಕೊಂಬೆಗಳನ್ನು ವಿದ್ಯುಚ್ಛಕ್ತಿ ಲೈನಿಗೆ ಅಡ್ಡ ಬಂದಲ್ಲಿ ಕಡಿಯಲು ಅನುಮತಿ ಇದೆ. ವಿನಾಕಾರಣ ಮರಗಳನ್ನು ಕಡಿಯದಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಲು ಕ್ರಮವನ್ನು ಕೈಗೊಳ್ಳಲಾಗುವುದು.

ಇ) ವಿನಾಕಾರಣ ಮರದ ಕೊಂಬೆಗಳನ್ನು ಕಡಿಯುವ ನೆಪದಲ್ಲಿ ಮರಗಳನ್ನು ಕರ್ನಾಟಕ ವಿದ್ಯುತ್ ಮಂಡಳಿಯವರು ಕಡಿದಿರುವ ಬಗ್ಗೆ ಅರಣ್ಯ ಇಲಾಖೆ ಹಾಗೂ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯವರು ಜಂಟಿ ಸಮಾಲೋಚನೆ ನಡೆಸಿ ಇಂತಹ ಸಂದರ್ಭಗಳಲ್ಲಿ ಮರಗಳ ಕೊಂಬೆಗಳನ್ನು ಕಡಿಯುವುದು ಅರಣ್ಯ ಇಲಾಖೆಗೆ ವಹಿಸಿ ಅದಕ್ಕೆ ಅವಶ್ಯಕವಾದ ಸಲಕರಣೆಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಒದಗಿಸಬೇಕೆಂದು ತೀರ್ಮಾನ ತೆಗೆದುಕೊಳ್ಳಲಾಗಿದೆ.

ಈ) ಸಾಮಾನ್ಯವಾಗಿ ನಿಗದಿತ ಕಾಲದೊಳಗೆ ಅರ್ಜಿಗಳನ್ನು ವಿಲೇವಾರಿ ಮಾಡಲಾಗುತ್ತಿದೆ. ಆದರೂ ಕೆಲವೊಂದು ಪ್ರಕರಣಗಳಲ್ಲಿ ಇದೇ ವೃಕ್ಷ ಸಂರಕ್ಷಣಾ ಕಾಯ್ದೆಯ ಸೂಚನೆಗಳನ್ವಯ ಕಡಿಯಲಿರುವ ಮರಗಳ ಅಳತೆ ಜಮೀನಿನ ಸರ್ವೆ ನಂಬರ್, ಸರ್ವೆ ನಕ್ಷೆ, ವಗೈರೆ ನೀಡದೇ ಇವುಗಳನ್ನು ತನಿಖೆ ಮಾಡಿ ನಿಗದಿತ ಅವಧಿಯೊಳಗೆ ವಿಲೇವಾರಿ ಮಾಡದಿದ್ದಲ್ಲಿ ಅನುಮತಿ ನೀಡಲಾಗಿದೆ ಎಂದು ಭಾವಿಸುವ ಅವಕಾಶವಿರುವುದರಿಂದ ಈ ಕಾಯ್ದೆಗೆ ತಿದ್ದುಪಡಿ ತರಲು ಪರಿಶೀಲಿಸಲಾಗುತ್ತದೆ.

ದ.ಕನ್ನಡ ಜಿಲ್ಲೆಯ ಶಿಕ್ಷಕರ ತರಬೇತಿ ಸಂಸ್ಥೆ

2029 - ಶ್ರೀ ಕುಂಬಳೆ ಸುಂದರರಾವ್ (ಸುರತ್ಕಲ್) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಲ್ಪ ಸಂಖ್ಯಾತರು ನಡೆಸುತ್ತಿರುವ ಶಿಕ್ಷಕ ತರಬೇತಿ ಸಂಸ್ಥೆಗಳೆಷ್ಟು?

ಆ) ಅವುಗಳಲ್ಲಿ ಅನುದಾನಿತ ಸಂಸ್ಥೆಗಳೆಷ್ಟು, ಅನುದಾನ ರಹಿತ ಸಂಸ್ಥೆಗಳೆಷ್ಟು?

ಇ) ಕಳೆದ ಐದು ಶೈಕ್ಷಣಿಕ ವರ್ಷಗಳಿಂದ (1990-91, 1991-92, 1992-93, 1993-94, 1994-95) ಸದರಿ ಶಿಕ್ಷಕ ತರಬೇತಿ ಸಂಸ್ಥೆಗಳಲ್ಲಿ ತರಬೇತಿ ಪಡೆದ ಅಲ್ಪ ಸಂಖ್ಯಾತರೆಷ್ಟು? ಉಳಿದ ಜಾತಿವಾರು ಶಿಕ್ಷಣಾರ್ಥಿಗಳ ಸಂಖ್ಯೆ ಎಷ್ಟು, (ವರ್ಷಾವಾರು ಜಾತಿವಾರು ವಿವರ ಒದಗಿಸುವುದು)

ಈ) ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ನಂತರ ಆ ಶಿಕ್ಷಕ ತರಬೇತಿ ಸಂಸ್ಥೆಗಳು ಸರಕಾರದ ಹೊಸ ನೀತಿಯನ್ನು ಪಾಲಿಸುತ್ತಿದೆಯೇ?

ಉ) ಹಾಗಿದ್ದಲ್ಲಿ 1995-96ರ ಶೈಕ್ಷಣಿಕ ಸಾಲಿನಲ್ಲಿ ಶಿಕ್ಷಣಾರ್ಥಿಗಳ ಸಂಖ್ಯೆ ಎಷ್ಟು? (ವಿವರ ಒದಗಿಸಿ) ಅಲ್ಪ ಸಂಖ್ಯಾತ ವಿದ್ಯಾರ್ಥಿಗಳ ಹಾಗೂ ಬಹು ಸಂಖ್ಯಾತ ವಿದ್ಯಾರ್ಥಿಗಳ ವಿವರ ನೀಡುವುದು)

ಶ್ರೀ ಹೆಚ್.ಜಿ. ಗೋವಿಂದಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) 03

ಆ) ಅನುದಾನಿತ ಸಂಸ್ಥೆಗಳು 03

ಅನುದಾನ ರಹಿತ ಇಲ್ಲ

ಇ) ಕಳೆದ ಐದು ವರ್ಷಗಳಲ್ಲಿ ತರಬೇತಿ ಪಡೆದ
ಒಟ್ಟು ಅಲ್ಪಸಂಖ್ಯಾತ ವಿದ್ಯಾರ್ಥಿಗಳ ಸಂಖ್ಯೆ 380

ಇತರೆ ಶಿಕ್ಷಣಾರ್ಥಿಗಳ ಸಂಖ್ಯೆ 70

ವಿವರಗಳು ಕೆಲಗಿನಂತಿವೆ :

	ಕ್ಯಾಡಿಟೋನಿಯ ಶಿ.ತ. ಸಂಸ್ಥೆ ಕಿನ್ನಿಕಾಂಬ್ಳ		ಸೆಂಟ್ ಆನ್ಸ್ ಶಿ.ಸ.ಸಂ ಮಂಗಳೂರು		ರೋಜಾ ಮಿಸ್ಟಿಕ್ ಶಿ.ತ.ಸಂ. ಮಂಗಳೂರು	
	ಅಲ್ಪ ಸಂಖ್ಯಾತರು	ಇತರೆ	ಅಲ್ಪ ಸಂ	ಇತರೆ	ಅಲ್ಪ ಸಂ	ಇತರೆ
1990-91	30	-	21	09	25	05
1991-92	28	02	23	07	26	04
1992-93	28	02	19	11	20	10
1993-94	30	-	22	08	30	-
1994-95	29	01	24	06	25	05

ಈ) ಟಿ.ಸಿ.ಹೆಚ್.ಗೆ ಸಂಬಂಧಿಸಿದಂತೆ ಏಕರೂಪ ದಾಖಲಾತಿ ನಿಯಮಗಳನ್ನು 1995-96ನೇ ಸಾಲಿನಿಂದ ಜಾರಿಗೊಳಿಸಲಾಗಿದ್ದು ಈ ಬಗ್ಗೆ ಸರ್ವೋಚ್ಚ ನ್ಯಾಯಾಲಯದಲ್ಲಿ ಆದೇಶಗಳಾವುವು ಇರುವುದಿಲ್ಲ. ಆದರೆ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆ ಇದ್ದು ಇನ್ನೂ ಇತ್ಯರ್ಥವಾಗಿರುವುದಿಲ್ಲ.

ಉ) ಪ್ರಶ್ನೆ 'ಈ'ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಮೂಡುಶೆಡ್ಡೆ (ಮಂಗಳೂರು)ಯಲ್ಲಿನ ಟಿ.ಬಿ. ಆಸ್ಪತ್ರೆಗೆ ಹೆಚ್ಚುವರಿ ಕಟ್ಟಡ.

2697 - ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡುಶೆಡ್ಡೆಯಲ್ಲಿನ ಟಿ.ಬಿ. ಹೆಚ್ಚುವರಿ ಕಟ್ಟಡವನ್ನು 1982ರಲ್ಲಿ ಪ್ರಾರಂಭಿಸಿ ಯಾವ ಸಾಲಿನಲ್ಲಿ ಮುಗಿಸಲಾಯಿತು? ಈಗ ಕಟ್ಟಡದ ಕೆಲಸವು ಪೂರ್ಣಗೊಂಡಿದೆಯೇ?

ಆ) ಪೂರ್ಣಗೊಂಡಿದ್ದಲ್ಲಿ ಅದನ್ನು ಆಸ್ಪತ್ರೆಯ ಉಪಯೋಗಕ್ಕಾಗಿ ಬಿಟ್ಟುಕೊಡಲು ಇನ್ನೂ ಎಷ್ಟು ಸಮಯ ಬೇಕಾಗುತ್ತದೆ.

ಇ) ಸದರಿ ಕಟ್ಟಡವನ್ನು ಖಾಸಗಿ ಡಾಕ್ಟರ್‌ಗಳ ತರಬೇತಿ ಕಾರ್ಯಕ್ರಮಗಳಿಗಾಗಿ ಕೊಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ? ಹಾಗಿದ್ದಲ್ಲಿ ಸರ್ಕಾರಿ ಆಸ್ಪತ್ರೆಗೆ ಅಗತ್ಯತೆಗೆ ಅನುಗುಣವಾಗಿ ಕಟ್ಟಲಾಗಿರುವ ಈ ಆಸ್ಪತ್ರೆಗೆ ಹೊಂದಿಕೊಂಡಿರುವ ಕಟ್ಟಡವನ್ನು ಬೇರೆಯವರಿಗೆ ಕೊಡುವುದು ಸೂಕ್ತವೇ?

ಈ) ಮಂಗಳೂರು ಮತ್ತು ಸುತ್ತಮುತ್ತಲಿನ ಸಾರ್ವಜನಿಕರಿಗೆ ಅತ್ಯಗತ್ಯವಾಗಿ ಬೇಕಾಗಿರುವ ಕಟ್ಟಡವನ್ನು ಟಿ.ಬಿ. ಹಾಸ್ಪಿಟಲ್ಗೆ ಸಂಬಂಧಪಟ್ಟಂತೆ ಮಾತ್ರ ಉಪಯೋಗಿಸಲು ಸರ್ಕಾರದವರು ಸೂಕ್ತ ಕ್ರಮ ಜರುಗಿಸುವರೇ? ಇನ್ನೆಷ್ಟು ಸಮಯದಲ್ಲಿ ಈ ಕಟ್ಟಡವನ್ನು ಈ ಆಸ್ಪತ್ರೆಯ ಉಪಯೋಗಕ್ಕಾಗಿ ಕೊಡಲಾಗುವುದು?

ಡಾ|| ಎಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) 1994-95ನೇ ಸಾಲಿನಲ್ಲಿ ಮುಗಿಸಲಾಗಿದೆ. ಹೌದು

ಆ) ಶೀಘ್ರದಲ್ಲಿಯೇ ವಶಕ್ಕೆ ತೆಗೆದುಕೊಳ್ಳಲಾಗುವುದು

ಇ) ಇಲ್ಲ - ಉದ್ಭವಿಸುವುದಿಲ್ಲ

ಈ) ಹೌದು ಶೀಘ್ರದಲ್ಲಿಯೇ ಕೊಡಲಾಗುವುದು.

Sanction of English medium High School at Hosangadi

2704 - Sri K. Prathapchandra Shetty : Will the Minister for Primary & Secondary Education be pleased to state :

a) Whether it has come to the notice of the Govt. that the Employees Union are urging for the sanction of English medium High School at Hosangadi Power Corporation in Coondapur Taluk where the people of all over the State are residing?

b) If so, the action taken by the Govt.

Sri H.G. Govinda Gowda (Minister for Primary and Secondary Education):

a) Yes.

b) Direction has been issued to the Deputy Director of Public Instruction, Mangalore to conduct spot inspection and to submit the detail report. After receipt of the report Govt. will examine this issue.

ಶಂಕರನಾರಾಯಣ ಪ್ರಥಮ ದರ್ಜೆ ಕಾಲೇಜು

2707 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಆ) ಕುಂದಾಪುರ ತಾಲ್ಲೂಕು ಶಂಕರ ನಾರಾಯಣ ಪ್ರಥಮ ದರ್ಜೆ ಕಾಲೇಜಿಗೆ ಜಿ.ಎಸ್. ಆಚಾರ್ ಪ್ರಥಮ ದರ್ಜೆ ಕಾಲೇಜು ಎಂದು ನಾಮಕರಣ ಮಾಡಲು ಸರ್ಕಾರಕ್ಕೆ ಒತ್ತಾಯ ಬಂದಿರುವುದು ನಿಜವೆ?

ಆ) ಹಾಗಿದ್ದಲ್ಲಿ ಇಲ್ಲಿಯತನಕವು ಆದೇಶ ನೀಡದಿರಲು ಕಾರಣವೇನು, ಹಾಗೂ ಎಂದು ನಾಮಕರಣ ಮಾಡುವ ಆದೇಶ ಹೊರಡಿಸಲಾಗುವುದು?

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) :

ಅ) ಹೌದು.

ಆ) ಸದರಿ ವಿಷಯವನ್ನು ಸರ್ಕಾರೀ ಆದೇಶ ಸಂಖ್ಯೆ. ಇಡಿ 51 ಯೋಸಕ 89, ದಿನಾಂಕ 30.8.89ರಲ್ಲಿನ ಷರತ್ತುಗಳಿಗನುಸಾರ ಪರಿಶೀಲಿಸಲಾಗುತ್ತಿದ್ದು, ಶೀಘ್ರದಲ್ಲೇ ಸೂಕ್ತ ಆದೇಶ ಹೊರಡಿಸಲಾಗುವುದು.

ಕುಂದಾಪುರ ತಾಲ್ಲೂಕು ಗಂಗೋಳ್ಳಿಯಲ್ಲಿ ಕಟ್ಟಿಗೆ ಡಿಪೋ ಪ್ರಾರಂಭಿಸುವ ಬಗ್ಗೆ

2706 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೂಕು ಗಂಗೋಳ್ಳಿಯಲ್ಲಿ ಕಟ್ಟಿಗೆ ಡಿಪೋ ಮಾಡುವ ಯೋಜನೆ ಸರ್ಕಾರದವರ ಪರಿಶೀಲನೆಯಲ್ಲಿದೆಯೇ?

ಆ) ಇಲ್ಲವಾದಲ್ಲಿ ಬದಲಿ ವ್ಯವಸ್ಥೆ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಹೆಚ್.ವೈ. ಮೇಟಿ (ಅರಣ್ಯ ಸಚಿವರು) :

ಅ) ಕುಂದಾಪುರ ತಾಲ್ಲೂಕು ಗಂಗೊಳ್ಳಿಯಲ್ಲಿ ಸಾರ್ವಜನಿಕರಿಂದ ಕಟ್ಟಿಗೆ ಡಿಪೋ ತೆರೆಯುವ ಬಗ್ಗೆ ಈವರೆಗೆ ಬೇಡಿಕೆಬಾರದ ಕಾರಣ ಕಟ್ಟಿಗೆ ಡಿಪೋವನ್ನು ತೆರೆಯುವ ಪ್ರಶ್ನೆ ಉದ್ಭವಿಸಿಲ್ಲ.

ಆ) ಸಾರ್ವಜನಿಕರಿಂದ ಈ ಬಗ್ಗೆ ಕೋರಿಕೆ ಬಂದಲ್ಲಿ ಚಿಲ್ಲರೆ ಮಾರಾಟ ದರದ ಕಟ್ಟಿಗೆ ಡಿಪೋವನ್ನು ಪ್ರಾರಂಭಿಸಲು ಪರಿಶೀಲಿಸಲಾಗುವುದು.

ಹರಪ್ಪನ ಹಳ್ಳಿ ತಾಲ್ಲೂಕಿನಲ್ಲಿ ವೈದ್ಯರುಗಳ ಭರ್ತಿ

2547 - ಶ್ರೀ ನಾರಾಯಣದಾಸ್ (ಹರಪ್ಪನ ಹಳ್ಳಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹರಪ್ಪನ ಹಳ್ಳಿ ತಾಲ್ಲೂಕಿನಲ್ಲಿ ಎಷ್ಟು ಪ್ರೈಮರಿ ಹೆಲ್ತ್ (ಪಿಹೆಚ್ಸಿ) ಸೆಂಟರ್ಗಳಿವೆ?

ಆ) ಪ್ರತಿಯೊಂದು ಪಿಹೆಚ್ಸಿ ನಲ್ಲಿರುವ ಪುರುಷ ಮತ್ತು ಮಹಿಳಾ ವೈದ್ಯರುಗಳು ಎಷ್ಟು? (ಪ್ರತಿಯೊಂದು) ಪಿಹೆಚ್ಸಿ ಅನುಕ್ರಮವಾಗಿ ತಿಳಿಸುವುದು.

ಇ) ಖಾಲಿ ಇರುವ ವೈದ್ಯರುಗಳನ್ನು ಯಾವಾಗ ನೇಮಕ ಮಾಡಲಾಗುವುದು.?

ಡಾ॥ ಎಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) 11

ಆ)

ಕ್ರ. ಸಂ.	ಪ್ರಾ.ಆ.ಕೇ.	ಮಂಜೂರಾಗಿರುವ ಹುದ್ದೆಗಳ ಸಂಖ್ಯೆ	ಕಾರ್ಯ ನಿರ್ವಹಿಸುತ್ತಿರುವವರ ಸಂಖ್ಯೆ		ಖಾಲಿ ಹುದ್ದೆಗಳ ಸಂಖ್ಯೆ
			ಪುರುಷ	ಮಹಿಳೆ	
1.	ಅರಸೀಕೆರೆ	2	1	1	
2.	ಹಲವಾಗಲು	2	1	-	1
3.	ತೆಲಗಿ	1	1	-	-
4.	ಜೆಗಟೇರಿ	1	1	-	-
5.	ಹರಕನಾಳು	1	1	-	-
6.	ಉಚ್ಚಂಗಿದುರ್ಗ	1	1	-	-
7.	ಪುನಭಗಟ್ಟಿ	1	-	-	1
8.	ಕತ್ತೆ ಬೆನ್ನೂರು	1	-	-	1
9.	ಸಾಸಿವೆಹಳ್ಳಿ	1	-	-	1
10.	ಮತ್ತಿಹಳ್ಳಿ	1	-	-	1
11.	ಗುಂಡಗತ್ತಿ	1	-	-	1
	ಒಟ್ಟು	13	6	1	6

ಇ) ಈ ಖಾಲಿ ವೈದ್ಯರ ಹುದ್ದೆಗಳನ್ನು ಸ್ನಾತಕೋತ್ತರ ವ್ಯಾಸಂಗದಿಂದ ಮರಳಲಿರುವ ವೈದ್ಯರುಗಳಿಂದ ಹಾಗೂ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿ ತುಂಬಲು ಕ್ರಮ ಕೈಗೊಳ್ಳಲಾಗುವುದು. ಕರ್ನಾಟಕ ಲೋಕ ಸೇವಾ ಆಯೋಗದಿಂದ 400 ವೈದ್ಯರ ಹುದ್ದೆಗೆ ಅರ್ಜಿ ಆಹ್ವಾನಿಸಿದ್ದು, ಆಯ್ಕೆಯಾದ ನಂತರ ಉಳಿದ ಹುದ್ದೆಗಳನ್ನು ತುಂಬಲಾಗುವುದು.

ಬೆಂಗಳೂರಿನ ವಾಣಿವಿಲಾಸ ಆಸ್ಪತ್ರೆ

2637 - ಶ್ರೀ ರಾಮಲಿಂಗ ರೆಡ್ಡಿ (ಜಯನಗರ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚೆಗೆ ಬೆಂಗಳೂರಿನ ವಾಣಿವಿಲಾಸ ಆಸ್ಪತ್ರೆಯಲ್ಲಿ ಬದುಕಿದ್ದ ನವಜಾತ ಶಿಶುವನ್ನು ಸತ್ತುಹೋಗಿದೆ ಎಂದು ನಿರ್ಧರಿಸಿ ಬಿಸಾಕಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ರೀತಿ ಬದುಕಿದ್ದ ನವಜಾತ ಶಿಶುವನ್ನು ಬೆಕ್ಕು ಎತ್ತಿಕೊಂಡು ಹೋಗುತ್ತಿದ್ದುದು ನಿಜವಲ್ಲವೇ?

ಇ) ಹಾಗಿದ್ದಲ್ಲಿ ಇದಕ್ಕೆ ಕಾರಣರಾದವರ ಮೇಲೆ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಈ) ಆಸ್ಪತ್ರೆಯಲ್ಲಿ ಬರತಕ್ಕ ರೋಗಿಗಳಿಗೆ ಪೂರ್ತಿ ವಿಶ್ವಾಸ ಮೂಡಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಎ.ಬಿ. ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ದಿನಾಂಕ 10-8-1995ರ ಬೆಳಗಿನ ಜಾವ ಸಮಯದಲ್ಲಿ ಶ್ರೀಮತಿ ಮಂಗಳಮ್ಮ ಅವರು ಶೌಚಾಲಯಕ್ಕೆ ಹೋಗಿ ಮಗುವಿಗೆ ಜನ್ಮ ನೀಡಿರುತ್ತಾರೆ. ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ಶ್ರೀಮತಿ ಮಂಗಳಮ್ಮ ಅವರನ್ನು ಕರ್ತವ್ಯದ ಮೇಲೆ ಇದ್ದ ಆಯಾ ಶ್ರೀಮತಿ ನರಸಮ್ಮನವರು ಮಂಗಳಮ್ಮ ಅವರನ್ನು ಕರೆದುಕೊಂಡು ಹೋಗಿ ಹಾಸಿಗೆಯ ಮೇಲೆ ಮಲಗಿಸಿರುತ್ತಾರೆ. ಮಗು ಸತ್ತಿದೆ ಎಂದು ಭಾವಿಸಿ ಒಂದು ಟ್ರೇನಲ್ಲಿ ಇಟ್ಟಿರುತ್ತಾರೆ.

ಆ) ಟ್ರೇನಲ್ಲಿ ಇದ್ದ ಮಗುವಿನ ಮಾಸನ್ನು ಬೆಕ್ಕು ಎಳೆದಾಡುತ್ತಿದ್ದು, ಇನ್ನೊಬ್ಬ ರೋಗಿಯು ಶೌಚಾಲಯಕ್ಕೆ ಹೋಗುವಾಗ ಗಮನಕ್ಕೆ ಬಂದಿರುತ್ತದೆ.

ಇ) ಕರ್ತವ್ಯದ ಮೇಲೆ ಇದ್ದ ಶುಶ್ರೂಷಕಿಯ ಮತ್ತು ಆಯಾಗಳು ರೋಗಿಗಳ ಬಗ್ಗೆ ಗಮನಹರಿಸಿದೆ ಕರ್ತವ್ಯ ನಿರ್ಲಕ್ಷತೆಯಿಂದ ಇದಕ್ಕೆ ಕಾರಣವಾಗಿರುತ್ತದೆ. ಈ ಕರ್ತವ್ಯ ನಿರ್ಲಕ್ಷತೆಗೆ ಕಾರಣರಾದ ಶುಶ್ರೂಷಕಿಯನ್ನು ದಿನಾಂಕ 31-8-95ರಂದು ಹಾಗೂ ಗ್ರೂಪ್-ಡಿ ನೌಕರರನ್ನು (ಆಯಾ) ದಿನಾಂಕ 26-8-1995ರಂದು ವಿಚಾರಣೆ ಕಾಯ್ದಿರಿಸಿ ಸೇವೆಯಿಂದ ಅಮಾನತ್ತಿನಲ್ಲಿಡಲಾಗಿದೆ. ಹಾಗೂ ಆ ದಿವಸ ಕರ್ತವ್ಯ ನಿರತರಾಗಿದ್ದ ವೈದ್ಯರನ್ನು ಮತ್ತು ಕಿರಿಯ ಮಹಿಳಾ ವೈದ್ಯಾಧಿಕಾರಿಯವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗಿದೆ. ಪೂರ್ಣ ಇಲಾಖೆ ವಿಚಾರಣೆಯಿಂದ ಸತ್ಯಾಂಶವನ್ನು ಪರಿಶೀಲಿಸಿ, ಕಾನೂನಿನ ಪ್ರಕಾರ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು.

ಈ) ಆಸ್ಪತ್ರೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲ ಸಿಬ್ಬಂದಿ ಮತ್ತು ವೈದ್ಯರಿಗೆ ಕರ್ತವ್ಯ ನಿರ್ವಹಣೆ ಸರಿಯಾಗಿ ನಿರ್ವಹಿಸಲು ಈಗಾಗಲೇ ಸೂಚಿಸಲಾಗಿದೆ. ತನಿಖಾ ತಂಡವನ್ನು ರಚಿಸಿದ್ದು ಸದರಿ ತಂಡದ ಆಗಿಂದಾಗ್ಗೆ ಆಸ್ಪತ್ರೆಗೆ ಭೇಟಿ ನೀಡಿ ಅಲ್ಲಿನ ಸಿಬ್ಬಂದಿ ಮತ್ತು ಹಾಜರಾತಿ ಹಾಗೂ ಅವರ ಕರ್ತವ್ಯದ ಬಗ್ಗೆ ಪರಿಶೀಲಿಸಲಾಗುವುದು.

ಆಸ್ಪತ್ರೆಗಳಲ್ಲಿ ಭದ್ರತಾ ಸಿಬ್ಬಂದಿಯನ್ನು ನೇಮಿಸಲಾಗುವುದು.

ಬೆಟ್ಟಂಪಾಡಿ ಪ್ರಥಮ ದರ್ಜೆ ಕಾಲೇಜಿನ ಕಾಮಗಾರಿ

2541 - ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪುತ್ತೂರು ತಾಲ್ಲೂಕಿನ ಬೆಟ್ಟಂಪಾಡಿಯ ಪ್ರಥಮ ದರ್ಜೆ ಕಾಲೇಜಿನ ಕಾಮಗಾರಿ ಯಾವ ಹಂತದಲ್ಲಿದೆ, ಕಾಮಗಾರಿ ಪೂರ್ತಿಯಾಗಿ ಸಾರ್ವಜನಿಕ ಉಪಯೋಗಕ್ಕೆ ಯಾವಾಗ ಬಿಡುಗಡೆಯಾಗುವುದು?

ಆ) ಈ ವರ್ಷ ಈ ಕಾಮಗಾರಿಗೆ ಕಡಿಮೆ ಹಣ ಬಿಡುಗಡೆ ಮಾಡಲು ಕಾರಣವೇನು, ಈ ವರ್ಷ ಹೆಚ್ಚಿನ ಹಣ ಬಿಡುಗಡೆ ಮಾಡುವ ಇರಾದೆ ಇದೆಯೇ, ಇದ್ದರೆ ಎಷ್ಟು?

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) :

ಅ) ಕಾಲೇಜಿನ ಕಟ್ಟಡದ ನೆಲ ಅಂತಸ್ಥಿನ ಕಾಮಗಾರಿ ಮುಗಿದಿದೆ. ಮೊದಲನೇ ಅಂತಸ್ತಿನ ಕಾಮಗಾರಿ ಪ್ರಾರಂಭಿಸಲು ಲೋಕೋಪಯೋಗಿ ಇಲಾಖೆಯನ್ನು ಕೋರಲಾಗಿದೆ.

ಆ) ಯೋಜನೆಯಲ್ಲಿ ಒದಗಿಸಿರುವ ಹಣವನ್ನು ಎಲ್ಲಾ ಮುಂದುವರಿಯುತ್ತಿರುವ ಕೆಲಸಗಳಿಗೂ ಹಂಚಬೇಕಾದ್ದರಿಂದ, ಈ ಕಾಮಗಾರಿಗೆ ರೂ. 1.00 ಲಕ್ಷ ಅನುದಾನವನ್ನು ಮಾತ್ರ ಒದಗಿಸಲು ಸಾಧ್ಯವಾಗಿದೆ. ಹೆಚ್ಚಿನ ಹಣ ಬಿಡುಗಡೆ ಮಾಡುವ ಇರಾದೆ ಇಲ್ಲ.

ಉ. ಕನ್ನಡದಲ್ಲಿ ಬೆಟ್ಟದ ವೈವಾಟ ಕುರಿತು

2318 - ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡದಲ್ಲಿ ರೈತರಿಗೆ ಬೆಟ್ಟದ ವೈವಾಟ ಹಕ್ಕು ಇದ್ದರೂ ರೈತರಿಗೆ ಬೆಟ್ಟದ ಗಿಡಗಳ ಉಪಯೋಗಕ್ಕೆ ಸರ್ಕಾರ ಯಾವ ರೀತಿಯಲ್ಲಿ ಕ್ರಮ ತೆಗೆದುಕೊಂಡಿದೆ?

ಆ) ಕೃಷಿಯನ್ನೇ ಅವಲಂಬಿಸಿ ಬದುಕುವ ಉತ್ತರ ಕನ್ನಡ ರೈತರಿಗೆ ಬೆಟ್ಟದ ಹಕ್ಕು ಪೂರ್ಣವಾಗಿ ರೈತರಿಗೆ ನೀಡಲು ಸರ್ಕಾರ ಕ್ರಮ ತೆಗೆದುಕೊಳ್ಳುತ್ತಿದೆಯೇ?

ಇ) ಇದರ ಕಾಯ್ದೆ ತಿದ್ದುಪಡಿ ಬಗ್ಗೆ ಸರ್ಕಾರ ಆಲೋಚಿಸಿದೆಯೇ?

ಶ್ರೀ ಹೆಚ್.ವೈ. ಮೇಟಿ (ಅರಣ್ಯ ಸಚಿವರು) :

ಅ) ರಾಜ್ಯದ ಅರಣ್ಯಗಳಲ್ಲಿ ಜನರಿಗೆ ನೀಡಲಾದ ಪ್ರಿವಿಲೇಜ್ಗಳನ್ನು ಕರ್ನಾಟಕ ಫಾರೆಸ್ಟ್ ಮ್ಯಾನ್ಯೂಯಲ್ ಚಾಪ್ಟರ್ರಲ್ಲಿ ವಿವರವಾಗಿ ಕೊಡಲಾಗಿದೆ. ಇದರಲ್ಲಿ ಸೆಕ್ಷನ್ 131 ಎ ರಿಂದ 131 ಎಫ್‌ವರೆಗಿನ ನಿಬಂಧನೆಗಳು ಉತ್ತರ ಕನ್ನಡ ಜಿಲ್ಲೆಗೆ ಸಂಬಂಧಪಟ್ಟವುಗಳು. ಹಿಂದೆ ಪ್ರಿವಿಲೇಜ್ ರೂಲ್ಸ್ ಎಂದು ಜಾರಿಯಲ್ಲಿದ್ದ ನಿಬಂಧನೆಗಳನ್ನೇ ಪರಿಷ್ಕರಿಸಿ ಇಲ್ಲಿ ಸೇರಿಸಲಾಗಿದೆ. ರೈತರಿಗೆ ತಾವು ವಹಿವಾಟು ಮಾಡುತ್ತಿದ್ದ ತೋಟಗಳಿಗೆ ಅಥವಾ ತೋಗಳ ಗುಂಪಿಗೆ ಬೆಟ್ಟ ಜಮೀನೆಂದು ಕೊಟ್ಟು ಸಂರಕ್ಷಣೆ ಮಾಡಿದ ಜಂಗಲ್ನಲ್ಲಿ ಈ ಕೆಳಗಿನ ವಿಶೇಷ ಹಕ್ಕುಗಳನ್ನು ನೀಡಲಾಗಿದೆ.

1) ಸ್ವಂತ ಉಪಯೋಗಕ್ಕಾಗಿ ಜಾನುವಾರುಗಳನ್ನು ಮೇಯಿಸುವುದು. ಹುಲ್ಲನ್ನು ಕತ್ತರಿಸುವುದು. ಜಾನುವಾರುಗಳಿಗೆ ಶೆಡ್ಡನ್ನು ಕಟ್ಟುವುದು. ಮನೆಯ ನಿರ್ಮಾಣ ಮುಂತಾದ ತೋಟವನ್ನು ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿಪಡಿಸುವ ಕಾರ್ಯಗಳನ್ನು ಮಾಡುವುದು.

2) ರಕ್ಷಿತ ಅರಣ್ಯಗಳಿಗೆ ಹಾನಿಯಾಗದಂತೆ ಲಂಟಾನಾ ಮುಂತಾದವುಗಳಿಗೆ ಬೆಂಕಿ ಹಚ್ಚಬಹುದು.

3) ಮಾರಾಟಕ್ಕಾಗಲಿ ಮತ್ತು ತಯಾರಿಕೆಗಾಗಲೀ ಹೊರತುಪಡಿಸಿ ಕಲ್ಲು ಮಣ್ಣು ಮತ್ತು ಜೇಡಿ ಮಣ್ಣನ್ನು ಸ್ವಂತ ಉಪಯೋಗಕ್ಕೆ ಬಳಸಬಹುದು.

4) ಬೆಟ್ಟ ಪ್ರದೇಶದಲ್ಲಿ ಕೆಲವು ನಿಬಂಧನೆಗಳಿಗನುಸಾರವಾಗಿ ಮೆಣಸು ಮತ್ತು ಅಡಿಕೆಯನ್ನು ಬೆಳೆಯಬಹುದು.

5) ಕೇವಲ ಸ್ವಂತ ಉಪಯೋಗಕ್ಕೆ ಮಾತ್ರ ಕೆಳಗೆ ನಮೂದಿಸಿರುವ ನಿಬಂಧನೆಗೊಳಪಟ್ಟು ಬೆಟ್ಟ ಪ್ರದೇಶದಲ್ಲಿರುವ ಅರಣ್ಯ ಉತ್ಪತ್ತಿಯನ್ನಾದರೂ ಉಪಯೋಗಿಸಬಹುದು.

6) ಅ) ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಪೂರ್ವಾನುಮತಿಯಿಲ್ಲದೇ ತೇಗ ಶ್ರೀಗಂಧ ಬೀಟೆ ಹಾಲು ಮಡ್ಡಿ ಮುಂತಾದ ಮರ ಮತ್ತು ಗಿಡಗಳ ಕೊಂಬೆಗಳನ್ನು ಕಡಿಯುವುದಾಗಲೀ ಕೆತ್ತುಸುವುದಾಗಲೀ ಮಾಡಬಾರದು.

ಆ) ಸೂಚಿತ ಪಟ್ಟಿಯಲ್ಲಿರುವ ಜಾತಿಯ ಯಾವುದೇ ಹಸಿರು ಮರವನ್ನು ಕಡಿಯಬಾರದು.

ಇ) ತನ್ನ ತೋಟದಲ್ಲಾಗಲೀ ಅದಕ್ಕೆ ಹೊಂದಿಕೊಂಡಂತಿರುವ ಪ್ರದೇಶದಲ್ಲಿ ಮನೆಯನ್ನು ಕಟ್ಟಲು ಅಥವಾ ಇರುವ ಮನೆಯ ದುರಸ್ತಿಗೆ ಅವಶ್ಯವಾದ ಸೂಚಿತ ಪಟ್ಟಿಯಲ್ಲಿರುವ ಮರದ ಅವಶ್ಯಕತೆಯಿದ್ದಲ್ಲಿ ಸಂಬಂಧಪಟ್ಟ ಉಪ ಅರಣ್ಯ ಸಂರಕ್ಷಣಾಧಿಕಾರಿಯವರಿಗೆ ಜೂನ್1 ರಿಂದ ಸೆಪ್ಟೆಂಬರ್ 30ರ ಒಳಗೆ ಅರ್ಜಿ ಸಲ್ಲಿಸಬೇಕು. ಉಪ ಅರಣ್ಯ ಸಂರಕ್ಷಣಾಧಿಕಾರಿರವರು ಕೋರಿಕೆಯು

ತೃಪ್ತಿಕರವಾಗಿದ್ದಲ್ಲಿ ಅವಶ್ಯವಾದ ಮರವನ್ನು ಕಾಲಕಾಲಕ್ಕೆ ಸರ್ಕಾರದವರು ನಿಗದಿಪಡಿಸುವ ಗೌರವ ಧನವನ್ನು ವಸೂಲಿ ಮಾಡಿಕೊಂಡ ನಂತರ ಕಡಿಯಲು ಅನುಮತಿ ನೀಡುತ್ತಾರೆ.

7) ಬೆಟ್ಟದ ರೈತರ ಬೆಳೆಗೆ ಅಡ್ಡಿ ಉಂಟು ಮಾಡುವ ನೀರು ಸರಬರಾಜಿಗೆ ತೊಂದರೆಯಾಗುವ ಮನೆಗಳ ಮೇಲೆ ತೂಗು ಬಿದ್ದಿರುವ ಮತ್ತು ಬೆಟ್ಟದ ಮುಖಾಂತರ ಹೋಗುವ ಕೂಡು ರಸ್ತೆಗೆ ಅಡ್ಡಿಯಾಗಿದ್ದರೆ ಸೂಚಿತ ಪಟ್ಟಿಯಲ್ಲಿರುವ ಮರಗಳಾದರೂ ಅಂತಹ ಮರಗಳನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಪೂರ್ವಾನುಮತಿ ಇಲ್ಲದೇ ಕಡಿಯಬಹುದು.

ಆ) ಇಲ್ಲ

ಇ) ಇಲ್ಲ

ಮಂಗಳೂರು ಜಿಲ್ಲೆಯಲ್ಲಿ ಮಲೇರಿಯಾ ರೋಗ

2181 - ಶ್ರೀ ಎನ್. ಯೋಗಿಶ್ ಭಟ್ (ಮಂಗಳೂರು) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ಜಿಲ್ಲಾ ವೆನ್ಲಾಕ್ ಆಸ್ಪತ್ರೆಯಲ್ಲಿ ಪೂರ್ಣ ಪ್ರಮಾಣ ರಕ್ತ ಶೇಖರಣಾ ಘಟಕ ಆರಂಭಿಸಲು ಬಂದ ಆಡಚಣೆಗಳು ಯಾವುವು. ಮಂಗಳೂರಿನಲ್ಲಿ ಈ ಏಡ್ಸ್ ಬಗ್ಗೆ ಜನರಲ್ಲಿ ಗಾಬರಿ ಪರಿಸ್ಥಿತಿ ಉಂಟಾಗಿದ್ದು ಮತ್ತು ಏಡ್ಸ್ ರೋಗಿಗಳ ಸಂಖ್ಯೆ ದಿನದಿಂದ ದಿನಕ್ಕೆ ಬೆಳೆಯುತ್ತ ಇದ್ದು ಜಿಲ್ಲಾ ವೆನ್ಲಾಕ್ ಆಸ್ಪತ್ರೆಯಲ್ಲಿ ರಕ್ತ ಶೇಖರಣಾ ಘಟಕ ಅವಶ್ಯಕತೆ ಇದ್ದು ಅದನ್ನು ತುರ್ತಾಗಿ ಆರಂಭಿಸಲು ಸರ್ಕಾರದವರು ಯಾವ ಕ್ರಮ ಕೈಗೊಂಡಿರುವರು?

ಆ) ಮಂಗಳೂರು ಸರ್ಕಾರಿ ವೆನ್ಲಾಕ್ ಆಸ್ಪತ್ರೆಯಲ್ಲಿ ಕಂಟ್ರಾಕ್ಟ್ ಪದ್ದತಿಯಲ್ಲಿ ನೈರ್ಮಲ್ಯ ಸೇವಕರನ್ನು ನೇಮಿಸಿಕೊಳ್ಳಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಇ) ಈ ಆಸ್ಪತ್ರೆಗಳಲ್ಲಿ ರಾತ್ರಿ ಕೊಡಬೇಕಾದ ಆಹಾರ ಸಾಯಂಕಾಲ 4 ಗಂಟೆಗೆ ಕೊಡಲು ಕಾರಣವೇನು? ಇದನ್ನು ರಾತ್ರಿ ಸುಮಾರು 8 ಗಂಟೆಗೆ ಕೊಡಲು ಬೇಕಾದ ವ್ಯವಸ್ಥೆ ಮಾಡಲು ಉಂಟಾದ ತೊಂದರೆಗಳಾವುವು?

ಈ) ಸದ್ಯ ಪ್ರಭಾರ ಕೆಲಸ ಮಾಡುತ್ತಿರುವಂತಹ ಡಿ.ಎಂ.ಓ. ಮತ್ತು ಆರ್.ಎಂ.ಓ. ರವರನ್ನು ಅವರಿಗೆ ಸ್ವತಃ ವೇತನ ಶ್ರೇಣಿಯಲ್ಲಿ ಈ ಹುದ್ದೆಗಳಿಗೆ ಸ್ವತಂತ್ರವಾಗಿ ಕಾರ್ಯಭಾರವನ್ನು ನಿರ್ವಹಿಸಲು ಸಾರ್ವಜನಿಕ ಹಿತದೃಷ್ಟಿಯಿಂದ ಹಾಗೂ ಆಡಳಿತಾತ್ಮಕ ದೃಷ್ಟಿಯಿಂದ ಆದೇಶ ನೀಡಲಾಗುವುದೆ?

ಶ್ರೀ ಎ.ಬಿ. ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ಪರವಾನಗಿ ನಿಯಮಾವಳಿಯನ್ವಯ ಸೂಕ್ತವಾದ ಕಟ್ಟಡದ ಕೊರತೆ ಇದೆ. ಅದಲ್ಲದೆ ಕೆ.ಎಂ.ಸಿ. ವೈದ್ಯಕೀಯ ವಿದ್ಯಾಲಯದ ರಕ್ತ ನಿಧಿ ಕೇಂದ್ರದಲ್ಲಿ ರಾಜ್ಯ ಏಡ್ಸ್ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ಒಂದು ವಿಭಾಗೀಯ ರಕ್ತ ತಪಾಸಣಾ ಕೇಂದ್ರವನ್ನು (ಎಲ್‌ಎಟಿಸಿ) ಸ್ಥಾಪಿಸಲಾಗಿದ್ದು, ತುರ್ತು ಪರಿಸ್ಥಿತಿಯಲ್ಲಿ ಏಡ್ಸ್ ಸೋಂಕು ಮುಕ್ತವೆಂದು ದೃಢೀಕರಿಸಿ ರಕ್ತವನ್ನು ಪಡೆಯುವಲ್ಲಿ ವ್ಯವಸ್ಥೆಯನ್ನು ಕಲ್ಪಿಸಲಾಗಿದ್ದು ವೆನ್ಲಾಕ್ ಆಸ್ಪತ್ರೆಯು ಈ ಕೇಂದ್ರದ ಸೇವೆಯನ್ನು ಪಡೆದುಕೊಳ್ಳಲಾಗುತ್ತಿದೆ.

ಆ) ಮಂಗಳೂರು ವೆನ್ಲಾಕ್ ಜಿಲ್ಲಾ ಆಸ್ಪತ್ರೆಯಲ್ಲಿ ಕಾಂಟ್ರಾಕ್ಟ್ ಪದ್ಧತಿಯಲ್ಲಿ ನೈರ್ಮಲ್ಯ ಸೇವಕರನ್ನು ನೇಮಿಸಿಕೊಳ್ಳುವ ಪ್ರಸ್ತಾವನೆ ಪರಿಶೀಲನಾ ಹಂತದಲ್ಲಿದೆ.